ಗುರುವಾರ, ಮೇ 4, 2023 | ₹ 7.00

www.prajavani.net

prajavani.net prajavani prajavani prajavani www.prajavani.net

ಪ್ರಜಾ ವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

ಸ್ಪರ್ಧಾವಾಣಿ
ವಿಜ್ಞಾನ ಸಂಶೋಧನೆಗಳ ತವರುಮನೆ ಟಿಐಎಫ್‌ಆರ್

ಇದೇ ನಿಮ್ಮ ಆಶೀರ್ವಾದವೇ?

ಕರ್ನಾಟಕ ಹಿಂದೆಂದೂ ಕಾಣದ ನಿರುದ್ಯೋಗ ಸಮಸ್ಯೆಯನ್ನು ಎದುರಿಸುತ್ತಿದೆ.

ಬೆಲೆ ಏರಿಕೆ ತಡೆಗಟ್ಟಲಾಗುತ್ತಿಲ್ಲ.

ನಮ್ಮ ನಗರದ ಮೂಲ ಸೌಕರ್ಯಗಳು ಕುಸಿಯುತ್ತಿವೆ ಹಾಗೂ ನಮ್ಮ ಗ್ರಾಮಗಳಲ್ಲಿ ಮೂಲ ಸೌಕರ್ಯಗಳು ಇಲ್ಲವೇ ಇಲ್ಲ.

ನಾವು ಕೇಂದ್ರಕ್ಕೆ ಕಟ್ಟುವ ಪ್ರತಿ 100 ರೂ.ಗೆ. ನಮಗೆ ಕೇಂದ್ರದಿಂದ ಕೇವಲ 15 ರೂ. ಸಿಗುತ್ತಿದೆ. ಬೇರೆ ರಾಜ್ಯಗಳಿಗೆ ನಮ್ಮ ಹಣವನ್ನು ಹಂಚಲಾಗುತ್ತಿದೆ.

ಕರ್ನಾಟಕಕ್ಕೆ ಬರಬೇಕಾದ ಹಣ ಹೂಡಿಕೆಯನ್ನು ಬೇಕೆಂದೇ ಬೇರೆ ರಾಜ್ಯಗಳ ಕಡೆ ತಿರುಗಿಸಲಾಗಿದೆ.

ನಿಮ್ಮ ಪಕ್ಷದ ನಾಯಕರು ಪ್ರತಿ ಟೆಂಡರ್‌ನಲ್ಲೂ 40% ಕಮಿಷನ್ ಹೊಡೆಯುತ್ತಿದ್ದಾರೆ.

ನಮ್ಮ ಗಡಿ ಹಾಗೂ ನೈಸರ್ಗಿಕ ಸಂಪನ್ಮೂಲಗಳನ್ನು ರಾಜಕೀಯ ಲಾಭಕ್ಕಾಗಿ ಬಲಿ ಕೊಡಲಾಗುತ್ತಿದೆ.

ನಮ್ಮ ಹೆಮ್ಮೆಯ ನಂದಿನಿ ಬ್ರ್ಯಾಂಡ್ ಅಸ್ತಿತ್ವಕ್ಕೆ ಸಂಚಕಾರ ಬಂದಿದೆ.

ಸಾಮಾಜಿಕ ಅಶಾಂತಿಯನ್ನು ಪ್ರಚೋದಿಸಿ ವೋಟ್ ಬ್ಯಾಂಕ್ ರಾಜಕೀಯದ ಹೆಸರಲ್ಲಿ ನಮ್ಮ ಸಮಾಜವನ್ನು ಒಡೆಯಲಾಗುತ್ತಿದೆ.

ಕರ್ನಾಟಕ ಜಿ ಎಸ್ ಡಿ ಪಿ 3 ರಿಂದ 5ನೇ ಸ್ಥಾನಕ್ಕೆ ಕುಸಿದಿದ್ದು, ಎಲ್ಲಾ ಅಭಿವೃದ್ಧಿ ಸೂಚ್ಯಂಕಗಳಲ್ಲಿಯೂ ಹಿಂದುಳಿದಿದೆ.

ನೀವು ಅಕ್ರಮವಾಗಿ ಸರ್ಕಾರ ರಚಿಸಿ, 4 ವರ್ಷಗಳವರೆಗೆ ದುರಾಡಳಿತ, ಭ್ರಷ್ಟಾಚಾರ ನಡೆಸಿ, ಕನ್ನಡಿಗರಾದ ನಾವೆಲ್ಲರೂ ತಲೆತಗ್ಗಿಸುವಂತೆ ಮಾಡಿದ್ದೀರಿ.

ಇಂದು ನಮಗೆ ಬೇಕಾಗಿರುವುದು ನಿಮ್ಮ ಆಶೀರ್ವಾದವಲ್ಲ.

ನಮಗೆ ಬೇಕಾಗಿರೋದು ನಮ್ಮ ಹಕ್ಕು, ಅಭಿವೃದ್ಧಿ ಹಾಗೂ ಪ್ರಗತಿ.

ಕಾಂಗ್ರೆಸ್‌ಗೆ ನಿಮ್ಮ ಮತ ನೀಡಿ. ಮತ್ತೆ ಕರ್ನಾಟಕ ಭಾರತಕ್ಕೆ ಮಾದರಿ ಆಗಲಿ.

ಕೈ ಬಟನ್ ಒತ್ತಿ ಕಾಂಗ್ರೆಸ್ ಗೆಲ್ಲಿಸಿ

ಗೃಹಲಕ್ಷ್ಮಿ ಪ್ರತಿ ಮನೆಯೊಡತಿಗೆ ಪ್ರತಿ ತಿಂಗಳು ₹2000

ಗೃಹ ಜ್ಯೋತಿ ನಿಮ್ಮ ಮನೆಗೆ 200 ಯೂನಿಟ್ ವಿದ್ಯುತ್ ಪ್ರತಿ ತಿಂಗಳು ಉಚಿತ

ಯುವನಿಧಿ ಪ್ರತಿ ತಿಂಗಳು ನಿರುದ್ಯೋಗ ಭತ್ಯೆ ₹3000 ಪದವೀಧರರಿಗೆ | ₹1500 ಡಿಪ್ಲೋಮಾ ಪದವೀಧರರಿಗೆ

ಅನ್ನಭಾಗ್ಯ 10kg ಬಡವರಿಗೆ ಪ್ರತಿ ತಿಂಗಳು ತಲಾ 10kg ಅಕ್ಕಿ ಉಚಿತ

ಉಚಿತ ಪ್ರಯಾಣ ನಮ್ಮ ಪ್ರಮಾಣ ಮಹಿಳೆಯರಿಗೆ ಬಸ್ ಸಂಚಾರ ಉಚಿತ

OM SHRI GURUBASAVALINGAYA NAMAHA

HIREMATH SAMSTHAN VIDYAPEETH TRUST(R), BHALKI

Sri Channabasaveshwar Gurukul (Resi.) PU Science College, Kardyal - 585 413

Tq. Bhalki - Dist. Bidar - Karnataka



WITH EVER - BENIGN BLESSINGS OF POOJYA DR. SRI. BASAVALINGA PATTADEVARU, OUR COLLEGE ONCE AGAIN SECURES UNBEATABLE RESULTS TO STAND AS AN EDUCATIONAL GIANT IN KARNATAKA

GURUKUL MAKES A LANDMARK VICTORY IN JEE MAINS - 2023

VINAY RAMRAO

AIR RANK 389

NTA SCORE	
PHYSICS	- 99.53
CHEMISTRY	- 99.75
MATHEMATICS	- 99.72
TOTAL	99.82%

KARNATAKA STATE TOPPER

DINESH VAIJINATH

AIR CAT. RANK 107

NTA SCORE	
PHYSICS	- 99.65
CHEMISTRY	- 99.88
MATHEMATICS	- 97.06
TOTAL	99.53%

SANGAMESH SUBHASH

AIR RANK 1287

NTA SCORE	
PHYSICS	- 99.43
CHEMISTRY	- 98.64
MATHEMATICS	- 97.84
TOTAL	99.02%

MAHADEV	ABHISHEK	SHARAN	SAIRAJ	SONAKSI	HARISH	VINAY
98.30	98.24	97.41	97.16	96.69	96.61	96.38

No. of Students appeared for JEE Mains **160**

PRASANNA	BHANUTEJA	KIRAN KUMAR	TEJASHWINI	SUSHILKUMAR	SANTOSH	ABHISHEK
95.65	95.58	95.39	95.25	95.20	95.09	95.05

No. of Students eligible for JEE Advanced **102**

BRILLIANT PERFORMANCE IN PUC-II RESULT-2023

VINAY	PRAGATI	PRAKASH	SANDHYA	VINITA	NISHA	KAVYASHREE	SHRUTI	PRAJWAL	SOHAN	SOUMYA	SANGAMESH	DEEPAK	NIKHITA
581•96.83%	579•96.50%	571•95.17%	571•95.17%	565•94.17%	565•94.17%	565•94.17%	563•93.83%	562•93.67%	562•93.67%	562•93.67%	562•93.67%	560•93.33%	560•93.33%

VIVEK	ANAGHA	SNEHA	VACHANAMBIKA	RADHIKA	BHAVANI	PRAJVAL	DIKSHA	CHAITRA	YOGITA	SHRUSTI	SANTOSH	ANUJ	POOJA
559•93.17%	558•93.00%	558•93.00%	558•93.00%	557•92.83%	557•92.83%	556•92.67%	556•92.67%	556•92.67%	555•92.50%	555•92.50%	555•92.50%	555•92.50%	554•92.33%

VISHWATEJ	PRAJWAL	RAKSHITA	BAVITHA	KAPIL	DIGAMBAR	GAJANAND	SHIVA	CHAITRA	VISHNUREDDY	PRABHU	MANJUNATH	SANKET	POOJA
554•92.33%	554•92.33%	553•92.17%	553•92.17%	553•92.17%	552•92.00%	552•92.00%	552•92.00%	551•91.83%	551•91.83%	551•91.83%	551•91.83%	550•91.67%	550•91.67%

PUC II - 2023 Result at A Glance

TOTAL NO. OF STUDENTS APPEARED	843
TOTAL NO. OF STUDENTS PASSED	839
COLLEGE OVERALL RESULT	99.52%
TOTAL NO. OF DISTINCTIONS	277
TOTAL NO. OF DISTINCTIONS IN PCMB	379
TOTAL NO. OF DISTINCTIONS IN PCB	360
TOTAL NO. OF DISTINCTIONS IN PCM	360
TOTAL NO. OF DISTINCTIONS IN PCMCS	023

100 MARKS SCORED	
MATHS	06
PHYSICS	03
BIOLOGY	02
CHEMISTRY	01

CONGRATULATIONS TO THE STUDENTS AND STAFF

ADMISSIONS ARE OPEN FOR
PUC I YEAR SCIENCE & COMMERCE | NEET/JEE MAINS & ADVANCED

Contact : 8147740402-8867844020-7353304503 - Website : www.cbgurukul.in

ಗುರುವಾರ, ಮೇ 4, 2023 | ಬೆಂಗಳೂರು | ₹ 7.00 | ಸಂಪುಟ 76 | ಸಂಚಿಕೆ 123 | ಪುಟ 16
www.prajavani.net
prajavani.net prajavani prajavani prajavani www.prajavani.net

ಪ್ರಜಾವಾಣಿ @75

ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ



ಆಳ-ಅಗಲ
ಅಪರಾಧ ಹಿನ್ನೆಲೆಯ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಳ
40 ಹೆಕ್ಟೇರ್‌ನಲ್ಲಿ ಪಪ್ಪಾಯ, ದಾಳಿಂಬೆ, ಬಾಳೆ ನಷ್ಟ 5
ಇ.ಡಿ ನಿರ್ದೇಶಕರ ಸೇವಾವಧಿ ವಿಸ್ತರಣೆ: 'ಸುಪ್ರೀಂ' ತರಾಟೆ 11

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
61,193 ▼	18,089 ▼	₹63,020 (ಬೆಂಗಳೂರು) ▲	₹77,600 (ಬೆಂಗಳೂರು) ▲	81.80 ▲

ಅಪರಾಧದ ನಂಟಿಗೇ ಆದ್ಯತೆ

ಕರ್ನಾಟಕ ರಾಜ್ಯ ವಿಧಾನಸಭಾ ಚುನಾವಣೆಯ ಕಣದಲ್ಲಿರುವ ಪ್ರಮುಖ ಪಕ್ಷಗಳ ಅಭ್ಯರ್ಥಿಗಳಲ್ಲಿ ಶೇ 39ರಷ್ಟು ಮಂದಿಯ ವಿರುದ್ಧ ಅಪರಾಧ ಪ್ರಕರಣಗಳು ಇವೆ. ಅಭ್ಯರ್ಥಿಗಳು ಸಲ್ಲಿಸಿರುವ ನಾಮಪತ್ರದಲ್ಲೇ ಈ ಮಾಹಿತಿ ಇದೆ. ಎಲ್ಲ ರಾಜಕೀಯ ಪಕ್ಷಗಳೂ ಅಪರಾಧ ಹಿನ್ನೆಲೆಯ ಅಭ್ಯರ್ಥಿಗಳಿಗೆ ಮಣೆ ಹಾಕಿವೆ ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ ಎನ್ನುತ್ತದೆ ಅಸೋಸಿಯೇಷನ್ ಫಾರ್ ಡೆಮಾಕ್ರಟಿಕ್ ರಿಫಾರ್ಮ್ಸ್ (ಎಡಿಆರ್) ವರದಿ. ಕಣದಲ್ಲಿರುವ 2,613 ಅಭ್ಯರ್ಥಿಗಳಲ್ಲಿ 2,586 ಅಭ್ಯರ್ಥಿಗಳ ನಾಮಪತ್ರವನ್ನು ಪರಿಶೀಲಿಸಿ ಎಡಿಆರ್ ಈ ವರದಿ ಸಿದ್ಧಪಡಿಸಿದೆ

	ನಾಮಪತ್ರ ಪರಿಶೀಲಿಸಲಾದ ಅಭ್ಯರ್ಥಿಗಳ ಸಂಖ್ಯೆ	ಅಪರಾಧ ಪ್ರಕರಣಗಳು ಇವೆ ಎಂದು ಘೋಷಿಸಿಕೊಂಡ ಅಭ್ಯರ್ಥಿಗಳ ಸಂಖ್ಯೆ	ಅಪರಾಧದ ಹಿನ್ನೆಲೆ ಇಲ್ಲದ ಅಭ್ಯರ್ಥಿಗಳು
ಕಾಂಗ್ರೆಸ್	221	122 (55%)	99
ಬಿಜೆಪಿ	224	96 (43%)	128
ಜೆಡಿಎಸ್	208	70 (34%)	138
ಎಎಪಿ	208	48 (23%)	160
ಇತರೆ	12	3 (25%)	09
ಸ್ವತಂತ್ರ ಅಭ್ಯರ್ಥಿಗಳು	901	119 (13%)	782

ಒಟ್ಟು ಅಭ್ಯರ್ಥಿಗಳಲ್ಲಿ ಶೇ 22ರಷ್ಟು ಮಂದಿಗೆ ಅಪರಾಧದ ಹಿನ್ನೆಲೆ

ಈ ಬಾರಿ ಕಣದಲ್ಲಿರುವ **2,586** ಅಭ್ಯರ್ಥಿಗಳಲ್ಲಿ ಶೇ 22ರಷ್ಟು ಅಭ್ಯರ್ಥಿಗಳು ತಮ್ಮ ವಿರುದ್ಧ ಅಪರಾಧ ಪ್ರಕರಣಗಳು ಇವೆ ಎಂದು ಘೋಷಿಸಿಕೊಂಡಿದ್ದಾರೆ. ಅಭ್ಯರ್ಥಿಗಳು ಸಲ್ಲಿಸಿರುವ ನಾಮಪತ್ರದ ಜತೆಗಿರುವ ಪ್ರಮಾಣಪತ್ರದಲ್ಲಿ ಈ ಮಾಹಿತಿ ಇದೆ. ಚುನಾವಣಾ ಆಯೋಗದ ಜಾಲತಾಣದಲ್ಲಿ ಈ ನಾಮಪತ್ರಗಳು ಲಭ್ಯವಿವೆ



ಈ ಪ್ರಮುಖ ನಾಲ್ಕು ರಾಜಕೀಯ ಪಕ್ಷಗಳಿಂದ ಕಣಕ್ಕೆ ಇಳಿದಿರುವ ಒಟ್ಟು ಅಭ್ಯರ್ಥಿಗಳಲ್ಲಿ, 861 ಅಭ್ಯರ್ಥಿಗಳ ನಾಮಪತ್ರವನ್ನು ಪರಿಶೀಲಿಸಲಾಗಿದೆ. ಅವರಲ್ಲಿ 336 (ಶೇ 39ರಷ್ಟು) ಅಭ್ಯರ್ಥಿಗಳು ತಮ್ಮ ವಿರುದ್ಧ ಅಪರಾಧ ಪ್ರಕರಣಗಳು ಇವೆ ಎಂದು ಘೋಷಿಸಿಕೊಂಡಿದ್ದಾರೆ

ಮಹಿಳಾ ಅಭ್ಯರ್ಥಿಗಳ ಸಂಖ್ಯೆ ತೀರಾ ಕಡಿಮೆ



ಈ ಬಾರಿ ಕಣಕ್ಕೆ ಇಳಿದಿರುವ ಒಟ್ಟು ಅಭ್ಯರ್ಥಿಗಳ ಸಂಖ್ಯೆಯಲ್ಲಿ ಮಹಿಳಾ ಅಭ್ಯರ್ಥಿಗಳ ಸಂಖ್ಯೆ ತೀರಾ ಕಡಿಮೆ ಇದೆ. ಈಗ ಕಣದಲ್ಲಿ ಒಟ್ಟು 2,613 ಅಭ್ಯರ್ಥಿಗಳು ಇದ್ದು, ಅವರಲ್ಲಿ ಮಹಿಳಾ ಅಭ್ಯರ್ಥಿಗಳ ಪ್ರಮಾಣ ಶೇ 7ರಷ್ಟು ಮಾತ್ರ.

ಆಧಾರ: ಎಡಿಆರ್, ಚುನಾವಣಾ ಆಯೋಗ ಪ್ರಜಾವಾಣಿ ಗ್ರಾಫಿಕ್ಸ್

ಗಮನ ಸೆಳೆದ ನೇತಾರರು

ಕಲಬುರಗಿಯಲ್ಲಿ ಬುಧವಾರ ರೋಡ್ ಶೋ ನಡೆಸಿದ ಕಾಂಗ್ರೆಸ್ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ವಾದ್ರಾ. ಅಂಕೋಲಾ ತಾಲ್ಲೂಕಿನ ಹಟ್ಟಿಕೇರಿಯಲ್ಲಿ ನಡೆದ ಬಿಜೆಪಿ ಸಭೆಯಲ್ಲಿ ಯಕ್ಷ ಕಿರೀಟದಲ್ಲಿ ಮಿಂಚಿದ ಪ್ರಧಾನಿ ನರೇಂದ್ರ ಮೋದಿ
– ಪ್ರಜಾವಾಣಿ ಚಿತ್ರ/ಪಿಟಿಐ

'ಹೊಸಬರಿಗೆ ಟಿಕೆಟ್ ಪ್ರಯೋಗ ಯಶಸ್ವಿ'

ಪ್ರಜಾವಾಣಿ ವಾರ್ತೆ

ಮೈಸೂರು: 'ಹೊಸಬರಿಗೆ ಅವಕಾಶ ನೀಡಿರುವ ಬಿಜೆಪಿಯ ಪ್ರಯೋಗ ರಾಜ್ಯದಲ್ಲೂ ಯಶಸ್ವಿಯಾಗುತ್ತದೆ' ಎಂದು ಪಕ್ಷದ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್.ಯಡಿಯೂರಪ್ಪ ವಿಶ್ವಾಸ ವ್ಯಕ್ತಪಡಿಸಿದರು.

ಚುನಾವಣೆ ಹೊತ್ತಿನಲ್ಲಿ 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದಲ್ಲಿ ಪ್ರಶ್ನೆಯೊಂದಕ್ಕೆ ಉತ್ತರಿಸಿದ ಅವರು 'ಬೇರೆ ರಾಜ್ಯಗಳಲ್ಲೂ ಈ ಪ್ರಯೋಗ ಮಾಡಿ ಯಶಸ್ವಿಯಾಗಿದ್ದೇವೆ.

ಯಡಿಯೂರಪ್ಪ

ಯುವಜನರಿಗೆ ಅವಕಾಶ ನೀಡಬೇಕೆಂಬ ನಿರ್ಧಾರವನ್ನು ಜನರೂ ಸ್ವಾಗತಿಸುತ್ತಾರೆ' ಎಂದು ಪ್ರತಿಪಾದಿಸಿದರು.

ಈ ಚುನಾವಣೆಯಲ್ಲಿ ಕಾಂಗ್ರೆಸ್ 60–70 ಸೀಟು ಪಡೆಯುವುದೇ ಕಷ್ಟ. ಸ್ಪಷ್ಟ ಬಹುಮತದೊಂದಿಗೆ ಸರ್ಕಾರ ರಚಿಸುತ್ತೇವೆ. ಯಾವುದೇ ಪಕ್ಷದೊಂದಿಗೆ ಮೈತ್ರಿ ಮಾಡಿಕೊಳ್ಳುವ ಸನ್ನಿವೇಶವೇ ಸೃಷ್ಟಿಯಾಗದು ಎಂದು ಹೇಳಿದರು.

'ರಾಷ್ಟ್ರೀಯ ಪಕ್ಷಗಳ ದೂತರು ಚುನಾವಣೋತ್ತರ ಮೈತ್ರಿಗಾಗಿ ಬಂದಿದ್ದರು ಎಂದು ಜೆಡಿಎಸ್ ವರಿಷ್ಠ ಎಚ್.ಡಿ. ದೇವೇಗೌಡರೇ ಹೇಳಿದ್ದಾರಲ್ಲಾ' ಎಂಬ ಪ್ರಶ್ನೆಗೆ, 'ಅವರ ಮಾತಿನಲ್ಲಿ ಸತ್ಯಾಂಶವಿಲ್ಲ. ಇಡೀ ದೇಶವೇ ಹೊಗಳುತ್ತಿರುವ ಪ್ರಧಾನಿ ನರೇಂದ್ರ ಮೋದಿ ಅವರು ಇನ್ನೊಬ್ಬರ ಮನೆ ಬಾಗಿಲಿಗೆ ಯಾಕೆ ಹೋಗುತ್ತಾರೆ' ಎಂದು ಅವರು ಮರು ಪ್ರಶ್ನೆ ಹಾಕಿದರು.

ಸಂದರ್ಶನ 6

ಪ್ರಜಾ ಮತ
ಜನತಂತ್ರದ ಹಬ್ಬ
'ಕಾಂಗ್ರೆಸ್ ಗೆದ್ದರೆ ಬಿಜೆಪಿ ವಿರೋಧಿ ಒಕ್ಕೂಟಕ್ಕೆ ಬಲ' 6
'ಮೋದಿಯಂತೆ ಅಳುತ್ತಾ ಕೂರಲಾರೆ' 6
ಪ್ರಿಯಾಂಕ್ ಖರ್ಗೆ, ಯತ್ನಾಳ್‌ಗೆ ಆಯೋಗ ನೋಟಿಸ್ 7

ಸಲಿಂಗ ವಿವಾಹ: ಸಮಿತಿ ರಚನೆಗೆ ಕೇಂದ್ರ ಒಪ್ಪಿಗೆ

ನವದೆಹಲಿ (ಪಿಟಿಐ/ರಾಯಿಟರ್ಸ್): ಸಲಿಂಗ ಜೋಡಿಯು ದಿನನಿತ್ಯ ಎದುರಿಸುತ್ತಿರುವ ಸಮಸ್ಯೆಗಳನ್ನು ಆಡಳಿತಾತ್ಮಕ ನೆಲೆಯಲ್ಲಿ ಪರಿಹರಿಸುವುದಕ್ಕೆ ಇರುವ ಮಾರ್ಗೋಪಾಯಗಳನ್ನು ಅನ್ವೇಷಿಸಲು ಸಮಿತಿಯೊಂದನ್ನು ರಚಿಸುವುದಾಗಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ. 11

ಕ್ರೆಮ್ಲಿನ್ ಮೇಲೆ ಉಕ್ರೇನ್ ಡ್ರೋನ್ ದಾಳಿ ವಿಫಲ

ಮಾಸ್ಕೊ (ಎಪಿ): ಅಧ್ಯಕ್ಷ ಪುಟಿನ್ ಅವರ ಹತ್ಯೆಗೈಯಲು ಉದ್ದೇಶಿಸಿದ್ದ ಉಕ್ರೇನ್, ಎರಡು ಡ್ರೋನ್‌ಗಳನ್ನು ಬಳಸಿ ಮಾಸ್ಕೊದ ಕ್ರೆಮ್ಲಿನ್ ಮೇಲೆ ದಾಳಿ ನಡೆಸಲು ತಡರಾತ್ರಿ ಪ್ರಯತ್ನಿಸಿದೆ ಎಂದು ರಷ್ಯಾ ಬುಧವಾರ ಆರೋಪಿಸಿದೆ. 10

ಎಸ್‌ಐಟಿ ತನಿಖೆಯೇ ಏಕಮುಖ ಎಂದ ವಿಶೇಷ ನ್ಯಾಯಾಲಯ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: '2002ರ ನರೋದ ಗಾಮ್ ಗಲಭೆ ಪ್ರಕರಣಕ್ಕೆ ಸಂಬಂಧಿಸಿ ವಿಶೇಷ ತನಿಖಾ ತಂಡ (ಎಸ್‌ಐಟಿ) ನಡೆಸಿದ ತನಿಖೆಯ ರೀತಿಯು 'ಅನುಮಾನದಿಂದ ಕೂಡಿದೆ ಮತ್ತು ಸಂಪೂರ್ಣ ಏಕಮುಖವಾಗಿದೆ. ಜೊತೆಗೆ ಈ ರೀತಿಯ ತನಿಖೆ ನಡೆಸುವುದರಿಂದ ತನಗೆ ಲಾಭವಾಗಬಹುದು ಎಂಬ ಅಭಿಪ್ರಾಯ ತನಿಖಾಧಿಕಾರಿಗೆ ಇತ್ತು' ಎಂದು ಗುಜರಾತ್‌ನ ವಿಶೇಷ ವಿಚಾರಣಾ ನ್ಯಾಯಾಲಯವು ಹೇಳಿದೆ.

ಇದೇ ಮೊದಲ ಬಾರಿಗೆ ಕೆಳಹಂತದ ನ್ಯಾಯಾಲಯವೊಂದು ಸುಪ್ರೀಂ ಕೋರ್ಟ್ ನೇಮಕ ಮಾಡಿದ್ದ ಎಸ್‌ಐಟಿಯೊಂದನ್ನು ಟೀಕಿಸಿ ತೀರ್ಪು ನೀಡಿದೆ. ಈ ಗಲಭೆಯ ಎಲ್ಲಾ 67 ಆರೋಪಿಗಳನ್ನು ಖುಲಾಸೆಗೊಳಿಸಿ ಏಪ್ರಿಲ್ 20ರಂದು ವಿಶೇಷ ನ್ಯಾಯಾಧೀಶೆ ಶುಭದಾ ಕೃಷ್ಣಕಾಂತ ಬಕ್ಷಿ ಅವರು ತೀರ್ಪು ನೀಡಿದ್ದರು. 1,728 ಪುಟಗಳ ತೀರ್ಪಿನ ಪ್ರತಿಯು ಮಂಗಳವಾರ ಸಾರ್ವಜನಿಕರಿಗೆ ಲಭ್ಯವಾಗಿದೆ.

2002ರ ಗುಜರಾತ್ ಗಲಭೆ ಸಂದರ್ಭದಲ್ಲಿ ಅಹಮದಾಬಾದ್ ಜಿಲ್ಲೆಯ ನರೋದ ಗಾಮ್ ಪ್ರದೇಶದಲ್ಲಿ 11 ಮಂದಿ ಮುಸ್ಲಿಮರನ್ನು ಜೀವಂತವಾಗಿ ಸುಟ್ಟು ಹಾಕಲಾಗಿತ್ತು. ಈ ಗಲಭೆಯ ಕುರಿತು ಗುಜರಾತ್ ಪೊಲೀಸರು ತನಿಖೆ ನಡೆಸುತ್ತಿದ್ದರು. ನಂತರ 2008ರಲ್ಲಿ ಈ ಪ್ರಕರಣದ ತನಿಖೆಯನ್ನು ಎಸ್‌ಐಟಿಗೆ ವಹಿಸಲಾಗಿತ್ತು.

ಬಿಜೆಪಿಯ ಮಾಜಿ ಸಚಿವೆ ಮಾಯಾ ಕೊಡ್ನಾನಿ, ವಿಶ್ವ ಹಿಂದೂ ಪರಿಷತ್ತಿನ ಮಾಜಿ ನಾಯಕ ಜಯದೀಪ್ ಪಟೇಲ್ ಹಾಗೂ ಬಜರಂಗದಳದ ನಾಯಕ ಬಾಬು ಬಜರಂಗಿ ಅವರು ಪ್ರಕರಣದ ಪ್ರಮುಖ ಆರೋಪಿಗಳಾಗಿದ್ದರು.

ಸಾಕ್ಷಿಗಳ ವೈರುದ್ಧ್ಯ ಹೇಳಿಕೆ: 'ಗಲಭೆಯು 2002ರ ಫೆ. 28ರಂದು ನಡೆದಿದೆ. ಈ ಘಟನೆ ಸಂಬಂಧ ಎಸ್‌ಐಟಿ ಹಲವು ಸಾಕ್ಷಿಗಳನ್ನು ಹಾಜರುಪಡಿಸಿದೆ. ಆರೋಪಿಗಳು ಕಾನೂನುಬಾಹಿರವಾಗಿ ಹಾಗೂ ಸಮಾನ ಉದ್ದೇಶದಿಂದ ಗುಂಪು ಕಟ್ಟಿಕೊಂಡು ಅಪರಾಧ ಎಸಗಿರುವ ಬಗ್ಗೆ ಈ ಸಾಕ್ಷಿಗಳು ಸಮರ್ಥನೆ ನೀಡಿಲ್ಲ. ಆದ್ದರಿಂದ ಗಲಭೆ ಸಂಬಂಧ ಪಿತೂರಿ ನಡೆದಿದೆ ಎನ್ನುವ ಸರ್ಕಾರದ ವಾದಕ್ಕೆ ಯಾವುದೇ ಸಾಕ್ಷ್ಯಗಳಿಲ್ಲ' ಎಂದು ತೀರ್ಪಿನಲ್ಲಿ ಹೇಳಲಾಗಿದೆ.

11ನೇ ಪುಟ ನೋಡಿ

ಪ್ರಮುಖ ಅಂಶಗಳು

ನರೋದ ಗಾಮ್ ಪ್ರಕರಣ

- ಕಾಂಗ್ರೆಸ್ ನಾಯಕ ಎಹ್ಸಾನ್ ಜಾಫ್ರಿ ಅವರ ಪತ್ನಿ ಜಾಕಿಯಾ ಜಾಫ್ರಿ ಅವರು ನೀಡಿದ್ದ ದೂರನ್ನೂ ಇದೇ ಎಸ್‌ಐಟಿ ತನಿಖೆ ನಡೆಸಿತ್ತು. ಈ ಪ್ರಕರಣದಲ್ಲಿ ಎಸ್‌ಐಟಿಯು ಇಂದಿನ ಪ್ರಧಾನಿ ನರೇಂದ್ರ ಮೋದಿ ಅವರಿಗೆ ಕ್ಲೀನ್‌ಚಿಟ್ ನೀಡಿತ್ತು. ಇದನ್ನು ಸುಪ್ರೀಂ ಕೋರ್ಟ್ ಸಹ ಎತ್ತಿ ಹಿಡಿದಿತ್ತು
- 'ನರೋದ ಗಾಮ್ ಪ್ರಕರಣದ ಕುರಿತು ಗುಜರಾತ್ ಪೊಲೀಸರು ನಡೆಸಿದ ತನಿಖೆಯು 'ವಿಸ್ತೃತ'ವಾಗಿತ್ತು ಮತ್ತು ಈ ತನಿಖೆಯಲ್ಲಿ ಯಾವುದೇ ತಪ್ಪುಗಳು ಇರಲಿಲ್ಲ' ಎಂದು ವಿಶೇಷ ನ್ಯಾಯಾಲಯ ಅಭಿಪ್ರಾಯಪಟ್ಟಿದೆ

ಬಜರಂಗದಳ: ಮತ್ತೆ ಜಟಾಪಟಿ

ಬೆಂಗಳೂರು: 'ಸಂವಿಧಾನದ ವಿಧಿಗಳನ್ನು ಉಲ್ಲಂಘಿಸುವ ವ್ಯಕ್ತಿ ಹಾಗೂ ಬಜರಂಗದಳ, ಪಿಎಫ್‌ಐನಂತಹ ಸಂಘಟನೆಗಳ ನಿಷೇಧವೂ ಸೇರಿದಂತೆ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು' – ಕಾಂಗ್ರೆಸ್ ಪ್ರಣಾಳಿಕೆಯ ಈ ಪ್ರಸ್ತಾವಕ್ಕೆ ಆಕ್ರೋಶ ಬುಧವಾರವೂ ಮುಂದುವರಿದಿದೆ. 'ವಿಷಯವನ್ನು ತಿರುಚಿರುವ ಬಿಜೆಪಿ ಉದ್ದೇಶಪೂರ್ವಕ ವಿವಾದ ಸೃಷ್ಟಿಸಿದೆ' ಎಂದು ದೂರಿರುವ ಕಾಂಗ್ರೆಸ್, ತನ್ನ ನಿಲುವಿನಲ್ಲಿ ಯಾವುದೇ ಬದಲಾವಣೆಯಿಲ್ಲ ಎಂದೂ ಹೇಳಿದೆ.

'1,500 ದೇವಾಲಯಗಳನ್ನು ಕೆಡವಿದಾಗ ಪ್ರತಿಭಟಿಸಲಿಲ್ಲ ಏಕೆ: ಸುರ್ಜೇವಾಲಾ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ನಾನು ಹಿಂದೂ, ನಾನು ಹನುಮ ಭಕ್ತ. ನನ್ನ ಕ್ಷೇತ್ರದಲ್ಲಿ ಹನುಮ ದೇವಾಲಯ ಕಟ್ಟಿದ್ದೇನೆ. ಆದರೂ, ನನಗೆ ಸಂವಿಧಾನವೇ ದೇವರು. ಸಂವಿಧಾನ ನಮ್ಮ ಧಾರ್ಮಿಕ ಹಕ್ಕನ್ನು ರಕ್ಷಿಸುತ್ತದೆ. ಸಮಾಜದಲ್ಲಿ ಯಾರು ಕಾನೂನು ಕೈಗೆತ್ತಿಕೊಳ್ಳುತ್ತಾರೋ ಅಂಥವರ ವಿರುದ್ಧ ಕ್ರಮಕೈಗೊಳ್ಳುವುದಾಗಿ ಪ್ರಣಾಳಿಕೆಯಲ್ಲಿ ಹೇಳಿದ್ದೇವೆ' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೇವಾಲಾ ಹೇಳಿದರು.

ಪ್ರಣಾಳಿಕೆಯನ್ನು ಸಮರ್ಥಿಸಿದ ಅವರು, 'ರಾಜ್ಯದಲ್ಲಿ ನಾಲ್ಕು ವರ್ಷಗಳಲ್ಲಿ 1,500 ದೇವಾಲಯಗಳನ್ನು ಬಿಜೆಪಿ ಸರ್ಕಾರ ಕೆಡವಿದೆ. ಅದರ ವಿರುದ್ಧ ಯಾಕೆ ಯಾರೂ ಪ್ರತಿಭಟನೆ ಮಾಡಲಿಲ್ಲ' ಎಂದು ಪ್ರಶ್ನಿಸಿದರು.

'ಬಿಜೆಪಿ ನಾಯಕರಿಗೆ ಹನುಮಾನ್ ಚಾಲೀಸಾ ಓದಲು ಬರುವುದಿಲ್ಲ. ಅವರಿಗೆ ಶೇ 40 ಕಮಿಷನ್ ತೆಗೆದುಕೊಳ್ಳುವುದಷ್ಟೇ ಗೊತ್ತು' ಎಂದೂ ತಿರುಗೇಟು ನೀಡಿದರು.

'ನಂಜನಗೂಡಿನಲ್ಲಿ 3 ಸಾವಿರ ಹಳೆಯ ಹನುಮಂತನ ದೇವಾಲಯ ಕೆಡವಿದ್ದರು. ಬೆಂಗಳೂರಿನಲ್ಲಿ ಮೆಟ್ರೊ ನಿರ್ಮಾಣಕ್ಕೆ 150 ವರ್ಷಗಳ ಹಳೆಯ ಹನುಮಂತನ ದೇವಾಲಯವನ್ನು 2020ರ ಜ. 27ರಂದು ಕೆಡವಿದ್ದರು. ಶಿವಮೊಗ್ಗ ನಗರದಲ್ಲಿ 2021ರ ಫೆ.17ರಂದು ಹಳೆಯ ದೇವಾಲಯ ಕೆಡವಲಾಗಿತ್ತು. ಚಿತ್ರದುರ್ಗದ ಹೊಳಲ್ಕೆರೆಯಲ್ಲಿ 2022ರ ಫೆ.28ರಂದು ಹನುಮ ದೇವಾಲಯ ಕೆಡವಲಾಗಿತ್ತು. ಆಗ ಪ್ರತಿಭಟನೆ ನಡೆಸಲಾಗಿತ್ತೇ? ಮೋದಿ ಮಾತನಾಡಿದ್ದಾರಾ? ಈಗ ಚುನಾವಣೆ ಬಂದಿದೆ ಎಂಬ ಕಾರಣಕ್ಕೆ ಈ ವಿಚಾರ ಬಳಸಿಕೊಳ್ಳುತ್ತಿದ್ದಾರೆ' ಎಂದರು.

5ನೇ ಪುಟ ನೋಡಿ

ದೇಶದಾದ್ಯಂತ ಇರುವ ಸಂಘಟನೆಯಾದ ಬಜರಂಗದಳವನ್ನು ನಿಷೇಧಿಸುವ ಅಧಿಕಾರ ರಾಜ್ಯ ಸರ್ಕಾರಕ್ಕಿಲ್ಲ. ಅದು ಕೇಂದ್ರದ ಮಟ್ಟದಲ್ಲಿ ಆಗಬೇಕು. ಅಲ್ಲಿ ಇವರ ಸರ್ಕಾರವಿದೆಯೇ?
ಬಸವರಾಜ ಬೊಮ್ಮಾಯಿ, ಮುಖ್ಯಮಂತ್ರಿ

ಬಜರಂಗದಳ ಸೇರಿ ಯಾವುದೇ ಸಂಘಟನೆಯನ್ನಾಗಲಿ ನಿಷೇಧಿಸುವುದು ಪರಿಹಾರವಲ್ಲ. ಈ ಸಂಘಟನೆಯಲ್ಲಿ ಅಮಾಯಕ ಮಕ್ಕಳನ್ನು ಬಳಸಿಕೊಳ್ಳಲಾಗುತ್ತಿದೆ. ಎಲ್ಲಿ ತಪ್ಪು ಆಗಿದೆ ಎಂಬುದನ್ನು ಸರಿಪಡಿಸುವ ಕೆಲಸವಾಗಬೇಕು.
ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ನಾಯಕ

ಕಾಂಗ್ರೆಸ್ ನಾಯಕರು ಅನುಭವಸ್ಥರಾಗಿದ್ದು, ಸೂಕ್ತ ರೀತಿಯಲ್ಲಿ ಆಲೋಚಿಸಿಯೇ ಪ್ರಣಾಳಿಕೆ ಸಿದ್ಧಪಡಿಸಿದ್ದಾರೆ. ಬಜರಂಗದಳ ನಿಷೇಧದ ಕುರಿತು ಬಿಜೆಪಿ ಉದ್ದೇಶಪೂರ್ವಕವಾಗಿ ವಿವಾದ ಮಾಡುತ್ತಿದೆ.
ಮಲ್ಲಿಕಾರ್ಜುನ ಖರ್ಗೆ, ಅಧ್ಯಕ್ಷ, ಎಐಸಿಸಿ

ಬಜರಂಗ ದಳ ನಿಷೇಧಿಸುತ್ತೇವೆ ಎನ್ನುವ ಮೂಲಕ ಕಾಂಗ್ರೆಸ್ ತಿರುಕನ ಕನಸು ಕಾಣುತ್ತಿದೆ. ಆ ಪಕ್ಷ ಅಧಿಕಾರಕ್ಕೆ ಬರುವುದಿಲ್ಲ.
ಬಿ.ಎಸ್. ಯಡಿಯೂರಪ್ಪ, ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಭುವನಗಿರಿ: 'ಅರ್ಜಿ ಹಾಕಿಲ್ಲ' ಎಂದ ಗ್ರಾಮ ಪಂಚಾಯಿತಿ

ಮಣ್ಣಿನ ಶಿಥಿಲ ಮನೆಯಲ್ಲಿ ಶತಾಯುಷಿ

• ರಘು ಹೆಬ್ಬಾಲೆ

ಕುಶಾಲನಗರ (ಕೊಡಗು ಜಿಲ್ಲೆ): ಮಂಗಳವಾರವಷ್ಟೇ ಮತದಾನ ಮಾಡಿದ ಇಲ್ಲಿನ ಕೂಡಿಗೆ ಗ್ರಾಮ ಪಂಚಾಯಿತಿ ವ್ಯಾಪ್ತಿಯ ಭುವನಗಿರಿ ಗ್ರಾಮದ ಶತಾಯುಷಿ ಕಾಳಮ್ಮ (104) ಅವರು ಶಿಥಿಲಗೊಂಡು ಕುಸಿದುಬೀಳುವ ಸ್ಥಿತಿಯ ಮನೆಯಲ್ಲೇ ದಿನದೂಡುತ್ತಿದ್ದಾರೆ.

ಮಂಗಳವಾರ ಇದೇ ಮನೆಯ ಹೊರಗೆ ಕಾಳಮ್ಮ ಮತದಾನ ಮಾಡಿದ್ದರು. ಮತದಾನ ಪ್ರಕ್ರಿಯೆಗೆ ಬಂದಿದ್ದ ಅಧಿಕಾರಿಗಳು ಇದೇ ಮನೆಯ ಮುಂದೆ ಫೋಟೊ ತೆಗೆಸಿಕೊಂಡಿದ್ದರು. ಈ ಫೋಟೊ ಕೊಡಗು ಜಿಲ್ಲಾಧಿಕಾರಿ ಫೇಸ್‌ಬುಕ್ ಖಾತೆಯಲ್ಲಿ ಅಪ್‌ಲೋಡ್ ಆಗುತ್ತಿದ್ದಂತೆಯೇ ಅನೇಕರು ಕಾಳಮ್ಮ ಅವರ ಶಿಥಿಲಗೊಂಡ ಮನೆಯ ಕುರಿತು ಪ್ರತಿಕ್ರಿಯಿಸಿದ್ದರು.

ಕಾಳಮ್ಮ ಅವರ ಮನೆಯ ದುಃಸ್ಥಿತಿ ಕುರಿತು 'ಪ್ರಜಾವಾಣಿ'ಗೆ ಪ್ರತಿಕ್ರಿಯೆ ನೀಡಿದ್ದ ಜಿಲ್ಲಾಧಿಕಾರಿ ಡಾ.ಬಿ.ಸಿ. ಸತೀಶ, 'ಮನೆಗೆ ತೆರಳಿದ್ದ ಅಧಿಕಾರಿಗಳ ಹೇಳಿಕೆ ಪ್ರಕಾರ ಮನೆಯ ಹಿಂಭಾಗ

ಕಾಳಮ್ಮ ಅವರ ಮನೆ

ಹೊಸ ಮನೆಯನ್ನು ನಿರ್ಮಿಸಲಾಗುತ್ತಿದೆ. ತಾತ್ಕಾಲಿಕವಾಗಿ ಮಹಿಳೆ ಈ ಮನೆಯಲ್ಲಿ ವಾಸವಿದ್ದಾರೆ ಎಂದು ತಿಳಿದು ಬಂದಿದೆ. ಚುನಾವಣೆ ಮುಗಿದ ತಕ್ಷಣವೇ ಈ ಕುರಿತು ಕೂಲಂಕಷವಾಗಿ ಪರಿಶೀಲಿಸಲಾಗುವುದು' ಎಂದು ಹೇಳಿದ್ದರು.

ಈ ಕುರಿತು ಅಲ್ಲಿನ ಪಂಚಾಯಿತಿ ಅಭಿವೃದ್ಧಿ ಅಧಿಕಾರಿ (ಪಿಡಿಒ) ಅಂಜನಾದೇವಿ ಅವರನ್ನು ಪ್ರಶ್ನಿಸಿದಾಗ, 'ಕಾಳಮ್ಮ ಅವರ ಹೆಸರಿನಲ್ಲಿ ಯಾರೂ ಅರ್ಜಿ ಹಾಕಿಲ್ಲ. ಹಾಗಾಗಿ, ಅವರಿಗೆ ಮನೆ ನೀಡಿಲ್ಲ. ಆದರೆ, ಈ ಹಿಂದೆ ಅವರ ಮಗನಿಗೆ ವಸತಿ ಯೋಜನೆಯಡಿ ಮನೆ ನಿರ್ಮಾಣಕ್ಕೆ ಹಣ ಮಂಜೂರಾಗಿದೆ' ಎಂದು ತಿಳಿಸಿದರು.

ಮಕ್ಕಳ ಮನೆಗೆ ಹೋಗಲು ನಕಾರ: ಶಿಥಿಲಗೊಂಡ ತಮ್ಮ ಮನೆಯ ಪಕ್ಕವೇ ಇರುವ ಮಗ ಮತ್ತು ಮಗಳ ಮನೆಗೆ ಹೋಗಲು ಕಾಳಮ್ಮ ಒಪ್ಪುತ್ತಿಲ್ಲ. ಈ ಹಿಂದೆ ತಾವು ಬಾಳಿದ್ದ ಮನೆಯಲ್ಲೇ ಇರುವುದಾಗಿ ಹೇಳಿದ್ದಾರೆ. ಅವರ ಮನವೊಲಿಸಲು ಹಾಗೂ ಅವರಿರುವ ಜಾಗದಲ್ಲೇ ಸುಸಜ್ಜಿತ ಮನೆ ಕಟ್ಟಿಕೊಡಲು ಯಾರೂ ಆಸಕ್ತಿ ವಹಿಸಿಲ್ಲ.

ಕಾಳಮ್ಮ ಅವರ ಪುತ್ರ ತಮ್ಮಯ್ಯ ಪಾರ್ಶ್ವವಾಯುವಿಗೆ ತುತ್ತಾಗಿದ್ದು, ಸೊಸೆ ಜಯಮ್ಮ ಕೂಲಿ ಕೆಲಸ ಮಾಡುತ್ತಿದ್ದಾರೆ. ಮೊಮ್ಮಗ ಲಿಂಗರಾಜು ನೀರಗಂಟಿಯಾಗಿದ್ದರೆ, ಇನ್ನಿಬ್ಬರು ಮೊಮ್ಮಕ್ಕಳಾದ ಮಹೇಶ ಮತ್ತು ಶಿವಕುಮಾರ ಗಾರೆ ಕೆಲಸ ಮಾಡಿಕೊಂಡಿದ್ದಾರೆ. ಪುತ್ರಿ ನಾಗಮ್ಮ ಗ್ರಾಮದಲ್ಲೇ ಪ್ರತ್ಯೇಕವಾಗಿ ವಾಸವಾಗಿದ್ದು, ತಾಯಿಗೆ ಊಟ- ತಿಂಡಿ ನೀಡುತ್ತಿದ್ದಾರೆ. ಸೊಸೆ ಜಯಮ್ಮ ಕೂಡ ಯೋಗಕ್ಷೇಮ ನೋಡಿಕೊಳ್ಳುತ್ತಿದ್ದಾರೆ. ಕಾಳಮ್ಮ ಅವರ ಉಳಿದ ಐವರು ಪುತ್ರಿಯರು ಬೇರೆ ಊರುಗಳಲ್ಲಿದ್ದಾರೆ.

ಈ ಕುರಿತು ವರ್ಲ್ಡ್ ಹ್ಯೂಮನ್ ರೈಟ್ಸ್ ಸೇವಾ ಕೇಂದ್ರವು ರಾಜ್ಯ ಮಾನವ ಹಕ್ಕುಗಳ ಆಯೋಗಕ್ಕೆ ದೂರು ನೀಡಿದೆ. 'ಕಾಳಮ್ಮ ಅವರಿಗೆ ಮನೆ ನಿರ್ಮಿಸಿಕೊಡಬೇಕು. ಅವರ ಮನೆಗೆ ಮತ ಹಾಕಿಸಲು ಹೋದ ಅಧಿಕಾರಿಗಳೆಲ್ಲರೂ ತಮ್ಮ ಕುಟುಂಬ ಸಮೇತ ಅದೇ ಮನೆಯಲ್ಲಿ ವಾಸ ಮಾಡುವಂತೆ ಆದೇಶಿಸಬೇಕು' ಎಂದೂ ಕೋರಿದೆ.

ಚಿನಕುರಳಿ

ಪ್ರಕಾಶ್ ಶೆಟ್ಟಿ

13 ವರ್ಷಗಳ ಗರಿಷ್ಠ ಮಟ್ಟಕ್ಕೆ ಸೇವಾ ವಲಯದ ಚಟುವಟಿಕೆ

ನವದೆಹಲಿ (ಪಿಟಿಐ): ಸೇವೆಗಳಿಗೆ ಬೇಡಿಕೆ ಹೆಚ್ಚುತ್ತಿರುವುದು ಹಾಗೂ ಕಂಪನಿಗಳಿಗೆ ಹೊಸ ವಹಿವಾಟುಗಳು ಸಿಗುತ್ತಿರುವುದರಿಂದ ದೇಶದ ಸೇವಾ ವಲಯದ ಚಟುವಟಿಕೆಯು ಏಪ್ರಿಲ್ ತಿಂಗಳಿನಲ್ಲಿ ಸರಿಸುಮಾರು 13 ವರ್ಷಗಳ ಗರಿಷ್ಠ ಮಟ್ಟಕ್ಕೆ ಏರಿಕೆ ಕಂಡಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಇಂಡಿಯಾ ಸಂಸ್ಥೆ ಹೇಳಿದೆ.

ಮಾರುಕಟ್ಟೆ ಪರಿಸ್ಥಿತಿಯು ಅನುಕೂಲಕರವಾಗಿ ಇರುವುದರಿಂದ ಬೆಲೆ ಏರಿಕೆಯ ಒತ್ತಡದ ನಡುವೆಯೂ ಸೇವಾ ವಲಯದ ಚಟುವಟಿಕೆಗಳಿಗೆ ಬೇಡಿಕೆ ಹೆಚ್ಚಾಗಿದೆ ಎಂದು ಅದು ತಿಳಿಸಿದೆ.

ವಲಯದ ಚಟುವಟಿಕೆಯನ್ನು ಸೂಚಿಸುವ ಸೂಚ್ಯಂಕವು ಮಾರ್ಚ್‌ನಲ್ಲಿ 57.8ರಷ್ಟು ಇದ್ದಿದ್ದು ಏಪ್ರಿಲ್‌ನಲ್ಲಿ 62ಕ್ಕೆ ಏರಿಕೆ ಕಂಡಿದೆ. 2010ರ ಮಧ್ಯಭಾಗದಿಂದ ಈಚೆಗೆ ಅತ್ಯಂತ ವೇಗದ ಬೆಳವಣಿಗೆಯನ್ನು ಇದು ಸೂಚಿಸಿದೆ.

ಹಣಕಾಸು ಮತ್ತು ವಿಮಾ ವಲಯದ ಸೇವೆಗಳಿಗೆ ಹೆಚ್ಚಿನ ಬೇಡಿಕೆ ಬಂದಿದ್ದು, ಬೆಳವಣಿಗೆ ಪ್ರಮಾಣವು ಗರಿಷ್ಠ ಮಟ್ಟದ್ದಾಗಿದೆ ಎಂದು ಎಸ್ ಆ್ಯಂಡ್ ಪಿ ಗ್ಲೋಬಲ್ ಮಾರ್ಕೆಟ್ ಇಂಟೆಲಿಜೆನ್ಸ್‌ನ ಅರ್ಥಶಾಸ್ತ್ರದ ಸಹಾಯಕ ನಿರ್ದೇಶಕಿ ಪಾಲಿಯಾನಾ ಡಿ ಲಿಮಾ ಹೇಳಿದ್ದಾರೆ.

ಭಾರತದ ಸೇವೆಗಳಿಗೆ ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಬೇಡಿಕೆಯು ಏಪ್ರಿಲ್‌ನಲ್ಲಿ ಸುಧಾರಿಸಿದೆ. ಹೊಸ ರಫ್ತು ವಹಿವಾಟು ಸತತ ಮೂರನೇ ತಿಂಗಳಿನಲ್ಲಿಯೂ ಪ್ರಗತಿ ಕಂಡಿದೆ. ಆದರೆ, ವೆಚ್ಚದ ಪ್ರಮಾಣವು ಏಪ್ರಿಲ್‌ನಲ್ಲಿ ಮೂರು ತಿಂಗಳ ವೇಗದ ಏರಿಕೆ ಕಂಡಿದೆ. ಆಹಾರ, ಇಂಧನ, ಔಷಧ, ಸಾರಿಗೆ ಮತ್ತು ವೇತನವು ವೆಚ್ಚ ಹೆಚ್ಚಳಕ್ಕೆ ಪ್ರಮುಖ ಕಾರಣಗಳಾಗಿವೆ.

ಸೇವಾ ವಲಯದ ಬೆಳವಣಿಗೆ



10ನೇ ಪುಟ ನೋಡಿ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

CONNECT ಕ್ಲಾಸಿಫೈಡ್ಸ್

PUBLIC NOTICE

NOTICE

No.DUBA/CONS/434/MR/2023-(47), **Mr. Shailabh Tekchandani S/o Ramesh Tekchandani,** Resident Of 5/55, Old Rajinder Nagar, New Delhi-110060, Present Address Misk No 4, Flat No 908, Al Jada, Sharjah, UAE And Miss. **Megna Kalvani D/o Sanjay Kalvani,** Resident of 386 HAL 2nd Stage, Indira Nagar, Bangalore-9, Karnataka, India, Present Address 6B Khansaheb Building, Al Shwaiheen Street, 117 Corniche Street, Sharjah, UAE.

Above mentioned Indian Nationals are presently residing in the UAE have given notice of intended marriage between them under the Foreign Marriages Act, 1969. If anyone has any objection to the proposed marriage, he/she should file the same with the undersigned according to the procedure laid down under the act/rules within thirty days from the date of publication of this notice on email: cons1.dubai@mea.gov.in, cons3.dubai@mea.gov.in.

Sd/- ***Bijender Singh,***
Marriage Officer,
Consulate General of India,
P.O.BOX:737, DUBAI (UAE),
FAX NO.0097143970453
Email: cons1.dubai@mea.gov.in,
cons3.dubai@mea.gov.in.

PUBLIC NOTICE

Our clients intend to purchase schedule mentioned property from its lawful owners **(1). Mr. RAMAIAH,** Aged about 75 years, S/o. Late Siddahanumaiah, **(2). Mr. R. HANUMANTHAIAH,** Aged about 46 years, S/o. Ramaiah **(3). Miss. MAMATHA,** D/o. R. Hanumathaiah, aged about 20 years, **(4). Miss. SUMA.,** Aged about 19 years, D/o. R. Hanumanthaiah **(5). Mrs. RATHNAMMA.,** Aged about 45 years, D/o. Ramaiah, **(6). KAMALAMMA,** D/o. Ramaiah, **(7). Mr. MANJUNATHA .R.,** aged about 36 years, S/o. Ramaiah, **(8). Miss. ROOPA,** aged 33 years, D/o. Ramaiah, **(9). Mrs. YELLAMMA,** aged about 75 years, D/o. late. Siddahunamaiah, **(10). Mr. HANUMATHAIAH,** aged about 68 years, S/o. Siddahunumanthaiah, **(11). Mr. MAHADEVA,** aged about 35 years, S/o. Hanumanthaiah, **All are together residing at Tharalu Village, Uttarahalli Hobli, Bangalore South Taluk.** The public are hereby given notice that any person/s or any incorporated body claiming any right, title or interest of any nature or having any lien, charge or enforceable right in respect of the schedule property or anybody having objection to the transaction may put forth their claims in writing with the undersigned together with supporting documents within **15 days** from this date, failing which it will be presumed that no valid claim/s or objection/s subsist against the purchaser/s and the Schedule Property is free from all encumbrances.

SCHEDULE PROPERTY

All the piece and parcel of agricultural land bearing **Survey No. 114/1,** measuring **2 (Two) Acres 28 (twenty Eight) Guntas,** situated Taralu Village, Uttarahalli Hobli, Bangalore south taluk, Bangalore Urban district and bounded on the: EAST BY: Land in Sy No. 113; WEST BY : Land in Sy. NO.114/2 and Road; NORTH BY: Land in Sy No. 105; SOUTH BY: Land in Sy No. 113;

D. LAKSHMAN, Advocate
For DLAW ASSOCIATES
No.87, "Shreshta Bumi",
U-203, 2nd Floor, K.R.Road,
Bangalore-560004.
Mobile No: 98457 12345
Email: lakshmandodla@gmail.com
Place: Bangalore
Date : 04.05.2023

ROUNAQH

JOB OPPORTUNITIES

Part-Time Jobs

RETIRED/ VRS Persons, Age Above 45 Years, Earn 50K-60K PM, Here No Retirement: 9886641282/ 7019215243

Teachers/ Professors

URGENTLY REQUIRED qualified & experienced Principal/ Teachers, BA/ BSc with B.Ed/ M.Ed for Lighthouse International Academy, a school for the under privileged children. Interested candidates could mail their resume to director@lia.school or Contact 9620076016.Freshers can also apply.

REAL ESTATE SELLING

House

J P Nagar

"NEW DUPLEX House for Sale Near police booth, J P Nagar 2nd stage, Mysore No Brokerage. Direct Contact only: 9036285627,9886835337"

BUSINESS

Business Offers

Finance

NRI'S INVESTMENT And Finance Available On Low Interest Against Properties,Land& Building,Sites,Flats, Converted& Agriculture Lands Call:7204995189

FUTURE FOCUS

Astrology

LIFE IMPROVEMENT THROUGH PHOTOGRAPH Scientific Treatment for Successful Profession Business Relationship, Difficult Problems. Contract Varadarajpai- 9591773396

PERSONAL

Change of Name

I, JOHNBOSCO, R/a No. 215, 7th cross, near Karumariyamma Temple, Gajendra Nagar, Old Baiyappanahalli, Bangalore-560033, have changed my name to JOHNBOSCO .J. vide affidavit dated 02.05.2023 before Notary B.V. Nagabhushana, Bangalore.

CHANGE OF NAME

I. **SAI GUHA CHANDRASEKHAR S/o V CHANDRASEKHAR** R/a No. 202, SS Residency, 2nd Cross, Virupakshapura, Kodigehalli, Bengaluru-97 have changed my Gender from Male to Female and Name to **SAI SNEHA** vide affidavit dated 17.08.2022 before Notary K.V. Nanjaiah, Bengaluru.

I,PRAKASH ODUNGHAT ARAVINDA KSHAN Residing-at No.A-506 Glacier Block,Brigade Gardenia J.P.Nagar 8th Phase,RBI Layout, Bengaluru-560078 have changed my name to PRAKASH MENON ODUNGHAT ARAVINDAKSHAN vide affidavit dated: 02.05.2023 sworn before Notary G.R.Rajanna, Bangalore

I, RAMACHANDRA .C., R/a #01, 2nd floor, Ramareddy Building, Challagatta Yemalur, Bangalore-37, have changed my minor daughter's name from POOJA SHRI .R. to POOJA SHREE .R. vide affidavit dated 16.12.2022 before Notary V. Rajashekhara, Bangalore.

WE, RAJU R. and Divya N.P., R/a Ground Floor, 1st cross Chalapathi Raju Layout, KR.Puram, Bangalore-49, have changed our minor daughter's name from SARASHREE .R to SRINIDHI .R affidavit 20.10.2022, Notary Thippeswamy T., Bangalore.

I, MOHAMMED GHUFRAN S/o.Mohammad Owizer Alam Residing at No.11/1,Jamiya Masid Compound, Near Mohammed Shariff School, Yeshwanthapura, Bengaluru-560022 in my passport my father name wrongly mentioned as MOHAMMED AUJER ALAM correct name MOHAMMAD OWIZER ALAM, Mother name wrongly mentioned KHATOON NISSA correct name KHATUNNISA, Correct date of birth 15-11-2001 vide affidavit dated: 03.05.2023 before notary: Chandrakala, Bengaluru

I, RAHAMATHULLA KHAN resident of No27 15th Cross 3rd Main Road Bhuvaneshwarinagar R.T.Nagar Post Bengaluru-560032 have changed my Daughter's name from KHIZAR JAHAN to TASMIYA KHAN vide affidavit dated:02-05-2023 before Notary Sivakumara.M.N. Bengaluru.

I,MAHESWARAPPA THAMMAIAH, changed my Name to MAHESHWARAPPA THAMMAYYAPPA dated: 24.04.2023.Sworn before Notary Deepa.M, Bengaluru.

CAUTION NOTICE
Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.
Advertisement Manager
The Printers (Mysore) Pvt. Ltd. Bengaluru

ಸುಧಾ- ಮಯೂರ ಓದಿರಿ



FARNAZ

ಅಭಿವೃದ್ಧಿ ಸಹಿಸದೆ ವೃಥಾ ಆರೋಪ: ರವಿ ಸುಬ್ರಮಣ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಬಸವನಗುಡಿ ವಿಧಾನಸಭೆ ಕ್ಷೇತ್ರದಲ್ಲಿ ಅಭಿವೃದ್ಧಿ ಕಾರ್ಯಗಳನ್ನು ಸಹಿಸದೆ, ವೃಥಾ ಆರೋಪ ಮಾಡುವುದು ಕಾಂಗ್ರೆಸ್ ನಾಯಕರ ಚಾಳಿಯಾಗಿದೆ' ಎಂದು ಬಸನವಗುಡಿ ಶಾಸಕ ರವಿ ಸುಬ್ರಮಣ್ಯ ದೂರಿದ್ದಾರೆ.

'ಬಸವನಗುಡಿ ಕ್ಷೇತ್ರದಲ್ಲಿ ತರಾತುರಿಯಲ್ಲಿ ಯಾವುದೇ ಕೆಲಸ ಮಾಡುತ್ತಿಲ್ಲ. ಈ ಹಿಂದೆ ಎಲ್ಲ ಪ್ರಕ್ರಿಯೆ ಮುಗಿಸಿರುವ ಕಾಮಗಾರಿಗಳನ್ನೇ ನಡೆಸಲಾಗುತ್ತಿದೆ. ಅಭಿವೃದ್ಧಿ ಕಾರ್ಯಗಳಿಗೆ ಜನರ, ಮತದಾರರ, ನಿವಾಸಿಗಳ ಆಕ್ಷೇಪ ಇಲ್ಲ. ಆದರೆ, ಕೆಲವರಿಗೆ ಹೊಲಸು ಮಾತ್ರ ಕಾಣುತ್ತದೆ' ಎಂದು ಅವರು ಹೇಳಿದ್ದಾರೆ.

'ಶೇ 40ರಷ್ಟು ಕಮಿಷನ್ ಆಸೆಗೆ ರಸ್ತೆಗಳಿಗೆ ಡಾಂಬರ್ ಹಾಕಿ ಮೇಕಪ್ ಮಾಡಲಾಗಿದೆ' ಎಂಬ ಕೆಪಿಸಿಸಿ ವಕ್ತಾರ ಶಂಕರ್ ಗುಹಾ ಅವರ ಆರೋಪಕ್ಕೆ ಅವರು ಈ ಸ್ಪಷ್ಟನೆ ನೀಡಿದ್ದಾರೆ.

'ಕ್ಷೇತ್ರದ ಯಾವುದೋ ಮೂಲೆಯಲ್ಲಿ ನಿಂತು ಒಂದು ಗುಂಡಿಯ ಚಿತ್ರ ತೆಗೆಸಿಕೊಂಡಿದ್ದಾರೆ. ಭಾರಿ ಗಾತ್ರದ ವಾಹನಗಳು ಚಲಿಸಿದ್ದರಿಂದ ಮ್ಯಾನ್‌ಹೋಲ್ ಸಮೀಪ ರಸ್ತೆ ಕುಸಿದಿರುವುದನ್ನು ಅಗೆದು, ಫೋಟೋಗೆ ಪೋಸ್ ನೀಡಿದ್ದಾರೆ. ಅಂತಹ ಗಿಮಿಕ್ ಮಾಡುವಲ್ಲಿ ಅವರು ನಿಸ್ಸೀಮರು. ಆಗಿರುವ ಕೆಲಸವನ್ನು ಸಹಿಸದೆ ಇಂತಹ ಆರೋಪ ಮಾಡುತ್ತಾರೆ. ಅವರು ಹೇಳಿರುವ ಸ್ಥಳದಲ್ಲಿ ಡಾಂಬರು ಹಾಕಿ ಮೂರು ತಿಂಗಳಾಗಿದೆ. ಇವರಂತೆ ಶೇ 85ರಷ್ಟು ಕಮಿಷನ್ ತೆಗೆದುಕೊಳ್ಳುವುದಿಲ್ಲ' ಎಂದು ಆಕ್ರೋಶ ವ್ಯಕ್ತಪಡಿಸಿದ್ದಾರೆ.

'ಬಸವನಗುಡಿಯಲ್ಲಿ ಕಾಮಗಾರಿ ನಡೆಯುತ್ತಿರುವ ಸ್ಥಳಗಳನ್ನು ಹೊರತುಪಡಿಸಿದರೆ, ಇನ್ನೆಲ್ಲೂ ಗುಂಡಿಯ ಸಮಸ್ಯೆ ಇಲ್ಲ. ನಮ್ಮ ತೃಪ್ತಿಗೆ ಯಾವುದೇ ಕೆಲಸ ಮಾಡುವುದಿಲ್ಲ. ಜನರಿಗಾಗಿ ನಾವು ಕೆಲಸ ಮಾಡುತ್ತಿದ್ದೇವೆ. ಇವರ ಎಲ್ಲ ಆಟಾಟೋಪಗಳಿಗೆ ಜನರು ಮೇ 10ರಂದು ತಕ್ಕ ಪಾಠ ಕಲಿಸಲಿದ್ದಾರೆ. ಮೇ 13ಕ್ಕೆ ಅದರ ಫಲಿತಾಂಶ ಅವರಿಗೆಲ್ಲ ಗೊತ್ತಾಗುತ್ತದೆ' ಎಂದು ತಿಳಿಸಿದ್ದಾರೆ.

'ಗಾಂಧಿಬಜಾರ್ ಮುಖ್ಯರಸ್ತೆಯ ಅಭಿವೃದ್ಧಿ ಬಸವನಗುಡಿ ವಿಧಾನಸಭೆ ಕ್ಷೇತ್ರಕ್ಕೆ ಬರುವುದಿಲ್ಲ. ಅದು ಚಿಕ್ಕಪೇಟೆ ವಿಧಾನಸಭೆ ಕ್ಷೇತ್ರಕ್ಕೆ ಸಂಬಂಧಿಸಿದ್ದಾಗಿದ್ದು, ಅದಕ್ಕೆ ಅಲ್ಲಿನ ಶಾಸಕರು ಉತ್ತರ ನೀಡುತ್ತಾರೆ' ಎಂದು ಹೇಳಿದ್ದಾರೆ.

'ಜೈಲಿಗೆ ಹೋದವರು ದಾಖಲೆ ಏಕೆ ಕೊಟ್ಟಿಲ್ಲ?'

'ಗುತ್ತಿಗೆದಾರರ ಸಂಘದ ಅಧ್ಯಕ್ಷರು ಶೇ 40ರಷ್ಟು ಕಮಿಷನ್ ಎಂದು ದಾಖಲೆ ಇಲ್ಲದೆ ಆರೋಪ ಮಾಡಿದ್ದಾರೆ. ಅದನ್ನು ಸಾಬೀತುಪಡಿಸದೆ ಜೈಲಿಗೆ ಹೋಗಿಯೂ ಬಂದಿದ್ದಾರೆ. ಸುಮ್ಮನೆ ಆರೋಪ ಮಾಡುವ ಬದಲು ದಾಖಲೆಗಳನ್ನು ನೀಡಲಿ' ಎಂದು ರವಿ ಸುಬ್ರಮಣ್ಯ ಆಗ್ರಹಿಸಿದ್ದಾರೆ.

'ಸುಳ್ಳು ಹೇಳಿರುವ ವ್ಯಕ್ತಿಗಳ ಮಾತನ್ನು ಕೇಳಿಕೊಂಡು, ತಮ್ಮದೂ ಇರಲಿ ಎಂದು ಬೇಕಾದಾಗಲೆಲ್ಲ ಶಂಕರ ಗುಹಾ ಅವರು ಮಾತನಾಡುತ್ತಲೇ ಇರುತ್ತಾರೆ. ಅವರ ಮಾತಿಗೆ ಬೆಲೆ ಇಲ್ಲ' ಎಂದಿದ್ದಾರೆ.

ಕಂಬೈನ್ಡ್ ಗ್ರಾಜ್ಯುಯೇಟ್ ಪರೀಕ್ಷೆಗೆ ತರಬೇತಿ

ಬೆಂಗಳೂರು: ಕೃಷಿಕ್ ಸರ್ವೋದಯ ಫೌಂಡೇಷನ್ ಸ್ಪರ್ಧಾತ್ಮಕ ಪರೀಕ್ಷೆ ಸಂಸ್ಥೆಯು ಎಸ್‌ಎಸ್‌ಸಿ ಕಂಬೈನ್ಡ್ ಗ್ರಾಜ್ಯುಯೇಟ್ ಹುದ್ದೆಗಳ ಪರೀಕ್ಷೆಯ ತರಬೇತಿಗೆ ಅರ್ಜಿ ಆಹ್ವಾನಿಸಿದೆ. 2023–24ರಲ್ಲಿ ನಡೆಯುವ ಪರೀಕ್ಷೆಗೆ ಮೇ 10ರಿಂದ ನುರಿತ ವಿಷಯ ತಜ್ಞರಿಂದ ಆನ್‌ಲೈನ್‌–ಆಫ್‌ಲೈನ್ ಮಾರ್ಗದರ್ಶನ, ತರಬೇತಿ ನೀಡಲಾಗುವುದು. ವಿದ್ಯಾರ್ಥಿ ನಿಲಯ ಸೌಲಭ್ಯವೂ ಇದೆ.

ಆಸಕ್ತರು ಮೇ6ರೊಳಗೆ ನೋಂದಣಿ ಮಾಡಿಕೊಳ್ಳಬೇಕು. ಮಾಹಿತಿಗೆ www.krishiksarvodayafoundation.org/ ಅಥವಾ www.ksfbangalore@gmail.com, ಮೊಬೈಲ್: 7625000990ಗೆ ಸಂಪರ್ಕಿಸಬಹುದು.

ನಗರದಲ್ಲಿ ಇಂದು

ಮಕ್ಕಳ ಹಕ್ಕುಗಳ ನಿಗಾ ಕೇಂದ್ರದ ಚಟುವಟಿಕೆಗಳಿಗೆ ಚಾಲನೆ: ಉದ್ಘಾಟನೆ: ಮೀಟಲ್ ರಷ್ಮಿಯಾ, ನಾಗಣ್ಣ ಗೌಡ, ಉಪಸ್ಥಿತಿ: ಪ್ರಸೂನ್ ಸೇನ್, ಸರಸ್ವತಿ, ವಾಸುದೇವ ಶರ್ಮಾ, ಸ್ಥಳ: ಐ.ಎಸ್.ಐ, ಬೆನ್ಸನ್ ಟೌನ್,

ತತ್ವ–2023: ಅತಿಥಿ: ಸುಚೇಂದ್ರ ಪ್ರಸಾದ್, ಅಧ್ಯಕ್ಷತೆ: ನಾರಾಯಣ ರಾವ್. ಆರ್. ಮಾನ್ಯ, ಆಯೋಜನೆ ಮತ್ತು ಸ್ಥಳ: ಬಿ.ಎನ್.ಎಂ. ಇನ್‌ಸ್ಟಿಟ್ಯೂಟ್ ಆಫ್ ಟೆಕ್ನಾಲಜಿ, ಬನಶಂಕರಿ 2ನೇ ಹಂತ, ಬೆಳಿಗ್ಗೆ 10

ಮೇ 6ರ ವರೆಗೂ ನಗರದಲ್ಲಿ ಮಳೆ ಸಾಧ್ಯತೆ • ನಾಲ್ಕು ದಿನದ ಮಳೆಯಿಂದ ತಂಪಾದ ನಗರ

ರಾಜಧಾನಿಯ ವಿವಿಧೆಡೆ ಜೋರು ಮಳೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಗರದ ಹಲವೆಡೆ ಬುಧವಾರ ಸಂಜೆ ಜೋರು ಮಳೆಯಾಗಿದೆ. ಮುಂಜಾನೆಯಿಂದ ಬೆಳಿಗ್ಗೆ 9 ಗಂಟೆಯ ತನಕವೂ ಅಲ್ಲಲ್ಲಿ ಜಿಟಿಜಿಟಿ ಮಳೆಯಾಗಿ ಮುಂಗಾರು ನೆನಪಿಸಿತು. ನಂತರ ಸಂಜೆವರೆಗೂ ಮೋಡ ಕವಿದ ವಾತಾವರಣ ವಿತ್ತು. ಅದಾದ ಮೇಲೆ ಧಾರಾಕಾರ ಮಳೆಯಾಗಿದೆ.

ಕಳೆದ ನಾಲ್ಕು ದಿನಗಳಿಂದ ನಗರದಲ್ಲಿ ಮಳೆಯಾಗುತ್ತಿದ್ದು ವಾತಾವರಣ ಮತ್ತಷ್ಟು ತಂಪಾಗಿದೆ.

ನಗರದ ಜೆಸಿ ರಸ್ತೆಯಲ್ಲಿ ಬಂದ ಮಳೆಯಲ್ಲಿ ಜನರು ಸಾಗಿದರು (ಎಡಚಿತ್ರ). ಹಳೇ ವಿಮಾನ ನಿಲ್ದಾಣ ರಸ್ತೆಯಲ್ಲಿ ಬೈಕ್ ಸವಾರರು ಸಾಗಿದರು. – ಪ್ರಜಾವಾಣಿ ಚಿತ್ರ

ನಾಗಸಂದ್ರ, ಜಾಲಹಳ್ಳಿ, ಪೀಣ್ಯ, ಪೀಣ್ಯ ಕೈಗಾರಿಕಾ ಪ್ರದೇಶ, ಸುಂಕದಕಟ್ಟೆ, ಬ್ಯಾಡರಹಳ್ಳಿ, ಸುಮನಹಳ್ಳಿ, ಕೊಟ್ಟಿಗೆಪಾಳ್ಯ, ಹೇರೋಹಳ್ಳಿ, ಕೆಂಗೇರಿ ಭಾಗದಲ್ಲಿ ಮಳೆಯಾಗಿದೆ.

ವಿಜಯನಗರ ಆರ್. ಟಿ. ನಗರ, ಸದಾಶಿವನಗರ, ಯಶವಂತಪುರ, ರಾಜರಾಜೇಶ್ವರಿ ನಗರ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್, ಚಾಮರಾಜಪೇಟೆ, ಎಂ.ಜಿ. ರಸ್ತೆ, ಟ್ರಿನಿಟಿ, ಅಶೋಕನಗರ, ಹಲಸೂರು, ದೊಡ್ಡಬೊಮ್ಮಸಂದ್ರ ಭಾಗದಲ್ಲೂ ಮಳೆಯಾಗಿದೆ.

ಸಂಜೆ ವೇಳೆ ಸುರಿದ ಮಳೆಯಿಂದಾಗಿ ದ್ವಿಚಕ್ರ ವಾಹನದಲ್ಲಿ ಮನೆಗೆ ತೆರಳುತ್ತಿದ್ದವರು ಪರದಾಡಿದರು. ಬಸ್ ಶೆಲ್ಟರ್ ಆಸರೆ ಪಡೆದು ಮಳೆ ನಿಂತ ಮೇಲೆ ಮನೆಗೆ ತೆರಳಿದರು. ಪಾದಚಾರಿಗಳು ಕೊಡೆ ಹಿಡಿದು ಸಾಗಿದರು.

ಮೇ 6ರವರೆಗೂ ಬೆಂಗಳೂರಿನಲ್ಲಿ ಮಳೆಯಾಗುವ ಸಾಧ್ಯತೆ ಇದೆ ಎಂದು ಹವಾಮಾನ ಇಲಾಖೆ ಮುನ್ಸೂಚನೆ ನೀಡಿದೆ.

ಪಿ.ಎಸ್. ಶಂಕರ್‌ಗೆ 'ಸಾಹಿತ್ಯ ರತ್ನ ಪ್ರಶಸ್ತಿ'

ಪಿ.ಎಸ್. ಶಂಕರ್

ಬೆಂಗಳೂರು: ಕರ್ನಾಟಕ ಕನ್ನಡ ಬರಹಗಾರರ ಮತ್ತು ಪ್ರಕಾಶಕರ ಸಂಘವು 2022ನೇ ಸಾಲಿನ ವಿವಿಧ ಪ್ರಶಸ್ತಿಗಳನ್ನು ಘೋಷಿಸಿದ್ದು, 'ಸಾಹಿತ್ಯ ರತ್ನ ಪ್ರಶಸ್ತಿ'ಗೆ ಪಿ.ಎಸ್. ಶಂಕರ್ ಅವರ 'ವೈದ್ಯನಿನಗೆ ನಮೋ' ಕೃತಿ ಆಯ್ಕೆಯಾಗಿದೆ.

'ಯುವ ಸಾಹಿತ್ಯ ರತ್ನ ಪ್ರಶಸ್ತಿ'ಗೆ ಕೌಶಿಕ್ ಕೂಡುರಸ್ತೆ ಅವರ 'ಒಂದು ಕೋಪಿಯ ಕಥೆ' ಕೃತಿ, 'ಪುಸ್ತಕ ರತ್ನ ಪ್ರಶಸ್ತಿ'ಗೆ ಮೈಸೂರಿನ ಪುಸ್ತಕ ಪ್ರಕಾಶನ ಹಾಗೂ 'ಮುದ್ರಣರತ್ನ ಪ್ರಶಸ್ತಿ'ಗೆ ಮೈಸೂರು ಪ್ರಿಂಟಿಂಗ್ ಆ್ಯಂಡ್ ಪಬ್ಲಿಷಿಂಗ್ ಹೌಸ್ ಆಯ್ಕೆಯಾಗಿದೆ.

ಈ ಪ್ರಶಸ್ತಿಗಳು ತಲಾ ₹ 10 ಸಾವಿರ ನಗದು ಒಳಗೊಂಡಿವೆ. ಜೂನ್ ಮೊದಲ ವಾರ ಬೆಂಗಳೂರಿನಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಸಂಘ ತಿಳಿಸಿದೆ.

'ತಂದೆಯ ಆಸ್ತಿಯಲ್ಲಿ ಪುತ್ರನ ಜೊತೆಗೆ ಪುತ್ರಿಗೂ ಸಮಾನ ಪಾಲು'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಸಹೋದರಿಗೆ ತಂದೆಯ ಆಸ್ತಿ ಮೇಲೆ ಸಮಾನ ಹಕ್ಕು ಇಲ್ಲ ಮತ್ತು ಆಕೆಗೆ ಆಸ್ತಿಯಲ್ಲಿ ಪಾಲು ಕೊಡಲಾಗದು' ಎಂಬ ವಾದವನ್ನು ತಿರಸ್ಕರಿಸಿರುವ ಹೈಕೋರ್ಟ್, 'ತಂದೆಯ ಆಸ್ತಿಯಲ್ಲಿ ಪುತ್ರನ ಜೊತೆಗೆ ಪುತ್ರಿಗೂ ಸಮಾನ ಪಾಲಿದೆ' ಎಂದು ಆದೇಶಿಸಿದೆ.

ತುಮಕೂರಿನ ಯಲ್ಲಾಪುರದ ವೆಂಕಟೇಶ ಮತ್ತು ಅವರ ತಾಯಿ ವೆಂಕಟಲಕ್ಷ್ಮಮ್ಮ ಎಂಬುವರು ಸಲ್ಲಿಸಿದ್ದ ಮೇಲ್ಮನವಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಪಿ.ಎಸ್. ದಿನೇಶ್ ಕುಮಾರ್ ನೇತೃತ್ವದ ವಿಭಾಗೀಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

'ವಿನೀತಾ ಶರ್ಮಾ ಪ್ರಕರಣದಲ್ಲಿ ತಂದೆಯ ಆಸ್ತಿಯಲ್ಲಿ ಪುತ್ರನಿಗೆ ಸರಿಸಮನಾದ ಪಾಲು ಪಡೆಯಲು ಪುತ್ರಿ ಸಹಾ ಅರ್ಹರಾಗಿರುತ್ತಾರೆ ಎಂದು ಸುಪ್ರೀಂ ಕೋರ್ಟ್ ತೀರ್ಪು ನೀಡಿದೆ. ಹಾಗಾಗಿ, ಈ ಪ್ರಕರಣದಲ್ಲಿ ಮೇಲ್ಮನವಿದಾರ ವೆಂಕಟೇಶ್ ಅವರ ಸೋದರತ್ತೆ ಲಕ್ಷ್ಮಿದೇವಮ್ಮ ಕೂಡಾ ಅವರ ತಂದೆಯ ಆಸ್ತಿಯಲ್ಲಿ ಪಾಲು ಹೊಂದಲು (ಸಹೋದರ ಗೋವಿಂದಯ್ಯಗೆ ಸರಿಸಮಾನವಾಗಿ) ಅರ್ಹರಾಗಿದ್ದಾರೆ' ಎಂದು ನ್ಯಾಯಪೀಠ ಹೇಳಿದೆ.

'ತಂದೆಯ ಸಾಲ ತೀರಿಸಿದ ಕೂಡಲೇ ವ್ಯಾಜ್ಯಕ್ಕೆ ಸಂಬಂಧಿಸಿದ ಜಮೀನಿನ ಮೇಲೆ ವೈಯಕ್ತಿಕ ಹಕ್ಕು ಸೃಷ್ಟಿಸಿದಂತಾಗುವುದಿಲ್ಲ. ಎಂಬ ಅಭಿಪ್ರಾಯದೊಂದಿಗೆ, ಕಲಗಿರಿಯಪ್ಪ ಆಸ್ತಿಯಲ್ಲಿ ಲಕ್ಷ್ಮೀ ದೇವಮ್ಮ ಅವರಿಗೆ ಪಾಲಿದೆ' ಎಂದು ನ್ಯಾಯಪೀಠ ಆದೇಶಿಸಿದೆ.

ಬಸ್ ಪಾಸ್ ಅವಧಿ ವಿಸ್ತರಣೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪದವಿ, ಸ್ನಾತಕೋತ್ತರ, ಡಿಪ್ಲೊಮಾ ಬಿ. ಫಾರ್ಮ ಮತ್ತು ವಿವಿಧ ಕೋರ್ಸ್‌ಗಳಲ್ಲಿ ಓದುತ್ತಿರುವ ವಿದ್ಯಾರ್ಥಿಗಳ ಬಸ್ ಪಾಸ್ ಅವಧಿಯನ್ನು ಕೆಎಸ್‌ಆರ್‌ಟಿಸಿ ವಿಸ್ತರಿಸಿದೆ.

ವಿದ್ಯಾರ್ಥಿಗಳ ತರಗತಿ ಅಥವಾ ಪರೀಕ್ಷೆ ನಡೆಯುತ್ತಿರುವುದನ್ನು ಖಚಿತಪಡಿಸಿಕೊಂಡು ಹೆಚ್ಚುವರಿ ಹಣ ಪಾವತಿಸಿಕೊಂಡು ಒಂದು ಅಥವಾ ಎರಡು ತಿಂಗಳ ಅವಧಿಗೆ ಪಾಸ್ ವಿಸ್ತರಿಸಲು ಅವಕಾಶ ಕಲ್ಪಿಸಲಾಗಿದೆ.

ಜೆ.ಎಸ್. ಪದವಿಪೂರ್ವ ಕಾಲೇಜಿನ ವಿದ್ಯಾರ್ಥಿಗಳ ಸಾಧನೆ

ಬೆಂಗಳೂರು: ಮಲ್ಲತ್ತಹಳ್ಳಿಯ ಬಾಲಗಂಗಾಧರ ನಗರದ ಜೆ.ಎಸ್. ಪದವಿಪೂರ್ವ ಕಾಲೇಜಿನ ವಿಜ್ಞಾನ ಮತ್ತು ವಾಣಿಜ್ಯ ವಿಭಾಗದ ವಿದ್ಯಾರ್ಥಿಗಳು ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಉತ್ತಮ ಸಾಧನೆ ಮಾಡಿದ್ದಾರೆ.

ಆರ್.ಜೆ. ಗುಣಶ್ರೀ, (ಶೇ 97.16, ವಿಜ್ಞಾನ ವಿಭಾಗ)

ಆಶಾ ಎಂ., (ಶೇ 97, ವಿಜ್ಞಾನ ವಿಭಾಗ)

ಯುವರಾಜ್ ಎ.ವೈ., (ಶೇ 95, ವಿಜ್ಞಾನ ವಿಭಾಗ)

ಶುಕ್ತಿಜಾ ಕೆ., (ಶೇ 95, ವಿಜ್ಞಾನ ವಿಭಾಗ)

ಕೃತಿಕಾ ಡಿ., (ಶೇ 96.8, ವಾಣಿಜ್ಯ ವಿಭಾಗ)

ಪ್ರೇಮಾ ಬಿ., (ಶೇ 96.16, ವಾಣಿಜ್ಯ ವಿಭಾಗ)

ಹರ್ಷ ಜೆ., (ಶೇ 97, ವಿಜ್ಞಾನ ವಿಭಾಗ)

ನಿತೀಶ್ ಎನ್. ಎಸ್., (ಶೇ 97,16 ವಿಜ್ಞಾನ ವಿಭಾಗ)

ಜಯದೀಪ್ ಗೌಡ ಕೆ.ಬಿ., (ಶೇ 96, ವಿಜ್ಞಾನ ವಿಭಾಗ)

ಅಭಿಷೇಕ್ ಸಿ., (ಶೇ 95.8, ವಾಣಿಜ್ಯ ವಿಭಾಗ)

ಗಿರೀಶ್ ಗೌಡ ವೈ.ಆರ್., (ಶೇ 97.8, ವಾಣಿಜ್ಯ ವಿಭಾಗ)

ಎಂ.ಆರ್. ಕಾದಂಬರಿ, (ಶೇ 96.66, ವಾಣಿಜ್ಯ ವಿಭಾಗ)

ದೀಪಿಕಾ ಎಚ್., (ಶೇ 96, ವಾಣಿಜ್ಯ ವಿಭಾಗ)

ಪೂರ್ಣ ಕನ್ವರ್, (ಶೇ 95.16, ವಾಣಿಜ್ಯ ವಿಭಾಗ)

ಶ್ರುತಿ ಎಂ.ಜೆ., (ಶೇ 95.3, ವಿಜ್ಞಾನ ವಿಭಾಗ)

ನೀತು ಗೌರವ್ ಎನ್., (ಶೇ 95.5, ವಾಣಿಜ್ಯ ವಿಭಾಗ)

ಮಹಾಲಕ್ಷ್ಮಿ ಎಸ್. ಆರ್., (ಶೇ 95.5, ವಾಣಿಜ್ಯ ವಿಭಾಗ)

ಮೇಘನಾ ಬಿ.ಎಸ್., (ಶೇ 95.5, ವಾಣಿಜ್ಯ ವಿಭಾಗ)

ಅಮೃತಾ ಕೆ., (ಶೇ 95.3, ವಾಣಿಜ್ಯ ವಿಭಾಗ)

ಹರೀಶ ಆರ್., (ಶೇ 95.3, ವಾಣಿಜ್ಯ ವಿಭಾಗ)

ಶ್ರೀನಿತ್ಯಾ ಎಸ್. ಆರ್., (ಶೇ 95.33, ವಾಣಿಜ್ಯ ವಿಭಾಗ)

ಧತ್ರಿ ಜೆ. ಚೌಟ, (ಶೇ 95.6, ವಾಣಿಜ್ಯ ವಿಭಾಗ)

₹ 1.25 ಕೋಟಿಯ ಇ–ಸಿಗರೇಟ್, ಲಿಕ್ವಿಡ್ ಜಪ್ತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೇಂದ್ರ ಸರ್ಕಾರವು ನಿಷೇಧಿಸಿದ್ದ ಇ–ಸಿಗರೇಟ್ ಸಂಗ್ರಹಿಸಿದ್ದ ಗೋದಾಮಿನ ಮೇಲೆ ಸಿಸಿಬಿ ಮಹಿಳಾ ಸಂರಕ್ಷಣಾ ದಳದ ಸಿಬ್ಬಂದಿ ದಾಳಿ ನಡೆಸಿ, ₹1.25 ಕೋಟಿ ಮೌಲ್ಯದ ವಸ್ತುಗಳನ್ನು ಜಪ್ತಿ ಮಾಡಿಕೊಂಡಿದ್ದಾರೆ.

ನಗರದ ಕುಂಬಾರಪೇಟೆ ನಂಬೂದರಿ ಮ್ಯಾನ್ಷನ್ 2ನೇ ಮಹಡಿ ವರ್ಧಮಾನ್ ಮಾರ್ಕೆಟಿಂಗ್ ಎಂಬ ಗೋದಾಮಿನಲ್ಲಿ ಇ–ಸಿಗರೇಟ್ ಅನ್ನು ದಾಸ್ತಾನು ಮಾಡಲಾಗಿತ್ತು. ಆರೋಪಿಗಳಾದ ಸಚಿನ್ ಹಾಗೂ ಸಿದ್ದಲಿಂಗ ಎಂಬುವವರನ್ನು ಬಂಧಿಸಲಾಗಿದೆ.

'ವಿವಿಧ ಕಂಪನಿಯ 2,850 ಇ–ಸಿಗರೇಟ್, 8 ಸಾವಿರ ವಿವಿಧ ಫ್ಲೇವರ್‌ನ ಇ–ಸಿಗರೇಟ್ ಲಿಕ್ವಿಡ್, 2,227 ಸಿಗರೇಟ್ ಪಾಡ್, ಇ–ಸಿಗರೇಟ್ ಬಿಡಿ ಭಾಗಗಳನ್ನು ಜಪ್ತಿ ಮಾಡಲಾಗಿದೆ' ಎಂದು ಪೊಲೀಸ್ ಮೂಲಗಳು ತಿಳಿಸಿವೆ.

'ಇದೇ ಗೋದಾಮಿನ ಮೇಲೆ ಮೂರು ಬಾರಿ ದಾಳಿ ನಡೆಸಲಾಗಿತ್ತು. ಪದೇ ಪದೇ ಕಳ್ಳಮಾರ್ಗದಲ್ಲಿ ನಿಷೇಧಿತ ವಸ್ತುಗಳನ್ನು ತಂದು ಮಾರಾಟ ಮಾಡುತ್ತಿದ್ದರು. ಪಾರ್ಟಿ, ಇವೆಂಟ್‌ಗಳಿಗೆ ಇ–ಸಿಗರೇಟ್ ಪೂರೈಸುತ್ತಿದ್ದರು. ಜತೆಗೆ ಆನ್‌ಲೈನ್ ಮೂಲಕವು ಗ್ರಾಹಕರಿಗೆ ಮಾರಾಟ ಮಾಡುತ್ತಿರುವುದು ತನಿಖೆ ವೇಳೆ ಪತ್ತೆಯಾಗಿದೆ' ಎಂದು ಮೂಲಗಳು ತಿಳಿಸಿವೆ.

'ಇ–ಸಿಗರೇಟ್ ಆರೋಗ್ಯಕ್ಕೆ ಮಾರಕ ಎಂದು ಕೇಂದ್ರ ಸರ್ಕಾರವು ಈ ಹಿಂದೆಯೇ ನಿಷೇಧ ಮಾಡಿತ್ತು. ಆದರೂ, ಆರೋಪಿಗಳು ಹೊರ ರಾಜ್ಯದಿಂದ ಇ–ಸಿಗರೇಟ್, ಅದರ ಲಿಕ್ವಿಡ್, ಪಾಡ್ ಹಾಗೂ ಬ್ಯಾಟರಿ ಹಾಗೂ ಇತರೆ ಬಿಡಿಭಾಗಗಳನ್ನು ತಂದು ಮಾರಾಟ ಮಾಡುತ್ತಿದ್ದರು' ಎಂದು ತನಿಖಾಧಿಕಾರಿಗಳು ತಿಳಿಸಿದ್ದಾರೆ.

ಗಿರಿಯಾಸ್ ಮಳಿಗೆಯಲ್ಲಿ ನಗದು ಕಳವು

ಬೆಂಗಳೂರು: ಯಲಹಂಕ ನ್ಯೂಟೌನ್ ವ್ಯಾಪ್ತಿಯ ಗಿರಿಯಾಸ್ ಮಳಿಗೆಯ ರೋಲಿಂಗ್ ಶೆಟರ್‌ಗೆ ಹಾಕಿದ್ದ ಬೀಗ ಒಡೆದು ನಗದು ಕೌಂಟರ್‌ನಲ್ಲಿದ್ದ ₹ 10 ಸಾವಿರವನ್ನು ದುಷ್ಕರ್ಮಿಗಳು ಕಳವು ಮಾಡಿದ್ದಾರೆ.

ಶರಾವತಿ ರಸ್ತೆಯಲ್ಲಿ ಗಿರಿಯಾಸ್ ಮಳಿಗೆ ಶೆಟರ್ ಅನ್ನು ಒಡೆದು ಒಳನುಗ್ಗಿದ್ದಾರೆ. ಮಳಿಗೆಯಲ್ಲಿದ್ದ ವಸ್ತುಗಳನ್ನು ಚೆಲ್ಲಾಪಿಲ್ಲಿ ಮಾಡಿರುವ ಕಳ್ಳರು ಕಳವು ಮಾಡಿ ಪರಾರಿಯಾಗಿದ್ದಾರೆ. ಬುಧವಾರ ಬೆಳಿಗ್ಗೆ ಸಿಬ್ಬಂದಿ ಬಾಗಿಲು ತೆಗೆಯಲು ಬಂದಾಗ ಕಳವು ನಡೆದಿರುವುದು ತಿಳಿದುಬಂದಿದೆ. ಯಲಹಂಕ ನ್ಯೂಟೌನ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ಜೆಡಿಎಸ್ ಪರ ಪ್ರಚಾರ ಆರೋಪ: ವಾಗ್ವಾದ

ಚನ್ನಪಟ್ಟಣ: ಅಂಚೆ ಮತಗಳ ಚಲಾವಣೆ ಸಂದರ್ಭ ವ್ಯಕ್ತಿಯೊಬ್ಬರು ಜೆಡಿಎಸ್‌ಗೆ ಮತ ಹಾಕುವಂತೆ ಓಲೈಸುತ್ತಿದ್ದಾರೆ ಎಂದು ಬಿಜೆಪಿ ಕಾರ್ಯಕರ್ತರು ಆರೋಪಿಸಿದ್ದು, ಈ ಸಂಬಂಧ ಕೆಲ ಕಾಲ ಗದ್ದಲದ ವಾತಾವರಣ ನಿರ್ಮಾಣ ಆಗಿತ್ತು.

ಕರ್ನಾಟಕ ಲೋಕಸೇವಾ ಆಯೋಗ
''ಉದ್ಯೋಗ ಸೌಧ'', ಬೆಂಗಳೂರು - 560 001

ಸಂಖ್ಯೆ: ಪಿಎಸ್‌ಸಿ45ಆರ್‌ಟಿಬಿ(2)/2023–24/593 ದಿನಾಂಕ: 03.05.2023

ಪತ್ರಿಕಾ ಪ್ರಕಟಣೆ

ಆಯೋಗವು ದಿನಾಂಕ: 30.04.2023 ರಂದು ನಡೆಸಿದ ಆರ್ಥಿಕ ಮತ್ತು ಸಾಂಖ್ಯಿಕ ನಿರ್ದೇಶನಾಲಯದಲ್ಲಿನ ಗಣತಿದಾರರು–ಕಂ–ಡಾಟಾ ಎಂಟ್ರಿ ಆಪರೇಟರ್ 13 (ಹೈ.ಕ.) ಮತ್ತು ಜಲ ಸಂಪನ್ಮೂಲ ಇಲಾಖೆಯಲ್ಲಿನ ಕಿರಿಯ ಇಂಜಿನಿಯರ್ (ಸಿವಿಲ್)–166 (ಹೈ.ಕ.) ಮತ್ತು ಕಿರಿಯ ಇಂಜಿನಿಯರ್ (ಮೆಕ್ಯಾನಿಕಲ್) 03 (ಹೈ.ಕ.) ಹುದ್ದೆಗಳ ಸ್ಪರ್ಧಾತ್ಮಕ ಪರೀಕ್ಷೆಯ ಕೀ ಉತ್ತರಗಳನ್ನು **ದಿನಾಂಕ: 02.05.2023** ರಂದು ಆಯೋಗದ ಅಂತರ್ಜಾಲದಲ್ಲಿ **http://kpsc.kar.nic.in/ Keyanswers** ನಲ್ಲಿ ಪ್ರಕಟಿಸಲಾಗಿದೆ. ಸದರಿ ಕೀ–ಉತ್ತರಗಳಿಗೆ ಏನಾದರೂ ಆಕ್ಷೇಪಣೆಗಳಿದ್ದಲ್ಲಿ, ನಿಗದಿತ ಶುಲ್ಕದೊಂದಿಗೆ **ದಿನಾಂಕ: 09.05.2023ರ ಸಂಜೆ 5.30ರೊಳಗಾಗಿ** ಪರೀಕ್ಷಾ ನಿಯಂತ್ರಕರು, ಕರ್ನಾಟಕ ಲೋಕಸೇವಾ ಆಯೋಗ, ಉದ್ಯೋಗ ಸೌಧ, ಬೆಂಗಳೂರು–560001 ಇವರಿಗೆ ಲಿಖಿತ ಮನವಿಯ ಮೂಲಕ ಸಲ್ಲಿಸಬಹುದಾಗಿದೆ. ಅಭ್ಯರ್ಥಿಗಳು ಆಕ್ಷೇಪಣೆಗಳನ್ನು ಆಯೋಗದ ಅಂತರ್ಜಾಲ ತಾಣ **http://kpsc.kar.nic.in/ Keyanswers** ನಲ್ಲಿ **Key Answers for the Various posts examination held on 30.04.2023** ರಲ್ಲಿ **online** ಮುಖಾಂತರವೂ ಸಹ ನಿಗದಿತ ಶುಲ್ಕವನ್ನು ಪಾವತಿಸಿ ಆಕ್ಷೇಪಣೆಗಳನ್ನು ಸಲ್ಲಿಸಬಹುದು. ಈ ಅವಧಿಯ ನಂತರ ಸ್ವೀಕೃತವಾಗುವ ಆಕ್ಷೇಪಣೆಗಳನ್ನು ತಿರಸ್ಕರಿಸಲಾಗುವುದು.

ಸಹಿ/–(ಸುರಳ್ಕರ್ ವಿಕಾಸ್ ಕಿಶೋರ್)
ಕಾರ್ಯದರ್ಶಿ,
ಕರ್ನಾಟಕ ಲೋಕಸೇವಾ ಆಯೋಗ.

ಮಲ್ಲೇಶ್ವರ, ಸರ್ವಜ್ಞ ನಗರ ವಿಧಾನಸಭಾ ಕ್ಷೇತ್ರದ ಅಭ್ಯರ್ಥಿಗಳು ಏನಂತಾರೆ

ವಿಧಾನಸಭಾ ಚುನಾವಣೆಯಲ್ಲಿ ಮತದಾರರನ್ನು ಸೆಳೆಯಲು ವಿವಿಧ ಪಕ್ಷಗಳ ಅಭ್ಯರ್ಥಿಗಳು ಕಸರತ್ತು ನಡೆಸುತ್ತಿದ್ದಾರೆ. ಸ್ಪರ್ಧಿಗಳ ನಡುವೆ ಆರೋಪ–ಪ್ರತ್ಯಾರೋಪ ಬಿರುಸಾಗಿದೆ. ಕ್ಷೇತ್ರದ ಅಭಿವೃದ್ಧಿ ಹಾಗೂ ಆದ್ಯತೆ ಕುರಿತಂತೆ ಅಭ್ಯರ್ಥಿಗಳ ಜೊತೆ **ಎಸ್.ರವಿಪ್ರಕಾಶ್, ರಾಜೇಶ್ ರೈ ಚಟ್ಲ** ಅವರು ನಡೆಸಿದ ಕಿರು ಸಂದರ್ಶನಗಳು ಇಲ್ಲಿವೆ.

ಡಾ.ಸಿ.ಎನ್ ಅಶ್ವತ್ಥನಾರಾಯಣ (ಬಿಜೆಪಿ)

● ಯಾವ ಕಾರಣಕ್ಕಾಗಿ ಜನ ನಿಮಗೆ ಮತ ಹಾಕಬೇಕು? ಕ್ಷೇತ್ರಕ್ಕಾಗಿ ಏನು ಮಾಡುತ್ತೀರಿ?

ನಾನು ಕ್ಷೇತ್ರದ ಶಾಸಕನಾಗಿ ಏನು ಮಾಡಿದ್ದೇನೆ ಎನ್ನುವುದು ಒಂದು ತೆರೆದ ಪುಸ್ತಕದಂತಿದೆ. ನನ್ನ ಪರವಾಗಿ ನಾನು ಮಾಡಿರುವ ಕೆಲಸಗಳೇ ಮಾತನಾಡುತ್ತವೆ. ಮಲ್ಲೇಶ್ವರ ಕ್ಷೇತ್ರವನ್ನು ಆರೋಗ್ಯ, ಶಿಕ್ಷಣ, ಮೂಲಸೌಲಭ್ಯ, ಸೌಂದರ್ಯೀಕರಣ, ಕ್ರೀಡೆ, ನಾಗರಿಕ ಸೇವೆ ಹೀಗೆ ಎಲ್ಲ ಕ್ಷೇತ್ರಗಳಲ್ಲೂ ಇಡೀ ಬೆಂಗಳೂರು ಮತ್ತು ರಾಜ್ಯಕ್ಕೆ ಮಾದರಿ ಎನ್ನುವಂತೆ ಅಭಿವೃದ್ಧಿಪಡಿಸಲಾಗಿದೆ. ಹತ್ತು ಸಾವಿರಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ಸ್ಯಾಂಕಿ ಕೆರೆ ದಂಡೆಯಲ್ಲಿ ಸಾವಿರಕ್ಕೂ ಹೆಚ್ಚು ಸಸಿಗಳನ್ನು ನೆಡಲಾಗಿದೆ. ಇವೆಲ್ಲವೂ ಈಗ 'ಮಲ್ಲೇಶ್ವರ ಮಾದರಿ' ಎಂದೇ ಹೆಸರಾಗಿದೆ.

● ನೀವು ಗೆಲ್ಲುತ್ತೀರಿ ಎನ್ನುವುದಕ್ಕೆ ನಿಮಗಿರುವ ಬೆಂಬಲ ಏನಾದರು?

ಮಲ್ಲೇಶ್ವರ ಕ್ಷೇತ್ರವು ಈಗ ಕಂಡಿರುವಷ್ಟು ಅಭಿವೃದ್ಧಿಯನ್ನು ಕಳೆದ 50 ವರ್ಷಗಳಲ್ಲಿ ಯಾವತ್ತೂ ಕಂಡಿರಲಿಲ್ಲ. ನಾನು ಕ್ಷೇತ್ರಕ್ಕೆ ಹಲವು ಮೂಲಗಳಿಂದ, ಹಲವು ಬಗೆಯಲ್ಲಿ ಸಮನ್ವಯ ಸಾಧಿಸಿ, ಸಾವಿರಾರು ಕೋಟಿ ಅನುದಾನ ತಂದಿದ್ದೇನೆ. ಮುಂದಿನ 30 ವರ್ಷಗಳನ್ನು ಗಮನದಲ್ಲಿರಿಸಿಕೊಂಡು ಇಲ್ಲಿ ಮೂಲಸೌಕರ್ಯವನ್ನು ಅಭಿವೃದ್ಧಿಪಡಿಸಲಾಗಿದೆ.

● ನಿಮ್ಮ ನಿಜವಾದ ಎದುರಾಳಿ ಯಾರು?

ಪ್ರಜಾಪ್ರಭುತ್ವ ಎಂದ ಮೇಲೆ ಸ್ಪರ್ಧೆಯನ್ನು ಗೌರವಿಸಬೇಕು. ವ್ಯವಸ್ಥೆಯ ಆರೋಗ್ಯದ ದೃಷ್ಟಿಯಿಂದ ಎಲ್ಲ ಪಕ್ಷದ ಅಭ್ಯರ್ಥಿಗಳನ್ನೂ ನಾನು ಗಂಭೀರವಾಗಿಯೇ ಸ್ವೀಕರಿಸಿದ್ದೇನೆ. ಮಲ್ಲೇಶ್ವರದ ಮತದಾರರ ಪಾಲಿಗೆ ಮನೆಮಗ ಎನ್ನುವ ವಿನೀತ ಭಾವನೆ ನನ್ನಲ್ಲಿದೆ.

ಉತ್ಕರ್ಷ್ ಕುಮಾರ್ (ಜೆಡಿಎಸ್)

● ಜನ ನಿಮಗೆ ಯಾವ ಕಾರಣಕ್ಕೆ ಮತ ಹಾಕಬೇಕು?

ಮಲ್ಲೇಶ್ವರದ ಮೂಲ ನಿವಾಸಿಯಾಗಿದ್ದು, ಬಾಲ್ಯವನ್ನು ಇಲ್ಲೇ ಕಳೆದಿದ್ದೇನೆ. ಸುಶಿಕ್ಷಿತ, ಸಂಸ್ಕಾರವಂತ ಕುಟುಂಬದ ಹಿನ್ನೆಲೆಯಿಂದ ಬಂದಿರುವ ನಾನು ಪದವಿ ಮುಗಿಸಿದ್ದು, ಚಿಕ್ಕಂದಿನಿಂದಲೂ ಜನಸೇವೆ ಮಾಡಬೇಕೆಂಬ ಹಂಬಲವಿತ್ತು. ಬಡವರಿಗೆ, ನಿರ್ಗತಿಕರಿಗೆ ಸೇವೆ, ಸಹಾಯ, ಕನ್ನಡ ಕಟ್ಟುವ ಕೆಲಸ, ಭ್ರಷ್ಟಾಚಾರ ಮುಕ್ತ ಸಮಾಜವನ್ನು ನಿರ್ಮಿಸುವ ಕನಸು ನನ್ನದು.

● ಇಲ್ಲಿ ಗೆಲುವು ಸಾಧಿಸುವ ವಿಶ್ವಾಸವಿದೆಯೇ? ಇದ್ದರೆ ಕಾರಣಗಳೇನು?

ಎಚ್.ಡಿ. ಕುಮಾರಸ್ವಾಮಿ ಅವರ ಆಡಳಿತ ಪರ ಜನರ ಒಲವು ಇದೆ. ಪಂಚರತ್ನದಂತಹ ಯೋಜನೆಗಳನ್ನು ಘೋಷಿಸಿದ್ದಾರೆ. ಆ ಯೋಜನೆಗಳು ಹಾಗೂ ಜೆಡಿಎಸ್ ಪಕ್ಷದ ಸಿದ್ಧಾಂತದ ಅಡಿಯಲ್ಲಿ ಮತ ಯಾಚಿಸುತ್ತಿದ್ದೇನೆ. ನೀರಿನ ಸಮಸ್ಯೆ, ಸಂಚಾರ, ಅಸಮರ್ಪಕ ಕಾಮಗಾರಿ, ಪಾದಚಾರಿ ಮಾರ್ಗ ಒತ್ತುವರಿ, ಶುಚಿತ್ವದ ಕೊರತೆ, ಕಸ ವಿಲೇವಾರಿ ಸೇರಿದಂತೆ ಅನೇಕ ಸಮಸ್ಯೆಗಳಿವೆ. ಇವುಗಳನ್ನು ಬಗೆಹರಿಸುತ್ತೇನೆ

● ನಿಮ್ಮ ನಿಜವಾದ ಎದುರಾಳಿ ಯಾರು?

ನಿಜವಾದ ಎದುರಾಳಿ ರಾಷ್ಟ್ರೀಯ ಪಕ್ಷಗಳು ಹಾಗೂ ಅವುಗಳ ನಿರಂತರ ಭ್ರಷ್ಟಾಚಾರ.

ಕೆ.ಜೆ. ಜಾರ್ಜ್ (ಕಾಂಗ್ರೆಸ್)

'ಮಾಡಿದ ಅಭಿವೃದ್ಧಿ, ಗಳಿಸಿದ ಜನಪ್ರೀತಿ ಕೈಹಿಡಿಯಲಿದೆ'

● ಪುನರಾಯ್ಕೆ ಬಯಸಿ ಕಣದಲ್ಲಿದ್ದೀರಿ. ನಿಮ್ಮ ಸಾಧನೆಗಳನ್ನು ಪಟ್ಟಿ ಮಾಡಬಹುದೇ?

ಕ್ಷೇತ್ರ ಮರುವಿಂಗಡಣೆ (2008ರಲ್ಲಿ) ನಂತರ ಹೊಸದಾಗಿ ರಚನೆಯಾದ ಸರ್ವಜ್ಞನಗರ ಕ್ಷೇತ್ರದಿಂದ ಕಳೆದ ಮೂರು ಬಾರಿ ಆಯ್ಕೆಯಾಗಿರುವ ನನ್ನ, ಮಾಡಿದ ಅಭಿವೃದ್ಧಿ ಕೆಲಸಗಳೆಲ್ಲವೂ ಕಣ್ಣಿಗೆ ಕಾಣುತ್ತವೆ. ರಸ್ತೆ ಅವ್ಯವಸ್ಥೆ, ಚರಂಡಿ ದುರವಸ್ಥೆ, ಬೀದಿದೀಪ, ಸಿ.ಸಿ.ಟಿ.ವಿ ಕ್ಯಾಮೆರಾ, ಅಸಮರ್ಪಕ ಕಸ ವಿಲೇವಾರಿಗೆ ಪರಿಹಾರ ಒದಗಿಸಿದ್ದೇನೆ. ಉದ್ಯಾನವನಗಳನ್ನು ಅಭಿವೃದ್ಧಿಗೊಳಿಸಿದ್ದೇನೆ. ಕ್ಷೇತ್ರದಲ್ಲಿ ಬಡ, ಮಧ್ಯಮ ವರ್ಗದವರೇ ಹೆಚ್ಚಿನ ಸಂಖ್ಯೆಯಲ್ಲಿದ್ದಾರೆ. ನಾಗವಾರ, ಎಚ್‌ಬಿಆರ್ ಬಡಾವಣೆ, ಬಾಣಸವಾಡಿ, ಕಮ್ಮನಹಳ್ಳಿ, ಕಾಚರಕನಹಳ್ಳಿ, ಕಾಡುಗೊಂಡನಹಳ್ಳಿ, ಲಿಂಗರಾಜಪುರ ಹಾಗೂ ಮಾರುತಿ ಸೇವಾನಗರ ಕ್ಷೇತ್ರ ವ್ಯಾಪ್ತಿಯ ವಾರ್ಡ್‌ಗಳು. ಪ್ರಮುಖ ಪ್ರದೇಶಗಳ ಅಭಿವೃದ್ಧಿಗೆ ಸರ್ಕಾರದಿಂದ ಸಿಕ್ಕಿದ ಅನುದಾನವನ್ನು ನನ್ನ ಒಡೆತನದ ಕಂಪನಿಯ ಕಾರ್ಪೊರೇಟ್ ಸಾಮಾಜಿಕ ಹೊಣೆಗಾರಿಕೆ (ಸಿಎಸ್‌ಆರ್) ನಿಧಿಯನ್ನು ಇದಕ್ಕಾಗಿ ಹೆಚ್ಚು ಬಳಸಿದ್ದೇನೆ.

● ಕ್ಷೇತ್ರದಲ್ಲಿ ಶಿಕ್ಷಣಕ್ಕೆ ಹೆಚ್ಚು ಆದ್ಯತೆ ನೀಡಿದ್ದೀರಿ ಎಂಬ ಮಾತಿದೆ. ನಿಜವೇ?

ಸರ್ವಜ್ಞ ಹಲ್ತ್ ಕೇರ್ 'ಇನ್‌ಸ್ಟಿಟ್ಯೂಟ್', ಸರ್ವಜ್ಞ ಕೌಶಲ ಅಭಿವೃದ್ಧಿ ಕೇಂದ್ರ, ಸರ್ಕಾರಿ ಶಾಲೆಗಳಿಗೆ ಹೊಸ ರೂಪ, ಜೊತೆಗೆ ಸ್ಮಾರ್ಟ್ ಕ್ಲಾಸ್ ರೂಂ, ಅಂಗನವಾಡಿಗಳ ಉನ್ನತೀಕರಣ, ಧಾರ್ಮಿಕ ಕೇಂದ್ರಗಳ ಜೀರ್ಣೋದ್ಧಾರಗಳನ್ನು ಸಿಎಸ್‌ಆರ್ ನಿಧಿಯಿಂದ ಮಾಡಿದ್ದೇನೆ. ಕ್ಷೇತ್ರದ ಎಲ್ಲ 28 ಸರ್ಕಾರಿ ಶಾಲೆಗಳು, ಅಂಗನವಾಡಿಗಳು ಯಾವುದೇ ಖಾಸಗಿ ಶಾಲೆಗಳಿಗೂ ಕಡಿಮೆ ಇಲ್ಲದಂತೆ 'ಸ್ಮಾರ್ಟ್' ಮಾಡಿದ್ದೇನೆ. ಎಚ್‌ಬಿಆರ್ ಲೇಔಟ್‌ನಲ್ಲಿ ಉರ್ದು ಶಾಲೆ ತಲೆ ಎತ್ತಿದೆ. ಇಲ್ಲಿ ಶೀಘ್ರದಲ್ಲಿ ಮಲ್ಟಿ ಸ್ಪೆಷಾಲಿಟಿ ಆಸ್ಪತ್ರೆಯೂ ನಿರ್ಮಾಣವಾಗಲಿದೆ. ಕ್ಷೇತ್ರ ವ್ಯಾಪ್ತಿಯಲ್ಲಿ ಮೊದಲ ಪದವಿ ಕಾಲೇಜು ಲಿಂಗರಾಜಪುರದಲ್ಲಿ ಆರಂಭವಾಗಿದೆ. ಯುವ ಸಮೂಹಕ್ಕೆ ಸ್ವಉದ್ಯೋಗ–ಗಕ್ಕೆ ಅವಕಾಶ ಕಲ್ಪಿಸಲು ಕೆ.ಜಿ. ಹಳ್ಳಿ ಮತ್ತು ಜೀವನಹಳ್ಳಿಯಲ್ಲಿ ಕೌಶಲ ತರಬೇತಿ ಕೇಂದ್ರಗಳನ್ನು ತೆರೆದಿದ್ದೇನೆ. ಇಲ್ಲಿ ಮೊಬೈಲ್ ದುರಸ್ತಿ, ಎಲೆಕ್ಟ್ರಿಷಿಯನ್, ಡಾಟಾ ಎಂಟ್ರಿ ಆಪರೇಟರ್ ಕೋರ್ಸ್‌ಗಳನ್ನು ಕಲಿಸಲಾಗುತ್ತಿದೆ.

● ಜನರ ಅಹವಾಲು ಆಲಿಸಲು ವ್ಯವಸ್ಥೆ ಏನಿದೆ?

ಜನರ ಜೊತೆ ನಿರಂತರ ಬೆರೆಯುತ್ತಿದ್ದೇನೆ. ಸಾರ್ವಜನಿಕರ ಅಹವಾಲುಗಳಿಗೆ ತಕ್ಷಣ ಸ್ಪಂದಿಸಬೇಕೆಂಬ ಕಾರಣಕ್ಕೆ ಎಲ್ಲ ವಾರ್ಡ್‌ಗಳಲ್ಲಿ ಜನಸ್ಪಂದನ ಕಾರ್ಯಕ್ರಮಗಳನ್ನು ಆಯೋಜಿಸಿದ್ದೇನೆ. ಈ ಕಾರ್ಯಕ್ರಮದಲ್ಲಿ ಬಿಬಿಎಂಪಿ ಅಧಿಕಾರಿಗಳನ್ನೂ ಸೇರಿಸಿಕೊಂಡು, ಹಲವು ಸಮಸ್ಯೆಗಳನ್ನು ಸ್ಥಳದಲ್ಲಿಯೇ ಪರಿಹರಿಸಿದ್ದೇನೆ.

● ಮೂಲಸೌಲಭ್ಯ ಒದಗಿಸಲು ಏನೇನು ಮಾಡಿದ್ದೀರಿ?

ಗೋವಿಂದಪುರ, ನಾಗವಾರ, ಎಚ್‌ಬಿಆರ್ ಲೇಔಟ್ 3 ಮತ್ತು 5ನೇ ಬ್ಲಾಕ್ ಮತ್ತು ಸುತ್ತಮುತ್ತಲಿನ ಪ್ರದೇಶಕ್ಕೆ ನೀರು ಪೂರೈಸಲು ಎಚ್‌ಬಿಆರ್ ಲೇಔಟ್‌ನಲ್ಲಿ ₹ 11 ಕೋಟಿ ವೆಚ್ಚದಲ್ಲಿ ಐದು ಎಂಎಲ್‌ಡಿ (50 ಲಕ್ಷ ಲೀಟರ್) ಸಾಮರ್ಥ್ಯದ ನೆಲಮಟ್ಟದ ಟ್ಯಾಂಕ್ (ಜಿಎಲ್‌ಆರ್) ನಿರ್ಮಿಸಲಾಗಿದೆ. ಕ್ಷೇತ್ರದಾದ್ಯಂತ ಶುದ್ಧ ಕುಡಿಯುವ ನೀರಿನ ಘಟಕಗಳನ್ನು ಅಳವಡಿಸಿದ್ದೇನೆ. ಜೀವನಹಳ್ಳಿಯಲ್ಲಿ ವಿಶ್ವದರ್ಜೆಯ ಸೌಲಭ್ಯದ ಫುಟ್‌ಬಾಲ್ ಕ್ರೀಡಾಂಗಣ ಶೀಘ್ರದಲ್ಲಿಯೇ ಪೂರ್ಣವಾಗಲಿದೆ. ಬಾಣಸವಾಡಿಯಲ್ಲಿ ಭುವನಗಿರಿ ಸ್ಪೋರ್ಟ್ಸ್ ಕಾಂಪ್ಲೆಕ್ಸ್ ನಿರ್ಮಾಣವಾಗಲಿದೆ. ಕೆಂಪೇಗೌಡ ಅಂತರರಾಷ್ಟ್ರೀಯ ವಿಮಾನ ನಿಲ್ದಾಣಕ್ಕೆ ಸಂಪರ್ಕ ಕಲ್ಪಿಸಲು ಕ್ಷೇತ್ರ ವ್ಯಾಪ್ತಿಯ ಮೂಲಕ 'ನಮ್ಮ ಮೆಟ್ರೊ' ಕೂಡಾ ಶೀಘ್ರದಲ್ಲಿ ಸಾಕಾರವಾಗಲಿದೆ.

● ನಿಮ್ಮ ಪ್ರತಿಸ್ಪರ್ಧಿ ಬಗ್ಗೆ ಏನು ಹೇಳುತ್ತೀರಿ?

ಪ್ರತಿಸ್ಪರ್ಧಿ ಬಗ್ಗೆ ನಾನೂ ಏನನ್ನೂ ಹೇಳಲು ಬಯಸುವುದಿಲ್ಲ. ರಾಜಕೀಯವಾಗಿ ಅವರು ಎದುರಾಳಿ ಅಷ್ಟೇ. ನಾನು ಕ್ಷೇತ್ರದಲ್ಲಿ ಮಾಡಿರುವ ಅಭಿವೃದ್ಧಿಗಳು, ಗಳಿಸಿದ ಜನಪ್ರೀತಿ ನನ್ನ ನೆರವಿಗೆ ಬರುವ ವಿಶ್ವಾಸವಿದೆ.

ಅನೂಪ್ ಅಯ್ಯಂಗಾರ್ (ಕಾಂಗ್ರೆಸ್)

● ಜನ ಯಾವ ಕಾರಣಕ್ಕೆ ನಿಮಗೆ ಮತ ಹಾಕಬೇಕು?

ಮಲ್ಲೇಶ್ವರ ಜನರಿಗಾಗಿ ಮಾರ್ವೆಲಸ್ ಮಲ್ಲೇಶ್ವರ ಅಭಿಯಾನ ಶುರು ಮಾಡಿದ್ದೇವೆ. ಸುಮಾರು ಎರಡು ಸಾವಿರ ಜನರಿಗೆ ಮಾತನಾಡಿದ್ದೇವೆ. ಕೊಳಗೇರಿ ನಿವಾಸಿಗಳು, ಸದಾಶಿವನಗರ, ಮಲ್ಲೇಶ್ವರದ ವಿವಿಧ ಭಾಗಗಳು, ಸುಬ್ರಹ್ಮಣ್ಯಪುರ, ಎಲ್.ಎನ್.ಪುರ, ಮಿಲ್ಕ್ ಕಾಲೋನಿಯಲ್ಲಿ ಸಾಕಷ್ಟು ಸಮಸ್ಯೆಗಳಿವೆ. ಅವುಗಳನ್ನು ಪರಿಹರಿಸುವ ನಿಟ್ಟಿನಲ್ಲಿ ಪ್ರಣಾಳಿಕೆ ರೂಪಿಸಿದ್ದೇವೆ. ನಾಗರಿಕರ ಸಮಸ್ಯೆಗಳ ಪರಿಹಾರಕ್ಕೆ ಸದಾ ಸಿದ್ಧನಿದ್ದೇನೆ. ಸಂಚಾರ ಸಮಸ್ಯೆಗಳ ನಿವಾರಣೆಗೆ ಬಹು ಅಂತಸ್ತಿನ ಪಾರ್ಕಿಂಗ್ ಸಂಕೀರ್ಣವನ್ನು ಸ್ಥಾಪಿಸಲಾಗುವುದು. ಹೆಚ್ಚು ಆಮ್ಲಜನಕವನ್ನು ನೀಡುವ ಸಸ್ಯಗಳನ್ನು ಬೆಳೆಸುವ ಮೂಲಕ ಆರೋಗ್ಯಕರ ಪರಿಸರವನ್ನು ಸೃಷ್ಟಿಸಲು ಒತ್ತು ನೀಡುತ್ತೇನೆ.



● ಇಲ್ಲಿ ಗೆಲುವು ಸಾಧಿಸುವ ವಿಶ್ವಾಸವಿದೆಯೇ? ಇದ್ದರೆ ಕಾರಣಗಳೇನು?

ಕ್ಷೇತ್ರದಲ್ಲಿ ಆಡಳಿತ ವಿರೋಧಿ ಅಲೆ ಇದೆ. ಸಾಕಷ್ಟು ಕಾಮಗಾರಿಗಳಲ್ಲಿ ಭ್ರಷ್ಟಾಚಾರ ಮತ್ತು ಅವ್ಯವಹಾರಗಳು ನಡೆದಿವೆ. ಕಳಪೆ ಕಾಮಗಾರಿಗಳು ನಡೆದಿವೆ. ಹೀಗಾಗಿ ಜನ ಬೇಸತ್ತಿದ್ದಾರೆ. ಪರ್ಯಾಯಕ್ಕಾಗಿ ಎದುರು ನೋಡುತ್ತಿದ್ದು, ಕಾಂಗ್ರೆಸ್ ಪಕ್ಷವನ್ನೇ ಆಯ್ಕೆ ಮಾಡಲಿದ್ದಾರೆ. ನಾವು ಸುಮಾರು 40 ಸಾವಿರ ಮನೆಗಳಿಗೆ ಹೋಗಿದ್ದೇವೆ. ನಮ್ಮ ಪರವಾಗಿ ಸಕಾರಾತ್ಮಕ ಅಭಿಪ್ರಾಯ ವ್ಯಕ್ತವಾಗಿದೆ. ಅಲ್ಲದೇ, ಮಾದರಿ ಮಲ್ಲೇಶ್ವರದ ಕನಸುಗಳನ್ನು ಜನರ ಮುಂದಿಟ್ಟದ್ದೇವೆ. ಜನರಿಗೆ ಅದು ಒಪ್ಪಿಗೆಯಾಗಿದೆ.

● ನಿಮ್ಮ ನಿಜವಾದ ಎದುರಾಳಿ ಯಾರು?

ಅವ್ಯವಹಾರ, ಭ್ರಷ್ಟಾಚಾರಗಳಿಗೆ ಕಾರಣರಾದವರೇ ಆಗಿದ್ದಾರೆ. ಅವರೇ ನನ್ನ ನಿಜವಾದ ಎದುರಾಳಿಗಳು.

ಪದ್ಮನಾಭ ರೆಡ್ಡಿ (ಬಿಜೆಪಿ)

'ಈ ಬಾರಿ ಆರಿಸಿ ಬರುವ ವಿಶ್ವಾಸವಿದೆ'



● ಈ ಬಾರಿಯಾದರೂ ಗೆಲ್ಲಲೇ ಬೇಕೆಂದು ಕಣದಲ್ಲಿದ್ದೀರಿ. ಮತದಾರರು ನಿಮಗೆ ಯಾಕೆ ಮತ ಹಾಕಬೇಕು?

ಹದಿನೈದು ವರ್ಷಗಳಿಂದ ಕ್ಷೇತ್ರವನ್ನು ಆಳುತ್ತಿರುವ ಕಾಂಗ್ರೆಸ್ ಶಾಸಕರು ಏನೂ ಅಭಿವೃದ್ಧಿ ಮಾಡಿಲ್ಲ. ಅವರ ಆಡಳಿತ ವೈಫಲ್ಯದಿಂದ ಜನ ಬೇಸತ್ತಿದ್ದಾರೆ. ಅವರ ಜೊತೆಯಲ್ಲಿದ್ದ ಶೇ 70ರಷ್ಟು ಕಾಂಗ್ರೆಸ್ಸಿಗರು ಈಗ ನನ್ನ ಜೊತೆಗಿದ್ದಾರೆ. ನಾನೇ ಕಣಕ್ಕಿಳಿಯಬೇಕೆಂಬುವುದು ಅವರೂ ಸೇರಿದಂತೆ ಎಲ್ಲ ಮತದಾರರು ಒತ್ತಾಸೆಯಾಗಿತ್ತು. ಹೀಗಾಗಿ ಅಖಾಡಕ್ಕೆ ಇಳಿದಿದ್ದೇನೆ. ಈ ಬಾರಿ ಆರಿಸಿ ಬರುವ ವಿಶ್ವಾಸವೂ ಇದೆ.

● ನಿಮ್ಮ ಪ್ರಚಾರ ಹೇಗಿದೆ?

ಆರು ತಿಂಗಳುಗಳಿಂದ ಕ್ಷೇತ್ರದಾದ್ಯಂತ ಮನೆ ಮನೆಗೆ ಹೋಗುತ್ತಿದ್ದೇನೆ. ಎಲ್ಲ ಎಂಟು ವಾರ್ಡ್‌ಗಳಲ್ಲಿ ಜನ ಸಂಪರ್ಕ ಸಾಧಿಸಿದ್ದೇನೆ. ಅವರ ನಾಡಿ ಮಿಡಿತ ಅರಿತಿದ್ದೇನೆ. ನಾನು ಸ್ಥಳೀಯ ನಿವಾಸಿ. ಕಾಚರಕನಹಳ್ಳಿ ವಾರ್ಡ್‌ನವನು. ಈ ವಾರ್ಡ್‌ನಿಂದ ಮೂರು ಬಾರಿ ಪಾಲಿಕೆ ಸದಸ್ಯನಾಗಿ ಆಯ್ಕೆಯಾಗಿದ್ದೇನೆ. ನನ್ನ ವಾರ್ಡ್‌ನಲ್ಲಿ ನಾನು ಮಾಡಿರುವ ಅಭಿವೃದ್ಧಿ ಕೆಲಸಗಳನ್ನು ನೋಡಿದ ಜನ, ಅದೇ ರೀತಿಯ ಇಡೀ ಕ್ಷೇತ್ರದಲ್ಲಿ ಅಭಿವೃದ್ಧಿ ಆಗಬೇಕೆಂದು ಹೇಳುತ್ತಿದ್ದಾರೆ.

● ಮತದಾರರಿಗೆ ಏನು ಭರವಸೆ ನೀಡುತ್ತಿದ್ದೀರಿ?

ನನ್ನನ್ನು ಆಯ್ಕೆ ಮಾಡಿದರೆ ಕ್ಷೇತ್ರದ ಸಮಗ್ರ ಅಭಿವೃದ್ಧಿಯ ಭರವಸೆ ನೀಡುತ್ತೇನೆ. ಕ್ಷೇತ್ರದ ಎಲ್ಲ ಸಮಸ್ಯೆಗಳಿಗೆ ಐದು ವರ್ಷಗಳ ಅವಧಿಯಲ್ಲಿ ಪರಿಹಾರ ಒದಗಿಸುತ್ತೇನೆ.

ಹೆಬ್ಬಾಳದಲ್ಲಿ ತ್ರಿಕೋನ ಸ್ಪರ್ಧೆ; 'ಪಂಚರತ್ನ' ಮುಂದಿಟ್ಟು ಜೆಡಿಎಸ್ ಜಾಣ್ಮೆಯ ನಡೆ

'ಗ್ಯಾರಂಟಿ' ಕಸಿಯಲು ಕಮಲ ತಂತ್ರ

• ರಾಜೇಶ್ ರೈ ಚಟ್ಲ

ಬೆಂಗಳೂರು: ಕಾಂಗ್ರೆಸ್ ಶಾಸಕ ಬಿ.ಎಸ್. ಸುರೇಶ್ (ಭೈರತಿ) ಎದುರಾಳಿಯಾಗಿ ಬಿಜೆಪಿಯ ಮಾಜಿ ಶಾಸಕ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಪುತ್ರ ಜಗದೀಶ ಕಟ್ಟಾ ಕೆ.ಎಸ್. ಕಣದಲ್ಲಿರುವುದು ಹೆಬ್ಬಾಳ ಕ್ಷೇತ್ರದ ಕದನ ಕುತೂಹಲದ ಕಾವು ಹೆಚ್ಚಿಸಿದೆ. ಜೆಡಿಎಸ್‌ನಿಂದ ಸಯ್ಯದ್ ಮೊಹಿದ್ ಅಲ್ತಾಫ್ ಅಖಾಡದಲ್ಲಿದ್ದಾರೆ. ಒಟ್ಟು 14 ಅಭ್ಯರ್ಥಿಗಳು ಕಣದಲ್ಲಿದ್ದರೂ ಇಲ್ಲಿ ತ್ರಿಕೋನ ಸ್ಪರ್ಧೆಯಿದೆ.

ಇಲ್ಲಿ ಕಾಂಗ್ರೆಸ್ ಅಭ್ಯರ್ಥಿ ಯಾರೆಂಬ ಬಗ್ಗೆ ಆರಂಭದಿಂದಲೂ ಗೊಂದಲ ಇರಲಿಲ್ಲ. ಚುನಾವಣೆ ಘೋಷಣೆಗೂ ಮುನ್ನವೇ ಭೈರತಿ ಸುರೇಶ್ ಕ್ಷೇತ್ರ ಸುತ್ತಾಡಿ ಮತದಾರರನ್ನು ಓಲೈಸಿದ್ದಾರೆ. ಪಕ್ಷದ ಕಾರ್ಯಕರ್ತರು, ಬೆಂಬಲಿಗರ ಮೂಲಕ ಐದು ವರ್ಷಗಳ ತಮ್ಮ ಸಾಧನೆಯ ಕರಪತ್ರಗಳನ್ನು ಹಂಚಿ ಜನರ ಮನಸ್ಸಿನಲ್ಲಿ ಮುದ್ರೆಯೊತ್ತಿದ್ದಾರೆ. ಅವರ ಪರ ಪತ್ನಿ ಪದ್ಮಾವತಿ, ಪುತ್ರ ಸಂಜಯ್ ಕ್ಷೇತ್ರಕ್ಕಿಳಿದ್ದಾರೆ. ಬಿಜೆಪಿ ಭದ್ರಕೋಟೆಯಾಗಿದ್ದ ಈ ಕ್ಷೇತ್ರವನ್ನು 2018ರಲ್ಲಿ ಕಾಂಗ್ರೆಸ್ ತೆಕ್ಕೆಗೆ ತಂದಿರುವ ಸುರೇಶ್, ಈ ಬಾರಿ ದಾಖಲೆಯ ಮತಗಳಿಂದ ಗೆಲ್ಲುವ ವಿಶ್ವಾಸದಲ್ಲಿದ್ದಾರೆ.

'ನಾವು ಮಾಡುವ ಕೆಲಸ ನಮ್ಮನ್ನು ಕೈಹಿಡಿಯುತ್ತದೆ ಎಂಬುದಕ್ಕೆ ಎಲ್ಲೆಡೆ ದೊರೆಯುತ್ತಿರುವ ಅಭೂತಪೂರ್ವ ಬೆಂಬಲ, ಜನಸ್ಪಂದನೆಯೇ ಸಾಕ್ಷಿ. ಕಳೆದ ಐದು ವರ್ಷಗಳಲ್ಲಿ ಹೆಬ್ಬಾಳ ಕ್ಷೇತ್ರ ವ್ಯಾಪ್ತಿಯಲ್ಲಿ ಮೂಲಸೌಕರ್ಯಗಳ ಅಭಿವೃದ್ಧಿ ಸೇರಿ ಶೇ 90 ಅಭಿವೃದ್ಧಿ ಕಾರ್ಯಗಳಾಗಿವೆ. ಈ ಬಾರಿ ಆಯ್ಕೆಯಾದರೆ ಉಳಿದ ಅಭಿವೃದ್ಧಿ ಕಾರ್ಯಗಳ ಜೊತೆಗೆ, ಹೆಬ್ಬಾಳ ಕ್ಷೇತ್ರವನ್ನು ಮಾದರಿ ಕ್ಷೇತ್ರವಾಗಿ ಇತರರು ಹಿಂತಿರುಗಿ ನೋಡುವಂತೆ ಮಾಡುತ್ತೇನೆ' ಎನ್ನುವುದು ಅವರ ಭರವಸೆ.

ಭೈರತಿ ಸುರೇಶ್

ಜಗದೀಶ ಕಟ್ಟಾ ಕೆ.ಎಸ್.

ಸಯ್ಯದ್ ಮೊಹಿದ್ ಅಲ್ತಾಫ್

'ಮೂಲಸೌಕರ್ಯ ವಿಷಯದಲ್ಲಿ ಕ್ಷೇತ್ರ ಸಾಕಷ್ಟು ಸುಧಾರಣೆ ಕಂಡಿದೆ. ಕುಡಿಯುವ ನೀರು, ಸರ್ಕಾರಿ ಶಾಲೆ, ಆಸ್ಪತ್ರೆ, ವಸತಿ ಹೀಗೆ ನಾನಾ ಕೊರತೆಗಳಿಂದ ನಲುಗಿದ್ದ ಕ್ಷೇತ್ರ ಅಭಿವೃದ್ಧಿಯ ಪಥ ಹಿಡಿದು ಬೆಳೆದಿದೆ. ಇದಕ್ಕೆ ಭೈರತಿ ಸುರೇಶ್ ಕೊಡುಗೆ ಸಾಕಷ್ಟಿದೆ' ಎನ್ನುತ್ತಾರೆ ಮನೋರಾಯನಪಾಳ್ಯದ ದಿನೇಶ್. ರಾಜಧಾನಿಗೆ ಸಂಪರ್ಕ ಕೊಂಡಿಯಾಗಿರುವ ಕ್ಷೇತ್ರ ಆಗಿರುವುದರಿಂದ ಇನ್ನಷ್ಟು ಅಭಿವೃದ್ಧಿ ಆಗಬೇಕಿದೆ. ಫ್ಲೈ ಓವರ್, ರಸ್ತೆಗಳ ವಿಸ್ತರಣೆ, ಒಳಚರಂಡಿ ಮುಂತಾದ ಕಾಮಗಾರಿಯನ್ನು ತ್ವರಿತಗೊಳಿಸಬೇಕು. ಸರ್ಕಾರ ಹೆಚ್ಚಿನ ಅನುದಾನ ನೀಡಬೇಕು. ಆ ಹಣ ಅಭಿವೃದ್ಧಿಗೆ ವಿನಿಯೋಗ ಆಗಬೇಕು ಎನ್ನುವುದು ಅವರ ಆಶಯ.

ಇನ್ನು, ಹಿಂದೆ ಕ್ಷೇತ್ರ ಗೆದ್ದು ಸಚಿವರಾಗಿದ್ದ ಕಟ್ಟಾ ಸುಬ್ರಹ್ಮಣ್ಯ ನಾಯ್ಡು ಹೆಸರು ಕ್ಷೇತ್ರದಲ್ಲಿ ಮನೆಮಾತು. ಅವರೇ ಬಿಜೆಪಿ ಅಭ್ಯರ್ಥಿ ಆಗಲಿದ್ದಾರೆಂದು ಅನೇಕರು ಭಾವಿಸಿದ್ದರು. ಭೈರತಿ ಸುರೇಶ್– ಕಟ್ಟಾ ಸುಬ್ರಹ್ಮಣ್ಯ ನಾಯ್ಡು ನಡುವಿನ ಗುದ್ದಾಟವನ್ನು ಜನ ನಿರೀಕ್ಷಿಸಿದ್ದರು. ಆದರೆ, ಅಪರಾಧ ಪ್ರಕರಣಗಳಲ್ಲಿ ಭಾಗಿಯಾದ ಆರೋಪ ಎದುರಿಸುತ್ತಿರುವ ಅವರ ಮಗನಿಗೆ ಬಿಜೆಪಿ ಟಿಕೆಟ್ ನೀಡಿರುವುದು ಹಲವರನ್ನು ಹುಬ್ಬೇರಿಸುವಂತೆ ಮಾಡಿದೆ. ಆ ಅಸಮಾಧಾನವನ್ನು ಬದಿಗಿಟ್ಟು, ಪಕ್ಷದ ಅಭ್ಯರ್ಥಿಯ ಗೆಲುವಿಗೆ ಶ್ರಮಿಸುತ್ತಿದ್ದೇವೆ ಎಂದು ಬಿಜೆಪಿ ಬೆಂಬಲಿಗ ವಿ. ನಾಗೇನಹಳ್ಳಿಯ ಕೃಷ್ಣಪ್ಪ ಹೇಳಿದರು.

ಹಾಗೆ ನೋಡಿದರೆ, ಜೆಡಿಎಸ್ ಜಾಣ್ಮೆಯ ನಡೆ ಇಟ್ಟಿದೆ. ಕ್ಷೇತ್ರದಲ್ಲಿ ಪ್ರಾಬಲ್ಯವಿರುವ ಮುಸ್ಲಿಂ ಮತದಾರರ ಮೇಲೆ ಕಣ್ಣಿಟ್ಟು ವಿದ್ಯಾವಂತ, ವೃತ್ತಿಯಲ್ಲಿ ವಕೀಲರಾಗಿರುವ ಸಯ್ಯದ್ ಮೊಹಿದ್ ಅಲ್ತಾಫ್ ಅವರನ್ನು ಕಣಕ್ಕಿಳಿಸಿದೆ. ಮನೆ, ಮನೆ ಪ್ರಚಾರದಲ್ಲಿ ಸಕ್ರಿಯರಾಗಿರುವ ಅವರು, ಪಕ್ಷದ 'ಪಂಚರತ್ನ' ಯೋಜನೆಗಳು ಮತ ತಂದುಕೊಡಬಲ್ಲುದು ಎಂಬ ವಿಶ್ವಾಸದಲ್ಲಿದ್ದಾರೆ.

2008ರಲ್ಲಿ ಬಿಜೆಪಿಯ ಕಟ್ಟಾ ಸುಬ್ರಹ್ಮಣ್ಯ ನಾಯ್ಡು, 2013ರಲ್ಲಿ ಬಿಜೆಪಿಯ ಆರ್. ಜಗದೀಶ್ ಕುಮಾರ್ ಇಲ್ಲಿ ಆರಿಸಿ ಬಂದಿದ್ದರು. 2015ರಲ್ಲಿ ಹೃದಯಾಘಾತದಿಂದ ಜಗದೀಶ್ ಕುಮಾರ್ ನಿಧನರಾಗಿದ್ದರಿಂದ 2016ರಲ್ಲಿ ಉಪ ಚುನಾವಣೆ ನಡೆದಿತ್ತು. ಆ ಚುನಾವಣೆಯಲ್ಲಿ ಸಿ.ಕೆ. ಜಾಫರ್ ಷರೀಫ್ ಮೊಮ್ಮಗ ಅಬ್ದುಲ್ ರೆಹಮಾನ್ ಷರೀಫ್ ಅವರಿಗೆ ಕಾಂಗ್ರೆಸ್ ಮಣೆ ಹಾಕಿತ್ತು. ಆದರೆ, ಮತದಾರರು ಅವರ ಕೈಹಿಡಿಯಲಿಲ್ಲ. 19 ಸಾವಿರ ಮತಗಳ ಅಂತರದಿಂದ ಬಿಜೆಪಿಯ ವೈ.ಎ. ನಾರಾಯಣಸ್ವಾಮಿ ಮೇಲುಗೈ ಸಾಧಿಸಿದ್ದರು. ಅದೇ ಗೆಲುವಿನ ಉಮೇದಿನಲ್ಲಿ 2018ರಲ್ಲಿ ನಾರಾಯಣಸ್ವಾಮಿ ಮತ್ತೆ ಕಣಕಿಳಿದಿದ್ದರು. ಅಬ್ದುಲ್ ರೆಹಮಾನ್ ಷರೀಫ್ ಅವರ ಬದಲು, ಕುರುಬ ಸಮುದಾಯದ ಭೈರತಿ ಸುರೇಶ್‌ಗೆ ಕಾಂಗ್ರೆಸ್ ಟಿಕೆಟ್ ನೀಡಿತ್ತು. ತಮ್ಮವರಿಗೆ ಟಿಕೆಟ್ ನೀಡಿಲ್ಲ ಎಂಬ ಮುನಿಸಿನ ನಡುವೆಯೂ ಮುಸ್ಲಿಂ ಮತಗಳು ಸುರೇಶ್ ಕೈಹಿಡಿದ ಕಾರಣ ಅವರು ಸುಲಭವಾಗಿ ದಡ ಸೇರಿದ್ದರು. ಒಕ್ಕಲಿಗ ಸಮುದಾಯದ ನಾರಾಯಣಸ್ವಾಮಿ ಬಿಜೆಪಿಯಿಂದ, ಹನುಮಂತೇಗೌಡ ಜೆಡಿಎಸ್‌ನಿಂದ ಸ್ಪರ್ಧಿಸಿದ್ದು ಕೂಡಾ ಅವರಿಗೆ ವರವಾಗಿತ್ತು. ಕ್ಷೇತ್ರದಲ್ಲಿ ಮುಸ್ಲಿಂ, ಪರಿಶಿಷ್ಟರು ಮತ್ತು ಒಕ್ಕಲಿಗರದ್ದೇ ಪ್ರಾಬಲ್ಯ. ಈ ಬಾರಿಯೂ ಜಾತಿ ಸಮೀಕರಣದ ಲೆಕ್ಕಾಚಾರ ಕ್ಷೇತ್ರದಲ್ಲಿ ಭಾರೀ ಚರ್ಚೆಯಲ್ಲಿದೆ.

2,88,928 ಹೆಬ್ಬಾಳ ಕ್ಷೇತ್ರದಲ್ಲಿರುವ ಒಟ್ಟು ಮತದಾರರು

14 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

1,47,155 ಪುರುಷರು

53 ಲೈಂಗಿಕ ಅಲ್ಪಸಂಖ್ಯಾತರು

1,41,720 ಮಹಿಳೆಯರು

ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2016 (ಉಪ ಚುನಾವಣೆ)	2018
ಹೆಬ್ಬಾಳ	ಬಿಜೆಪಿ	ಬಿಜೆಪಿ	ಬಿಜೆಪಿ	ಕಾಂಗ್ರೆಸ್

ಈಶಾನ್ಯ ರೈಲ್ವೆ

ಇ–ಟೆಂಡರ್ ಪ್ರಕಟಣೆ

ಟೆಂಡರ್ ಪ್ರಕಟಣೆ ಸಂ. ಎನ್–235–62

ಟೆಲೆ ಟೆಂಡರ್ 05–2023

ಭಾರತದ ರಾಷ್ಟ್ರಪತಿಗಳ ಪರವಾಗಿ ಡೆ. ಚೀಫ್ ಸಿಗ್ನಲ್ & ಟೆಲಿಕಾಂ ಇಂಜಿನಿಯರ್/ಟೆಲೆ/ಹೆಚ್‌ಕ್ಯೂ, ಈಶಾನ್ಯ ರೈಲ್ವೆ, ಗೋರಖಪುರ ಇವರು, ಟೆಂಡರ್ ದಸ್ತಾವೇಜಿನಲ್ಲಿ ಉಲ್ಲೇಖಿಸಲಾಗಿರುವ ಅರ್ಹತಾ ಮಾನದಂಡಗಳ ಪ್ರಕಾರ ಸಾಕಷ್ಟು ಅನುಭವವುಳ್ಳ ಗುತ್ತಿಗೆದಾರರಿಂದ ಕೆಳಕಂಡ ಕಾಮಗಾರಿಗಳಿಗಾಗಿ ಇ–ಟೆಂಡರ್ ಆಹ್ವಾನಿಸಿದ್ದಾರೆ. **ಟೆಂಡರ್ ಸಂ.: ಎನ್–235–62 ಟೆಲೆ–ಟೆಂಡರ್ 05–2023,** ಕಾಮಗಾರಿ ಹೆಸರು: ಈಶಾನ್ಯ ರೈಲ್ವೆ, ಗೋರಖಪುರ ಇಲ್ಲಿಗೆ ಅಥವಾ ಹೆಚ್‌ಕ್ಯೂ ಕಚೇರಿಗಳಿಗೆ ಇ–ಆಫೀಸ್‌ಗಾಗಿ ರೈಲ್‌ನೆಟ್ ಕನೆಕ್ಷನ್‌ಗಳ ಸಮೇತ ನೆಟ್‌ವರ್ಕಿಂಗ್ ಇಕ್ವಿಪ್‌ಮೆಂಟ್ ಮತ್ತು ಇನ್ನಿತರ ಸಾಫ್ಟ್‌ವೇರ್ ಅಪ್ಲಿಕೇಶನ್‌ಗಳ ಪೂರೈಕೆ, ಅಳವಡಿಕೆ, ಪರೀಕ್ಷೆ ಮತ್ತು ಕಮಿಷನಿಂಗ್ ಕಾಮಗಾರಿ. **ಟೆಂಡರ್ ಮೌಲ್ಯ:** ರೂ. 50,45,442.45 (ರೂಪಾಯಿ ಐವತ್ತು ಲಕ್ಷ ನಲವತ್ತೈದು ಸಾವಿರದ ನಾಲ್ಕು ನೂರ ನಲವತ್ತೆರಡು ಮತ್ತು ನಲವತ್ತೈದು ಪೈಸೆ ಮಾತ್ರ), ಬಿಡ್ ಸೆಕ್ಯೂರಿಟಿ: ರೂ. 1,00,900/–, ಆಫರ್ ವ್ಯಾಲಿಡಿಟಿ: 60 ದಿನಗಳು, ಟೆಂಡರ್ ತೆರೆಯುವ ಮತ್ತು ಮುಚ್ಚುವ ಸ್ಥಳ, ದಿನಾಂಕ ಮತ್ತು ಸಮಯ: ಡಿಎಸ್‌ಟಿಇ/ಟೆಲೆ ಕಚೇರಿ, ಈಶಾನ್ಯ ರೈಲ್ವೆ, ಗೋರಖಪುರ, 30.05.2023 ರಂದು 15.00 ಗಂಟೆ. ಪೂರ್ಣಗೊಳಿಸುವ **ಅವಧಿ: 4 ತಿಂಗಳು, ಟೆಂಡರ್ ಪ್ರಕಟಣೆ ಮತ್ತು ದಸ್ತಾವೇಜು ವಿವರಗಳು ಲಭ್ಯವಿರುವ ವೆಬ್‌ಸೈಟ್:** www.ireps.gov.in • ಟೆಂಡರ್ ಕುರಿತಾದ ಯಾವುದೇ ಬದಲಾವಣೆಗಳಿಗಾಗಿ, ಮೂಲ ಟೆಂಡರ್ ಪ್ರಕಟಣೆಯಲ್ಲಿನ ತಿದ್ದುಪಡಿಗಳಿಗಾಗಿ ದಯವಿಟ್ಟು ಸದರಿ ವೆಬ್‌ಸೈಟ್ ಪರಿಶೀಲಿಸಿರಿ. • ಬಿಡ್ ಸೆಕ್ಯೂರಿಟಿ ಮೊತ್ತವನ್ನು ಇ–ಪೇಮೆಂಟ್ ಗೇಟ್‌ವೇ ಮುಖಾಂತರವಾಗಲಿ ಅಥವಾ ಭಾರತದ ಒಂದು ಷೆಡ್ಯೂಲ್ ಕಮರ್ಷಿಯಲ್ ಬ್ಯಾಂಕ್‌ನ ಬ್ಯಾಂಕ್ ಗ್ಯಾರಂಟಿ ಬಾಂಡ್ ರೂಪದಲ್ಲಿ ಅಥವಾ ಟೆಂಡರ್ ದಸ್ತಾವೇಜಿನಲ್ಲಿ ತಿಳಿಸಿರುವ ರೀತಿಯಲ್ಲಿ ಪಾವತಿಸುವುದು. • ಇ–ಟೆಂಡರಿಂಗ್‌ನಲ್ಲಿ ಪಾಲ್ಗೊಳ್ಳುವ ಟೆಂಡರ್‌ದಾರರು/ಬಿಡ್‌ದಾರರು ಕಡ್ಡಾಯವಾಗಿ ಕ್ಲಾಸ್ 3 ಡಿಜಿಟಲ್ ಸಿಗ್ನೇಚರ್ ಸರ್ಟಿಫಿಕೇಟ್ ಹೊಂದಿರತಕ್ಕದ್ದು ಮತ್ತು ಅದನ್ನು ಐಆರ್‌ಇಪಿಎಸ್ ಪೋರ್ಟಲ್‌ನಲ್ಲಿ ನೋಂದಾಯಿಸಿಕೊಳ್ಳತಕ್ಕದ್ದು. ಹೀಗೆ ನೋಂದಾಯಿಸಿಕೊಳ್ಳುವ ಟೆಂಡರ್‌ದಾರರು/ಬಿಡ್‌ದಾರರು ಮಾತ್ರ ಇ–ಟೆಂಡರಿಂಗ್‌ನಲ್ಲಿ ಪಾಲ್ಗೊಳ್ಳಬಹುದಾಗಿರುತ್ತದೆ. • ಟೆಂಡರಿಂಗ್ ಪ್ರಾಸೆಸ್‌ನಲ್ಲಿ ಪಾಲ್ಗೊಳ್ಳುವ ಸಮಯದಲ್ಲಿ ಸಂಬಂಧಿತ ಎಲ್ಲಾ ದಾಖಲಾತಿಗಳನ್ನು ಅಪ್‌ಲೋಡ್ ಮಾಡತಕ್ಕದ್ದು. • ವಿವರವಾದ ಟೆಂಡರ್ ಪ್ರಕಟಣೆ, ಅರ್ಹತಾ ಮಾನದಂಡ, ಷರತ್ತು ಮತ್ತು ನಿಬಂಧನೆಗಳು http://www.ireps.gov.in ವೆಬ್‌ಸೈಟ್‌ನಲ್ಲಿ ಲಭ್ಯವಿರುತ್ತದೆ. **ಸೂಚನೆ:** ಟೆಂಡರ್‌ದಾರರು/ಬಿಡ್‌ದಾರರು ತಮ್ಮ ಆಫರ್ ಜೊತೆಗೆ ಸಂಬಂಧಿತ ಎಲಾ ಅಟ್ಯಾಚ್‌ಮೆಂಟ್‌ಗಳನ್ನು/ಫಾರ್ಮಾಟ್/ಅನೆಕ್ಸರ್‌ಗಳನ್ನು ಕಡ್ಡಾಯವಾಗಿ ಅಪ್‌ಲೋಡ್ ಮಾಡುವುದು.

ಡೆ. ಚೀಫ್ ಸಿಗ್ನಲ್ & ಟೆಲಿಕಾಂ ಇಂಜ/ಟೆಲೆ/ಹೆಚ್‌ಕ್ಯೂ
ಸಿಪಿಆರ್‌ಒ/ಸಿಗ್ನಲ್–15 ಗೋರಖಪುರ

ಯಾತ್ರಿ ಸೌಲಭ್ಯಕ್ಕೆ ಸಂಬಂಧಿತ ಯಾವುದೇ ದೂರು ನೀಡಲು ಎಸ್‌ಎಂಎಸ್ ಕಳುಹಿಸಬೇಕಾದ ಮೊಬೈಲ್ ನಂ. 09794845955

"ರೈಲುಗಳಲ್ಲಿ ಪ್ರಯಾಣಿಸುವಾಗ ಹೊತ್ತಿ ಉರಿಯಬಲ್ಲ ಪದಾರ್ಥಗಳನ್ನು ಕೊಂಡೊಯ್ಯದಿರಿ"

ಕೆ.ಆರ್.ಪುರ ಕ್ಷೇತ್ರ: 'ಬೈರತಿ ಬಸವರಾಜ'

ಕಟ್ಟಿಹಾಕಲು ಕಾಂಗ್ರೆಸ್ ಕಸರತ್ತು

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ಬಿಜೆಪಿ ಅಭ್ಯರ್ಥಿಯಾಗಿರುವ ನಗರಾಭಿವೃದ್ಧಿ ಸಚಿವ ಬೈರತಿ ಬಸವರಾಜ ಅವರನ್ನು ಶತಾಯಗತಾಯ ಸೋಲಿಸಲು ಪಣತೊಟ್ಟ ರೀತಿಯಲ್ಲಿ ಕೆ.ಆರ್.ಪುರ ಕ್ಷೇತ್ರದಲ್ಲಿ ಕಾಂಗ್ರೆಸ್ ಪ್ರಚಾರ ನಡೆಸಿದೆ. ಬಿಜೆಪಿ ಕಳೆದ ಬಾರಿಗಿಂತ ಗೆಲುವಿನ ಅಂತರ ಇನ್ನಷ್ಟು ಹಿಗ್ಗಿಸಲು ತಂತ್ರಗಾರಿಕೆ ಮಾಡುತ್ತಿದೆ.

2018ರ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಟಿಕೆಟ್ ಪಡೆದು ಗೆದ್ದಿದ್ದ ಬೈರತಿ ಬಸವರಾಜ ಒಂದೇ ವರ್ಷದಲ್ಲಿ ಶಾಸಕ ಸ್ಥಾನಕ್ಕೆ ರಾಜೀನಾಮೆ ನೀಡಿ ಬಿಜೆಪಿ ಸೇರಿದ್ದರು. 2019ರಲ್ಲಿ ನಡೆದಿದ್ದ ಉಪ ಚುನಾವಣೆಯಲ್ಲಿ 63 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಗೆಲುವು ಪಡೆದಿದ್ದರು. 2008ರಲ್ಲಿ ಬಿಜೆಪಿಯ ನಂದೀಶ್ ರೆಡ್ಡಿ ಕಾಂಗ್ರೆಸ್‌ನ ಎ.ಕೃಷ್ಣಪ್ಪ ಅವರನ್ನು ಸೋಲಿಸುವ ಮೂಲಕ ಕ್ಷೇತ್ರದಲ್ಲಿ ಬಿಜೆಪಿಗೆ ಭದ್ರ ಬುನಾದಿ ಹಾಕಿದ್ದರು. 2013ರಲ್ಲಿ ಬಿಜೆಪಿ ಒಡಕಿನ ಲಾಭ ಪಡೆದ ಕಾಂಗ್ರೆಸ್‌ನ ಬೈರತಿ ಬಸವರಾಜ ಅವರು ಕ್ಷೇತ್ರವನ್ನು ವಶಕ್ಕೆ ಪಡೆದಿದ್ದರು. 2018ರಲ್ಲೂ ಅದೇ ಫಲಿತಾಂಶ ಮರುಕಳಿಸಿತ್ತು.

ಆದರೆ, ಕಾಂಗ್ರೆಸ್‌ನ ಗೆಲುವಿನ ಅಂತರ ಇನ್ನಷ್ಟು ಹಿಗ್ಗಿತ್ತು. ಕಾಂಗ್ರೆಸ್‌ನ ಭದ್ರಕೋಟೆಯನ್ನು ತನ್ನದೇ ಶಾಸಕ ಛಿದ್ರ ಮಾಡಿದ್ದ ಸೇಡು ತೀರಿಸಿಕೊಳ್ಳಲು ನಾಲ್ಕು ವರ್ಷಗಳಿಂದಲೇ ಯೋಜನೆ ರೂಪಿಸಿದ್ದ ಕಾಂಗ್ರೆಸ್ ಮಾಜಿ ಸಚಿವ ಎ.ಕೃಷ್ಣಪ್ಪ ಅವರ ಅಣ್ಣನ ಮಗ ಡಿ.ಕೆ.ಮೋಹನ್ ಅವರನ್ನು ಬೈರತಿ ವಿರುದ್ಧ ಕಣಕ್ಕೆ ಇಳಿಸಿದೆ. 'ವಿಶ್ವಾಸ ದ್ರೋಹ'ದ ವಿಷಯವನ್ನು ಮತದಾರರ ಮುಂದೆ ಇಟ್ಟು ಮತಯಾಚಿಸುತ್ತಿದೆ.

ಬೈರತಿ ಬಸವರಾಜ

ಡಿ.ಕೆ. ಮೋಹನ್

'ವಿಶ್ವಾಸ ದ್ರೋಹ' ಎನ್ನುವುದು ಕಾಂಗ್ರೆಸ್ ಅಪಪ್ರಚಾರ. 2019ರ ಉಪ ಚುನಾವಣೆಯಲ್ಲೇ ಭಾರಿ ಬಹುಮತಗಳಿಂದ ಗೆಲ್ಲಿಸುವ ಮೂಲಕ ಕ್ಷೇತ್ರದ ಮತದಾರರು ಉತ್ತರ ನೀಡಿದ್ದಾರೆ ಎಂದು ಬಿಜೆಪಿ ತಿರುಗೇಟು ನೀಡುತ್ತಿದೆ.

ಕ್ಷೇತ್ರದಲ್ಲಿ ಆಮ್ ಆದ್ಮಿ ಪಕ್ಷದ ಡಾ.ಕೇಶವಕುಮಾರ್, ಸಿಪಿಐ(ಎಂ)ನ ಎಂ.ಮಂಜೇಗೌಡ, ಸಿಪಿಐ (ಎಂಎಲ್)ನ ಪಿ.ಪಿ.ಅಪ್ಪಣ್ಣ, ಕರ್ನಾಟಕ ರಾಷ್ಟ್ರಸಮಿತಿಯ ಆರೋಗ್ಯಸ್ವಾಮಿ ಸೇರಿದಂತೆ 12 ಅಭ್ಯರ್ಥಿಗಳು ಕಣದಲ್ಲಿದ್ದಾರೆ. ಜೆಡಿಎಸ್ ಸಿಪಿಐ(ಎಂ) ಅಭ್ಯರ್ಥಿಗೆ ಬೆಂಬಲ ಘೋಷಿಸಿರುವುದರಿಂದ ಆ ಪಕ್ಷದ ಆ ಅಭ್ಯರ್ಥಿ ಸಿ.ವೆಂಕಟಾಚಲಪತಿ ತಟಸ್ಥರಾಗಿ ಉಳಿದಿದ್ದಾರೆ. 11 ಅಭ್ಯರ್ಥಿಗಳು ಚುನಾವಣಾ ಪ್ರಚಾರ ಕಾರ್ಯದಲ್ಲಿ ತೊಡಗಿದ್ದರೂ ಕಾಂಗ್ರೆಸ್, ಬಿಜೆಪಿ ಮಧ್ಯೆ ನೇರ ಸ್ಪರ್ಧೆ ಏರ್ಪಟ್ಟಿದೆ.

ಎರಡು ಬಾರಿ ಬೈರತಿ ಬಸವರಾಜಗೆ ಪ್ರತಿಸ್ಪರ್ಧಿಯಾಗಿದ್ದ ನಂದೀಶ್ ರೆಡ್ಡಿ ಅವರ ಪರವಾಗಿ ಪ್ರಚಾರ ಕಾರ್ಯದಲ್ಲಿ ತೊಡಗಿದ್ದಾರೆ. ಆದರೆ, ನಂದೀಶ್ ರೆಡ್ಡಿ ಬೆಂಬಲಿಗರು ಮುಕ್ತವಾಗಿ ಬಿಜೆಪಿ ಅಭ್ಯರ್ಥಿ ಪರ ಕೆಲಸ ಮಾಡುತ್ತಿಲ್ಲ ಎನ್ನುವ ಮಾತುಗಳೂ ಕೇಳಿಬಂದವು.

ಕೆ.ಆರ್.ಪುರ ಕ್ಷೇತ್ರದಲ್ಲಿ ಸಾಕಷ್ಟು ಸಮಸ್ಯೆಗಳು ಜೀವಂತವಾಗಿವೆ. ಆದರೆ, ಸಮಸ್ಯೆಗಳ ವಿರುದ್ಧ ಗಟ್ಟಿಧ್ವನಿಯಲ್ಲಿ ಮಾತನಾಡಲು ಕಾಂಗ್ರೆಸ್ ಹಿಂದೇಟು ಹಾಕುತ್ತಿರುವುದು ಕ್ಷೇತ್ರದಲ್ಲಿ ಕಂಡು ಬಂತು. 2013ರಿಂದ ಈಗಿನ ಬಿಜೆಪಿ ಅಭ್ಯರ್ಥಿಯೇ ಶಾಸಕರಾಗಿದ್ದರೂ, ಅವರು ಕಾಂಗ್ರೆಸ್ ಪ್ರತಿನಿಧಿಯಾಗಿದ್ದರು. ಹಾಗಾಗಿ, ಅವರನ್ನು ಟೀಕಿಸಿದರೆ ಪಕ್ಷ ಟೀಕಿಸಿದಂತೆ ಆಗುತ್ತದೆ ಎನ್ನುವ ಕಾರಣಕ್ಕೆ ಈ ಚುನಾವಣೆಯಲ್ಲಿ ಸಮಸ್ಯೆಗಳು ಪ್ರಧಾನ ವಿಷಯಗಳಾಗಿಲ್ಲ. ಸಂಚಾರ, ರಾಜಕಾಲುವೆ, ಚರಂಡಿ ಸಮಸ್ಯೆ, ಕಾವೇರಿ ನೀರಿನ ಸಂಪರ್ಕ ಸಮಸ್ಯೆಗಳು ಜೀವಂತವಾಗಿದ್ದರೂ ಎರಡೂ ಪಕ್ಷಗಳು ಚಕಾರ ಎತ್ತುತ್ತಿಲ್ಲ. ಶೇ 40 ಭ್ರಷ್ಟಾಚಾರ, ಸ್ಥಳೀಯ ರೌಡಿಸಂ, ಅಗತ್ಯ ವಸ್ತುಗಳ ಬೆಲೆ ಏರಿಕೆ ವಿಷಯಗಳನ್ನು ಕಾಂಗ್ರೆಸ್ ಪ್ರಸ್ತಾಪಿಸುತ್ತಿದೆ. ಬಿಜೆಪಿ ಮೋದಿ, ಕೇಂದ್ರ, ರಾಜ್ಯ ಸರ್ಕಾರಗಳ ಸಾಧನೆಯನ್ನು ಜನರ ಮುಂದಿಟ್ಟಿದೆ.

5,10,591 ಕೆ.ಆರ್.ಪುರ ಕ್ಷೇತ್ರದಲ್ಲಿರುವ ಒಟ್ಟು ಮತದಾರರು

11 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

2,66,236 ಪುರುಷರು

167 ಲೈಂಗಿಕ ಅಲ್ಪಸಂಖ್ಯಾತರು

2,44,188 ಮಹಿಳೆಯರು

ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018	2019
ಕೆ.ಆರ್.ಪುರ	ಬಿಜೆಪಿ	ಕಾಂಗ್ರೆಸ್	ಕಾಂಗ್ರೆಸ್	ಬಿಜೆಪಿ

ಸಾಕ್ಷಾತ್ ಸಮೀಕ್ಷೆ

ಬಿಜೆಪಿ, ಕಾಂಗ್ರೆಸ್ ನಡುವೆ ಸಮಬಲದ ಹೋರಾಟ: ಪಕ್ಷೇತರ ಅಭ್ಯರ್ಥಿಯ ಸವಾಲು

ಚಿಕ್ಕಪೇಟೆ ಕ್ಷೇತ್ರದಲ್ಲಿ 'ಪಟ್ಟ'ಕ್ಕೆ ಬಿರುಸಿನ ಕಾದಾಟ

• ಆದಿತ್ಯ ಕೆ.ಎ.

ಬೆಂಗಳೂರು: ಹೆಸರು 'ಚಿಕ್ಕ'ಪೇಟೆ ಆಗಿದ್ದರೂ ಕ್ಷೇತ್ರ ವಶಕ್ಕೆ ಕೋಟಿ ಕುಳಗಳ ನಡುವೆ 'ದೊಡ್ಡ ಕಾದಾಟ'ವೇ ನಡೆಯುತ್ತಿದೆ.

ಜವಳಿ ವ್ಯಾಪಾರಕ್ಕೆ ಪ್ರಸಿದ್ಧಿ ಪಡೆದಿರುವ ಚಿಕ್ಕಪೇಟೆಯಲ್ಲಿ ಹೊರರಾಜ್ಯದಿಂದ 'ವಲಸೆ' ಬಂದಿರುವ ಬಹುಭಾಷಿಕರು ಹೆಚ್ಚಿನ ಸಂಖ್ಯೆಯಲ್ಲಿ ನೆಲೆಸಿದ್ದಾರೆ. ಇವರು ಕ್ಷೇತ್ರದ ಫಲಿತಾಂಶದ ಮೇಲೆ ನಿರ್ಣಾಯಕ ಪಾತ್ರ ವಹಿಸಲಿದ್ದಾರೆ. ಅವರನ್ನು ಸೆಳೆಯುವ ಪ್ರಯತ್ನಗಳು ಭರ್ಜರಿಯಾಗಿ ಸಾಗುತ್ತಿವೆ.

ಗಾಂಧಿನಗರ ವಿಧಾನಸಭಾ ಕ್ಷೇತ್ರದ ಆಸುಪಾಸಿನಲ್ಲಿರುವ ಚಿಕ್ಕಪೇಟೆಯಲ್ಲಿ ಬಿಜೆಪಿಯಿಂದ ಹಾಲಿ ಶಾಸಕ ಉದಯ್ ಬಿ. ಗರುಡಾಚಾರ್, ಕಾಂಗ್ರೆಸ್‌ನಿಂದ ಆರ್.ವಿ.ದೇವರಾಜ್, ಪಕ್ಷೇತರ ಅಭ್ಯರ್ಥಿಯಾಗಿ ಕೆಜಿಎಫ್ ಬಾಬು ಸ್ಪರ್ಧಿಸಿದ್ದಾರೆ. ಮೂವರು ಕೋಟಿ ಕುಳಗಳೇ. ಇವರ ನಡುವೆಯೇ ಸಮಬಲದ ಪೈಪೋಟಿಯಿದೆ.

ಚಾಮರಾಜಪೇಟೆ ಕ್ಷೇತ್ರದ ಟಿಕೆಟ್ ನಿರೀಕ್ಷೆಯಲ್ಲಿದ್ದ ಇಮ್ರಾನ್ ಪಾಷಾ ಅವರನ್ನು ಜೆಡಿಎಸ್ ಚಿಕ್ಕಪೇಟೆಗೆ ವಲಸೆ ಕಳುಹಿಸಿದೆ. ಕಾಂಗ್ರೆಸ್ ತೊರೆದು ಆಮ್ ಆದ್ಮಿ ಪಕ್ಷ (ಎಎಪಿ) ಸೇರಿದ್ದ ಸುಪ್ರೀಂ ಕೋರ್ಟ್ ವಕೀಲ ಬ್ರಿಜೇಶ್ ಕಾಳಪ್ಪ ಅವರು ಎಎಪಿ ಅಭ್ಯರ್ಥಿ.



ಉದಯ್ ಗರುಡಾಚಾರ್

ದೇವರಾಜ್

ಕೆಜಿಎಫ್ ಬಾಬು

ಬ್ರಿಜೇಶ್ ಕಾಳಪ್ಪ

ಇಮ್ರಾನ್ ಪಾಷಾ

ಮೇಲ್ನೋಟಕ್ಕೆ ಕಾಂಗ್ರೆಸ್, ಬಿಜೆಪಿ ನಡುವೆ ನೇರ ಹಣಾಹಣಿಯಂತೆ ಕಂಡುಬಂದರೂ ಯುಸೂಫ್ ಷರೀಫ್ ಅಲಿಯಾಸ್ ಕೆಜಿಎಫ್ ಬಾಬು ಫಲಿತಾಂಶವನ್ನು ಉಲ್ಟಾ ಮಾಡುವ ತಾಕತ್ತು ಹೊಂದಿದ್ದಾರೆ ಎಂದೇ ವಿಶ್ಲೇಷಿಸಲಾಗುತ್ತಿದೆ.

ಕಾಂಗ್ರೆಸ್ ಟಿಕೆಟ್ ನಿರೀಕ್ಷೆಯಲ್ಲಿ ಬಾಬು ಕ್ಷೇತ್ರದಲ್ಲಿ 'ಬಂಡವಾಳ' ಹೂಡಿದ್ದರು. ವರ್ಷದಿಂದ ಮತದಾರ ಮನವೊಲಿಕೆ ಕಸರತ್ತು ನಡೆಸಿದ್ದರು. ಕಾಂಗ್ರೆಸ್ ಟಿಕೆಟ್ ತಪ್ಪಿದ್ದರಿಂದ ಪಕ್ಷಕ್ಕೆ ರಾಜೀನಾಮೆ ನೀಡಿ, ಪಕ್ಷೇತರವಾಗಿ ಸ್ಪರ್ಧಿಸಿದ್ದಾರೆ. ಇದು 'ಕೈ' ಅಭ್ಯರ್ಥಿಯ ಆತಂಕ ಹೆಚ್ಚಿಸಿದೆ.

ಉದಯ್ ಗರುಡಾಚಾರ್ ಅವರು 2ನೇ ಬಾರಿಗೆ 'ಅದೃಷ್ಟ ಪರೀಕ್ಷೆ'ಗೆ ಇಳಿದಿದ್ದಾರೆ. 2013ರ ಚುನಾವಣೆಯಲ್ಲಿ ಆರ್.ವಿ.ದೇವರಾಜ್ ವಿರುದ್ಧವೇ ಉದಯ್ ಸೋಲು ಕಂಡಿದ್ದರು. 2018ರಲ್ಲಿ ದೇವರಾಜ್ ಅವರನ್ನು ಮಣಿಸಲು ಯಶಸ್ವಿ ಆಗಿದ್ದರು. ಮತ್ತೆ ಇವರ ನಡುವೆಯೇ ಹೋರಾಟ ನಡೆಯುತ್ತಿದೆ.

'ಕೋವಿಡ್–19ನಿಂದ ಕೆಲಸ ಮಾಡಲು ಹೆಚ್ಚಿನ ಸಮಯ ಸಿಗಲಿಲ್ಲ. ಸಿಕ್ಕಷ್ಟು ಸಮಯದಲ್ಲೇ ಮೂಲಸೌಕರ್ಯದ ಕಾಮಗಾರಿ ಪೂರ್ಣಗೊಳಿಸಿದ್ದೇನೆ. ಮತ್ತೆ ಅವಕಾಶ ಸಿಕ್ಕರೆ ಕ್ಷೇತ್ರದ ಸ್ಥಿತಿ ಬದಲಿಸುತ್ತೇನೆ. ನನ್ನ ಅವಧಿಯಲ್ಲಿ ಕ್ಷೇತ್ರವನ್ನು ಶಾಂತಿ, ಸಹಬಾಳ್ವೆಗೆ ಕೊಂಡೊಯ್ಯುವ ಪ್ರಯತ್ನ ನಡೆಸಿದ್ದೇನೆ. ಒಂದೇ ಸಣ್ಣ ಘರ್ಷಣೆಯೂ ನಡೆದಿಲ್ಲ' ಎಂದು ಹೇಳುತ್ತಲೇ ಉದಯ್ ಮತ ಸೆಳೆಯುತ್ತಿದ್ದಾರೆ.

ಚಾಮರಾಜಪೇಟೆ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿದ್ದ ಆರ್.ವಿ.ದೇವರಾಜ್ ಎರಡು ಬಾರಿ ಗೆದ್ದಿದ್ದರು. ಬಳಿಕ ಚಿಕ್ಕಪೇಟೆಯಲ್ಲಿ (2008) ಬಿಜೆಪಿಯ ಡಾ.ಹೇಮಚಂದ್ರ ಸಾಗರ್ ವಿರುದ್ಧ ಸೋತಿದ್ದರು. ಉದಯ್ ವಿರುದ್ಧ ದೇವರಾಜ್ ಒಮ್ಮೆ ಸೋತು ಮತ್ತೊಮ್ಮೆ ಜಯಿಸಿದ್ದಾರೆ.

'ಕಲಾಸಿಪಾಳ್ಯ ಬಸ್ ನಿಲ್ದಾಣ, ಬೆಂಗಳೂರು ವೈದ್ಯಕೀಯ ಕಾಲೇಜು ಅಭಿವೃದ್ಧಿ, ಕೆಂಪಾಬುದಿ ಕೆರೆ ಹಾಗೂ ಭೈರಸಂದ್ರ ಕೆರೆಗಳ ಅಭಿವೃದ್ಧಿಗಳು ನನ್ನ ಅವಧಿಯಲ್ಲೇ ಆಗಿವೆ' ಎಂದು ಅಭಿವೃದ್ಧಿ ಮಂತ್ರ ಜಪಿಸುತ್ತಲೇ ದೇವರಾಜ್ ಪ್ರಚಾರ ನಡೆಸುತ್ತಿದ್ದಾರೆ. ಜೆಡಿಎಸ್ ಹಾಗೂ ಎಎಪಿ ಅಭ್ಯರ್ಥಿಗಳೂ ಸವಾಲು ಹಾಕುತ್ತಿದ್ದಾರೆ.

ರಾಜಸ್ಥಾನ, ಗುಜರಾತ್‌ನಿಂದ ಬಂದಿರುವ ವ್ಯಾಪಾರಸ್ಥರು, ತಮಿಳು ಹಾಗೂ ತೆಲುಗು ಭಾಷಿಕರೂ ಕ್ಷೇತ್ರದಲ್ಲಿ ನೆಲೆಸಿದ್ದಾರೆ. ಒಕ್ಕಲಿಗರು, ಪರಿಶಿಷ್ಟರು, ಮುಸ್ಲಿಮರೂ ಇದ್ದಾರೆ. ಇಂದಿಗೂ ಕೊಳೆಗೇರಿಗಳೂ ಅಭಿವೃದ್ಧಿ ಕಂಡಿಲ್ಲ. ಪಾರಂಪರಿಕ ಕಟ್ಟಡಗಳು ಮಂಕಾಗಿವೆ. ಜನದಟ್ಟಣೆ, ವಾಹನ ದಟ್ಟಣೆಯಿಂದ ಜನರು ನಿತ್ಯ ಸಮಸ್ಯೆ ಎದುರಿಸುತ್ತಿದ್ದಾರೆ. ಅದು ಹೆಚ್ಚು ಚರ್ಚೆಯಾಗುತ್ತಿಲ್ಲ.

'ಕ್ಷೇತ್ರದಲ್ಲಿ ಜಾತಿ ಸಮೀಕರಣಕ್ಕಿಂತ ಅಭ್ಯರ್ಥಿಗಳ ವೈಯಕ್ತಿಕ ವರ್ಚಸ್ಸಿನ ಮೇಲೆಯೇ ಫಲಿತಾಂಶ ನಿರ್ಧಾರ ಆಗಿರುವುದು ಈ ಹಿಂದಿನ ಚುನಾವಣೆಗಳಲ್ಲಿ ಸಾಬೀತಾಗಿದೆ. ಈ ಬಾರಿಯೂ ಅದೇ ರೀತಿಯಲ್ಲಿ ಫಲಿತಾಂಶ ಹೊರಹೊಮ್ಮುವ ಸಾಧ್ಯತೆಯಿದೆ' ಎಂದು ಮತದಾರರು ಹೇಳುತ್ತಾರೆ.

2,21,208 ಚಿಕ್ಕಪೇಟೆ ಕ್ಷೇತ್ರದಲ್ಲಿರುವ ಒಟ್ಟು ಮತದಾರರು

15 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

1,12,769 ಪುರುಷರು

19 ಲೈಂಗಿಕ ಅಲ್ಪಸಂಖ್ಯಾತರು

1,08,420 ಮಹಿಳೆಯರು

ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಚಿಕ್ಕಪೇಟೆ	ಬಿಜೆಪಿ	ಕಾಂಗ್ರೆಸ್	ಬಿಜೆಪಿ

11,461 ಮಂದಿ ಮನೆಯಿಂದ ಮತದಾನ

ಬೆಂಗಳೂರು: 11,461 ಮಂದಿ ಹಿರಿಯ ನಾಗರಿಕರು ಮತ್ತು ಅಂಗವಿಕಲರು ಬುಧವಾರ ಮನೆಗಳಿಂದಲೇ ಮತ ಚಲಾಯಿಸಿದ್ದಾರೆ.

80 ವರ್ಷ ಮತ್ತು ಅದಕ್ಕಿಂತ ಹೆಚ್ಚು ವಯಸ್ಸಾದವರು ಹಾಗೂ ಅಂಗವಿಕಲರಿಗೆ ಮನೆಯಿಂದಲೇ ಅವಕಾಶ ಕಲ್ಪಿಸಲಾಗಿದೆ. ಏಪ್ರಿಲ್ 29ರಿಂದ ಆರಂಭವಾದ ಈ ಪ್ರಕ್ರಿಯೆ ಮೇ 6ಕ್ಕೆ ಕೊನೆಗೊಳ್ಳಲಿದೆ.

99,529 ಮಂದಿ ಮನೆಯಿಂದ ಮತದಾನಕ್ಕೆ ನೋಂದಾಯಿಸಿಕೊಂಡಿದ್ದರು. ಐದು ದಿನಗಳಲ್ಲಿ ಒಟ್ಟು 88,670 ಜನರು ಮನೆಗಳಿಂದಲೇ ಮತ ಚಲಾಯಿಸಿದ್ದಾರೆ.

'ಬುಧವಾರ 125 ಮತಗಟ್ಟೆ ತಂಡಗಳು 125 ಮಾರ್ಗಗಳಲ್ಲಿ ಸಂಚರಿಸಿವೆ. 11,461 ಮಂದಿ ಮತ ಚಲಾಯಿಸಿದ್ದಾರೆ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಹಳೆ ಗೆಳೆಯರ ಪ್ರತಿಷ್ಠೆಯ ಆರ್.ಆರ್.ನಗರ

• ವಿಜಯಕುಮಾರ್ ಎಸ್.ಕೆ.

ಮುನಿರತ್ನ

ಕುಸುಮಾ


ನಾರಾಯಣಸ್ವಾಮಿ

4,85,772 ರಾಜರಾಜೇಶ್ವರಿನಗರ ಕ್ಷೇತ್ರದಲ್ಲಿರುವ ಒಟ್ಟು ಮತದಾರರು

2,50,503 ಪುರುಷರು

80 ಲೈಂಗಿಕ ಅಲ್ಪಸಂಖ್ಯಾತರು

2,35,189 ಮಹಿಳೆಯರು

14 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

ರಾಜರಾಜೇಶ್ವರಿನಗರ

ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018	2020 (ಉಪಚುನಾವಣೆ)
ರಾಜರಾಜೇಶ್ವರಿನಗರ	ಬಿಜೆಪಿ	ಕಾಂಗ್ರೆಸ್	ಕಾಂಗ್ರೆಸ್	ಬಿಜೆಪಿ

ಬೆಂಗಳೂರು: ರಾಜರಾಜೇಶ್ವರಿನಗರ ಕ್ಷೇತ್ರ ಎಂದರೆ ಈಗ ಹಳೆಯ ಸ್ನೇಹಿತರ ನಡುವೆ ನಡೆಯುತ್ತಿರುವ ಜಿದ್ದಾಜಿದ್ದಿಯ ಹೋರಾಟ. ಮೂರು ಬಾರಿ ಗೆಲುವು ಕಂಡಿರುವ ಮುನಿರತ್ನ ಅವರ ವಿರುದ್ಧ ಕುಸುಮಾ ಹನುಮಂತರಾಯಪ್ಪ ಸೆಣ-ಸುತ್ತಿದ್ದರೆ, ಅವರ ಬೆನ್ನಿಗೆ ಡಿ.ಕೆ. ಸುರೇಶ್ ನಿಂತಿರುವುದು ಪ್ರಬಲ ಪೈಪೋಟಿಗೆ ಕಾರಣವಾಗಿದೆ.

ಜಾಲಹಳ್ಳಿ ವಿಲೇಜ್, ಬಾಹುಬಲಿ ನಗರ, ಮತ್ತಿಕೆರೆ, ಜೆ.ಪಿ.ಪಾರ್ಕ್, ಯಶವಂತಪುರ, ಲಕ್ಷ್ಮಿದೇವಿನಗರ, ಪೀಣ್ಯ, ಲಗ್ಗೆರೆ, ಮಲ್ಲತ್ತಹಳ್ಳಿ, ಕೊಟ್ಟಿಗೆಪಾಳ್ಯ, ಕೆಂಗುಂಟೆ, ಜ್ಞಾನ ಭಾರತಿ, ರಾಜರಾಜೇಶ್ವರಿನಗರವನ್ನು ಒಳಗೊಂಡ ವಿಶಾಲವಾದ ಕ್ಷೇತ್ರ ಇದು. ಪೀಣ್ಯ ಕೈಗಾರಿಕಾ ಪ್ರದೇಶಕ್ಕೆ ಹೊಂದಿಕೊಂಡಂತೆ ಇರುವ ಬಡಾವಣೆಗಳು ಹೆಚ್ಚಿನ ಸಂಖ್ಯೆಯಲ್ಲಿ ಕಾರ್ಮಿಕ ಸಮುದಾಯವನ್ನು ಹೊಂದಿವೆ.

ಅತೀ ಹೆಚ್ಚು ಮತದಾರರನ್ನು ಹೊಂದಿರುವ ಬೆಂಗಳೂರಿನ ಐದು ಕ್ಷೇತ್ರಗಳಲ್ಲಿ ಇದೂ ಒಂದು. ಮೂಲ ಬೆಂಗಳೂರು ಮತ್ತು ವಲಸಿಗರೊಂದಿಗೆ ಮಿಶ್ರಣಗೊಂಡಿರುವ ಕ್ಷೇತ್ರದಲ್ಲಿ ಉಡುಗೊರೆ ರಾಜಕಾರಣ ಪ್ರತಿಬಾರಿಯೂ ಸದ್ದು ಮಾಡುತ್ತದೆ.

ಕಾಂಗ್ರೆಸ್ ತೆಕ್ಕೆಯಿಂದ ಬಿಜೆಪಿಗೆ ಹೊರಳಿರುವ ಕ್ಷೇತ್ರದಲ್ಲಿ ಮುನಿರತ್ನ ಹಿಡಿತ ಹೊಂದಿದ್ದಾರೆ. ಬೆಂಗಳೂರು ಗ್ರಾಮಾಂತರ ಲೋಕಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿರುವ ಈ ಕ್ಷೇತ್ರದಲ್ಲಿ 2013ರಿಂದ ಈವರೆಗೆ ನಡೆದಿರುವ ಮೂರು ಚುನಾವಣೆಯಲ್ಲಿ ಮುನಿರತ್ನ ಸತತ ಗೆಲುವು ಸಾಧಿಸಿದ್ದಾರೆ. ಜೆಡಿಎಸ್-ಕಾಂಗ್ರೆಸ್ ಸಮ್ಮಿಶ್ರ ಸರ್ಕಾರ ಉರುಳಿಸಲು 2019ರಲ್ಲಿ ಬಿಜೆಪಿ ನಡೆಸಿದ 'ಆಪರೇಷನ್ ಕಮಲ'ದಲ್ಲಿ ರಾಜೀನಾಮೆ ನೀಡಿ ಬಿಜೆಪಿಗೆ ಜಿಗಿದರು. ಎರಡು ಬಾರಿ ಕಾಂಗ್ರೆಸ್‌ನಿಂದ ಗೆದ್ದಿದ್ದ ಮುನಿರತ್ನ, ಮೂರನೇ ಬಾರಿ ಬಿಜೆಪಿಯಿಂದ ಗೆದ್ದರು.

ಮುನಿರತ್ನ ಕಾಂಗ್ರೆಸ್ ತೊರೆದ ದಿನದಿಂದಲೇ ಅವರ ವಿರುದ್ಧ ಎದುರಾಳಿಯಾಗಲು ಕುಸುಮಾ ಹನುಮಂತರಾ-ಯಪ್ಪ(ಡಿ.ಕೆ.ರವಿ ಪತ್ನಿ) ಸಜ್ಜಾದರು. ಉಪಚುನಾವಣೆಯಲ್ಲಿ ಸ್ಪರ್ಧೆ ಮಾಡಿ 67,877 ಮತಗಳನ್ನೂ ಪಡೆದರು. 58 ಸಾವಿರಕ್ಕೂ ಹೆಚ್ಚು ಮತಗಳ ಅಂತರದಿಂದ ಸೋತರು. ಆದರೂ, ಕ್ಷೇತ್ರದಲ್ಲಿ ಇನ್ನಷ್ಟು ಸುತ್ತಾಡಿ ಮತದಾರರ ಮನಗೆಲ್ಲುವ ಪ್ರಯತ್ನ ಮಾಡುತ್ತಿದ್ದಾರೆ. ಮನೆ-ಮನೆಗಳಿಗೆ ತೆರಳಿ ಮತದಾರರ ಕಾಲಿಗೆರಗಿ, ಕೈಮುಗಿದು ಬೆಂಬಲ ಕೋರುತ್ತಿದ್ದಾರೆ.

ಕಾಂಗ್ರೆಸ್‌ನಲ್ಲಿದ್ದಾಗ ಮುನಿರತ್ನ ಬೆನ್ನಿಗೆ ನಿಲ್ಲುತ್ತಿದ್ದ ಡಿ.ಕೆ.ಶಿವಕುಮಾರ್ ಮತ್ತು ಡಿ.ಕೆ.ಸುರೇಶ್, ಈಗ ಅವರನ್ನು ಸೋಲಿಸಲು ಟೊಂಕಕಟ್ಟಿ ನಿಂತಿದ್ದಾರೆ. ಅದರಲ್ಲೂ ಡಿ.ಕೆ.ಸುರೇಶ್ ಅವರು ಈ ಚುನಾವಣೆಯನ್ನು ಪ್ರತಿಷ್ಠೆಯಾಗಿ ತೆಗೆದುಕೊಂಡಿದ್ದಾರೆ. ಜಾತಿಯನ್ನೂ ಮೀರಿ ಕ್ಷೇತ್ರದ ಹಿಡಿತವನ್ನು ಮುನಿರತ್ನ ಹೊಂದಿದ್ದಾರೆ. ಆದರೂ ಒಕ್ಕಲಿಗ ಸಮುದಾಯದ ಮತ ಹೆಚ್ಚಿರುವ ಕ್ಷೇತ್ರದಲ್ಲಿ ಕುಸುಮಾ ಅವರನ್ನು ಗೆಲ್ಲಿಸ-ಲೇಬೇಕೆಂಬ ಛಲವನ್ನು ಡಿ.ಕೆ.ಸುರೇಶ್ ತೊಟ್ಟಿದ್ದಾರೆ. ಒಂದೇ ಗರಡಿಯಲ್ಲಿ ತಂತ್ರಗಳನ್ನು ರೂಪಿಸುತ್ತಿದ್ದವರು ಈಗ ಎದುರಾಗಿದ್ದಾರೆ. ಅಭಿವೃದ್ಧಿ ಕಾಮಗಾರಿ ಮತ್ತು ಕಾರ್ಯಕರ್ತರ ಪಡೆ ಕೈ ಹಿಡಿಯುವ ವಿಶ್ವಾಸದಲ್ಲಿ ಮುನಿರತ್ನ ಇದ್ದಾರೆ. ಆಡಳಿತ ವಿರೋಧಿ ಅಲೆ ಮತ್ತು ಅನುಕಂಪ ಕೈ ಹಿಡಿಯುವ ವಿಶ್ವಾಸದಲ್ಲಿ ಕುಸುಮಾ ಇದ್ದಾರೆ. ಮೇಲ್ನೋಟಕ್ಕೆ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆಯೇ ನೇರ ಹಣಾಹಣಿ ಕಂಡುಬರುತ್ತಿದೆ.

ಇನ್ನೊಂದೆಡೆ ಜೆಡಿಎಸ್‌ನಿಂದ ಡಾ.ನಾರಾಯಣಸ್ವಾಮಿ ಅವರು ಸ್ಪರ್ಧೆ ಮಾಡಿದ್ದಾರೆ. 'ಸಜ್ಜನ ರಾಜಕಾರಣಿಯಾಗಿರುವ ನಾರಾಯಣಸ್ವಾಮಿ ಅವರೇ ನನಗೆ ಪ್ರತಿಸ್ಪರ್ಧಿ' ಎಂದು ಮುನಿರತ್ನ ಹೇಳುತ್ತಿದ್ದಾರೆ.

2013ರಲ್ಲಿ ಎರಡನೇ ಸ್ಥಾನದಲ್ಲಿದ್ದ ಜೆಡಿಎಸ್, 2018ರಲ್ಲಿ ಮೂರನೇ ಸ್ಥಾನಕ್ಕೆ ಹೋಗಿತ್ತು. ಆದರೂ, 60 ಸಾವಿರಕ್ಕೂ ಹೆಚ್ಚು ಮತಗಳನ್ನು ಪಡೆದಿತ್ತು. 2020ರ ಉಪ ಚುನಾವಣೆಯಲ್ಲಿ 10,269 ಮತಗಳಿಗೆ ಸೀಮಿತವಾಯಿತು. ಈ ಬಾರಿ ನಾರಾಯಣಸ್ವಾಮಿ ಸ್ಪರ್ಧೆಯಲ್ಲಿದ್ದಾರೆ. ಜೆಡಿಎಸ್ ಪಂಚರತ್ನ ಯೋಜನೆಗಳು, ಎಚ್.ಡಿ.ಕುಮಾರಸ್ವಾಮಿ ಮತ್ತು ದೇವೇಗೌಡರ ಮೇಲಿನ ಅಭಿಮಾನ ಜೆಡಿಎಸ್‌ಗೆ ವರವಾಗಲಿದೆ ಎಂಬ ಲೆಕ್ಕಾಚಾರದಲ್ಲಿ ನಾರಾಯಣಸ್ವಾಮಿ ಇದ್ದಾರೆ.

ಸಾಕ್ಷಾತ್ ಸಮೀಕ್ಷೆ

ಬಿಟಿಎಂ ಲೇಔಟ್: ಎಂಟರ ಗಂಟಿಗೆ ಹೊಸ ಮುಖಗಳ ಪೈಪೋಟಿ

• ಆರ್. ಮಂಜುನಾಥ್


ರಾಮಲಿಂಗಾ ರೆಡ್ಡಿ

ಕೆ.ಆರ್. ಶ್ರೀಧರ ರೆಡ್ಡಿ

2,75,028 ಬಿಟಿಎಂ ಲೇಔಟ್ ಕ್ಷೇತ್ರದಲ್ಲಿರುವ ಒಟ್ಟು ಮತದಾರರು

1,43,266 ಪುರುಷರು

45 ಲೈಂಗಿಕ ಅಲ್ಪಸಂಖ್ಯಾತರು

1,31,717 ಮಹಿಳೆಯರು

12 ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳು

ಬಿಟಿಎಂ ಲೇಔಟ್

ಫಲಿತಾಂಶದ ಹಿನ್ನೋಟ

ಕ್ಷೇತ್ರ	2008	2013	2018
ಬಿಟಿಎಂ ಲೇಔಟ್	ಕಾಂಗ್ರೆಸ್	ಕಾಂಗ್ರೆಸ್	ಕಾಂಗ್ರೆಸ್

ಬೆಂಗಳೂರು: ಬಿಟಿಎಂ ಲೇಔಟ್ ವಿಧಾನಸಭೆ ಕ್ಷೇತ್ರ ರಚನೆಯಾಗುವ ಮೊದಲಿನಿಂದಲೂ ಆ ವ್ಯಾಪ್ತಿಯಲ್ಲಿ ನಾಲ್ಕು ಬಾರಿ 'ಜಯನಗರ' ಶಾಸಕರಾಗಿದ್ದ ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ ಅವರು, ಬಿಟಿಎಂ ಲೇಔಟ್ ಕ್ಷೇತ್ರದಲ್ಲೂ ಹ್ಯಾಟ್ರಿಕ್ ಸಾಧಿಸಿದ್ದಾರೆ. ಇದೀಗ ಎಂಟನೇ ಬಾರಿ ಶಾಸಕರಾಗಲು ಹೊರಟಿರುವ ಅವರಿಗೆ ಬಿಜೆಪಿ, ಜೆಡಿಎಸ್ ಮತ್ತೆ ಹೊಸ ಮುಖದೊಂದಿಗೆ ಪೈಪೋಟಿ ನೀಡುತ್ತಿವೆ.

ಕಾಂಗ್ರೆಸ್‌ನಿಂದಲೇ ಬೆಂಗಳೂರು ನಗರ ಪಾಲಿಕೆ ಸದಸ್ಯರಾಗಿ ಏಳು ಬಾರಿ ಶಾಸಕರಾಗಿ ಬೆಂಗಳೂರು ಮಟ್ಟಿಗೆ ದಾಖಲೆ ಹೊಂದಿರುವ ರಾಮಲಿಂಗಾರೆಡ್ಡಿ ಅವರು, 'ತಮ್ಮ ಕ್ಷೇತ್ರದಲ್ಲಿ ಎಲ್ಲ ರೀತಿಯ ಕೆಲಸಗಳನ್ನು ಮಾಡಲಾಗಿದೆ. ನಾಗರಿಕರಿಗೆ ಅಗತ್ಯವಾದ ಸೌಲಭ್ಯಗ-ಳನ್ನು ನೀಡಲಾಗಿದೆ. ಮಳೆ ನೀರಿನಲ್ಲಿ ಪ್ರದೇಶ ಮುಳುಗಡೆ, ಮೇಲ್ಸೇತುವೆ-ಯಂತಹ ಒಂದರೆಡು ಕೆಲಸಗಳಷ್ಟೇ ಬಾಕಿ' ಎಂದೂ ಹೇಳುತ್ತಾರೆ. ಆದರೆ, ಪ್ರತಿಪಕ್ಷಗಳು ಇದಕ್ಕೆ ವಿರುದ್ಧವಾಗಿಯೇ ಮಾತನಾಡುತ್ತಿವೆ. ಮೂಲ ಸೌಕರ್ಯವಿಲ್ಲ, ಕಸ, ಚರಂಡಿ, ರಸ್ತೆ ಸಮಸ್ಯೆ ಎಂದು ಪಾಲಿಕೆ ಮಟ್ಟದ ಕೆಲಸಗಳೇ ಆಗಿಲ್ಲವೆಂಬುದು ಆರೋಪ.

ಈ ಕ್ಷೇತ್ರದಲ್ಲಿ, ಪ್ರತಿ ಚುನಾವಣೆಯಲ್ಲೂ ವಿರೋಧ ಪಕ್ಷದ ಅಭ್ಯರ್ಥಿಗಳು ಬದಲಾಗುತ್ತಲೇ ಬಂದಿದ್ದಾರೆ. ಇದು ಕಾರ್ಯಕರ್ತರನ್ನು ಒಟ್ಟುಗೂಡಿಸುವಲ್ಲಿ ಒಂದು ರೀತಿಯ ಹಿನ್ನಡೆಯೂ ಆಗಿದೆ. ಕಾಂಗ್ರೆಸ್ ಈ ಕ್ಷೇತ್ರದಲ್ಲಿ ಪ್ರಮುಖ ಎದುರಾಳಿಯಾಗಿ-ರುವ ಬಿಜೆಪಿ, ಹೊಸ ಅಭ್ಯರ್ಥಿಯನ್ನೇ ಕಣಕ್ಕಿಳಿಸುತ್ತಿದೆ. 2008ರಲ್ಲಿ ಪ್ರಸಾದ್ ರೆಡ್ಡಿ ತೀವ್ರ ಪೈಪೋಟಿ ನೀಡಿ 1,857 ಮತಗಳಿಂದ ಸೋತಿದ್ದರು. ಅದರ ನಂತರದ ಎರಡು ಚುನಾವಣೆಯಲ್ಲಿ ಬಿಜೆಪಿಯ ಎನ್. ಸುಧಾಕರ್, ಲಲ್ಲೇಶ್ ರೆಡ್ಡಿ ಹೆಚ್ಚು ಅಂತರದಿಂದ ಸೋಲು ಅನುಭವಿಸಿದರು. ಜೆಡಿಎಸ್ ಕೂಡ ಅಭ್ಯರ್ಥಿಗಳನ್ನು ಪ್ರತಿಬಾರಿ ಬದಲಿಸುತ್ತಿದೆ. ಇದು ಕಾರ್ಯಕರ್ತರ ಸಂಘಟನೆಗೆ ತೊಡಕಾಗಿರುವುದು ಕ್ಷೇತ್ರದಲ್ಲಿ ಸ್ಪಷ್ಟವಾಗಿ ಕಾಣುತ್ತಿದೆ.

ಬಿಜೆಪಿ ಈ ಬಾರಿ ಕೆ.ಆರ್. ಶ್ರೀಧರ ರೆಡ್ಡಿ ಅವರನ್ನು ಕಣಕ್ಕಿಳಿಸಿದೆ. ಸ್ಥಳೀಯ ಕಾರ್ಯಕರ್ತರಿಗೆ ಹೆಚ್ಚಿನ ಪರಿಚಯವಿಲ್ಲದ ಶ್ರೀಧರ ಅವರು ನಾಮಪತ್ರ ಸಲ್ಲಿಸಿದ ನಂತರ ಸಾಕಷ್ಟು ಬೆವರು ಹರಿಸುತ್ತಿದ್ದಾರೆ. ಬಿಜೆಪಿಯ ರಾಷ್ಟ್ರೀಯ ಮುಖಂಡರು ಇಲ್ಲಿ ಪ್ರಚಾರ ನಡೆಸುತ್ತಿದ್ದರೂ ಕಾಂಗ್ರೆಸ್ ಕಾರ್ಯಕರ್ತರ ಹುಮ್ಮಸ್ಸಿಗೆ ಧಕ್ಕೆಯಾಗಿಲ್ಲ.

ರಾಮಲಿಂಗಾರೆಡ್ಡಿ ಅವರು ಕ್ಷೇತ್ರದಲ್ಲಿ ತಾವು ಮಾಡಿರುವ ಅಭಿವೃದ್ಧಿ ಕಾರ್ಯಗಳನ್ನೇ ಮುಂದಿಟ್ಟುಕೊಂಡು ಪ್ರಚಾರ ಮಾಡುತ್ತಿದ್ದಾರೆ. ಬಿಜೆಪಿಯ ಶ್ರೀಧರ ಅವರು ರಾಜ್ಯ ಹಾಗೂ ಕೇಂದ್ರ ಸರ್ಕಾರಗಳ ಯೋಜನೆಯನ್ನು ಜನರ ಮುಂದಿಡುತ್ತಿದ್ದಾರೆ.

ವೈಯಕ್ತಿಕ ವರ್ಚಸ್ಸು ಹಾಗೂ ದೀರ್ಘಕಾಲದ ಜನರೊಂದಿಗೆ ಬೆರೆತಿರುವ ಕಾಂಗ್ರೆಸ್‌ನ ರಾಮಲಿಂಗಾರೆಡ್ಡಿ ಅವರಿಗೆ ಅಭಿವೃದ್ಧಿ ಹಾಗೂ ಸ್ವಚ್ಛತೆಯ ವಿಚಾರಗಳನ್ನು ಮುಂದಿಟ್ಟುಕೊಂಡು ಬಿಜೆಪಿಯ ಶ್ರೀಧರ ರೆಡ್ಡಿ ಅವರು ಪೈಪೋಟಿ ನೀಡುತ್ತಿದ್ದಾರೆ. ಇದಕ್ಕೆ ಮತದಾರರ ಸ್ಪಂದನೆ ಪ್ರಚಾರದ ಬಿರುಸಿಗೆ ತಕ್ಕನಾಗಿ ಇಲ್ಲ.

ಜೆಡಿಎಸ್‌ನ ಎಂ. ವೆಂಕಟೇಶ ದೇವೇಗೌಡ ಅವರು 2016ರಿಂದ ಕ್ಷೇತ್ರದ ಪಕ್ಷದ ಅಧ್ಯಕ್ಷನಾಗಿ ಕೆಲಸ ಮಾಡಿ ಸಂಘಟನೆ ಮಾಡಿರುವ ಅನುಭವ ಹೊಂದಿದ್ದರೂ, ಜಯಕ್ಕೆ ಬೇಕಾದ ಮತಗಳು ಅವರಿಗೆ ಸುಲಭವಾಗಿ ಸಿಗುವ ಲಕ್ಷಣಗಳೇನೂ ಗೋಚರಿಸುತ್ತಿಲ್ಲ. ಆಮ್ ಆದ್ಮಿ ಪಾರ್ಟಿಯಿಂದ ಶ್ರೀನಿವಾಸ ರೆಡ್ಡಿ ಅವರು ಮತದಾರರನ್ನು ಸೆಳೆಯುವ ಪ್ರಯತ್ನ ಮಾಡುತ್ತಿದ್ದಾರೆ. ಬಿಎಸ್‌ಪಿಯಿಂದ ತ್ಯಾಗರಾಜ್, ಉತ್ತಮ ಪ್ರಜಾಕೀಯ ಪಕ್ಷದಿಂದ ನಾಗೇಂದ್ರರಾವ್ ಸೇರಿದಂತೆ ಬಿಟಿಎಂ ಲೇಔಟ್ ವಿಧಾನಸಭೆ ಕ್ಷೇತ್ರದ ಕಣದಲ್ಲಿ 12 ಅಭ್ಯರ್ಥಿಗಳು ಕಣದಲ್ಲಿದ್ದಾರೆ.

ಗೋವಿಂದರಾಜನಗರ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಪ್ರಿಯಕೃಷ್ಣ ಅವರು ಮೂಡಲಪಾಳ್ಯದಲ್ಲಿ ಮನೆ ಮನೆಗೆ ತೆರಳಿ ಮತಯಾಚಿಸಿದರು(ಮೊದಲ ಚಿತ್ರ). ನಗರದ ಬಸವನಗುಡಿ ವಿಧಾನಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಯು.ಬಿ.ವೆಂಕಟೇಶ್ ರವರು ತ್ಯಾಗರಾಜನಗರದಲ್ಲಿ ಇರುವ ಒಂದು ಶಾಲೆಯ ಶಿಕ್ಷಕಿಯರ ಬಳಿ ಮತಯಾಚನೆ ಮಾಡಿದರು(ಎರಡನೇ ಚಿತ್ರ). ಸಿ.ವಿ.ರಾಮನ್ ನಗರದ ಬಿಜೆಪಿ ಅಭ್ಯರ್ಥಿ ರಘು ಅವರ ಪರವಾಗಿ ಬಿಜೆಪಿ ರಾಜ್ಯ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ಅವರು ನಂಜಾರೆಡ್ಡಿ ಕಾಲೋನಿಯಲ್ಲಿ ಪ್ರಚಾರ ನಡೆಸಿದರು –ಪ್ರಜಾವಾಣಿ ಚಿತ್ರಗಳು

ಶಾಂತಿನಗರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಕೆ.ಶಿವಕುಮಾರ್ ಅವರು ಈಜಿಪುರದಲ್ಲಿ ಮತಯಾಚನೆ ಮಾಡಿದರು

ಪ್ರಚಾರಕ್ಕೆ ಐದು ದಿನ ಬಾಕಿ: ಮತ್ತಷ್ಟು ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಹಿರಂಗ ಪ್ರಚಾರಕ್ಕೆ ಐದು ದಿನ ಮಾತ್ರ ಬಾಕಿ ಇದ್ದು, ಅಭ್ಯರ್ಥಿಗಳು ಪ್ರಚಾರವನ್ನು ಮತ್ತಷ್ಟು ಚುರುಕುಗೊಳಿಸಿದ್ದಾರೆ.

ಬೀದಿ ಬೀದಿ, ಗಲ್ಲಿ-ಗಲ್ಲಿಗಳನ್ನು ಸುತ್ತಿ ಮತದಾರರ ಮನೆಯ ಮುಂದೆ ಮತ ಬೇಡುತ್ತಿದ್ದಾರೆ. ಬೇರೆ ಪಕ್ಷಗಳ ಕಾರ್ಯಕರ್ತರನ್ನು ಸೆಳೆದು ಆ ಮೂಲಕ ಬರುವ ಮತಗಳನ್ನು ಪಡೆಯಲು ಶ್ರಮಿ-ಸುತ್ತಿದ್ದಾರೆ.

ಸಿ.ವಿ.ರಾಮನ್‌ನಗರದ ಬಿಜೆಪಿ ಅಭ್ಯರ್ಥಿ ರಘು ಪರವಾಗಿ ಬಿಜೆಪಿ ರಾಜ್ಯ ಚುನಾವಣಾ ಸಹ ಉಸ್ತುವಾರಿ ಅಣ್ಣಾಮಲೈ ಅವರ ಪ್ರಚಾರ ನಡೆಸಿದರು. ತಮಿಳು ಭಾಷಿಕರು ಹೆಚ್ಚಿರುವ ಬಡಾ-ವಣೆಗಳಲ್ಲಿ ಅಣ್ಣಾಮಲೈ ರೋಡ್ ಶೋ ನಡೆಸಿದರು.

ಯಶವಂತಪುರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಎಸ್.ಟಿ.ಸೋಮಶೇಖರ್ ಅವರು ಕೊಡಿಗೇಹಳ್ಳಿ, ಸೂಲಿಕೆರೆ, ರಾಮೋಹಳ್ಳಿ, ಚುಂಚನಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಚಾರ ನಡೆಸಿದರು. ಈ ಸಂದರ್ಭದಲ್ಲಿ ಮಾತನಾಡಿದ ಅವರು, 'ನಾನು ಅಭಿವೃದ್ಧಿ ಆಧಾರದಲ್ಲಿ ಮತ ಕೇಳುತ್ತಿದ್ದೇನೆ. ಕ್ಷೇತ್ರದ ಅಭಿವೃದ್ಧಿ ಮಾಡುವವರು ಬೇಕಾ ಅಥವಾ ಐದು ವರ್ಷಕ್ಕೊಮ್ಮೆ ಬಂದು ಕಣ್ಣೀ-ರಾಕುವವರು ಬೇಕಾ' ಎಂದು ಪ್ರಶ್ನಿಸಿದರು.

'ಶಾಸಕನಾಗಿ, ಸಚಿವನಾಗಿ ಕ್ಷೇತ್ರದ ಅಭಿವೃದ್ಧಿಗೆ ಶ್ರಮಿಸಿದ್ದೇನೆ. ಮೂಲಸೌ-ಕರ್ಯಕ್ಕೆ ಒತ್ತು ನೀಡಿದ್ದೇನೆ. ಕೋವಿಡ್ ಸಂದರ್ಭದಲ್ಲಿ ಜನತೆಯ ಕಷ್ಟಕ್ಕೆ ಸ್ಪಂದಿಸಿದ್ದೇನೆ. ಹೀಗಾಗಿ, ಅಭಿವೃದ್ಧಿ ಆಧಾರದ ಮೇಲೆ ಮತ ಕೇಳುತ್ತಿದ್ದೇನೆ' ಎಂದರು.

ಎಸ್.ಟಿ.ಸೋಮಶೇಖರ್ ಅವರ ಪರವಾಗಿ ನಟಿ ತಾರಾ ಅನೂರಾಧ ಅವರು ಮತಯಾಚಿಸಿದರು.

ಮಲ್ಲೇಶ್ವರ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ಸಿ.ಎನ್. ಅಶ್ವತ್ಥನಾರಾಯಣ ಅವರು ಮರ ವಿಜ್ಞಾನ ಸಂಸ್ಥೆಯ ವಸತಿ ಗೃಹಗಳ ಆವರಣದಲ್ಲಿ ಮತ ಯಾಚಿಸಿದರು. ಬಳಿಕ ಉತ್ತರಾದಿ ಮಠಕ್ಕೆ ತೆರಳಿ ಆಶೀರ್ವಾದ ಪಡೆದರು.

ಸಿ.ಎನ್.ಅಶ್ವತ್ಥನಾರಾಯಣ ಅವರು ಮರ ವಿಜ್ಞಾನ ಸಂಸ್ಥೆಯ ವಸತಿ ಗೃಹಗಳ ಆವರಣದಲ್ಲಿ ಪ್ರಚಾರ ನಡೆಸಿದರು

ಎಸ್.ಟಿ.ಸೋಮಶೇಖರ್ ಮತ್ತು ನಟಿ ತಾರಾ ಅನೂರಾಧ ಅವರು ರಾಮೋಹಳ್ಳಿ, ಚುಂಚನಕುಪ್ಪೆ ಗ್ರಾಮ ಪಂಚಾಯತಿ ವ್ಯಾಪ್ತಿಯಲ್ಲಿ ಪ್ರಚಾರ ನಡೆಸಿದರು

ಮೇ 6: ನಗರದಲ್ಲಿ ಮೋದಿ ರೋಡ್ ಶೋ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಪ್ರಧಾನಮಂತ್ರಿ ನರೇಂದ್ರ ಮೋದಿ ಅವರು ಇದೇ 6 ರಂದು ಬೆಂಗಳೂರಿನಲ್ಲಿ 'ನಮ್ಮ ಕರ್ನಾಟಕ ಯಾತ್ರೆ' ಹೆಸರಿನಲ್ಲಿ ಬೃಹತ್ ರೋಡ್ ಶೋ ನಡೆಸಲಿದ್ದಾರೆ.

ಈ ಕುರಿತು ಬುಧವಾರ ಸುದ್ದಿಗೋಷ್ಠಿಯಲ್ಲಿ ವಿವರ ನೀಡಿದ ಸಂಸದ ಪಿ.ಸಿ.ಮೋಹನ್, 'ಕರ್ನಾಟಕದ ಜನತೆ ಒಂಬತ್ತು ವರ್ಷಗಳಿಂದ ತಮ್ಮ ಮೇಲೆ ಇಟ್ಟಿರುವ ವಿಶ್ವಾಸಕ್ಕೆ ಕೃತಜ್ಞತೆ ಸಲ್ಲಿಸಲು ಪ್ರಧಾನಿ ಬೆಂಗಳೂರಿಗೆ ಬರುತ್ತಿದ್ದಾರೆ. ಅಂದು ಒಟ್ಟು 17 ವಿಧಾನಸಭಾ ಕ್ಷೇತ್ರಗಳಲ್ಲಿ ಒಟ್ಟು 36.6 ಕಿ.ಮೀ ದೂರ ರೋಡ್ ಶೋ ನಡೆಸಲಿದ್ದಾರೆ. ಬೆಳಿಗ್ಗೆ 11 ಗಂಟೆಯಿಂದ ಮಧ್ಯಾಹ್ನ 1 ಗಂಟೆಯವರೆಗೆ 10.1 ಕಿ.ಮೀ, ಸಂಜೆ 4 ರಿಂದ ರಾತ್ರಿ 10 ರವರೆಗೆ 26.5 ಕಿ.ಮೀ ದೂರ ರೋಡ್ ಶೋ ನಡೆಯಲಿದೆ. ಇದರಲ್ಲಿ 10 ಲಕ್ಷಕ್ಕೂ ಅಧಿಕ ಜನ ಪಾಲ್ಗೊಳ್ಳ-ಲಿದ್ದಾರೆ' ಎಂದರು. ಬೆಳಿಗ್ಗೆ ಸುರಂಜನ್‌ದಾಸ್ ರಸ್ತೆಯಿಂದ ಆರಂಭವಾಗುವ ಯಾತ್ರೆ, ಮಹದೇವಪುರ, ಕೆ.ಆರ್.ಪುರ, ಸಿ.ವಿ.ರಾಮನ್ ನಗರ, ಶಾಂತಿನಗರ, ಶಿವಾಜಿನಗರ ವಿಧಾನಸಭಾ ಕ್ಷೇತ್ರಗಳಲ್ಲಿ ಸಾಗಲಿದೆ. ಸಂಜೆ ಬೆಂಗಳೂರು ದಕ್ಷಿಣ, ಬೊಮ್ಮನಹಳ್ಳಿ, ಜಯನಗರ, ಪದ್ಮನಾಭ ನಗರ, ಬಸವನಗುಡಿ, ಚಿಕ್ಕಪೇಟೆ, ಚಾಮರಾಜಪೇಟೆ, ಗಾಂಧಿನಗರ, ವಿಜಯನಗರ, ಗೋವಿಂದರಾಜ ನಗರ, ರಾಜಾಜಿನಗರ, ಮಹಾಲಕ್ಷ್ಮಿ ಲೇಔಟ್ ಮತ್ತು ಮಲ್ಲೇಶ್ವರ ಕ್ಷೇತ್ರಗಳಲ್ಲಿ ರೋಡ್ ಶೋ ನಡೆಯಲಿದೆ. ರೋಡ್ ಶೋ ಮಾರ್ಗದ ಬಗ್ಗೆ ಮಾಹಿತಿ ನೀಡಲಾಗುವುದು. ಸಾರ್ವಜನಿಕರಿಗೆ ಯಾವುದೇ ತೊಂದರೆ ಆಗದಂತೆ ಪೊಲೀಸ್ ಮತ್ತು ಸಂಬಂಧಿತ ಇಲಾಖೆಗಳ ಅಧಿಕಾರಿಗಳ ಜತೆ ಚರ್ಚಿಸಲಾಗಿದೆ. ಮುಂಜಾಗ್ರತೆ ವಹಿಸಲಾಗಿದೆ ಎಂದು ಹೇಳಿದರು.

'ಪ್ರಧಾನಿ ಮೋದಿ ನಮ್ಮ ಮನೆ ಬಾಗಿಲ ಹತ್ತಿರ ಬರುವುದು ಬೆಂಗಳೂರಿಗರು ಖುಷಿಪಡುವ ಹಬ್ಬ' ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

'ಬಜರಂಗದಳ ಸಾಂಸ್ಕೃತಿಕ ಸಂಘಟನೆ'

ಬೆಂಗಳೂರು: ಬಜರಂಗ ದಳ ಒಂದು ಸಾಂಸ್ಕೃತಿಕ ಸಂಘಟನೆ. ಆದರೆ, ಅದನ್ನು ನಿಷೇಧಿತ ಪಿಎಫ್‌ಐ ಜತೆ ಸಮೀಕರಿಸುವುದು ಸರಿಯಲ್ಲ ಎಂದು ಬಿಜೆಪಿ ಸಂಸದ ತೇಜಸ್ವಿ ಸೂರ್ಯ ಹೇಳಿದ್ದಾರೆ.

'ಪ್ರಜಾವಾಣಿ' ಜತೆ ಮಾತನಾಡಿದ ಅವರು, ಈ ರೀತಿ ತಪ್ಪು ಸಮೀಕರಣದ ಮೂಲಕ ಹಿಂದೂ ಸಮಾಜಕ್ಕೆ ಮಸಿ ಬಳಿಯುವ ಕೆಲಸವನ್ನು ಕಾಂಗ್ರೆಸ್ ಪ್ರಣಾಳಿಕೆ ಮಾಡಿದೆ ಎಂದರು.

ಕಾಂಗ್ರೆಸ್ ಹಿಂದೂಗಳನ್ನು ಅವಮಾನ ಮಾಡುವುದು ಇದೇ ಮೊದಲಲ್ಲ. 2011 ರಲ್ಲಿ ಮುಂಬೈನಲ್ಲಿ ಭಯೋತ್ಪಾದಕರ ದಾಳಿ ಆದ ಬಳಿಕ ರಾಹುಲ್‌ಗಾಂಧಿ ಅಮೆರಿಕಾದ ಅಧಿಕಾರಿಗಳ ಜತೆ ಮಾತನಾಡುವಾಗ ಭಾರತಕ್ಕಿರುವ ದೊಡ್ಡ ಬೆದರಿಕೆ ಎಂದರೆ 'ಹಿಂದೂ ಭಯೋತ್ಪಾದನೆ' ಎನ್ನುವ ಮೂಲಕ ಆ ಪದವನ್ನು ಹುಟ್ಟು ಹಾಕಿದ್ದರು ಎಂದರು.

ಇದೀಗ ಬಜರಂಗದಳವನ್ನು ನಿಷೇಧಿಸುತ್ತೇವೆ ಎನ್ನುವುದರ ಮೂಲಕ ಕಾಂಗ್ರೆಸ್, ಕೋಟ್ಯಂತರ ಹಿಂದೂಗಳ ಭಾವನೆಗಳಿಗೆ ಧಕ್ಕೆ ತಂದಿದೆ. ಅಲ್ಲದೇ, ಗೋಹತ್ಯೆ ನಿಷೇಧ ಮತ್ತು ಮತಾಂತರ ನಿಷೇಧ ಕಾಯ್ದೆ ವಾಪಸ್ ಪಡೆಯುವುದಾಗಿ ಕಾಂಗ್ರೆಸ್ ಹೇಳುತ್ತಿದೆ ಎಂದು ಹರಿಹಾಯ್ದರು.

₹11.24 ಕೋಟಿ ಮೌಲ್ಯದ ಸ್ವತ್ತು ವಶ

ಬೆಂಗಳೂರು: ಚುನಾವಣಾ ಅಕ್ರಮ ತಡೆಗೆ ರಾಜ್ಯದ ವಿವಿಧೆಡೆ ಮಂಗಳವಾರ ನಡೆಸಿದ ಕಾರ್ಯಾಚರಣೆಗಳಲ್ಲಿ ₹ 2.85 ಕೋಟಿ ನಗದು ಸೇರಿದಂತೆ ₹ 11.24 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪಡಿ-ಸಿಕೊಳ್ಳಲಾಗಿದೆ.

'₹ 1.39 ಕೋಟಿ ಮೌಲ್ಯದ 55,628 ಲೀಟರ್ ಮದ್ಯ, ₹ 19.74 ಲಕ್ಷ ಮೌಲ್ಯದ 20.30 ಕೆ.ಜಿ. ಮಾದಕವಸ್ತು, ₹ 6.72 ಕೋಟಿ ಮೌಲ್ಯದ 12.84 ಕೆ.ಜಿ. ಚಿನ್ನ, ₹ 6.68 ಲಕ್ಷ ಮೌಲ್ಯದ 11.60 ಕೆ.ಜಿ. ಬೆಳ್ಳಿ, ₹ 49 ಸಾವಿರ ಮೌಲ್ಯದ ಉಚಿತ ಕೊಡುಗೆಗಳನ್ನು ಮಂಗಳವಾರ ವಶಪಡಿಸಿಕೊಳ್ಳಲಾಗಿದೆ' ಎಂದು ರಾಜ್ಯ ಮುಖ್ಯ ಚುನಾವಣಾಧಿಕಾರಿ ಮನೋಜ್ ಕುಮಾರ್ ಮೀನಾ ತಿಳಿಸಿದ್ದಾರೆ.

ಇದುವರೆಗೆ ಒಟ್ಟು ₹ 323.09 ಕೋಟಿ ಮೌಲ್ಯದ ಸ್ವತ್ತುಗಳನ್ನು ವಶಪ-ಡಿಸಿಕೊಳ್ಳಲಾಗಿದೆ. 2,514 ಎಫ್‌ಐಆ-ರ್‌ಗಳನ್ನು ದಾಖಲಿಸಲಾಗಿದೆ. ಅಬಕಾರಿ ಕಾಯ್ದೆ ಉಲ್ಲಂಘನೆ ಆರೋಪದಡಿ 30,132 ಪ್ರಕರಣಗಳನ್ನು ದಾಖಲಿಸಲಾಗಿದೆ ಎಂದರು.

ಖರ್ಗೆ ಸಾವು ಬಯಸಿದ ಶಾಸಕ: ಮೋದಿ ಕ್ಷಮೆಗೆ ಆಗ್ರಹ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಾಜಸ್ಥಾನದ ಬಿಜೆಪಿ ಪ್ರಧಾನ ಕಾರ್ಯದರ್ಶಿಯೂ ಆಗಿರುವ ಶಾಸಕ ಮದನ್ ದಿಲಾವರ್ ಅವರು ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ಅವರ ಸಾವು ಬಯಸಿರುವ ಹಿನ್ನೆಲೆಯಲ್ಲಿ ಪ್ರಧಾನಿ ನರೇಂದ್ರ ಮೋದಿ ಕ್ಷಮೆ ಕೇಳಬೇಕು' ಎಂದು ಎಐಸಿಸಿ ಪ್ರಧಾನ ಕಾರ್ಯದರ್ಶಿ ರಣದೀಪ್ ಸಿಂಗ್ ಸುರ್ಜೆವಾಲಾ ಆಗ್ರಹಿಸಿದರು.

ಸುದ್ದಿಗೋಷ್ಠಿಯಲ್ಲಿ ಬುಧವಾರ ಮಾತನಾಡಿದ ಅವರು, 'ಮದನ್ ದಿಲಾವರ್ ಹೇಳಿಕೆ ಪ್ರಕಾರ, ಖರ್ಗೆ ಅವರಿಗೆ 80 ವರ್ಷವಾಗಿದ್ದು, ದೇವರು ಅವರನ್ನು ಯಾವಾಗಬೇಕಾದರೂ ಕರೆಸಿಕೊಳ್ಳಬಹುದು' ಎಂದಿದ್ದಾರೆ. ದಲಿತ ಸಮುದಾಯದ ಶ್ರೇಷ್ಠ ನಾಯಕನ ವಿರುದ್ಧ ಬಿಜೆಪಿಯ ದ್ವೇಷ ಮನೋಭಾವ ಎದ್ದು ಕಾಣುತ್ತಿದೆ' ಎಂದರು.

ಜೆಡಿಎಸ್ ಅಭ್ಯರ್ಥಿ ಮುನೇಗೌಡ ಅಪಹರಣ ಆರೋಪ

ಬಿಜೆಪಿ ಕಾರ್ಯಕರ್ತರ ಪ್ರತಿಭಟನೆ, ಪೊಲೀಸರಿಗೆ ದೂರು

ಪ್ರಜಾವಾಣಿ ವಾರ್ತೆ

ಯಲಹಂಕ: 'ಕ್ಷೇತ್ರದ ಜೆಡಿಎಸ್ ಅಭ್ಯರ್ಥಿ ಮುನೇಗೌಡ ಅವರು ಅಪಹರಣಕ್ಕೆ ಒಳಗಾದವರಂತೆ ನಾಟಕವಾಡಿ ಈ ಆರೋಪವನ್ನು ಯಲಹಂಕ ಬಿಜೆಪಿ ಅಭ್ಯರ್ಥಿ ಎಸ್.ಆರ್.ವಿಶ್ವನಾಥ್ ಅವರ ಮೇಲೆ ಹೊರಿಸಲು ಯೋಜನೆ ರೂಪಿಸಲು ಯತ್ನಿಸಿದ್ದಾರೆ' ಎಂದು ಆರೋಪಿಸಿ, ಬಿಜೆಪಿ ಕಾರ್ಯಕರ್ತರು ರಾಜಾನುಕುಂಟೆ, ಯಲಹಂಕ, ಮಾದನಾಯಕನಹಳ್ಳಿ ಸೇರಿದಂತೆ ವಿವಿಧ ಪೊಲೀಸ್ ಠಾಣೆಗಳ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

ವಿಡಿಯೊವೊಂದು ಹರಿದಾಡಿದ ಮೇಲೆ ರಾಜಾನುಕುಂಟೆ ಪೊಲೀಸ್ ಠಾಣೆ ಎದುರು ಜಮಾಯಿಸಿದ ನೂರಾರು ಬಿಜೆಪಿ ಕಾರ್ಯಕರ್ತರು ಮುನೇಗೌಡ ವಿರುದ್ಧ ಕ್ರಮಕೈಗೊಳ್ಳಬೇಕು ಎಂದು ಆಗ್ರಹಿಸಿದರು.

ಜೆಡಿಎಸ್ ಅಭ್ಯರ್ಥಿ ಮುನೇಗೌಡ ವಿರುದ್ಧ ಕ್ರಮ ಕೈಗೊಳ್ಳುವಂತೆ ಆಗ್ರಹಿಸಿ, ಬಿಜೆಪಿ ಅಭ್ಯರ್ಥಿ ಎಸ್.ಆರ್.ವಿಶ್ವನಾಥ್ ಬೆಂಬಲಿಗರು ಪೊಲೀಸ್ ಠಾಣೆ ಎದುರು ಪ್ರತಿಭಟನೆ ನಡೆಸಿದರು.

ವಿಶ್ವನಾಥ್ ಮಾತನಾಡಿ, 'ಚುನಾವಣೆಗೆ ಕೆಲವೇ ದಿನಗಳು ದಿನ ಬಾಕಿ ಇರುವಂತೆ ತಮ್ಮ ಕಾರ್ಯಕ-ರ್ತರಿಂದ ತಾವೇ ಸ್ವತಃ ಅಪಹರಣಕ್ಕೆ ಒಳಗಾಗುವುದು, ಅವರ ಕಾರ್ಯಕರ್ತರಿಂದಲೇ ಹಲ್ಲೆಗೆ ಒಳಗಾಗಿ ಅದರ ಆರೋಪವನ್ನು ನನ್ನ ಮೇಲೆ ಹೊರಿಸುವ ಪ್ರಯತ್ನ ನಡೆಸಲಾಗಿದೆ. ನನ್ನ ವಿರುದ್ಧ ದೂರು ದಾಖಲಿಸುವ ಪ್ರಯತ್ನದ ಬಗ್ಗೆ ಸಂಭಾಷಣೆ ನಡೆಸಲಾಗಿದೆ. ಅದರ ವಿಡಿಯೊ ಸಿಕ್ಕಿದೆ. ಚುನಾವಣೆಗೆ ಮೊದಲು ಷಡ್ಯಂತ್ರ ನಡೆಸಲಾಗಿದೆ' ಎಂದು ಹೇಳಿದರು.

'ನೇರವಾಗಿ ರಾಜಕೀಯ ನಡೆಸದೇ ಸೋಲಿನ ಭೀತಿಯಿಂದ ಈ ತಂತ್ರ ರೂಪಿಸಲಾಗಿದೆ. ಚುನಾವಣೆಯಲ್ಲಿ ಗೆಲುವು ಸಾಧಿಸುವ ಅವಕಾಶವಿದ್ದರೆ ಇಂತಹ ವಾಮಮಾರ್ಗ ಹಿಡಿಯು-ತ್ತಿರಲಿಲ್ಲ. ಹತಾಶರಾಗಿ ನನ್ನ ವಿರುದ್ಧ ಷಡ್ಯಂತ್ರ ಮಾಡಲು ಇಂತಹ ಕೆಟ್ಟ ಯೋಜನೆಗಳನ್ನು ರೂಪಿಸಲು ಪ್ರಯತ್ನಿಸಿದ್ದಾರೆ. ಈ ಬಗ್ಗೆ ರಾಜಾನುಕುಂಟೆ ಠಾಣೆಯಲ್ಲಿ ದೂರು ದಾಖಲಿಸಲಾಗಿದೆ' ಎಂದು ತಿಳಿಸಿದರು.

ಸ್ಪರ್ಧಾ ವಾಣಿ

‘ಟಿಫರ್’- ವಿಜ್ಞಾನ ಸಂಶೋಧನೆಗಳ ಅಂಗಳ

ಐಎಎಸ್, ಕೆಎಎಸ್ ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತು ಪ್ರಬಂಧ ರಚಿಸುವ ಪ್ರಶ್ನೆ ಇರುತ್ತದೆ. ಈ ಹಿನ್ನೆಲೆಯಲ್ಲಿ ಪ್ರಬಂಧಕ್ಕೆ ಉಪಯುಕ್ತವಾಗುವ ಪ್ರಚಲಿತ ವಿದ್ಯಮಾನವನ್ನು ಇಲ್ಲಿ ಕೊಡಲಾಗಿದೆ.

ಆರ್.ಬಿ.ಗುರುಬಸವರಾಜ

ಪ್ರಬಂಧ

ಆಸ್ಟ್ರೋಸ್ಯಾಟ್- ಇದು ಏಕಕಾಲದಲ್ಲಿ ಒಂದೇ ಉಪಗ್ರಹದೊಂದಿಗೆ ವಿವಿಧ ಖಗೋಳ ವಸ್ತುಗಳ ಬಹು ತರಂಗಾಂತರದ ಆಕಾಶಕಾಯಗಳನ್ನು ವೀಕ್ಷಿಸಲು ರೂಪುಗೊಂಡ ಭಾರತೀಯ ಖಗೋಳಶಾಸ್ತ್ರ ಮಿಷನ್ ಆಗಿದೆ. ಇಂತಹ ಮಹತ್ತರವಾದ ಮಿಷನ್ ತಯಾರಿಸಿದ್ದು ಟಿಐಎಫ್‌ಆರ್ (ಟಿಫರ್ -ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್) ಸಂಸ್ಥೆ. ಇದು ಸಂಪೂರ್ಣವಾಗಿ ವೈಜ್ಞಾನಿಕ ಸಂಶೋಧನೆಗಳಿಗಾಗಿ ಮೀಸಲಾದ ಸಂಸ್ಥೆಯಾಗಿದೆ. ಇಲ್ಲಿ ವಿಜ್ಞಾನ ಮತ್ತು ತಂತ್ರಜ್ಞಾನದ ವಿವಿಧ ವಿಭಾಗಗಳ ಸಂಶೋಧನೆ ನಡೆಸುತ್ತದೆ.

ಟಿಐಎಫ್‌ಆರ್ ಸಾಗಿದ ಹಾದಿ..

ಭಾರತ ಸರ್ಕಾರದ ಪರಮಾಣು ಇಂಧನ ಇಲಾಖೆಯ ಅಡಿಯಲ್ಲಿ ಸ್ಥಾಪಿತವಾದ ಸಂಶೋಧನಾ ಕೇಂದ್ರವೇ ಟಾಟಾ ಇನ್‌ಸ್ಟಿಟ್ಯೂಟ್ ಆಫ್ ಫಂಡಮೆಂಟಲ್ ರಿಸರ್ಚ್- ಟಿಐಎಫ್‌ಆರ್. ಇದು ವಿಜ್ಞಾನದ ವಿವಿಧ ಕ್ಷೇತ್ರಗಳ ಸಂಶೋಧನೆಗಳ ಜೊತೆಗೆ ಸ್ನಾತಕೋತ್ತರ ಮತ್ತು ಡಾಕ್ಟರೇಟ್ ಪದವಿಗಳನ್ನು ನೀಡುವ ಡೀಮ್ಡ್ ವಿಶ್ವವಿದ್ಯಾಲಯವೂ ಆಗಿದೆ.

ಡಾ. ಹೋಮಿ ಜಹಾಂಗೀರ್ ಭಾಭಾ ಅವರ ಕಲ್ಪನೆಯ ಕೂಸಾದ ಈ ಸಂಶೋಧನಾ ಸಂಸ್ಥೆಯನ್ನು 1945ರಲ್ಲಿ ಸರ್.ದೊರಾಬ್ಜಿ ಟಾಟಾ ಟ್ರಸ್ಟ್‌ನ ಬೆಂಬಲದೊಂದಿಗೆ ಸ್ಥಾಪಿಸಲಾಯಿತು. ಇದರ ಮುಖ್ಯ ಕ್ಯಾಂಪಸ್ ಮುಂಬೈನಲ್ಲಿದೆ. ಪುಣೆ, ಬೆಂಗಳೂರು ಮತ್ತು ಹೈದರಾಬಾದ್‌ಗಳಲ್ಲೂ ಇದರ ಕೇಂದ್ರಗಳಿವೆ.

ಸಂಸ್ಥೆಯು ಮೊದಲು ಬೆಂಗಳೂರಿನ ಇಂಡಿಯನ್ ಇನ್‌ಸ್ಟಿಟ್ಯೂಟ್ ಆಫ್ ಸೈನ್ಸ್‌ನ ಕ್ಯಾಂಪಸ್‌ನಲ್ಲಿರುವ ಕಾಸ್ಮಿಕ್ ರೇ ಸಂಶೋಧನಾ ಘಟಕದಲ್ಲಿ ಕಾರ್ಯನಿರ್ವಹಿಸಲು ಪ್ರಾರಂಭಿಸಿತು. ಅದೇ ವರ್ಷ ಅಕ್ಟೋಬರ್‌ನಲ್ಲಿ ಮುಂಬೈಗೆ ಸ್ಥಳಾಂತರಗೊಂಡಿತು. ಈ ಸಂಸ್ಥೆಯಲ್ಲಿ ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ, ಗಣಿತ, ಕಂಪ್ಯೂಟರ್ ವಿಜ್ಞಾನ ಮತ್ತು ವಿಜ್ಞಾನ ಶಿಕ್ಷಣದಲ್ಲಿ ಮೂಲಭೂತ ಸಂಶೋಧನೆಗಳನ್ನು ನಡೆಸಲಾಗುತ್ತದೆ.

1955-56ರಲ್ಲಿ ಭಾರತ ಸರ್ಕಾರ, ಬಾಂಬೆ ಸರ್ಕಾರ ಮತ್ತು ಸರ್ ದೊರಾಬ್ಜಿ ಟಾಟಾ ಟ್ರಸ್ಟ್ ನಡುವಿನ ತ್ರಿಪಕ್ಷೀಯ ಒಪ್ಪಂದಿಂದ ಟಿಐಎಫ್‌ಆರ್ ಜಾರಿಗೆ ಬಂದಿದೆ. ತ್ರಿಪಕ್ಷೀಯ ಒಪ್ಪಂದವು ಭಾರತ ಸರ್ಕಾರದಿಂದ ವ್ಯಾಪಕವಾದ ಹಣಕಾಸಿನ ಬೆಂಬಲವನ್ನು ಮತ್ತು ಅದಕ್ಕೆ ಅನುಗುಣವಾಗಿ ಕೌನ್ಸಿಲ್ ಆಫ್ ಮ್ಯಾನೇಜ್‌ಮೆಂಟ್‌ನಲ್ಲಿ ಹೆಚ್ಚಿನ ಶಾಶ್ವತ ಪ್ರತಿನಿಧಿಯನ್ನು ಕಲ್ಪಿಸಿದೆ. ಇಂದು ಸಂಸ್ಥೆಯ ವೆಚ್ಚದ ಶೇ 99ರಷ್ಟನ್ನು ಭಾರತ ಸರ್ಕಾರವು ಭರಿಸುತ್ತಿದೆ. ಪ್ರಸ್ತುತ ಸಂಸ್ಥೆಯು ಪರಮಾಣು ಇಂಧನ ಇಲಾಖೆಯ ವ್ಯಾಪ್ತಿಯಲ್ಲಿ ಬರುತ್ತದೆ.

ಸಂಸ್ಥೆಯ ವಿಸ್ತರಣೆ ಮೈಲಿಗಲ್ಲುಗಳು

- 1960ರ ದಶಕದಲ್ಲಿ ಆಣ್ವಿಕ ಜೀವಶಾಸ್ತ್ರ ಮತ್ತು ರೇಡಿಯೊ ಖಗೋಳ ವಿಜ್ಞಾನ ಪ್ರಾರಂಭ.
- 1964 ರಲ್ಲಿ ಬೇಸಿಕ್ ಡೆಂಟಲ್ ರಿಸರ್ಚ್ ಗ್ರೂಪ್ ಪ್ರಾರಂಭ.
- 1970 ರ ದಶಕದಲ್ಲಿ ಸೈದ್ಧಾಂತಿಕ ಆಸ್ಟ್ರೋಫಿಸಿಕ್ಸ್ ಮತ್ತು ಹೋಮಿ ಭಾಭಾ ಸೆಂಟರ್ ಫಾರ್ ಸೈನ್ಸ್ ಎಜುಕೇಶನ್‌ನ್ನು ವಿಸ್ತರಣೆ. ಪುಣೆಯಲ್ಲಿ ರೇಡಿಯೊ ಆಸ್ಟ್ರೋಫಿಸಿಕ್ಸ್ ರಾಷ್ಟ್ರೀಯ ಕೇಂದ್ರ, ಬೆಂಗಳೂರಿನಲ್ಲಿ ಅನ್ವಯಿಕ ಗಣಿತ ಕೇಂದ್ರ, ಬೆಂಗಳೂರಿನಲ್ಲಿ ಜೈವಿಕ ವಿಜ್ಞಾನಗಳ ರಾಷ್ಟ್ರೀಯ ಕೇಂದ್ರ ಪ್ರಾರಂಭ.
- 2007ರಲ್ಲಿ ಸೈದ್ಧಾಂತಿಕ ವಿಜ್ಞಾನಗಳ ಅಂತರರಾಷ್ಟ್ರೀಯ ಕೇಂದ್ರವೂ ಸ್ಥಾಪನೆ.
- ಕೆಲಸದ ಹಂಚಿಕೆಗಾಗಿ ಸ್ಕೂಲ್ ಆಫ್ ಮ್ಯಾಥಮ್ಯಾಟಿಕ್ಸ್, ಸ್ಕೂಲ್ ಆಫ್ ನ್ಯಾಚುರಲ್ ಸೈನ್ಸಸ್ ಮತ್ತು ಸ್ಕೂಲ್ ಆಫ್ ಟೆಕ್ನಾಲಜಿ ಮತ್ತು ಕಂಪ್ಯೂಟರ್ ಸೈನ್ಸಸ್ ಶಾಖೆಗಳ ಆಯೋಜನೆ.
- 2003ರಲ್ಲಿ ಡೀಮ್ಡ್ ವಿಶ್ವವಿದ್ಯಾಲಯದ ಸ್ಥಾನಮಾನವನ್ನು ನೀಡಲಾಗಿದೆ.

ಟಿಐಎಫ್‌ಆರ್ ವಿಷನ್

ವಿಶ್ವದ ಪ್ರಮುಖ ವೈಜ್ಞಾನಿಕ ಸಂಶೋಧನಾ ಸಂಸ್ಥೆಯಾಗಿ, ಮಾನವ ಜ್ಞಾನದ ಬೆಳವಣಿಗೆಗೆ ಕೊಡುಗೆ ನೀಡುವುದು ಮತ್ತು ವೈಜ್ಞಾನಿಕ ಜ್ಞಾನದ ಪ್ರಸರಣಕ್ಕೆ ಕೊಡುಗೆ ನೀಡುವ ಭಾಗವಾಗಿ ಅತ್ಯುತ್ತಮ ವಿಜ್ಞಾನಿಗಳು ಮತ್ತು ಗಣಿತಜ್ಞರಿಗೆ ಶಿಕ್ಷಣ ಮತ್ತು ಪೋಷಣೆ ನೀಡುವುದು ಸಂಸ್ಥೆಯ ವಿಷನ್ ಆಗಿದೆ.

ಟಿಐಎಫ್‌ಆರ್ ಮಿಷನ್

- ದೇಶದಲ್ಲಿ ಮೂಲ ವಿಜ್ಞಾನ, ಗಣಿತ, ಕಂಪ್ಯೂಟರ್ ವಿಜ್ಞಾನ ಮತ್ತು ವಿಜ್ಞಾನ ಶಿಕ್ಷಣದ ಕ್ಷೇತ್ರಗಳಲ್ಲಿ ಉನ್ನತ ಗುಣಮಟ್ಟದ ಸಂಶೋಧನೆ ನಡೆಸುವುದು.
- ಸುಧಾರಿತ ವೈಜ್ಞಾನಿಕ ತಂತ್ರಜ್ಞಾನವನ್ನು ಒಳಗೊಂಡಿರುವ ಅತ್ಯಾಧುನಿಕ ಸೌಲಭ್ಯ ಕೇಂದ್ರಗಳನ್ನು ಸ್ಥಾಪಿಸುವುದು.
- ಮೂಲ ವಿಜ್ಞಾನದಿಂದ ಉದ್ಭವಿಸುವ ಹೊಸ ತಂತ್ರಜ್ಞಾನಗಳನ್ನು ಉತ್ತೇಜಿಸುವುದು ಮತ್ತು ಅವುಗಳ ಆರಂಭಿಕ ಬೆಳವಣಿಗೆಯನ್ನು ಹೆಚ್ಚಿಸಲು ಪ್ರತ್ಯೇಕ ಮತ್ತು ಸ್ವತಂತ್ರ ಸಂಸ್ಥೆಯಲ್ಲಿ ಕೆಲಸ ಮಾಡುವವರೆಗೆ ಆದ್ಯತೆ ನೀಡುವುದು.
- ಮಹೋನ್ನತ ವಿಜ್ಞಾನಿಗಳು ಮತ್ತು ಗಣಿತಜ್ಞರನ್ನು ಒಟ್ಟುಗೂಡಿಸುವುದು ಮತ್ತು ಅವರಿಗೆ ವಿಶ್ವದರ್ಜೆಯ ಸಂಶೋಧನಾ ಸೌಲಭ್ಯಗಳನ್ನು ಒದಗಿಸುವ ಮೂಲಕ ವಿಭಿನ್ನ ಸಂಶೋಧನಾ ವಾತಾವರಣವನ್ನು ಸೃಷ್ಟಿಸುವುದು.
- ದೇಶದ ಯುವ ವೈಜ್ಞಾನಿಕ ಪ್ರತಿಭೆಯನ್ನು ಪೋಷಿಸುವುದು ಮತ್ತು ತರಬೇತಿ ನೀಡುವುದು. ಎಲ್ಲಾ ಹಂತಗಳಲ್ಲಿ ವಿಜ್ಞಾನ ಪಠ್ಯಕ್ರಮದ ಅಭಿವೃದ್ಧಿಯಲ್ಲಿ ಭಾಗವಹಿಸುವ ಮೂಲಕ ದೇಶದ ವೈಜ್ಞಾನಿಕ ಅಭಿವೃದ್ಧಿಗೆ ಕೊಡುಗೆ ನೀಡುವುದು.
- ವಿಜ್ಞಾನ ಮತ್ತು ಗಣಿತದ ಜ್ಞಾನವನ್ನು ಸಾಮಾನ್ಯ ಚಟುವಟಿಕೆಗಳ ಮೂಲಕ ಪ್ರಸಾರ ಮಾಡುವುದು ಮತ್ತು ಆ ಮೂಲಕ ಸಾರ್ವಜನಿಕರಲ್ಲಿ ವೈಜ್ಞಾನಿಕ ಮನೋಭಾವ ಮತ್ತು ವೈಜ್ಞಾನಿಕ ದೃಷ್ಟಿಕೋನವನ್ನು ನಿರ್ಮಿಸುವುದು.

ಡೀಮ್ಡ್ ವಿಶ್ವವಿದ್ಯಾಲಯ

- ಟಿಐಎಫ್‌ಆರ್ ವಿಶ್ವವಿದ್ಯಾಲಯವು ಪಿಎಚ್.ಡಿ ಮತ್ತು ಇಂಟಿಗ್ರೇಟೆಡ್ ಎಂ.ಎಸ್ಸಿ, ಪಿಎಚ್.ಡಿ ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ ಮತ್ತು ಗಣಿತ ಮತ್ತು ಕಂಪ್ಯೂಟರ್ ವಿಜ್ಞಾನವನ್ನು ಒಳಗೊಂಡಿರುವ ನೈಸರ್ಗಿಕ ವಿಜ್ಞಾನದ ಎಲ್ಲಾ ಕ್ಷೇತ್ರಗಳಲ್ಲಿನ ಅಧ್ಯಯನಗಳನ್ನು ಒಂಗೊಂಡಿದೆ. ಟಿಐಎಫ್‌ಆರ್ ಆಯ್ದ ಎಂ.ಎಸ್ಸಿಯನ್ನು ಸಹ ಬೆಂಬಲಿಸುತ್ತದೆ.
- ಭೌತವಿಜ್ಞಾನ, ರಸಾಯನವಿಜ್ಞಾನ, ಜೀವವಿಜ್ಞಾನ, ವನ್ಯಜೀವಿ ಜೀವವಿಜ್ಞಾನ, ಗಣಿತ, ಕಂಪ್ಯೂಟರ್ ಮತ್ತು ಸಿಸ್ಟಮ್ಸ್ ಸೈನ್ಸ್ ಮತ್ತು ವಿಜ್ಞಾನ ಶಿಕ್ಷಣದಲ್ಲಿ ಪದವಿಗಳನ್ನು ನೀಡಲಾಗುತ್ತದೆ. ವಿಶಿಷ್ಟವಾಗಿ ಸಂಯೋಜಿತ ಎಂ.ಎಸ್ಸಿ, ಪಿಎಚ್.ಡಿ ನೀಡಲಾಗುತ್ತದೆ.
- ವಿದ್ಯಾರ್ಥಿಗಳ ಆಯ್ಕೆ ಪ್ರಕ್ರಿಯೆ ಕಠಿಣವಾಗಿದ್ದು, ಲಿಖಿತ ಪರೀಕ್ಷೆ ಮತ್ತು ಸಂದರ್ಶನವನ್ನು ಒಳಗೊಂಡಿರುತ್ತದೆ.

ಬೇಸಿಗೆ ಕಾರ್ಯಕ್ರಮಗಳು: ಟಿಐಎಫ್‌ಆರ್ ಪ್ರತಿಭಾವಂತ ವಿದ್ಯಾರ್ಥಿಗಳಿಗಾಗಿ ವಾರ್ಷಿಕ ಬೇಸಿಗೆ ಕಾರ್ಯಕ್ರಮಗಳನ್ನು ನಡೆಸುತ್ತದೆ. ಇದರಲ್ಲಿ ಖಗೋಳಶಾಸ್ತ್ರ, ಜೀವಶಾಸ್ತ್ರ, ರಸಾಯನಶಾಸ್ತ್ರ, ಕಂಪ್ಯೂಟರ್ ಸೈನ್ಸ್, ಗಣಿತ ಮತ್ತು ಭೌತಶಾಸ್ತ್ರದ ಸಂಶೋಧನಾ ಚಟುವಟಿಕೆಗಳನ್ನು ಪರಿಚಯಿಸಲಾಗುತ್ತದೆ. ಆಯ್ಕೆಯಾದ ವಿದ್ಯಾರ್ಥಿಗಳು ಟಿಐಎಫ್‌ಆರ್ ಸಂಶೋಧಕರ ಮೇಲ್ವಿಚಾರಣೆಯಲ್ಲಿ ಸಂಶೋಧನಾ ಯೋಜನೆಯಲ್ಲಿ ಕೆಲಸ ಮಾಡುವ ನಿರೀಕ್ಷೆಯಿದೆ.

ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ..

ಐ.ಎ.ಎಸ್, ಐ.ಪಿ.ಎಸ್, ಸೇರಿದಂತೆ ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಟಿಐಎಫ್‌ಆರ್ ಸಂಸ್ಥೆಯಲ್ಲಿ ನಡೆಯುವ ಸಂಶೋಧನೆಗಳ ಕುರಿತು ಪ್ರಬಂಧ ಮಾದರಿ ಹಾಗೂ ವಸ್ತುನಿಷ್ಠ ಮಾದರಿ ಪ್ರಶ್ನೆಗಳನ್ನೂ ಕೇಳಲಾಗುತ್ತದೆ. ಸಂಸ್ಥೆಯ ಕುರಿತ ಇನ್ನಷ್ಟು ವಿವರಗಳಿಗಾಗಿ **https://www.tifr.res.in/** ತಾಣಕ್ಕೆ ಭೇಟಿಕೊಡಿ.

ರಾಷ್ಟ್ರೀಯ ವಿದ್ಯಮಾನಗಳು

ವಿವಿಧ ಸ್ಪರ್ಧಾತ್ಮಕ ಪರೀಕ್ಷೆಗಳಲ್ಲಿ ಪ್ರಚಲಿತ ವಿದ್ಯಮಾನಗಳ ಕುರಿತ ಬಹುಆಯ್ಕೆ ಪ್ರಶ್ನೆಗಳಿರುತ್ತವೆ. ಇದಕ್ಕೆ ಪೂರಕವಾದ ಪ್ರಚಲಿತ ವಿದ್ಯಮಾನಗಳನ್ನು ಇಲ್ಲಿ ಕೊಡಲಾಗಿದೆ.

ಪ್ರಚಲಿತ

1. ‘ಇಂಡಿಯಾ ಸ್ಟೀಲ್-2023’

- ಇತ್ತೀಚೆಗೆ ಮುಂಬೈನ, ಮುಂಬೈ ಪ್ರದರ್ಶನ ಕೇಂದ್ರದಲ್ಲಿ ‘ಇಂಡಿಯಾ ಸ್ಟೀಲ್-2023’ ಅಂತರರಾಷ್ಟ್ರೀಯ ಪ್ರದರ್ಶನ ಆಯೋಜಿಸಲಾಗಿತ್ತು. ಕೇಂದ್ರ ಸಚಿವ ಜ್ಯೋತಿರಾದಿತ್ಯ ಸಿಂಧಿಯಾ ಈ ಪ್ರದರ್ಶನವನ್ನು ಉದ್ಘಾಟಿಸಿದರು.
- ಈ ಅಂತರರಾಷ್ಟ್ರೀಯ ವಸ್ತು ಪ್ರದರ್ಶನವನ್ನು ಕೇಂದ್ರ ಉಕ್ಕಿನ ಸಚಿವಾಲಯ ಹಾಗೂ ಕೇಂದ್ರ ವಾಣಿಜ್ಯ ಇಲಾಖೆ ಮತ್ತು ಭಾರತೀಯ ಕೈಗಾರಿಕಾ ಮತ್ತು ವಾಣಿಜ್ಯ ಒಕ್ಕೂಟ ಜಂಟಿಯಾಗಿ ಆಯೋಜಿಸಿದ್ದವು.
- ಈ ಅಂತರರಾಷ್ಟ್ರೀಯ ವಸ್ತುಪ್ರದರ್ಶನದಲ್ಲಿ, ಉಕ್ಕಿನ ಉದ್ದಿಮೆಯಲ್ಲಿ ಕಾರ್ಯಪ್ರವೃತ್ತರಾಗಿರುವ ಕೈಗಾರಿಕೋದ್ಯಮಿಗಳು, ನೀತಿ ನಿರೂಪಕರು, ಪರಿಣಿತರು ಮತ್ತು ವಿವಿಧ ಸಹ ಭಾಗಿದಾರರು ಭಾಗವಹಿಸಿದ್ದರು. ಉಕ್ಕಿನ ಉದ್ದಿಮೆಯಲ್ಲಿ ಇತ್ತೀಚಿನ ಬೆಳವಣಿಗೆಗಳು, ಉದ್ದಿಮೆ ಎದುರಿಸುತ್ತಿರುವ ಸವಾಲುಗಳು ಮತ್ತು ಉದ್ದಿಮೆಯ ಮುಂದಿರುವ ಅವಕಾಶಗಳ ಬಗ್ಗೆ ಕೂಲಂಕಷವಾಗಿ ಚರ್ಚಿಸಲಾಯಿತು.
- ಈ ವಸ್ತುಪ್ರದರ್ಶನದಲ್ಲಿ ಆಧುನಿಕ ತಂತ್ರಜ್ಞಾನ, ಆಧುನಿಕ ಉಕ್ಕು ಉತ್ಪನ್ನಗಳು ಮತ್ತು ಉಕ್ಕು ಉದ್ದಿಮೆಯಲ್ಲಿ ಅಳವಡಿಸಿಕೊಂಡಿರುವ ಆಧುನಿಕ ಪರಿಹಾರಗಳನ್ನು ಪ್ರದರ್ಶಿಸಲಾಯಿತು.

ವಿಶೇಷ ಸೂಚನೆ : ವರ್ಷದಲ್ಲಿ ಎರಡು ಬಾರಿ ಈ ಪ್ರದರ್ಶನವನ್ನು ಆಯೋಜಿಸಲಾಗುತ್ತದೆ.

2. ಭೂ ಶಾಖದ ಶಕ್ತಿ ಉತ್ಪಾದನಾ ಕೇಂದ್ರ

- ನವೀಕರಿಸಬಹುದಾದ ಇಂಧನ ವಲಯದಲ್ಲಿ ಭಾರತ ಮತ್ತೊಂದು ದಾಪುಗಾಲಿಟ್ಟಿದ್ದು, ಇತ್ತೀಚೆಗೆ ಅರುಣಾಚಲಪ್ರದೇಶದಲ್ಲಿ ಭೂ ಶಾಖದ ಶಕ್ತಿ ಉತ್ಪಾದನಾ ಕೇಂದ್ರ (Geothermal Energy Unit) ನಿರ್ಮಾಣಕ್ಕೆ ಚಾಲನೆ ನೀಡಿದೆ.
- ಜಗತ್ತಿನಾದ್ಯಂತ ಐಸ್‌ಲ್ಯಾಂಡ್, ಎಲ್ ಸಾಲ್ವಡಾರ್, ನ್ಯೂಜಿಲೆಂಡ್, ಕೀನ್ಯಾ ಮತ್ತು ಫಿಲಿಪ್ಪೀನ್ಸ್ ರಾಷ್ಟ್ರಗಳಲ್ಲಿ ಭೂ ಶಾಖದ ಶಕ್ತಿ ಉತ್ಪಾದನಾ ಕೇಂದ್ರಗಳು ಕಾರ್ಯನಿರ್ವಹಿಸುತ್ತಿವೆ. ಇದು ನವೀಕರಿಸ ಬಹುದಾದ ಇಂಧನ ಮೂಲವಾಗಿದೆ.
- ಇದರಿಂದ ಹಸಿರುಮನೆ ಅನಿಲ ಹೊರಸೂಸುವಿಕೆಯನ್ನು ತಡೆಗಟ್ಟಬಹುದು ಹಾಗೂ ಹವಾಮಾನ ಬದಲಾವಣೆಯಿಂದ ಉಂಟಾಗುತ್ತಿರುವ ಋಣಾತ್ಮಕ ಪರಿಣಾಮಗಳನ್ನು ತಡೆಗಟ್ಟಬಹುದು.
- ದೇಶದ ಮೊದಲ ಭೂ ಶಾಖದ ಶಕ್ತಿ ಉತ್ಪಾದನಾ ಕೇಂದ್ರ ಲಡಾಖ್‌ನ ಪುಗ ಕಣಿವೆಯಲ್ಲಿದೆ. ಇದು ದೇಶದ ಎರಡನೇ ಭೂ ಶಾಖದ ಶಕ್ತಿ ಉತ್ಪಾದನಾ ಕೇಂದ್ರವಾಗಲಿದೆ.
- ಭಾರತ-ಚೀನಾ ಗಡಿ ರೇಖೆಗೆ ಹತ್ತಿರವಿರುವ ಪ್ರದೇಶದಲ್ಲಿ ಈ ಉತ್ಪಾದನಾ ಕೇಂದ್ರವನ್ನು ಸ್ಥಾಪಿಸಲಾಗುತ್ತಿದೆ.
- ಭಾರತ ಸರ್ಕಾರ, ನಾರ್ವೆ ರಾಷ್ಟ್ರದ ಸಹಕಾರದೊಂದಿಗೆ ಈ ಯೋಜನೆ ಕಾರ್ಯಗತಗೊಳಿಸುವ ಪ್ರಯತ್ನದಲ್ಲಿದೆ.

ವಿಶೇಷ ಸೂಚನೆ : ಭೂ ಶಾಖದ ಶಕ್ತಿಕೇಂದ್ರಗಳ ಅನುಷ್ಠಾನದಲ್ಲಿ ನಾರ್ವೆ ದೇಶ ಅತಿಹೆಚ್ಚಿನ ಅನುಭವ ಮತ್ತು ಉತ್ತಮ ತಂತ್ರಜ್ಞಾನ ಹೊಂದಿದೆ.

3. ಶಿಕ್ಷಣತಜ್ಞೆ ನೀಲಿ ಬೆಂಡಪುಡಿ

- ಭಾರತೀಯ ಮೂಲದ ಶಿಕ್ಷಣ ತಜ್ಞೆ ನೀಲಿ ಬೆಂಡಪುಡಿ ಅವರನ್ನು ಅಮೆರಿಕ ವಿಶ್ವವಿದ್ಯಾಲಯಗಳ ಸಂಘಟನೆಯ ಅಧ್ಯಕ್ಷರಾಗಿ ನೇಮಿಸಲಾಗಿದೆ. ಭಾರತ ಹಾಗೂ ಅಮೆರಿಕದಲ್ಲಿ ಕಾರ್ಯನಿರ್ವಹಿಸುತ್ತಿರುವ ಶೈಕ್ಷಣಿಕ ಸಂಸ್ಥೆಗಳ ನಡುವಿನ ಸಹಭಾಗಿತ್ವವನ್ನು ಹೆಚ್ಚಿಸುವ ನಿಟ್ಟಿನಲ್ಲಿ ಸ್ಥಾಪಿಸಿರುವ ಈ ಸಂಘಟನೆಗೆ ನೀಲಿ ಅವರನ್ನು ಅಧ್ಯಕ್ಷರನ್ನಾಗಿ ನೇಮಿಸಲಾಗಿದೆ.
- ಭಾರತ ಮತ್ತು ಅಮೆರಿಕ ಸರ್ಕಾರಗಳು ಅಭಿವೃದ್ಧಿಪಡಿಸುತ್ತಿರುವ ಪ್ರಮುಖ ತಂತ್ರಜ್ಞಾನಗಳ ವಲಯದಲ್ಲಿ ತಾಂತ್ರಿಕ ಮತ್ತು ಕೈಗಾರಿಕಾ ಸಹಕಾರವನ್ನು ಹೆಚ್ಚಿಸಲು ಅಮೆರಿಕ ಸರ್ಕಾರ ಟಾಸ್ಕ್ ಫೋರ್ಸ್(ಕಾರ್ಯಪಡೆ) ರಚಿಸಿತ್ತು. ಈ ಕಾರ್ಯಪಡೆಯನ್ನು ಅಮೆರಿಕದ ವಿಶ್ವವಿದ್ಯಾಲಯಗಳ ಸಂಘಟನೆ ಎಂದು ಕರೆಯಲಾಗುತ್ತದೆ.
- ನೀಲಿ ಬೆಂಡಪುಡಿ ಅವರು ಪ್ರಸ್ತುತ ಪೆನ್ಸಿಲ್ವೇನಿಯಾ ವಿಶ್ವವಿದ್ಯಾಲಯದ ಅಧ್ಯಕ್ಷರಾಗಿ ಕಾರ್ಯನಿರ್ವಹಿಸುತ್ತಿದ್ದಾರೆ. ಉನ್ನತ ಶಿಕ್ಷಣ ಕ್ಷೇತ್ರದಲ್ಲಿ ಮೂರು ದಶಕಗಳಿಗಿಂತ ಹೆಚ್ಚಿನ ಅನುಭವ ಹೊಂದಿದ್ದಾರೆ.

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಮತ್ತಷ್ಟು ಮಾಹಿತಿಗಾಗಿ

ರಾಷ್ಟ್ರೀಯ ವಿದ್ಯಮಾನಗಳು ಸೇರಿದಂತೆ ನಾಗರಿಕ ಸೇವಾ ಪರೀಕ್ಷೆಗಳಿಗೆ ಸಂಬಂಧಿಸಿದ ರಾಷ್ಟ್ರ ಮತ್ತು ಅಂತರರಾಷ್ಟ್ರೀಯ ಪ್ರಚಲಿತ ವಿದ್ಯಮಾನಗಳು ಹಾಗೂ ಇನ್ನಿತರ ಮಾಹಿತಿಯ ಲೇಖನಗಳು, ವಿಡಿಯೊಗಳಿಗಾಗಿ ‘ಡೆಕ್ಕನ್‌ಹೆರಾಲ್ಡ್- ಪ್ರಜಾವಾಣಿ ಮಾಸ್ಟರ್‌ಮೈಂಡ್’ ಇ-ಪೇಪರ್‌ಗೆ ಚಂದಾದಾರರಾಗಿ. ಚಂದಕ್ಕಾಗಿ ಪಕ್ಕದಲ್ಲಿರುವ ಕ್ಯೂ ಆರ್ ಕೋಡ್ ಸ್ಕ್ಯಾನ್ ಮಾಡಿ

www.exammastermind.com

ಪಿಯುಸಿ- ಸಿಇಟಿ ಪರೀಕ್ಷೆ ದಿಕ್ಸೂಚಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ, ಬೆಂಗಳೂರು

BIOLOGY

85. Which of the following events would occur in ‘Lac-operon’ of E. coil when the growth medium has high concentration of lactose?

(a) The structural genes fail to produce polycistronic mRNA
(b) The repressor protein binds to RNA polymerase and prevents translation
(c) The repressor protein attaches to the promoter sequence and derepresses the operator
(d) The inducer molecule binds to repressor protein and RNA polymerase binds to promoter sequence.

Ans:(d) Concept of Lac (lactose) operon of E. coil was given by Jacob and Monod. In lac operon when lactose is present, it acts as an inducer molecule Thus forming an inactive repressor. Due to which repressor will fail to bind the operator region and the RNA polymerase binds to the operator, transcripting mRNA.

mRNA produced is known to be polycistronic which on transcription produces all three enzymes, i.e., β galactosidase, permease and transacetylase. Hence, operon will be ‘switched on’ in this situation.

86. In garden pea, round shape of seeds is dominant over wrinkled shape. A pea plant heterozygous for round shape of seed is selfed and 1600 seeds produced during the cross are subsequently geminated. How many seedlings would have the parental phenotype?

(a) 1600 (b) 800
(c) 400 (d) 1200

Ans:(d) Round shape in pea plant is dominant (*R*) over wrinkled (*r*). Thus, pea plant in its heterozygous state is self-crossed



Phenotype = 3:1 (Round: Wrinkled)

Hence, if total 1600 seeds produced during the cross were subsequently germinated. The seeds that would have the parental phenotype will be 1200 (i.e., 1600-400).

87. The mature infective stages of malarial parasite which are transferred from mosquito to man are

(a) sporozoites (b) merozoites
(c) trophozoites (d) gametocytes

Ans: (a) Malaria is a protozoan disease caused by a protozoan Plasmodium species whose transmatting agent is Anopheles (female mosquito). The mature infective stages of malarial parasite which are transferred from female mosquito to man (host) are called sporozoites.

Plasmodium enters the human body as sporozoites through the bite of infected female Anopheles mosquito and these sporozoites reach the liver and multiply within the liver cells attacking RBCs and resulting in their rupture. The rupture RBCs are associated with the release of a toxin called haemozoin (responsible for the high recurring fever and chill/shivering)

88. One of the following refers to Allen’s rule.

(a) If the stressful conditions are localized or remain only for a short duration, an organism either migrates or suspends itself.
(b) Mammals from colder climates have shorter ears and limbs to minimize heat loss
(c) An organism can move from a stressful habitat to a more hospital area and return when the stressful period is over
(d) Low atmospheric pressure in higher altitudes results in altitudes sickness

Ans: (b) Alle’s rule is a biological rule postulated by Joel Asaph Allen in 1877. This rule states that the body shapes and proportions of endotherms vary by climatic temperature by either minimizing exposed surface area to minimize heat loss in cold climates or maximizing heat loss in hot climates. The rule predicts that endotherms from hot climates usually have ears, tails, limbs, snouts, etc., that are long and thin, while animals from cold climates usually have shorter and thicker of those body parts comparatively.

89. Identify the DNA segment which is not a palindromic sequence

(a) 5′ GAATTC 3′
3′ CTTAAG 5′
(b) 5′ CCCGGG 5′
3′ GGGCCC 3′
(c) 5′ GGATCC 3′
3′ GGTACC 5′
(d) 5′ GCGGCCGC 3′
3′ CGCCGGCG 5′

Ans:(c)

CHEMISTRY

122) With regard to the photoelectric effect, identify the correct statement among the following:

a) Number of electrons ejected increases with the increase in work function
b) Number of electrons ejected increases with the increase in the intensity of incident light
c) Energy of ejected electrons increases with the increase in the intensity of incident light
d) Numbers of electrons ejected increases with the increase in the frequency of the incident light

Ans: (b)

Expln:- Photoelectric effect is the emission of electrons from a certain metal surface when it is irradiated with photons or light. The minimum frequency required to eject an electron from a metal surface is called threshold frequency. (υ_o)

The equation for the photoelectric effect is:
$H\upsilon = h\upsilon_o + KE$, where υ = frequency of the incident radiation

Here $h\upsilon_o$ is the work function. The number of electrons ejected does not depend on work function.

The number of electrons ejected increases with the increase in the intensity of incident light, an increase in the intensity of incident light means that the number of photons incident per unit surface area of the metal increases. (Provided the incident photons has its frequency more than the threshold frequency)

The energy of the ejected electrons increases with an increase in the frequency of incident light.

.123) In $H_2 - O_2$ fuel cell the reaction occurring at cathode is

a) $O_2(g) + 2H_2O\ (l) + 4e^- \rightarrow 4\overline{O}H\ (aq)$
b) $H^+(aq) + \overline{O}H\ (aq) \rightarrow H_2O\ (l)$
c) $2H_2\ (g) + O_2(g) \rightarrow 2\ H_2O\ (l)$
d) $H^+ + e^- \rightarrow \frac{1}{2}H_2$

Ans:- a

124) Which one of the following statements is true?

a) Drying of oil involves hydrolysis
b) Saponification of oil yields a diol
c) Refining of oil involves hydrogenation
d) Addition of antioxidant to oil minimizes rancidity

Ans:- d

125) The distinguishing test between methanoic acid and ethanoic acid is

a) Tollen’s test b) Sodium bicarbonate test
c) Litmus test d) Esterification test

Ans:- a {Expln:- Methanoic acid is an example for bifunctional compound containing –CHO group,

O
||
H – C – O – H.

hence it reduces Tollen’s reagent to shining silver mirror.}

126) Which one of the following is an example for homogeneous catalysis?

a) Manufacture of ammonia by Haber’s process
b) Manufacture of sulphuric acid by contact process
c) Hydrogenation of oil
d) Hydrolysis of sucrose in the presence of dil. HCl

Ans:- d

127) The equilibrium constant of the reaction:
$A_{(s)} + 2B^+_{(aq)} \rightleftharpoons A^{2+}_{(aq)} + 2B_{(s)}$. $E^0_{cell} = 0.0295\,V$ is
$\left[\frac{2.303\,RT}{F} = 0.059\right]$

a) 10 b) 2×10^2
c) 3×10^2 d) 2×10^5

Ans:- a

128) Mercury is a liquid metal because...........

a) it has a completely filled s – orbital
b) it has a small atomic size
c) it has a completely filled d – orbital that prevents d-d overlapping of orbitals
d) it has a completely filled d – orbital that causes d-d overlapping

Ans:- c

129)



Y is ....



Ans:- a



ಬಳ್ಳಾರಿ, ತುಮಕೂರು ಜಿಲ್ಲೆಯಲ್ಲಿ ಮಳೆ, ಮನೆಗಳಿಗೆ ನುಗ್ಗಿದ ನೀರು • ಪರದಾಡಿದ ನಾಗರಿಕರು

40 ಹೆಕ್ಟೇರ್ ಪಪ್ಪಾಯ, ದಾಳಿಂಬೆ, ಬಾಳೆ ನಷ್ಟ

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದ ಬಳ್ಳಾರಿ, ತುಮಕೂರು, ಕಲಬುರಗಿ, ಯಾದಗಿರಿ, ಚಾಮರಾಜನಗರ ಸೇರಿದಂತೆ ವಿವಿಧೆಡೆ ಮಂಗಳವಾರ ತಡರಾತ್ರಿ ಹಾಗೂ ಬುಧವಾರ ಮಳೆಯಾಗಿದೆ. ಬಳ್ಳಾರಿಯಲ್ಲಿ 40 ಹೆಕ್ಟೇರ್‌ನಲ್ಲಿ ಬೆಳೆದಿದ್ದ ಪಪ್ಪಾಯ, ದಾಳಿಂಬೆ, ಬಾಳೆ ಹಾಗೂ 25 ಎಕರೆಯಲ್ಲಿ ಬೆಳೆದಿದ್ದ ಮೆಕ್ಕೆ ಜೋಳ ಹಾನಿಯಾಗಿದ್ದು, ಮೂರು ಕುರಿ, ಒಂದು ಎತ್ತು ಮೃತಪಟ್ಟಿವೆ. ಮೂರು ಮನೆಗಳು ಹಾನಿಗೀಡಾಗಿವೆ.

ಬಳ್ಳಾರಿ ತಾಲ್ಲೂಕಿನ ಎತ್ತಿನ ಬೂದಿಹಾಳ, ಬೆಂಚಿ ಕೊಟ್ಯಾಲ್, ಬುರ್‍ರನಾಯಕನ ಹಳ್ಳಿಯಲ್ಲಿ ಬೆಳೆ ಹಾನಿಯಾಗಿದ್ದು, ಇವು ಮುಂಡ್ಲೂರಿನ ಮೂವರು ರೈತರಿಗೆ ಸೇರಿವೆ. ಪಪ್ಪಾಯ ಮತ್ತು ಬಾಳೆ ಗಿಡಗಳು ಕಾಯಿ ಸಮೇತ ಸಂಪೂರ್ಣ ನೆಲ ಕಚ್ಚಿವೆ. ದಾಳಿಂಬೆ ಕವರ್ ಮಾಡಲಾಗಿದ್ದ ಬಿಳಿ ಹಾಗೂ ಹಸಿರು ಬಣ್ಣದ ನೆಟ್ ಕಳಚಿ ಬಿದ್ದಿವೆ. ಇನ್ನೂ ನಷ್ಟದ ಅಂದಾಜು ಮಾಡಿಲ್ಲ.

ಬೆಳಗಿನ ಜಾವ 4 ಗಂಟೆ ಸುಮಾರಿಗೆ ಆರಂಭವಾದ ಮಳೆ ಎರಡು ತಾಸು ಎಡೆಬಿಡದೆ ಸುರಿಯಿತು. ಆಗಾಗ್ಗೆ ಗಾಳಿಯೂ ರಭಸವಾಗಿ ಬೀಸಿದ್ದರಿಂದ ತೋಟಗಾರಿಕೆ ಬೆಳೆ ನೆಲಕಚ್ಚಿವೆ ಎಂದು ರೈತರು ತಿಳಿಸಿದ್ದಾರೆ.

ಬಳ್ಳಾರಿ ನಗರದಲ್ಲೂ ತಗ್ಗು ಪ್ರದೇಶಗಳಿಗೆ ನೀರು ನುಗ್ಗಿದೆ. ನೀರು ಹರಿಯದೆ ಚರಂಡಿಗಳು ಕಟ್ಟಿಕೊಂಡಿವೆ.

ತುಮಕೂರು ವರದಿ: ನಗರ ಹಾಗೂ ಜಿಲ್ಲೆಯ ವಿವಿಧೆಡೆ ಮಂಗಳವಾರ ರಾತ್ರಿ ಉತ್ತಮ ಮಳೆಯಾಗಿದೆ. ಸಿದ್ಧಗಂಗಾ ಬಡಾವಣೆಯಲ್ಲಿ ಮನೆಗಳಿಗೆ ನೀರು ನುಗ್ಗಿದ್ದು, ಜನರು ಪರದಾಡಿದರು. ನಿವಾಸಿಗಳು ರಾತ್ರಿ ಜಾಗರಣೆ ಮಾಡುವಂತಾಯಿತು. ಬೆಳಿಗ್ಗೆ ಮೋಟರ್ ಸಹಾಯದಿಂದ ಮನೆಯಲ್ಲಿ ತುಂಬಿಕೊಂಡಿದ್ದ ನೀರನ್ನು ಹೊರಗಡೆ ಹಾಕಿದರು.

ಬಟವಾಡಿಯ ಚೌಡೇಶ್ವರಿ ನಗರದಲ್ಲಿ ಎಪಿಎಂಸಿ ಮಾರುಕಟ್ಟೆಯ ಕಾಂಪೌಂಡ್ ಕುಸಿದು ಮನೆಗೆ ಹಾನಿಯಾಗಿದೆ. ಬೈಕ್ ಸಂಪೂರ್ಣ ಜಖಂಗೊಂಡಿದೆ. ಗೋಡೆ ಕುಸಿದ ಪರಿಣಾಮ ಮನೆಗಳಿಗೆ ನೀರು ನುಗ್ಗಿದ್ದು, ಮನೆಯಲ್ಲಿದ್ದ ವಸ್ತುಗಳೆಲ್ಲವೂ ನೀರು ಪಾಲಾಗಿವೆ.

ಕನಕಪುರ ವರದಿ: ಮಂಗಳವಾರ ರಾತ್ರಿ ಸುರಿದ ಬಿರುಗಾಳಿ ಸಹಿತ ಮಳೆಗೆ ಕನಕಪುರ ತಾಲ್ಲೂಕಿನ ಕಾಳೇಗೌಡದೊಡ್ಡಿ ಗ್ರಾಮದಲ್ಲಿ 40 ವರ್ಷದ ಹಳೆಯದಾದ ಹಲಸಿನ ಮರವೊಂದು ಎರಡು ಹೋಳಾಗಿದೆ. ಗ್ರಾಮದ ನಂಜೇಗೌಡ ಎಂಬ ರೈತರಿಗೆ ಸೇರಿದ ಮರ ವರ್ಷಕ್ಕೆ ಸುಮಾರು 400 ರಿಂದ 500 ಹಲಸಿನ ಕಾಯಿ ಬಿಡುತ್ತಿತ್ತು.

ಕಲಬುರಗಿ ವರದಿ: ಕಲಬುರಗಿ ಮತ್ತು ಯಾದಗಿರಿ ಜಿಲ್ಲೆಯ ವಿವಿಧೆಡೆ ಬುಧವಾರ ನಸುಕಿನಲ್ಲಿ ಮಳೆಯಾಯಿತು. ಕಲಬುರಗಿ ಜಿಲ್ಲೆಯ ಚಿತ್ತಾಪುರದಲ್ಲಿ ನಸುಕಿನ ಜಾವ 5 ರಿಂದ 6.30ರವರೆಗೆ ಮಳೆ ಸುರಿಯಿತು. ಮಳೆಯಿಂದ ಕೃಷಿ ಚಟುವಟಿಕೆಗಳಿಗೆ ತುಂಬಾ ಅನುಕೂಲವಾಗಲಿದೆ ಎಂದು ರೈತರು ಹರ್ಷಗೊಂಡರು.

ಯಾದಗಿರಿ ಜಿಲ್ಲೆಯ ಯರಗೋಳ, ಸೈದಾಪುರ, ಸುರಪುರ ತಾಲ್ಲೂಕಿನ ಕೆಂಭಾವಿ, ನಾರಾಯಣಪುರ, ಕಕ್ಕೇರಾ, ಗುರುಮಠಕಲ್‌ನಲ್ಲಿ ಮಳೆಯಾಯಿತು.

ಚಾಮರಾಜನಗರ ವರದಿ: ಜಿಲ್ಲಾ ಕೇಂದ್ರ ಸೇರಿದಂತೆ ತಾಲ್ಲೂಕಿನಲ್ಲಿ ಮಂಗಳವಾರ ರಾತ್ರಿ ಅರ್ಧಗಂಟೆಗೂ ಹೆಚ್ಚು ಕಾಲ ಬಿರುಸಾಗಿ ಮಳೆಯಾಯಿತು. ಮುಂಜಾನೆವರೆಗೂ ಆಗಾಗ ಸುರಿಯಿತು. ಯಳಂದೂರು ಪಟ್ಟಣ ಹಾಗೂ ತಾಲ್ಲೂಕು ವ್ಯಾಪ್ತಿಯಲ್ಲಿ ಉತ್ತಮ ಮಳೆಯಾಗಿದೆ. ಕೊಳ್ಳೇಗಾಲ ಮತ್ತು ಹನೂರು ತಾಲ್ಲೂಕಿನಲ್ಲಿ ಸಾಧಾರಣ ಮಳೆಯಾಗಿದೆ. ಗುಂಡ್ಲುಪೇಟೆ ತಾಲ್ಲೂಕಿನಲ್ಲಿ ಅಲ್ಲಲ್ಲಿ ಚದುರಿದಂತೆ ಮಳೆಯಾಗಿದೆ.

ಬಳ್ಳಾರಿ ತಾಲ್ಲೂಕಿನಲ್ಲಿ ಬುಧವಾರ ಬೆಳಗಿನ ಜಾವ ಸುರಿದ ಮಳೆಗೆ ಪಪ್ಪಾಯ ಗಿಡಗಳು ನೆಲಕಚ್ಚಿವೆ

ತುಮಕೂರಿನ ಆಳಶೆಟ್ಟಿಕೆರೆ ಪಾಳ್ಯದ ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ಸ್ವೀಕಾರ ಕೇಂದ್ರದ ಆವರಣವು ಮಳೆಯಿಂದ ಜಲಾವೃತವಾಗಿದೆ.

ದಕ್ಷಿಣ ಒಳನಾಡು: ಇಂದು ಗುಡುಗುಸಹಿತ ಮಳೆ ಸಾಧ್ಯತೆ

ಬೆಂಗಳೂರು: ದಕ್ಷಿಣ ಒಳನಾಡಿನ ಎಲ್ಲ ಜಿಲ್ಲೆಗಳಲ್ಲಿ ಗುರುವಾರ ಗುಡುಗು ಸಹಿತ ಮಳೆಯಾಗಲಿದ್ದು, ಐದು ದಿನಗಳು ಮಳೆ ಮುಂದುವರಿಯುವ ಸಾಧ್ಯತೆಯಿದೆ ಎಂದು ಹವಾಮಾನ ಇಲಾಖೆ ತಿಳಿಸಿದೆ.

ಬೆಂಗಳೂರು ಗ್ರಾಮಾಂತರ, ಬೆಂಗಳೂರು ನಗರ, ಚಾಮರಾಜನಗರ, ಚಿಕ್ಕಬಳ್ಳಾಪುರ, ಚಿಕ್ಕಮಗಳೂರು, ಚಿತ್ರದುರ್ಗ, ದಾವಣಗೆರೆ, ಹಾಸನ, ಕೊಡಗು, ಕೋಲಾರ, ಮಂಡ್ಯ, ಮೈಸೂರು, ರಾಮನಗರ, ಶಿವಮೊಗ್ಗ ಹಾಗೂ ತುಮಕೂರಿನಲ್ಲಿ ಗುಡುಗು ಸಹಿತ ಮಳೆಯಾಗುವ ಸಾಧ್ಯತೆಯಿದೆ.

ಕರಾವಳಿಯ ಎಲ್ಲ ಜಿಲ್ಲೆಗಳು ಹಾಗೂ ಉತ್ತರ ಒಳನಾಡಿನ ಕಲಬುರಗಿ, ರಾಯಚೂರು, ಯಾದಗಿರಿ ಹಾಗೂ ಬೀದರ್ ಜಿಲ್ಲೆಯ ಒಂದೆರಡು ಕಡೆ ಮಳೆಯಾಗುವ ಸಾಧ್ಯತೆಯಿದೆ. ಉಳಿದೆಡೆ ಒಣಹವೆ ಇರಲಿದೆ ಎಂದು ಇಲಾಖೆ ಮುನ್ಸೂಚನೆ ನೀಡಿದೆ.

ಕರಾವಳಿ ಹಾಗೂ ಉತ್ತರ ಒಳನಾಡಿನ ಕೆಲ ಜಿಲ್ಲೆಗಳಲ್ಲಿ ಮುಂದಿನ ಐದು ದಿನಗಳು ಸಾಧಾರಣ ಮಳೆಯಾಗುವ ಸಾಧ್ಯತೆಯಿದೆ. ಬೆಂಗಳೂರಿನಲ್ಲಿ ಮೋಡ ಕವಿದ ವಾತಾವರಣ ಇರಲಿದೆ. ಸಂಜೆ ಅಥವಾ ರಾತ್ರಿ ಅವಧಿಯಲ್ಲಿ ಮಳೆಯಾಗಬಹುದು ಎಂದು ಇಲಾಖೆ ಹೇಳಿದೆ.

ಬುಧವಾರ ಬೆಳಿಗ್ಗೆ 8.30ಕ್ಕೆ ಅನ್ವಯಿಸಿದಂತೆ ಹಿಂದಿನ 24 ಗಂಟೆಯ ಅವಧಿಯಲ್ಲಿ ತುಮಕೂರಿನಲ್ಲಿ ಗರಿಷ್ಠ (11 ಸೆಂ.ಮೀ.) ಮಳೆಯಾಗಿದೆ. ಪಾವಗಡದಲ್ಲಿ 9 ಸೆಂ.ಮೀ., ರಾಮನಗರದ ಚನ್ನಪಟ್ಟಣದಲ್ಲಿ 7 ಸೆಂ.ಮೀ., ರಾಮನಗರ ಹಾಗೂ ಚಾಮರಾಜನಗರದ ಹರದನಹಳ್ಳಿ ಕೆವಿಕೆಯಲ್ಲಿ ತಲಾ 5 ಸೆಂ.ಮೀ., ವಿಜಯಪುರದ ನಾಲವತವಾಡ ಹಾಗೂ ತುಮಕೂರಿನ ಕುಣಿಗಲ್‌ನಲ್ಲಿ ತಲಾ 4 ಸೆಂ.ಮೀ. ಮಳೆಯಾಗಿದೆ. ಉಳಿದೆಡೆ ಈ ಪ್ರಮಾಣ 4 ಸೆಂ.ಮೀ.ಗಿಂತ ಕಡಿಮೆ ವರದಿಯಾಗಿದೆ.

ಪ್ರಜಾವಾಣಿ ಪ್ರಜಾಧ್ವನಿ
ಜನರ ಮನದಾಳದ ಮಾತು

ಪಿಎಫ್ಐ ಜೊತೆಗೆ ಬಜರಂಗದಳ ಹೋಲಿಸುವ ಮೂಲಕ ಕಾಂಗ್ರೆಸ್ ಸ್ವತಃ ತನ್ನನ್ನು ಪೇಚಿನ ಸ್ಥಿತಿಗೆ ದೂಡಿ ಕೊಂಡಿದೆ ಎಂದು ನೀವು ಭಾವಿಸುತ್ತೀರಾ?

ಕಳೆದ ಬಾರಿಯ ಪ್ರಶ್ನೆಯ ಜನಾಭಿಪ್ರಾಯ: ಹೌದು 80%, ಅಲ್ಲ 20%

ನಿಮ್ಮ ಅನಿಸಿಕೆ ಹೌದು ಆಗಿದ್ದರೆ PVA, ಇಲ್ಲ ಆಗಿದ್ದರೆ PVB ಎಂದು ಟೈಪ್ ಮಾಡಿ ಇಂದು ಸಂಜೆ 5ರೊಳಗೆ 92460 44440ಗೆ SMS ಮಾಡಿ

ಪ್ರಜಾವಾಣಿ ಶೈಕ್ಷಣಿಕ ನೆರವು ನಿಧಿ

ಬಡ ವಿದ್ಯಾರ್ಥಿಗಳಿಗೆ ಉದಾರ ಕೊಡುಗೆ ನೀಡಿ

ಪ್ರಜಾವಾಣಿ-ಡೆಕ್ಕನ್ ಹೆರಾಲ್ಡ್ ಪತ್ರಿಕೆಗಳು ಎಸ್‌ಎಸ್‌ಎಲ್‌ಸಿಯಲ್ಲಿ ಪಾಸಾಗಿರುವ ಬಡ ವಿದ್ಯಾರ್ಥಿಗಳಿಗೆ ಆರ್ಥಿಕ ನೆರವು ನೀಡಲಿವೆ. ಇದಕ್ಕಾಗಿ ದಾನಿಗಳು ಚೆಕ್ ಅಥವಾ ಡಿ.ಡಿ.ರೂಪದಲ್ಲಿ ಹಣವನ್ನು 'Deccan Herald-Prajavani relief Trust'ಗೆ ಕಳುಹಿಸಬಹುದು. ದಾನಿಗಳು ಹೆಸರು, ವಿಳಾಸ, ಮೊಬೈಲ್ ಸಂಖ್ಯೆ, ಆಧಾರ್/ಪ್ಯಾನ್ ಕಾರ್ಡ್ ಪ್ರತಿಯನ್ನು dept.finc@printersmysore.co.inಗೆ ಮೇಲ್ ಕಳುಹಿಸಿ.

ಆನ್‌ಲೈನ್/ಚೆಕ್ ಮೂಲಕವೂ ಹಣ ವರ್ಗಾಯಿಸಬಹುದು. ₹1,000ಕ್ಕಿಂತ ಹೆಚ್ಚು ಹಣ ನೀಡುವವರ ಹೆಸರನ್ನು ಪತ್ರಿಕೆಗಳಲ್ಲಿ ಪ್ರಕಟಿಸಲಾಗುವುದು. ಸೆಕ್ಷನ್ 80 ಜಿ ಅನ್ವಯ ಆದಾಯ ತೆರಿಗೆ ವಿನಾಯಿತಿ ಇದೆ.

ಆನ್‌ಲೈನ್‌ನಲ್ಲಿ ಹಣ ಸಂದಾಯ ಮಾಡುವವರು ಕೆಳಗಿನ ಕೋಡ್ ಸ್ಕ್ಯಾನ್ ಮಾಡಿ ಅಥವಾ ಲಿಂಕ್ ಬಳಸಿ
https://bit.ly/3xFpoz4

ಬ್ಯಾಂಕ್‌ಗೆ ನೇರವಾಗಿ ಹಣ ಸಂದಾಯ ಮಾಡುವವರು ಕೆಳಗಿನ ವಿವರ ಬಳಸಿ
'Deccan Herald-Prajavani Relief Trust'
Canara Bank, Cantonment Branch
A/c no. - 0404101200385
IFSC code - CNRB0000404
MICR Code - 560015009

ಸೂಚನೆ: ದಾನಿಗಳು ಲಕೋಟೆ ಮೇಲೆ ಶೈಕ್ಷಣಿಕ ನೆರವಿಗೆ ಕೊಡುಗೆ ಎಂದು ನಮೂದಿಸಬೇಕು

ವಿಳಾಸ: ಮ್ಯಾನೇಜರ್, ಡೆಕ್ಕನ್ ಹೆರಾಲ್ಡ್–ಪ್ರಜಾವಾಣಿ ಪರಿಹಾರ ಟ್ರಸ್ಟ್, ನಂ. 75, ಮಹಾತ್ಮ ಗಾಂಧಿ ರಸ್ತೆ ಬೆಂಗಳೂರು – 560001

ಶೈಕ್ಷಣಿಕ ನೆರವು, ವಿದ್ಯಾರ್ಥಿ ಮಾತು

ಆರ್ಥಿಕ ಹೊರೆ ಕಡಿಮೆಯಾಯಿತು

ವಿದ್ಯಾರ್ಥಿ ವೇತನಕ್ಕಾಗಿ ಹಲವು ಸಂಘ ಸಂಸ್ಥೆಗಳಿಗೆ ಅರ್ಜಿ ಹಾಕಿದ್ದರೂ ಸ್ಕಾಲರ್‌ಶಿಪ್ ಬರಲಿಲ್ಲ. 'ಪ್ರಜಾವಾಣಿ'ಗೆ ಅರ್ಜಿ ಹಾಕಿದ ಒಂದು ತಿಂಗಳಲ್ಲಿ ವಿದ್ಯಾರ್ಥಿ ವೇತನ ಬಂತು. ಕಾಲೇಜಿನ ವಾರ್ಷಿಕ ಶುಲ್ಕ ಕಟ್ಟಲು ಅದು ತುಂಬ ಸಹಾಯವಾಯಿತು. ತಂದೆಯ ಮೇಲಿನ ಆರ್ಥಿಕ ಹೊರೆಯೂ ಕಡಿಮೆ ಮಾಡಿತು. ಮುಂದೆ ದೊಡ್ಡವನಾಗಿ 'ಪ್ರಜಾವಾಣಿ' ನೀಡಿದ ಸಹಾಯದಂತೆ ಬೇರೆಯವರಿಗೂ ನೆರವಾಗುವಂತೆ ನನ್ನ ತಂದೆ ಕಿವಿಮಾತು ಹೇಳಿದ್ದಾರೆ.

ವಿಶಾಲ್ ಮಾಳಗೆ, ನಿಂಬರ್ಗಾ, ಕಲಬುರಗಿ ಜಿಲ್ಲೆ

ಕಾಲೇಜಿನ ಶುಲ್ಕ ಭರಿಸಿದೆ

'ಪ್ರಜಾವಾಣಿ' ನೀಡಿದ ವಿದ್ಯಾರ್ಥಿ ವೇತನವನ್ನು ಕಾಲೇಜಿನ ಶುಲ್ಕ ಭರಿಸಲು ಬಳಸಿಕೊಂಡೆ. ಪತ್ರಿಕೆ ಮೂಲಕ ದೊರೆತ ಹಣಕಾಸಿನ ಪ್ರೋತ್ಸಾಹ ನನ್ನಂತ ಹಲವು ವಿದ್ಯಾರ್ಥಿಗಳಿಗೆ ಅನುಕೂಲ ಕಲ್ಪಿಸಿದೆ. ಪತ್ರಿಕಾ ಬಳಗಕ್ಕೆ ಧನ್ಯವಾದಗಳು. ಈ ಪ್ರೋತ್ಸಾಹ ಹೀಗೆಯೇ ಮುಂದುವರಿಯಲಿ ಎಂದು ಆಶಿಸುವೆ.

ಕೀರ್ತನಾ ಎಚ್.ವಿ., ಶಿವಮೊಗ್ಗ

ಬಜರಂಗದಳ: ಮತ್ತೆ ಜಟಾಪಟಿ

ಮತೀಯ ಗೂಂಡಾಗಿರಿ ತಡೆಗೆ ಕ್ರಮ: ಡಿಕೆಶಿ ಸಮರ್ಥನೆ

ಬೆಂಗಳೂರು: 'ಮತೀಯ ಗೂಂಡಾಗಿರಿಯ ಮೂಲಕ ಬಜರಂಗದಳದವರು ಕಾನೂನು ಉಲ್ಲಂಘನೆ ಮಾಡುತ್ತಿದ್ದರು. ಅವರು ಕಾನೂನು ಸುವ್ಯವಸ್ಥೆಯೊಳಗೆ ಇರಬೇಕು ಎಂಬುದು ನಮ್ಮ ಉದ್ದೇಶ' ಎಂದು ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಸಮರ್ಥಿಸಿದರು.

ಸಿದ್ದರಾಮಯ್ಯ ಮತ್ತು ರಣದೀಪ್ ಸಿಂಗ್ ಸುರ್ಜೆವಾಲಾ ಜೊತೆ ಸಭೆಯ ಬಳಿಕ ಸುದ್ದಿಗಾರರ ಜೊತೆ ಮಾತನಾಡಿದ ಅವರು, 'ನಾವು ಕೂಡ ಹನುಮನ ಭಕ್ತರೇ. ಮೋದಿ ಅವರು ನಮ್ಮ ವಿರುದ್ಧ ಟೀಕೆ ಮಾಡುವುದು ಬಿಟ್ಟು, ರಾಜ್ಯಕ್ಕೆ ನೀಡಿರುವ ಕೊಡುಗೆ ಏನು' ಎಂದು ಪ್ರಶ್ನಿಸಿದರು.

'ಬಿಜೆಪಿಯವರು ನಾನು ಬಜರಂಗಿ ಎಂದು ಆಂದೋಲನ ಮಾಡುವ ಮೊದಲು, ರಾಜ್ಯದ ಜನರ ಹೊಟ್ಟೆಗೆ ಏನು ಕೊಟ್ಟಿದ್ದಾರೆ? ಎಷ್ಟು ಉದ್ಯೋಗ ಕೊಟ್ಟಿದ್ದಾರೆ. ಎಷ್ಟು ಅನುದಾನ ನೀಡಿದ್ದಾರೆ? ಎಷ್ಟು ಬಂಡವಾಳ ಹೂಡಿಕೆ ತಂದಿದ್ದಾರೆ ಎಂದು ಹೇಳಲಿ' ಎಂದರು.

ಹನುಮಾನ್ ಚಾಲೀಸ ಪಠಣಕ್ಕೆ ಕೆಲವು ಸಂಘಟನೆಗಳ ಕರೆ ನೀಡಿರುವ ಬಗ್ಗೆ ಕೇಳಿದಾಗ, 'ನಾವು ನಿತ್ಯ ಹನುಮ ಚಾಲೀಸ ಪಠಣ ಮಾಡುತ್ತೇವೆ. ಅವರು ಮಾತ್ರ ಹನುಮನ ಭಕ್ತರೇ? ಯಾವ ಸಂಘಟನೆಗಳು ಸಮಾಜದ ಶಾಂತಿಗೆ ಭಂಗ ಮಾಡುತ್ತವೆಯೋ ಅಂಥ ಸಂಘಟನೆಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಣಾಳಿಕೆಯಲ್ಲಿ ಹೇಳಿದ್ದೇವೆ' ಎಂದರು.

'1,500 ದೇವಾಲಯ ಕೆಡವಿದಾಗ ಪ್ರತಿಭಟಿಸಲಿಲ್ಲವೇಕೆ: ಸುರ್ಜೇವಾಲಾ

ಒಂದನೇ ಪುಟದಿಂದ...

'ಇದು ಕೋಮು ವಿಚಾರವಲ್ಲ. ಸಂವಿಧಾನ ಉಲ್ಲಂಘನೆ ಮಾಡುವವರು ಹಾಗೂ ಕಾನೂನು ಕೈಗೆತ್ತಿಕೊಳ್ಳುವವರ ವಿರುದ್ಧ ಕ್ರಮ ಕೈಗೊಳ್ಳಲಾಗುವುದು ಎಂದು ಪ್ರಣಾಳಿಕೆಯಲ್ಲಿ ಹೇಳಲಾಗಿದೆ. ದಲಿತ ಯುವಕ ದಿನೇಶ್ ಎಂಬಾತನನ್ನು ಬಜರಂಗದಳದವರು ಹಾಡಹಗಲೇ ಹತ್ಯೆ ಮಾಡಿದರೆ ಕಾನೂನು ಉಲ್ಲಂಘನೆ ಆಗುವುದಿಲ್ಲವೇ' ಎಂದೂ ಪ್ರಶ್ನಿಸಿದರು.

ಮಂದಿರಗಳಲ್ಲಿ ಸಾಮೂಹಿಕ ಹನುಮಾನ್ ಚಾಲೀಸಾ ಪಠಣ ಇಂದು

ಮಂಗಳೂರು: 'ಬಜರಂಗ ದಳ ನಿಷೇಧಿಸುವ ಪ್ರಸ್ತಾಪ ಮಾಡಿರುವುದನ್ನು ವಿರೋಧಿಸಿ ರಾಜ್ಯದ ಎಲ್ಲ ಮಂದಿರಗಳಲ್ಲಿ ಮೇ 4ರಂದು ಸಂಜೆ 7 ಗಂಟೆಗೆ ಸಾಮೂಹಿಕ ಹನುಮಾನ ಚಾಲೀಸಾ ಪಠಣ ಕಾರ್ಯಕ್ರಮ ಹಮ್ಮಿಕೊಳ್ಳಲಾಗಿದೆ' ಎಂದು ವಿಶ್ವ ಹಿಂದೂ ಪರಿಷತ್, ಬಜರಂಗದಳದ ಕರ್ನಾಟಕ ದಕ್ಷಿಣ ಪ್ರಾಂತದ ಸಹ ಕಾರ್ಯದರ್ಶಿ ಶರಣ್ ಪಂಪ್‌ವೆಲ್ ತಿಳಿಸಿದರು.

'ಎಲ್ಲ ದೇವಸ್ಥಾನ, ದೈವಸ್ಥಾನಗಳಲ್ಲಿ ಸಾಮೂಹಿಕ ಹನುಮಾನ್ ಚಾಲೀಸಾ ಪಠಣಕ್ಕೆ ಕರೆ ನೀಡಲಾಗಿದೆ. ಧರ್ಮಕ್ಕೆ ಸಂಕಟ ಎಸಗಿರುವ ಈ ಸಂದರ್ಭದಲ್ಲಿ ಎಲ್ಲ ಭೇದ ಬದಿಗಿಟ್ಟು ಧರ್ಮ ರಕ್ಷಣೆ ಕಾರ್ಯದಲ್ಲಿ ಹಿಂದೂಗಳು ಭಾಗಿಯಾಗಬೇಕು' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಕಾಂಗ್ರೆಸ್ ಪ್ರಣಾಳಿಕೆಯಲ್ಲಿರುವ ಬಜರಂಗ ದಳ ನಿಷೇಧದ ಪ್ರಸ್ತಾಪವನ್ನು ಹಿಂಪಡೆಯಬೇಕು. ಯಾವುದೇ ಕಾರಣಕ್ಕೂ ಹಿಂದೂಗಳನ್ನು ಕೆಣಕಬಾರದು. ಈಗಾಗಲೇ ನಿಷೇಧವಾಗಿರುವ ಪಿಎಫ್ಐ ಜತೆಗೆ ಬಜರಂಗ ದಳವನ್ನು ಹೋಲಿಕೆ ಮಾಡುವುದನ್ನು ಒಪ್ಪಲು ಸಾಧ್ಯವಿಲ್ಲ' ಎಂದು ಮಾಣಿಲ ಶ್ರೀಧಾಮ ಮಹಾಲಕ್ಷ್ಮಿ ಕ್ಷೇತ್ರದ ಮೋಹನದಾಸ ಪರಮಹಂಸ ಸ್ವಾಮೀಜಿ, ಗುರುಪುರ ವಜ್ರದೇಹಿ ಮಠದ ರಾಜಶೇಖರಾನಂದ ಸ್ವಾಮೀಜಿ ಆಗ್ರಹಿಸಿದರು.

ಮೈಸೂರು: 'ಬಾಂಬೆ ಟಿಫಾನಿಸ್' ಮೇಲೆ ಐ.ಟಿ ದಾಳಿ

ಪ್ರಜಾವಾಣಿ ವಾರ್ತೆ

ಮೈಸೂರು: ನಗರದ ದೇವರಾಜ ಅರಸು ರಸ್ತೆಯಲ್ಲಿರುವ ಬಾಂಬೆ ಟಿಫಾನಿಸ್ ಹಾಗೂ ನಗರದ ಯಾದವಗಿರಿ ಹಾಗೂ ಆರ್‌ಟಿಒ ಕಚೇರಿ ಬಳಿಯಿರುವ ಉದ್ಯಮಿ ಸುಬ್ರಹ್ಮಣ್ಯ ರೈ ಒಡೆತನದ ನಿವಾಸದ ಮೇಲೆ ಆದಾಯ ತೆರಿಗೆ ಅಧಿಕಾರಿಗಳು ಬುಧವಾರ ದಾಳಿ ಕಾರ್ಯಾಚರಣೆ ನಡೆಸಿದ್ದಾರೆ.

ಸೋಮವಾರ ಸಂಜೆ ರಿಂಗ್ ರಸ್ತೆಯ ಸಮೀಪದ ಮನೆಯಲ್ಲಿ ಕಾರ್ಯಾಚರಣೆ ನಡೆಸಿದ್ದ ಅಧಿಕಾರಿಗಳು, ಮನೆ ಮುಂಭಾಗದ ಮರದಲ್ಲಿ ಮಾವಿನ ಹಣ್ಣಿನ ಬಾಕ್ಸ್‌ನಲ್ಲಿ ಅವಿತಿಟ್ಟಿದ್ದ ₹ 1 ಕೋಟಿ ನಗದು ವಶಪಡಿಸಿಕೊಂಡಿದ್ದರು.

ಪುತ್ತೂರು ತಾಲೂಕಿನ ಕೋಡಿಂಬಾಡಿಯವರಾದ ಸುಬ್ರಹ್ಮಣ್ಯ, ಮೈಸೂರಿನಲ್ಲಿ ರಿಯಲ್ ಎಸ್ಟೇಟ್, ಹೋಟೆಲ್ ಸೇರಿದಂತೆ ಹಲವು ಉದ್ಯಮಗಳಲ್ಲಿ ತೊಡಗಿಸಿಕೊಂಡಿದ್ದಾರೆ.

ಮತೀಯ ಗೂಂಡಾಗಿರಿ: ಮತ್ತಿಬ್ಬರ ಬಂಧನ

ಪುತ್ತೂರು (ದಕ್ಷಿಣ ಕನ್ನಡ): ಇಲ್ಲಿ ಮಂಗಳವಾರ ನಡೆದ ಮತೀಯ ಗೂಂಡಾಗಿರಿ ಪ್ರಕರಣ ಸಂಬಂಧ ಮತ್ತಿಬ್ಬರನ್ನು ನಗರ ಠಾಣೆಯ ಪೊಲೀಸರು ಬಂಧಿಸಿದ್ದಾರೆ. ಈ ಪ್ರಕರಣದಲ್ಲಿ ಬಂಧಿತರ ಸಂಖ್ಯೆ ನಾಲ್ಕಕ್ಕೆ ಏರಿದೆ.

ತಾಲ್ಲೂಕಿನ ಮರೀಲ್ ಕಾಡುಮನೆ ನಿವಾಸಿ ಕೆ. ಇಬ್ರಾಹಿಂ ಅವರ ಪುತ್ರ ಮಹಮ್ಮದ್ ಫಾರಿಶ್ (18) ಹಿಂದೂ ಧರ್ಮದ ಯುವತಿಯೊಂದಿಗೆ ಇದ್ದಾಗ ಗುಂಪೊಂದು ಮಂಗಳವಾರ ಹಲ್ಲೆ ನಡೆಸಿತ್ತು. ಯುವಕನ ಮೈಮೇಲೆ ಬಾಸುಂಡೆಗಳು ಎದ್ದಿದ್ದವು.

ಕೃತ್ಯಕ್ಕೆ ಸಂಬಂಧಿಸಿದಂತೆ ಒಳಮೊಗ್ರು ಗ್ರಾಮದ ದರ್ಬೆತ್ತಡ್ಕ ಸಿರ್ಕಾಜೆ ಮನೆಯ ಪ್ರದೀಪ್ ಎಸ್ (19) ಎಂಬಾತನ್ನು ಪೊಲೀಸರು ಬಂಧಿಸಿದ್ದರು. 'ಪ್ರಕರಣದ ಇತರ ಆರೋಪಿಗಳಾದ ಕೆದಂಬಾಡಿ ಗ್ರಾಮದ ತಿಂಗಳಾಡಿಯ ದಿನೇಶ್ ಗೌಡ (25), ಗುತ್ತುಮನೆಯ ನಿಶಾಂತ್ ಕುಮಾರ್ ಜಿ. (19) ಆರ್ಯಾಪು ಗ್ರಾಮದ ಕೊಟ್ಟಾರು ಮನೆಯ ಪ್ರಜ್ವಲ್ (23) ಎಂಬಾತನನ್ನು ನಂತರ ಬಂಧಿಸಲಾಗಿದೆ' ಎಂದು ಪೊಲೀಸರು ಮಾಹಿತಿ ನೀಡಿದ್ದಾರೆ.

ಸುಧಾ, ಮಯೂರ ಓದಿರಿ

ಪುರಸಭೆ ಕಾರ್ಯಾಲಯ, ಚಂದಾಪುರ
ಆನೇಕಲ್ ತಾಲ್ಲೂಕು, ಬೆಂಗಳೂರು ನಗರ ಜಿಲ್ಲೆ – 560099
e-mail: itstaff_ulb_chandapura@yahoo.com Phone No. 080-27832411

ಸಂಖ್ಯೆ: ಚಂ.ಪು.ಕಾ/ತಾ.ಶಾ/ಇಪ್ರೋ/ಟೆಂ/01/2023–24 ದಿನಾಂಕ: 02/05/2023

ಅಲ್ಪಾವಧಿ ಟೆಂಡರ್ ಆಹ್ವಾನ

ಕರ್ನಾಟಕ ಸಾರ್ವಜನಿಕ ಸಂಗ್ರಹಣೆಗಳಲ್ಲಿ ಪಾರದರ್ಶಕತೆ ಅಧಿನಿಯಮ 1999 ಮತ್ತು ನಿಯಮಗಳು ಡಾಕ್ಯೂಮೆಂಟ್ ನಿಯಮಗಳನ್ವಯ, 2023–24ನೇ ಸಾಲಿನ ಪುರಸಭಾ ನಿಧಿಯಡಿಯಲ್ಲಿ ಕಾಮಗಾರಿಯನ್ನು ಕೈಗೊಳ್ಳಲು ಲೋಕೋಪಯೋಗಿ ಇಲಾಖೆಯ ನೊಂದಾಯಿತ ಅರ್ಹ ದರ್ಜೆ ಗುತ್ತಿಗೆದಾರರಿಂದ ಕಾಮಗಾರಿಗಳನ್ನು ನಿರ್ವಹಿಸಲು ಇ-ಪ್ರೋಕ್ಯೂರ್‌ಮೆಂಟ್ ಪೋರ್ಟಲ್ ಮುಖಾಂತರ ಅಹ್ವಾನಿಸಲಾಗಿದೆ. ಅರ್ಹ ಗುತ್ತಿಗೆದಾರರು ಇಲಾಖಾ ವೆಬ್‌ಸೈಟ್‌ನಲ್ಲಿ ಟೆಂಡರ್ ವಿವರಗಳನ್ನು ಪಡೆದು ಭಾಗವಹಿಸುವುದು.

ಕ್ರ. ಸಂ.	ಕಾಮಗಾರಿ ಹೆಸರು	ಇಂಡೆಂಟ್ ಸಂಖ್ಯೆ	ಅಂದಾಜು ಮೊತ್ತ (ರೂ.ಲಕ್ಷಗಳಲ್ಲಿ)
1	Providing and Construction of Chain link fencing to Chandapura tank of Anekal Taluk, Bangalore Urban District, TMC Chandapura Limit.	DMA/2023-24/ OW/WORK_ INDENT149986	88.50

ವೇಳಾಪಟ್ಟಿ: 1) ಇ-ಪ್ರೋಕ್ಯೂರ್‌ಮೆಂಟ್ ಮೂಲಕ ದರಗಳನ್ನು ನಮೂದಿಸಿ ಟೆಂಡರ್ ಸಲ್ಲಿಸುವ ಕೊನೆಯ ದಿನಾಂಕ: 11/05/2023 ಮಧ್ಯಾಹ್ನ 3.00 ಗಂಟೆವರೆಗೆ. 2) ಸ್ವೀಕೃತವಾದ ಟೆಂಡರ್ ತಾಂತ್ರಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 12/05/2023 ರಂದು ಸಂಜೆ 5:00 ಗಂಟೆ. 3) ಆರ್ಥಿಕ ಬಿಡ್ ತೆರೆಯುವ ದಿನಾಂಕ ಮತ್ತು ಸಮಯ: 17/05/2023 ರಂದು ಪೂರ್ವಾಹ್ನ 11:00 ಗಂಟೆ. 4) ಹೆಚ್ಚಿನ ವಿವರಗಳಿಗಾಗಿ ಪುರಸಭೆಯ ಕಿರಿಯ ಅಭಿಯಂತರರಿಂದ ಅಥವಾ ದೂರವಾಣಿ ಸಂಖ್ಯೆ: 080–27832411 ರಲ್ಲಿ ಮಾಹಿತಿ ಪಡೆಯಬಹುದು.

ಸಹಿ/– ಆಡಳಿತಾಧಿಕಾರಿ, ಪುರಸಭೆ ಚಂದಾಪುರ ಹಾಗೂ ಉಪವಿಭಾಗಾಧಿಕಾರಿಗಳು, ಬೆಂಗಳೂರು ದಕ್ಷಿಣ ಉಪ ವಿಭಾಗ
ಸಹಿ/– ಮುಖ್ಯಾಧಿಕಾರಿ, ಪುರಸಭೆ, ಚಂದಾಪುರ
DIPR/CP/22/GREENFMC/2023-24

ಪ್ರಜಾವಾಣಿ
ಸುದ್ದಿ ಓದುವ ನಿಮ್ಮ ಅನುಭವಕ್ಕೆ
ಹೊಸತನ
ಪ್ರಜಾವಾಣಿ ವೆಬ್‌ಸೈಟ್ ಇದೀಗ ನೂತನ ಹಾಗೂ ತಾಜಾ ವಿನ್ಯಾಸದೊಂದಿಗೆ ಪ್ರಸ್ತುತ.
ಹೊಸ ಪ್ರಜಾವಾಣಿ ವೆಬ್‌ಸೈಟ್‌ನ ವೈಶಿಷ್ಟ್ಯಗಳು:
ಇನ್‌ಸ್ಟಾ ಸ್ಟೋರೀಸ್ ಮಾದರಿಯಲ್ಲಿ ಸುದ್ದಿಗಳು
ತ್ವರಿತ ಸ್ಥಳೀಯ ಸುದ್ದಿಗಳು
ಅತ್ಯಾಕರ್ಷಕ ಹೊಸ ವೈಶಿಷ್ಟ್ಯಗಳು
ವಿಶೇಷ ತಾಜಾ ಸುದ್ದಿಗಳು
ಪಾಡ್‌ಕಾಸ್ಟ್ ಹಾಗೂ ವಿಡಿಯೊಗಳು ಈಗ ಸುಲಭವಾಗಿ ಲಭ್ಯ
ಹೊಸ ರೂಪದಲ್ಲಿ prajavani.net ಈಗ ಲೈವ್!
ತಾಜಾ ಸುದ್ದಿಗಳಿಗಾಗಿ QR code ಅನ್ನು ಸ್ಕ್ಯಾನ್ ಮಾಡಿ

ಹೊಸ ವಿನ್ಯಾಸದ ಜಾಲತಾಣದಲ್ಲಿ ಈಗ ಮುದ್ರಿತ ಪತ್ರಿಕೆ ಓದುವ ಅನುಭವ

ಚುನಾವಣಾ ಪ್ರಚಾರ ಸಭೆಗಳು
4 ಮೇ 2023 | ಗುರುವಾರ

ಶ್ರೀ ಅಮಿತ್ ಶಾ
ಮಾನ್ಯ ಕೇಂದ್ರ ಗೃಹ ಮತ್ತು ಸಹಕಾರ ಸಚಿವರು
ಮ. 3:30 ಜೇವರ್ಗಿ
ಸಂ. 5:00 ಅಫ್ಜಲ್‌ಪುರ

ಶ್ರೀ ನಿತಿನ್ ಗಡ್ಕರಿ
ಮಾನ್ಯ ಕೇಂದ್ರ ರಸ್ತೆ ಸಾರಿಗೆ ಮತ್ತು ಹೆದ್ದಾರಿ ಖಾತೆ ಸಚಿವರು
ಮ. 1: 00 ನಿಪ್ಪಾಣಿ

ಶ್ರೀ ಬಿ.ಎಸ್. ಯಡಿಯೂರಪ್ಪ
ಮಾನ್ಯ ಕೇಂದ್ರ ಸಂಸದೀಯ ಮಂಡಳಿಯ ಸದಸ್ಯರು, ಬಿಜೆಪಿ ಹಾಗೂ ಮಾಜಿ ಮುಖ್ಯಮಂತ್ರಿಗಳು
ಬೆ. 10:00 ತಿಪಟೂರು
ಬೆ. 11:30 ಕೃಷ್ಣರಾಜಪೇಟೆ
ಮ. 2:00 ಹೊಸದುರ್ಗ
ಮ. 3:30 ಹೊಳಲ್ಕೆರೆ
ಸಂ. 5:30 ಚಿತ್ರದುರ್ಗ

ಶ್ರೀ ನಳಿನ್ ಕುಮಾರ್ ಕಟೀಲ್
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ
ಬೆ. 11:30 ಚಳ್ಳಕೆರೆ
ಮ. 2:30 ಮೊಳಕಾಲ್ಮೂರು-ರೋಡ್ ಶೋ

ಶ್ರೀ ಡಿ.ವಿ. ಸದಾನಂದ ಗೌಡ
ಮಾನ್ಯ ಮಾಜಿ ಮುಖ್ಯಮಂತ್ರಿಗಳು ಹಾಗೂ ಸಂಸದರು
ಬೆ. 10:30 ಚಾಮರಾಜ(ಮೈಸೂರು)

ಶ್ರೀ ಕೆ.ಎಸ್. ಈಶ್ವರಪ್ಪ
ಮಾನ್ಯ ಶಾಸಕರು ಹಾಗೂ ಮಾಜಿ ಉಪಮುಖ್ಯಮಂತ್ರಿಗಳು
ಬೆ. 9:30 ಶೋರಾಪುರ್
ಮ. 2:30 ಶಹಾಪುರ

ಶ್ರೀ ಕಿಶನ್ ರೆಡ್ಡಿ
ಮಾನ್ಯ ಕೇಂದ್ರ ಸಂಸ್ಕೃತಿ ಪ್ರವಾಸೋದ್ಯಮ ಹಾಗೂ ಈಶಾನ್ಯ ರಾಜ್ಯಗಳ ಅಭಿವೃದ್ಧಿ ಖಾತೆ ಸಚಿವರು
ಬೆ. 10:30 ದೊಡ್ಡಬಳ್ಳಾಪುರ-ರೋಡ್ ಶೋ
ಮ. 3:30 ಹೆಬ್ಬಾಳ
ಸಂ. 5:00 ಗಾಂಧಿನಗರ-ರೋಡ್ ಶೋ

ಸಾಧ್ವಿ ನಿರಂಜನ್ ಜ್ಯೋತಿ
ಮಾನ್ಯ ಕೇಂದ್ರ, ಸಹಾಯಕ ಗ್ರಾಹಕ ವ್ಯವಹಾರ ಹಾಗೂ ಆಹಾರ ಮತ್ತು ಸಾರ್ವಜನಿಕ ವಿತರಣೆ ಮತ್ತು ಗ್ರಾಮೀಣಾಭಿವೃದ್ಧಿ ಖಾತೆ ಸಚಿವರು
ಬೆ. 10:30 ಗುರುಮಿಠ್ಕಲ್

ಶ್ರೀ ಎ. ನಾರಾಯಣಸ್ವಾಮಿ
ಮಾನ್ಯ ಕೇಂದ್ರ, ಸಹಾಯಕ ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಖಾತೆ ಸಚಿವರು
ಬೆ. 9:30 ಆನೇಕಲ್

ಶ್ರೀ ದೇವೇಂದ್ರ ಫಡ್ನವೀಸ್
ಮಾನ್ಯ ಉಪಮುಖ್ಯಮಂತ್ರಿಗಳು, ಮಹಾರಾಷ್ಟ್ರ
ಬೆ. 10:30 ಬೆಳಗಾವಿ ಉತ್ತರ
ಮ. 12:00 ಬೆಳಗಾವಿ ದಕ್ಷಿಣ
ಮ. 3:00 ಬೆಳಗಾವಿ ಗ್ರಾ.
ಸಂ. 4:30 ಯಮಕನಮರಡಿ

ಶ್ರೀ ಕೆ. ಅಣ್ಣಾಮಲೈ
ಮಾನ್ಯ ರಾಜ್ಯಾಧ್ಯಕ್ಷರು, ಬಿಜೆಪಿ, ತಮಿಳುನಾಡು ಹಾಗೂ ಕರ್ನಾಟಕ ಸಹ ಉಸ್ತುವಾರಿ
ಬೆ. 8:00 ಬ್ಯಾಟರಾಯನಪುರ-ರೋಡ್ ಶೋ
ಬೆ. 10:30 ದಾಸರಹಳ್ಳಿ-ರೋಡ್ ಶೋ
ಸಂ. 4:30 ಕೆಜಿಎಫ್-ರೋಡ್ ಶೋ
ರಾ. 7:30 ಚಾಮರಾಜಪೇಟೆ-ರೋಡ್ ಶೋ

ಶ್ರೀ ಬಿ.ವೈ. ವಿಜಯೇಂದ್ರ
ಮಾನ್ಯ ರಾಜ್ಯ ಉಪಾಧ್ಯಕ್ಷರು, ಬಿಜೆಪಿ
ಬೆ. 9:30 ಮುಧೋಳ್-ರೋಡ್ ಶೋ
ಬೆ. 11:30 ಕನಕಗಿರಿ-ರೋಡ್ ಶೋ
ಮ. 12:30 ಬಳ್ಳಾರಿ ಗ್ರಾ.-ರೋಡ್ ಶೋ
ಮ. 2:30 ಶಿರಗುಪ್ಪ-ರೋಡ್ ಶೋ
ಸಂ. 4:00 ಹಡಗಲಿ-ರೋಡ್ ಶೋ
ಸಂ. 5:30 ಚಿತ್ರದುರ್ಗ-ರೋಡ್ ಶೋ
ರಾ. 7:00 ಹಿರಿಯೂರು-ರೋಡ್ ಶೋ

ಶ್ರೀಮತಿ ಗೀತಾ ವಿವೇಕಾನಂದ
ಮಾನ್ಯ ರಾಜ್ಯಾಧ್ಯಕ್ಷರು, ಮಹಿಳಾ ಮೋರ್ಚಾ, ಬಿಜೆಪಿ
ಬೆ. 10:30 ದಕ್ಷಿಣ ಕನ್ನಡ

ಶ್ರೀ ಸುದೀಪ್
ಖ್ಯಾತ ಚಲನಚಿತ್ರ ನಟರು
ಶ್ರೀ ಛಲವಾದಿ ನಾರಾಯಣ ಸ್ವಾಮಿ
ಮಾನ್ಯ ವಿಧಾನಪರಿಷತ್ ಸದಸ್ಯರು
ಬೆ. 9:30 ದೇವದುರ್ಗ-ರೋಡ್ ಶೋ
ಬೆ. 11:00 ಲಿಂಗಸಗೂರು-ರೋಡ್ ಶೋ
ಮ. 2:00 ಮಾನ್ವಿ-ರೋಡ್ ಶೋ
ಮ. 3:30 ಮಸ್ಕಿ-ರೋಡ್ ಶೋ

ಬನ್ನಿ, ಕಾರ್ಯಕ್ರಮದಲ್ಲಿ ಪಾಲ್ಗೊಳ್ಳೋಣ
ಕಮಲದ ಬಟನ್ ಒತ್ತಿ ಬಿಜೆಪಿ ಗೆಲ್ಲಿಸಿ
ಪ್ರಕಟಣೆ : ಬಿಜೆಪಿ ಕರ್ನಾಟಕ

ಮೋದಿ, ಶಾ ಪ್ರಚಾರದಿಂದ ಹೆಚ್ಚಿದ ಪಕ್ಷದ ವರ್ಚಸ್ಸು

• ಕೆ.ನರಸಿಂಹಮೂರ್ತಿ

ಮೈಸೂರು: 'ಪ್ರಧಾನಿ ನರೇಂದ್ರ ಮೋದಿ ಮತ್ತು ಗೃಹ ಸಚಿವ ಅಮಿತ್ ಶಾ ಅವರ ಪ್ರಚಾರದಿಂದಾಗಿ ಪಕ್ಷದ ವರ್ಚಸ್ಸು ಹೆಚ್ಚಾಗಿದೆ. ವಿಶ್ವವೇ ಕೊಂಡಾಡುತ್ತಿರುವ ನಾಯಕ ಮೋದಿ. ರೋಡ್ ಶೋಗಳಲ್ಲಿ ಅವರಿಗೆ ಎಂಥ ಸ್ವಾಗತ ಸಿಗುತ್ತಿದೆ ಎಂದು ನೀವೇ ನೋಡುತ್ತಿದ್ದೀರಿ ಎಂದು ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ಹೇಳಿದರು.

'ಕಾಂಗ್ರೆಸ್‌ಗೆ ಅಂಥ ನಾಯಕರು ಯಾರಿದ್ದಾರೆ? ಮೋದಿ ಮತ್ತು ಅಮಿತ್ ಶಾ ಅವರಿಗೆ ರಾಹುಲ್‌ಗಾಂಧಿ, ಪ್ರಿಯಾಂಕಾ ಗಾಂಧಿ ಸಮನಾಗಲು ಸಾಧ್ಯವೇ? ಇದನ್ನು ನಾಡಿನ ಜನ ಅರ್ಥ ಮಾಡಿಕೊಂಡಿದ್ದಾರೆ. ಇದು ಪಕ್ಷವನ್ನು ಭಾರಿ ಗೆಲುವಿನತ್ತ ಮುನ್ನಡೆಸಲಿದೆ' ಎಂದು ಅವರು ಹೇಳಿದರು.

ಪ್ರಜಾವಾಣಿ ಸಂದರ್ಶನ

ಬಿ.ಎಸ್.ಯಡಿಯೂರಪ್ಪ

ಚುನಾವಣೆಯ ಹೊತ್ತಿನಲ್ಲಿ 'ಪ್ರಜಾವಾಣಿ'ಗೆ ನೀಡಿರುವ ಸಂದರ್ಶನದ ಪೂರ್ಣಪಾಠ ಇಲ್ಲಿದೆ.

• ಮರಳಿ ಅಧಿಕಾರ ಹಿಡಿಯುತ್ತೇವೆ ಎಂದು ಯಾವ ವಿಶ್ವಾಸದ ಮೇಲೆ ಹೇಳುತ್ತಿದ್ದೀರಿ?

ನರೇಂದ್ರ ಮೋದಿ ಮತ್ತು ಅಮಿತ್ ಶಾ ಅವರ ನೇತೃತ್ವ, ನಾನು ಮತ್ತು ಬಸವರಾಜ ಬೊಮ್ಮಾಯಿ ಅವರು ಮುಖ್ಯಮಂತ್ರಿಗಳಾಗಿ ಮಾಡಿರುವ ಅಭಿವೃದ್ಧಿ ಕಾರ್ಯಗಳೇ ನಮಗೆ ಶ್ರೀರಕ್ಷೆ. ಇದರ ಆಧಾರದಲ್ಲಿ ಹೇಳುತ್ತಿದ್ದೇನೆ. ಬೇರೆ ಯಾವ ಪಕ್ಷದ ಭರವಸೆಗಳನ್ನೂ ಜನ ನಂಬುವುದಿಲ್ಲ. ನಾವು ಭರವಸೆಗಳನ್ನು ಈಡೇರಿಸುತ್ತೇವೆಂಬ ನಿರೀಕ್ಷೆ ಜನರಲ್ಲಿದೆ.

• 'ಡಬಲ್ ಎಂಜಿನ್' ಸರ್ಕಾರದಿಂದ ರಾಜ್ಯಕ್ಕೆ ಆಗಿರುವ ಅನುಕೂಲಗಳೇನು?

ರಾಜ್ಯಕ್ಕೆ ಕೊಟ್ಟಿರುವಷ್ಟು ಹಣಕಾಸಿನ ನೆರವು ಹಿಂದೆಂದೂ ಕೊಟ್ಟಿರಲಿಲ್ಲ. ಸಂಘಟನೆ ಬಲಪಡಿಸಲು, ಜನರಲ್ಲಿ ವಿಶ್ವಾಸ ಮೂಡಿಸಲು ಇದು ಸಹಕಾರಿಯಾಗಿದೆ. ಮೈಸೂರು-ಬೆಂಗಳೂರು ಎಕ್ಸ್‌ಪ್ರೆಸ್ ಹೈವೇ ನಿರ್ಮಾಣಕ್ಕೆ ₹ 8 ಸಾವಿರ ಕೋಟಿ, ಮೈಸೂರಲ್ಲಿ ಕಿದ್ವಾಯಿ ಕ್ಯಾನ್ಸರ್ ಚಿಕಿತ್ಸಾ ಕೇಂದ್ರ, ದೇಶದ ಮೊದಲ ಸೆಮಿಕಂಡಕ್ಟರ್ ಘಟಕ ಸ್ಥಾಪಿಸಲು ಒಪ್ಪಂದದಂಥ ಹಲವು ಅನುಕೂಲಗಳಾಗಿವೆ.

• 2013ರಲ್ಲಿ ನೀವು ಮತ್ತು ಬಿ.ಶ್ರೀರಾಮುಲು ಪಕ್ಷ ಬಿಟ್ಟಿದ್ದರಿಂದ ಬಿಜೆಪಿಗೆ ಹೊಡೆತ ಬಿದ್ದಿತ್ತು. ಈಗ ಶೆಟ್ಟರ್, ಲಕ್ಷ್ಮಣ, ಆಯನೂರು ಬಿಟ್ಟಿದ್ದಾರೆ. ಅದರ ಪರಿಣಾಮವೇನು?

ಯಾವುದೇ ದುಷ್ಪರಿಣಾಮ ಆಗುವುದಿಲ್ಲ.

• ಲಿಂಗಾಯತರಿಗೆ ಮುಖ್ಯಮಂತ್ರಿ ಪಟ್ಟ ಕೊಡುವುದಿಲ್ಲವಂತೆ?

ನಾನು ಮುಖ್ಯಮಂತ್ರಿ ಸ್ಥಾನ ಬಿಟ್ಟದ್ದರಿಂದ ಲಿಂಗಾಯತರಿಗೆ ಅನ್ಯಾಯವಾಯಿತು ಎಂಬ ಕಾಂಗ್ರೆಸ್‌ನವರ ಮಾತಿಗೆ ಕವಡೆ ಕಾಸಿನ ಕಿಮ್ಮತ್ತಿಲ್ಲ. ಅದು ನನ್ನ ಸ್ವಂತ ತೀರ್ಮಾನ. ಆ ಬಗ್ಗೆ ಸಮುದಾಯದ ಬಂಧುಗಳಿಗೆ ವಿವರಿಸಿದ್ದೇನೆ.

• 'ಕೆಜೆಪಿ ಕಟ್ಟಿದ್ದಾಗ ನೀವು ಆಡಿದ್ದ ಮಾತುಗಳನ್ನೇ ಜಗದೀಶ್ ಶೆಟ್ಟರ್ ಆಡುತ್ತಿದ್ದಾರೆ. ಈಗ ಅವರನ್ನು ನಿಂದಿಸುವುದು ಸರಿಯೇ?'

ನಾನು ಕೆಜೆಪಿ ಕಟ್ಟಿ ಅಕ್ಷಮ್ಯ ಅಪರಾಧ ಮಾಡಿ, ರಾಜ್ಯದ ಜನರ ಕ್ಷಮೆ ಕೇಳಿದ್ದೆ. ಜಗದೀಶ್ ಶೆಟ್ಟರ್‌ರಂತೆ ನಾನು ಕಾಂಗ್ರೆಸ್‌ಗೆ ಹೋಗಲಿಲ್ಲ. ನನಗೂ ಅವರಿಗೂ ಅಜಗಜಾಂತರವಿದೆ. ನನ್ನಂತೆ ಶೆಟ್ಟರ್ ಅವರೂ ಪಕ್ಷ ಕಟ್ಟಬೇಕಿತ್ತು ಎಂದಲ್ಲ. ಆದರೆ ಪಕ್ಷ ಬಿಡಲು ಕಾರಣ ಹೇಳಬೇಕು. ಅವರ ಪತ್ನಿಗೆ ಟಿಕೆಟ್ ಕೊಡುವುದಾಗಿ ಹೇಳಿದ್ದೆವು. ರಾಜ್ಯಸಭೆಗೆ ಕಳಿಸಿ, ಕೇಂದ್ರ ಸಚಿವರನ್ನಾಗಿಸುವುದಾಗಿ ಹೇಳಿದ್ದೆವು. ಇಷ್ಟಾದರೂ ದ್ರೋಹ ಮಾಡಿ ಕಾಂಗ್ರೆಸ್‌ಗೆ ಹೋಗಿದ್ದಾರೆ. ದಯನೀಯ ಸೋಲು ಕಾಣಲಿದ್ದಾರೆ. ಸವದಿಗೆ ಪಕ್ಷ ಎಲ್ಲವನ್ನೂ ಕೊಟ್ಟಿತ್ತು. ಅವರು ಪಕ್ಷ ಬಿಟ್ಟ ತೀರ್ಮಾನದ ಬಗ್ಗೆ ಜನ ಛೀಮಾರಿ ಹಾಕುತ್ತಿದ್ದಾರೆ.

'ಜನರ ನಾಡಿ ಮಿಡಿತ ಗೊತ್ತು'

• ಸಮೀಕ್ಷೆಗಳ ಪ್ರಕಾರ, ಬಿಜೆಪಿಗೆ ಅನುಕೂಲಕರವಾದ ಪರಿಸ್ಥಿತಿ ಇಲ್ಲವೆಂಬ ಮಾಹಿತಿ ಇದೆಯಲ್ಲ?

50 ವರ್ಷದಲ್ಲಿ ರಾಜ್ಯದ ಉದ್ದಗಲಕ್ಕೂ ಸಂಚರಿಸಿದ್ದೇನೆ. ಇತ್ತೀಚೆಗೆ ಸುಮಾರು 85 ಕ್ಷೇತ್ರದಲ್ಲಿ ಪ್ರವಾಸ ಮಾಡಿದ್ದೇನೆ. ರಾಜ್ಯದ ಜನರ ಮಿಡಿತ ಚೆನ್ನಾಗಿ ಗೊತ್ತಿದೆ. ನಾವು ಈ ಬಾರಿ 130–135 ಸೀಟುಗಳನ್ನು ಗೆಲ್ಲುತ್ತೇವೆ.

• ಮುಖ್ಯಮಂತ್ರಿ ಬದಲಾವಣೆ ಪ್ರತಿಕೂಲ ಪರಿಣಾಮ ಬೀರುವುದಿಲ್ಲವೇ?

ಪರಿಣಾಮ ಬೀರದು. ಆಯಾ ಕಾಲಕ್ಕೆ ತಕ್ಕಂತೆ ಅನಿವಾರ್ಯವಾಗಿ ಕೆಲವು ತೀರ್ಮಾನಗಳನ್ನು ಮಾಡಬೇಕಾಗುತ್ತದೆ.

ವಿಡಿಯೊ ನೋಡಲು ಕೋಡ್ ಸ್ಕ್ಯಾನ್ ಮಾಡಿ
ಪ್ರಜಾವಾಣಿ ನೋಡಿಯೊ

ರಂಗೇರಿದ ಅಖಾಡ • ಅಂಜನಾದ್ರಿ ಅಭಿವೃದ್ಧಿಯೇ ಮತಬೇಟೆಗೆ ಅಸ್ತ್ರ

'ಫುಟ್‌ಬಾಲ್' ಆಡಲು ರೆಡ್ಡಿ ರೆಡಿ

• ಪ್ರಮೋದ

ಗಂಗಾವತಿ: ಗಂಗಾವತಿ ವಿಧಾನಸಭಾ ಕ್ಷೇತ್ರದಲ್ಲಿ ಚುನಾವಣೆ ವೇಳೆ ಸಾಮಾನ್ಯವಾಗಿ ಕಾಂಗ್ರೆಸ್, ಬಿಜೆಪಿ ಮತ್ತು ಜೆಡಿಎಸ್ ನಡುವೆ ಸ್ಪರ್ಧೆ ಇರುತ್ತದೆ. ಕಳೆದ ನಾಲ್ಕು ಚುನಾವಣೆಗಳಿಂದ ಇದೇ ಮುಂದುವರೆದಿದೆ. ಪ್ರಸಕ್ತ ಚುನಾವಣೆಯಲ್ಲೂ ಅದೇ ಪರಿಸ್ಥಿತಿಯಿದೆ. ಆದರೆ, ಜೆಡಿಎಸ್‌ನ ಸ್ಥಾನವನ್ನು ಜನಾರ್ದನ ರೆಡ್ಡಿ ಸ್ಥಾಪಿತ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ (ಕೆಆರ್‌ಪಿಪಿ) ಆಕ್ರಮಿಸಿಕೊಂಡಿದೆ.

ಕೆಆರ್‌ಪಿಪಿ ಸಂಸ್ಥಾಪಕ ಜನಾರ್ದನ ರೆಡ್ಡಿ ಗಂಗಾವತಿಯಿಂದ ಸ್ಪರ್ಧಿಸಿರುವ ಕಾರಣ ಇಲ್ಲಿನ ರಾಜಕೀಯ ಚಿತ್ರಣ ಬದಲಾಗಿದೆ. ರಾಜಕೀಯ ಲೆಕ್ಕಾಚಾರ ಅನಿರೀಕ್ಷಿತ ತಿರುವು ಪಡೆಯುವ ಬಗ್ಗೆ ಚರ್ಚೆ ನಡೆದಿದೆ. ಹೊಸ ಪಕ್ಷಕ್ಕೆ ಬೇರೂರಲು ಮತದಾರರು ಅವಕಾಶ ನೀಡುವರೇ? ಹೊಸ ಪಕ್ಷದ ತಂತ್ರಗಾರಿಕೆಗೆ ಬಿಜೆಪಿ ಮತ್ತು ಕಾಂಗ್ರೆಸ್‌ನವರು ತಕ್ಕ ಉತ್ತರ ನೀಡುವರೇ ಎಂಬುದೇ ಸದ್ಯದ ಕುತೂಹಲ. ರೆಡ್ಡಿ ನೇರವಾಗಿ ಜನರಿಂದ ಆಯ್ಕೆ ಬಯಸಿರುವ ಮೊದಲ ಚುನಾವಣೆ ಇದು. ಅವರು ಈ ಹಿಂದೆ ವಿಧಾನಪರಿಷತ್ ಸದಸ್ಯರಾಗಿ ಪ್ರವಾಸೋದ್ಯಮ ಸಚಿವರಾಗಿದ್ದರು.

ಮತದಾರರನ್ನು ಭೇಟಿಯಾಗುತ್ತಿರುವ ರೆಡ್ಡಿ, ವಸತಿ ರಹಿತ ಬಡವರಿಗೆ ಎರಡು ಬೆಡ್‌ರೂಮ್ ಗಳ ಮನೆ, ಸ್ವಂತ ಹಣದಲ್ಲಿ ಅಂಜನಾದ್ರಿಯನ್ನು ಅಭಿವೃದ್ಧಿ ಹಾಗೂ ಉತ್ತಮ ರಸ್ತೆಗಳನ್ನು ನಿರ್ಮಿಸಿಕೊಡುವುದಾಗಿ ಹೇಳಿ ಅವರ ಮನ ಗೆಲ್ಲುವ ಕಸರತ್ತು ನಡೆಸಿದ್ದಾರೆ. ಇತರ ಪಕ್ಷಗಳಿಗಿಂತ ಭಿನ್ನವಾದ ಈ ಭರವಸೆಗಳು ಮತದಾರರಲ್ಲಿ 'ಆಶಾಭಾವ' ಮೂಡಲು ಕಾರಣವಾಗಿವೆ.

ರಾಜಕೀಯ ಬೆಳವಣಿಗೆ ಮತ್ತು ಚುನಾವಣೆಯ ಪ್ರಚಾರ ವೈಖರಿಯನ್ನು ಸೂಕ್ಷ್ಮವಾಗಿ ಗಮನಿಸುತ್ತಿರುವ ಜನ 'ಅನಿರೀಕ್ಷಿತ ಬೆಳವಣಿಗೆಗಳು' ಆಗಬಹುದು ಎಂಬುದಕ್ಕೆ ಪೂರಕವಾಗಿ ಅಭಿಪ್ರಾಯ ವ್ಯಕ್ತಪಡಿಸುತ್ತಾರೆ. ಇಲ್ಲಿನ ಕೇಂದ್ರ ಬಸ್ ನಿಲ್ದಾಣದ ಸಮೀಪದ ಆಟೊ ಸ್ಟ್ಯಾಂಡ್‌ನಲ್ಲಿದ್ದ ಕೆಲ ಆಟೊ ಚಾಲಕರು 'ಇದೇ ಊರಿನವರನ್ನು ಆಯ್ಕೆ ಮಾಡಿ ಸಾಕಾಗಿದೆ, ಹೊಸಬರು ಬರಲಿ' ಎಂದು ಹೇಳಿದರೆ, ಅಲ್ಲಿಂದ ಅನತಿ ದೂರದಲ್ಲಿದ್ದ ಇಡ್ಲಿ ವ್ಯಾಪಾರಿ ರಾಜಶೇಖರ 'ಬಿಜೆಪಿ ಬಿಟ್ಟು ಬಂದಿದ್ದೇನೆ. ಮುಂದೇನಿದ್ದರೂ ಫುಟ್‌ಬಾಲ್ (ಕೆಆರ್‌ಪಿಪಿ ಪಕ್ಷದ ಚಿಹ್ನೆ) ಆಡೋದೆ' ಎಂದರು. ಗಂಗಾವತಿ ನಗರಸಭೆಯ ಒಟ್ಟು 35 ಸದಸ್ಯರಲ್ಲಿ ಕಾಂಗ್ರೆಸ್‌ನಲ್ಲಿದ್ದ ಅಧ್ಯಕ್ಷೆಯೂ ಸೇರಿ ವಿವಿಧ ಪಕ್ಷಗಳ ಒಟ್ಟು 15 ಸದಸ್ಯರಿಗೆ ರೆಡ್ಡಿ 'ಆಪರೇಷನ್' ಮಾಡಿದ್ದಾರೆ. ಈ 'ಆಪರೇಷನ್' ಗ್ರಾಮ ಪಂಚಾಯಿತಿ ಮಟ್ಟಕ್ಕೂ ವಿಸ್ತರಿಸಿದೆ.

ಇದು ಬಿಜೆಪಿಯ ಅಭ್ಯರ್ಥಿ, ಶಾಸಕ ಪರಣ್ಣ ಮುನವಳ್ಳಿ ಮತ್ತು ಕಾಂಗ್ರೆಸ್ ಅಭ್ಯರ್ಥಿ ಇಕ್ಬಾಲ್ ಅನ್ಸಾರಿ ಅವರ ನಿದ್ದೆಗೆಡಿಸಿದೆ. ಹಿಂದಿನ ಚುನಾವಣೆಯಲ್ಲಿ ಮತಗಳಿಕೆಗೆ ಪರಸ್ಪರ ಟೀಕೆ–ಪ್ರತಿಟೀಕೆಯಲ್ಲಿ ತೊಡಗಿದ್ದ ಈ ಎರಡೂ ಪಕ್ಷಗಳ ಅಭ್ಯರ್ಥಿಗಳು ಈಗ ರೆಡ್ಡಿ ವಿಷಯದಲ್ಲಿ ಒಂದಾಗಿದ್ದಾರೆ. 'ಹೊರಗಿನಿಂದ ಬಂದವರಿಗೆ ಅವಕಾಶ ಕೊಟ್ಟರೆ ಬಳ್ಳಾರಿಯ ಹಾಗೆ ಇಲ್ಲಿಯೂ ಲೂಟಿ ಹೊಡೆಯುತ್ತಾರೆ' ಎಂದು ನೇರವಾಗಿಯೇ 'ರೆಡ್ಡಿ ಪ್ರಭಾವಕ್ಕೆ ಒಳಗಾಗಬೇಡಿ' ಎಂದು ಕೋರುತ್ತಿದ್ದಾರೆ. ಹೀಗಾಗಿ ಈ ಸಲದ ಚುನಾವಣೆಯು 'ಹೊರಗಿನ' ಮತ್ತು 'ಒಳಗಿನ' ಅಭ್ಯರ್ಥಿಗಳ ನಡುವಿನ ಹೋರಾಟವಾಗಿದೆ.

2004ರಲ್ಲಿ ಮೊದಲ ಬಾರಿಗೆ ಜೆಡಿಎಸ್‌ನಿಂದ ಶಾಸಕರಾಗಿ ಸಚಿವರೂ ಆಗಿದ್ದ ಇಕ್ಬಾಲ್ ಅನ್ಸಾರಿ ಅವಧಿಯಲ್ಲಿ ಗಂಗಾವತಿಗೆ ಬಸ್ ನಿಲ್ದಾಣ, ಮಿನಿ ವಿಧಾನಸೌಧ, ಉತ್ತಮ ರಸ್ತೆಗಳು ಸೇರಿ ಅನೇಕ ಮೂಲಸೌಲಭ್ಯಗಳು ದೊರೆತಿವೆ ಎನ್ನುವ ಭಾವನೆ ಜನರಲ್ಲಿದೆ. ಆದರೆ, ಇದಕ್ಕೆ ಪ್ರತಿಯಾಗಿ ಇಕ್ಬಾಲ್ ಅನ್ಸಾರಿ ಸುಲಭವಾಗಿ ಜನರಿಗೆ ಸಿಗುವುದಿಲ್ಲ ಎಂಬ ಅಭಿಪ್ರಾಯ ಬಲವಾಗಿದೆ. 'ಎಲ್ಲ ಸಮುದಾಯಗಳ ಜನರೊಂದಿಗೆ ಅನ್ಸಾರಿ ಉತ್ತಮ ಬಾಂಧವ್ಯ ಹೊಂದಿಲ್ಲ.

ಟಿಕೆಟ್ ಆಕಾಂಕ್ಷಿಗಳಾಗಿದ್ದ ಮಲ್ಲಿಕಾರ್ಜುನ ನಾಗಪ್ಪ ಮತ್ತು ಎಚ್.ಆರ್. ಶ್ರೀನಾಥ್ ಅವರ ಅಸಮಾಧಾನ ಇನ್ನೂ ಶಮನವಾಗಿಲ್ಲ. ಹೀಗಾಗಿ ಕಾಂಗ್ರೆಸ್‌ನ ಈ ಇಬ್ಬರೂ ನಾಯಕರು ಪ್ರಚಾರದಿಂದ ದೂರ ಉಳಿದಿದ್ದಾರೆ. ಕಳೆದ ಚುನಾವಣೆಯಲ್ಲಿ ಅನ್ಸಾರಿ ಎದುರು ಪರಣ್ಣ ಮುನವಳ್ಳಿ 7,973 ಮತಗಳಿಂದ ಗೆಲುವು ಪಡೆದಿದ್ದರು. ಶ್ರೀನಾಥ್ ಅವರ ಆಪ್ತರಾದ ವಿಧಾನಪರಿಷತ್ ಮಾಜಿ ಸದಸ್ಯ ಕರಿಯಣ್ಣ ಸಂಗಟಿ ಜೆಡಿಎಸ್‌ನಿಂದ ಸ್ಪರ್ಧಿಸಿ 14,161 ಮತಗಳನ್ನು ಪಡೆದಿದ್ದರು. ಇದು ಪರಣ್ಣ ಮುನವಳ್ಳಿ ಗೆಲುವಿಗೆ ಕಾರಣವಾಗಿತ್ತು. ಇರಕಲ್‌ಗಡ ಹೋಬಳಿ ಭಾಗದಲ್ಲಿ ಪ್ರಭಾವಿ ನಾಯಕರಾಗಿರುವ ಸಂಗಟಿ ಈ ಬಾರಿ ಕೆಆರ್‌ಪಿಪಿ ಸೇರಿದ್ದು ಕೂಡ ಎರಡೂ ರಾಷ್ಟ್ರೀಯ ಪಕ್ಷಗಳ ಚಿಂತೆ ಹೆಚ್ಚಿಸಿದೆ.

'ಶಾಸಕ ಪರಣ್ಣ ಮುನವಳ್ಳಿ ಸುಲಭವಾಗಿ ಸಿಗುತ್ತಾರೆ' ಎಂಬ ಸಮಾಧಾನ ಮತದಾರರಲ್ಲಿದೆ. ಆದರೆ, 'ಅಭಿವೃದ್ಧಿಯಲ್ಲಿ ನಿರೀಕ್ಷಿತ ಮಟ್ಟದ ವೇಗವಿಲ್ಲ, ಪರಿಣಾಮಕಾರಿಯಾಗಿ ಆಡಳಿತ ನಡೆಸುವುದಿಲ್ಲ' ಎಂಬ ದೂರು ಕೂಡ ಇದೆ. ಗಂಗಾವತಿ ಕ್ಷೇತ್ರ ಬಹುತೇಕ ಭಾಗ ನೀರಾವರಿ ಸೌಲಭ್ಯ ಹೊಂದಿದೆ. ಹೀಗಾಗಿ ನೀರಿನ ಸಮಸ್ಯೆಯಿಲ್ಲ. ಹೇಳಿಕೊಳ್ಳುವಂತಹ ಗಂಭೀರ ಸ್ವರೂಪದ ಸಮಸ್ಯೆಯಿಲ್ಲ. ಆದ್ದರಿಂದ ಇಲ್ಲಿನ ರಾಜಕಾರಣ ಅಭಿವೃದ್ಧಿಗಿಂತ ವ್ಯಕ್ತಿ ಹಾಗೂ ಪಕ್ಷಗಳ ಸುತ್ತ ಗಿರಕಿ ಹೊಡೆಯುತ್ತದೆ.

ಜನಾರ್ದನ ರೆಡ್ಡಿ

ಇಕ್ಬಾಲ್ ಅನ್ಸಾರಿ


ಪರಣ್ಣ ಮುನವಳ್ಳಿ

'ದೇವರು ಪ್ರಚಾರ ಸರಕಾಗಬಾರದು'

ಅಂಜನಾದ್ರಿ ಅಭಿವೃದ್ಧಿ ವಿಷಯ ಮುನ್ನಲೆಗೆ ಬರುತ್ತಿದ್ದಂತೆ ಅನ್ಸಾರಿ ಕೂಡ 'ಆ ಕ್ಷೇತ್ರದ ಅಭಿವೃದ್ಧಿ ಶುರುಮಾಡಿದ್ದೇ ನಾನು' ಎನ್ನುತ್ತಿದ್ದಾರೆ. ಮೂರೂ ಪಕ್ಷಗಳು ಅಂಜನಾದ್ರಿಯನ್ನು ಮತಬೇಟೆಗೆ ಅಸ್ತ್ರ ಮಾಡಿಕೊಳ್ಳುತ್ತಿರುವುದು ಅಂಜನಾದ್ರಿಯ ಸನ್ನಿಧಿಯ ವ್ಯಾಪಾರಿಗಳಲ್ಲಿ ತಲ್ಲಣ ಉಂಟು ಮಾಡಿದೆ. ದೇವರು ಯಾವತ್ತು ಪ್ರಚಾರದ ಸರಕು ಆಗಬಾರದಿತ್ತು ಎನ್ನುತ್ತಾರೆ ಅವರು.

ಗಂಗಾವತಿ ಗಮನ ಸೆಳೆದ ಕಣ

ಸಾಕ್ಷಾತ್ ಸಮೀಕ್ಷೆ

2013ರ ಚುನಾವಣೆ

ಅಭ್ಯರ್ಥಿ	ಪಕ್ಷ	ಪಡೆದಮತ
ಇಕ್ಬಾಲ್ ಅನ್ಸಾರಿ	ಜೆಡಿಎಸ್	60,303
ಪರಣ್ಣ ಮುನವಳ್ಳಿ	ಬಿಜೆಪಿ	30,514
ಎಚ್.ಆರ್. ಶ್ರೀನಾಥ್	ಕಾಂಗ್ರೆಸ್	20,248
ಗೆಲುವಿನ ಅಂತರ 29,789		

2018ರ ಚುನಾವಣೆ

ಅಭ್ಯರ್ಥಿ	ಪಕ್ಷ	ಪಡೆದಮತ
ಪರಣ್ಣ ಮುನವಳ್ಳಿ	ಬಿಜೆಪಿ	67,617
ಇಕ್ಬಾಲ್ ಅನ್ಸಾರಿ	ಕಾಂಗ್ರೆಸ್	59,644
ಕರಿಯಣ್ಣ ಸಂಗಟಿ	ಜೆಡಿಎಸ್	14,161
ಗೆಲುವಿನ ಅಂತರ 7,973		

'ಘರ್ ವಾಪಸಿ'; 'ಕೈ'ಗೆ ಬಲ

• ರಾಜೇಶ್ ರೈ ಚಟ್ಲ

ಬೆಂಗಳೂರು: 'ಬಿಜೆಪಿ ರಹಸ್ಯ ಕಾರ್ಯಸೂಚಿ ಲಿಂಗಾಯತರಿಗೆ ಅರ್ಥವಾಗಿದೆ. ಹೀಗಾಗಿ, ಲಿಂಗಾಯತರ 'ಘರ್ ವಾಪಸಿ' (ಮರಳಿ ಮನೆಗೆ- ಕಾಂಗ್ರೆಸ್ಸಿಗೆ) ಆರಂಭವಾಗಿದೆ. ಈ ಬಾರಿ ಶೇ 50ರಷ್ಟು ಲಿಂಗಾಯತರು ಕಾಂಗ್ರೆಸ್ ಪರ ನಿಲ್ಲುತ್ತಾರೆ' ಎಂದು ಕೆಪಿಸಿಸಿ ಪ್ರಚಾರ ಸಮಿತಿ ಅಧ್ಯಕ್ಷ ಎಂ.ಬಿ. ಪಾಟೀಲ ಪ್ರತಿಪಾದಿಸಿದರು. 'ಪ್ರಜಾವಾಣಿ'ಗೆ ನೀಡಿದ ಸಂದರ್ಶನದ ಆಯ್ದ ಭಾಗ ಇಲ್ಲಿದೆ.

• ಲಿಂಗಾಯತ ವಿಚಾರ ಈ ಬಾರಿಯೂ ಚುನಾವಣಾ ಅಖಾಡದಲ್ಲಿ ಮುನ್ನೆಲೆಯಲ್ಲಿದೆಯಲ್ಲವೇ?

ಕಳೆದ ಚುನಾವಣೆಯಲ್ಲಿ (2018) ಪ್ರತ್ಯೇಕ ಲಿಂಗಾಯತ ಧರ್ಮ ವಿಷಯ ಮುಂದಿಟ್ಟು ನಮ್ಮ (ಕಾಂಗ್ರೆಸ್) ವಿರುದ್ಧ ಸುಳ್ಳುಗಳನ್ನು ಹರಡಲಾಗಿತ್ತು. ಆದರೂ ನಮಗೆ (ಲಿಂಗಾಯತರಿಗೆ) ಕಾಂಗ್ರೆಸ್ ಕೊಟ್ಟಿದ್ದ 43 ಸೀಟುಗಳಲ್ಲಿ 17 ಗೆದ್ದಿದ್ದೆವು. ಈ ಬಾರಿಯ ಪರಿಸ್ಥಿತಿ ನಮಗೆ ಅನುಕೂಲಕರವಾಗಿದೆ.

• ನಿಮ್ಮ ಈ ವಿಶ್ವಾಸಕ್ಕೆ ಜಗದೀಶ ಶೆಟ್ಟರ್, ಲಕ್ಷ್ಮಣ ಸವದಿಗೆ ಬಿಜೆಪಿ ಟಿಕೆಟ್ ನಿರಾಕರಿಸಿದ್ದು, ಅವರು ಕಾಂಗ್ರೆಸ್ ಸೇರಿದ್ದೂ ಕಾರಣವೇ?

ಬಿಜೆಪಿಯೊಳಗೆ ಲಿಂಗಾಯತ ನಾಯಕರ ವಿರುದ್ಧದ ಕಾರ್ಯಸೂಚಿ ಕೆಲಸ ಮಾಡುತ್ತಿದೆ. ಶೆಟ್ಟರ್, ಸವದಿಗೆ ಟಿಕೆಟ್ ನಿರಾಕರಿಸಲು ಆ ಕಾರ್ಯಸೂಚಿಯೇ ಕಾರಣ. ಅವರಿಬ್ಬರನ್ನೂ ಸೋಲಿಸಲು ಯಡಿಯೂರಪ್ಪ ಅವರಿಗೆ ಸುಪಾರಿ ನೀಡಲಾಗಿದೆ. ಸವದಿ, ಶೆಟ್ಟರ್ ಅವರನ್ನು ಮುಗಿಸಲು ಸಂತೋಷ್, ಜೋಶಿ ಹೋಗಬಹುದಿತ್ತಲ್ಲವೇ? ಒಬ್ಬ ಲಿಂಗಾಯತ ಮುಖಂಡನನ್ನು ನಾಶ ಮಾಡಲು ಇನ್ನೊಬ್ಬ ಲಿಂಗಾಯತ ನಾಯಕನನ್ನು ಬಿಜೆಪಿ ಬಳಸಿದೆ. ಚುನಾವಣೆಯಲ್ಲಿ ಈ ವಿಷಯ ಒಳಸುಳಿಯಾಗಿ ಪರಿಣಾಮ ಬೀರಲಿದೆ.

• ಹಾಗಾದರೆ ಶೆಟ್ಟರ್, ಸವದಿಯಿಂದ ಕಾಂಗ್ರೆಸ್‌ಗೆ ಲಾಭ ಎಂದಾಯಿತು...

ನಿಶ್ಚಿತವಾಗಿ. 'ಆಪರೇಷನ್ ಕಮಲ'ವೆಂಬ ಅನಿಷ್ಟ ಪದ್ಧತಿ ತಂದು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡಿದವರು ಬಿಜೆಪಿಯವರು. ಶಾಸಕರನ್ನು ಖರೀದಿಸಿ ಅನೈತಿಕ ಮಾರ್ಗದಲ್ಲಿ ಯಡಿಯೂರಪ್ಪ ನೇತೃತ್ವದಲ್ಲಿ ಸರ್ಕಾರ ರಚನೆ ಮಾಡಿದ್ದರು. ಆ ಬಳಿಕ ಅವರನ್ನು ಕಿತ್ತು ಹಾಕಿದರು. ಈ ವಿಷಯ ಪ್ರಸ್ತಾಪಿಸಿದರೆ, ವೀರೇಂದ್ರ ಪಾಟೀಲರ ಹೆಸರನ್ನು ಬಿಜೆಪಿಯವರು ಪ್ರಸ್ತಾಪಿಸುತ್ತಾರೆ. ಅನಾರೋಗ್ಯದಿಂದ ಬಳಲುತ್ತಿದ್ದ ವೀರೇಂದ್ರ ಪಾಟೀಲರನ್ನು ಮುಖ್ಯಮಂತ್ರಿ ಸ್ಥಾನದಿಂದ ಬದಲಾಯಿಸದೆ ಬೇರೆ ದಾರಿಯೇ ಇರಲಿಲ್ಲ. ಲಿಂಗಾಯತ ಮುಖ್ಯಮಂತ್ರಿಯೊಬ್ಬರು ಅಸ್ವಸ್ಥರಾಗಿದ್ದಾರೆಂಬುದನ್ನು ಮರೆಮಾಚುವ ಮೂಲಕ ಕಾಂಗ್ರೆಸ್ ಅವರನ್ನು ಅಧಿಕಾರದಿಂದ ಕೆಳಗಿಳಿಸಿದೆ ಎಂದು ಭಾರಿ ಅಪಪ್ರಚಾರ ಮಾಡಿದ್ದರಿಂದ ಈ ಹಿಂದೆ ಲಿಂಗಾಯತ ಮತಗಳು ಜನತಾ ಪಕ್ಷಕ್ಕೆ, ನಂತರ ಬಿಜೆಪಿಗೆ ಹೋಗಲು ಕಾರಣವಾಯಿತು. ಯಡಿಯೂರಪ್ಪ ಅವರನ್ನು ತೆಗೆಯುವಾಗ ಅನಾರೋಗ್ಯ ಇತ್ತೇ?

• ಯಡಿಯೂರಪ್ಪ ಅವರನ್ನು ತೆಗೆದರೂ ಇನ್ನೊಬ್ಬ ಲಿಂಗಾಯತ ಬಸವರಾಜ ಬೊಮ್ಮಾಯಿ ಅವರನ್ನು ಬಿಜೆಪಿಯವರು ಮುಖ್ಯಮಂತ್ರಿ ಮಾಡಿದ್ದಾರಲ್ಲ?

ಒಬ್ಬ ಲಿಂಗಾಯತನನ್ನು ತೆಗೆದು ಇನ್ನೊಬ್ಬ ಲಿಂಗಾಯತನನ್ನು ಮುಖ್ಯಮಂತ್ರಿ ಮಾಡುವ ಉದ್ದೇಶ ಬಿಜೆಪಿಯವರದ್ದು ಆಗಿರಲಿಲ್ಲ. ಬೊಮ್ಮಾಯಿ ಅವರು ಆ್ಯಕ್ಸಿಡೆಂಟಲ್ ಚೀಫ್ ಮಿನಿಸ್ಟರ್. ಲಿಂಗಾಯತ ಸಮುದಾಯ ಮತ್ತು ವೀರಶೈವ ಮಹಾಸಭಾದ ಪ್ರತಿಭಟನೆಯ ನಂತರ ಅವರನ್ನು ಮುಖ್ಯಮಂತ್ರಿ ಮಾಡಲಾಯಿತು. ಮತ್ತೆ ಬಿಜೆಪಿ ಅಧಿಕಾರಕ್ಕೆ ಬರಲ್ಲ. ಬೊಮ್ಮಾಯಿ ಅವರನ್ನು ಮುಖ್ಯಮಂತ್ರಿ ಮಾಡಲ್ಲ. ಹಿಂದೆ ಕುಮಾರಸ್ವಾಮಿ ಹೇಳಿದ್ದು ಸತ್ಯ ಅನ್ನಿಸುತ್ತಿದೆ.

ಸುನಾಮಿಗೆ ಬಿಜೆಪಿ ಕೊಚ್ಚಿಕೊಂಡು ಹೋಗುವುದು ಖಚಿತ

• ರಾಜ್ಯದಲ್ಲಿ ಯಾವ ವಿಷಯಗಳು ಮತದಾರರನ್ನು ಪ್ರಭಾವಿಸಬಹುದು?

ಆಡಳಿತ ವಿರೋಧಿ ಅಲೆ ಬಲವಾಗಿದೆ. ಆ ಸುನಾಮಿಗೆ ಬಿಜೆಪಿ ಕೊಚ್ಚಿಕೊಂಡು ಹೋಗುವುದು ಖಚಿತ. ಡಬಲ್ ಎಂಜಿನ್ ಸರ್ಕಾರದ ಆಡಳಿತದಿಂದ ಜನ ಬೇಸತ್ತಿದ್ದಾರೆ. ಚುನಾವಣಾ ಪ್ರಚಾರ ವೇಳೆ ನಾವು ಶೇ 40 ಕಮಿಷನ್ ವಿಚಾರ ಪ್ರಸ್ತಾಪಿಸುವ ಮೊದಲೇ ಜನರೇ ಅದನ್ನು ಹೇಳುತ್ತಾರೆ. ಬಿಜೆಪಿಯವರು ಜನರ ಭಾವನೆಗಳನ್ನು ಕೆರಳಿಸುತ್ತಿದ್ದಾರೆ. ಬದುಕು ಕಟ್ಟಿಕೊಡುವ ಬಗ್ಗೆ ಮಾತನಾಡುತ್ತಿಲ್ಲ.

ಎಂ.ಬಿ. ಪಾಟೀಲ

ಪ್ರಜಾವಾಣಿ ಸಂದರ್ಶನ

ಎಂ.ಬಿ. ಪಾಟೀಲ

ಪ್ರಧಾನಿ ವಿರುದ್ಧ ಕ್ರಮಕ್ಕೆ ಆಗ್ರಹ

ಪ್ರಜಾವಾಣಿ ವಾರ್ತೆ

ಮೈಸೂರು: 'ನಗರದ ಕೆ.ಆರ್.ವೃತ್ತದಲ್ಲಿ ಮೆರವಣಿಗೆಗೆ ನಿಷೇಧವಿದ್ದರೂ ಪ್ರಧಾನಿ ನರೇಂದ್ರ ಮೋದಿ ಹಾಗೂ ಬಿಜೆಪಿ ಮುಖಂಡರು ರೋಡ್ ಶೋ ನಡೆಸಿದ್ದಾರೆ. ಕೂಡಲೇ ಅವರ ವಿರುದ್ಧ ಪ್ರಕರಣ ದಾಖಲಿಸಬೇಕು' ಎಂದು ಭಾರತ ಕಮ್ಯುನಿಸ್ಟ್ ಪಕ್ಷ (ಮಾರ್ಕ್ಸ್‌ವಾದಿ) ಆಗ್ರಹಿಸಿದೆ.

'ಜಿಲ್ಲಾಡಳಿತ ಮತ್ತು ಪೊಲೀಸ್ ಇಲಾಖೆಯಿಂದ ಸಂಚಾರ ದಟ್ಟಣೆ ಕಾರಣ ನೀಡಿ ಕೆ.ಆರ್.ವೃತ್ತದಲ್ಲಿ ಪ್ರತಿಭಟನೆ, ಮೆರವಣಿಗೆ ನಡೆಸದಂತೆ ಹತ್ತು ವರ್ಷಗಳ ಹಿಂದೆಯೇ ನಿಷೇಧಿಸಲಾಗಿದೆ. ಉಲ್ಲಂಘಿಸಿದ ಹಲವರ ವಿರುದ್ಧ ಈಗಾಗಲೇ ಪ್ರಕರಣಗಳೂ ದಾಖಲಾಗಿವೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಪಕ್ಷದ ಜಿಲ್ಲಾ ಕಾರ್ಯದರ್ಶಿ ಎಲ್.ಜಗದೀಶ್ ಸೂರ್ಯ ಹೇಳಿದರು.

'ದಸರಾ, ಸರ್ಕಾರಿ ಕಾರ್ಯಕ್ರಮಗಳಿಗೆ ಮಾತ್ರ ಅವಕಾಶವಿದ್ದು, ಬಿಜೆಪಿ ಆಯೋಜಿಸಿದ ಪ್ರಧಾನಿ ರೋಡ್ ಶೋಗೆ ಜಿಲ್ಲಾಡಳಿತ ಅನುಮತಿ ನೀಡಿದ್ದಾದರೂ ಹೇಗೆ ? ನೆಲದ ಕಾನೂನು ಎಲ್ಲರಿಗೂ ಒಂದೇ ಆಗಿದ್ದು, ಜಿಲ್ಲಾಡಳಿತದ ನಡೆ ಖಂಡನೀಯ' ಎಂದರು. 'ಶಾಸಕರಾದ ಎಸ್.ಎ.ರಾಮದಾಸ್, ಕೆ.ಎಸ್. ಈಶ್ವರಪ್ಪ, ಸಂಸದ ಪ್ರತಾಪ ಸಿಂಹ ವಿರುದ್ಧವೂ ಪ್ರಕರಣ ದಾಖಲಿಸಬೇಕು. ಇಲ್ಲದಿದ್ದರೆ ಕೆ.ಆರ್.ವೃತ್ತದಲ್ಲಿ ಪ್ರತಿಭಟನೆ ನಡೆಸಲಾಗುವುದು. ಕಾನೂನು ಹೋರಾಟವನ್ನೂ ಕೈಗೆತ್ತಿಕೊಳ್ಳಲಾಗುವುದು' ಎಂದು ಎಚ್ಚರಿಸಿದರು.

ಮುಖವಾಡ

ಕಲಬುರಗಿಯಲ್ಲಿ ಬುಧವಾರ ಸಂಜೆ ಕಾಂಗ್ರೆಸ್ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ಪ್ರಿಯಾಂಕಾ ಗಾಂಧಿ ಅವರು ಪಾಲ್ಗೊಂಡಿದ್ದ ರೋಡ್ ಶೋನಲ್ಲಿ ಜಾನಪದ ಕಲಾ ತಂಡಗಳು ಪಾಲ್ಗೊಂಡಿದ್ದವು –ಪ್ರಜಾವಾಣಿ ಚಿತ್ರ/ತಾಜುದ್ದೀನ್ ಆಜಾದ್

ಜಗ್ಗೇಶ್ ಭಾವಚಿತ್ರ ಮರೆಮಾಚಿದ ಅಧಿಕಾರಿಗಳು

ಪ್ರಜಾವಾಣಿ ವಾರ್ತೆ

ದಾವಣಗೆರೆ: ಬಿಜೆಪಿಯ ಸ್ಟಾರ್ ಪ್ರಚಾರಕರಾಗಿರುವ ನಟ ಜಗ್ಗೇಶ್ ಅಭಿನಯದ 'ರಾಘವೇಂದ್ರ ಸ್ಟೋರ್ಸ್' ಚಿತ್ರದ ಪೋಸ್ಟರ್‌ಗಳಲ್ಲಿರುವ ಜಗ್ಗೇಶ್ ಅವರ ಭಾವಚಿತ್ರವನ್ನು ವಿಧಾನಸಭೆ ಚುನಾವಣೆ ಮಾದರಿ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಬುಧವಾರ ಮರೆ ಮಾಚಲಾಗಿದೆ.

ಸಿ-ವಿಜಿಲ್' ಆ್ಯಪ್ ಮೂಲಕ ದಾಖಲಾದ ದೂರಿನ ಮೇರೆಗೆ ಎಫ್‌ಎಸ್‌ಟಿ ಚಿತ್ರಮಂದಿರದ ಎದುರು ಅಂಟಿಸಿದ್ದ ಪೋಸ್ಟರ್‌ಗಳಲ್ಲಿ ಜಗ್ಗೇಶ್ ಅವರ ಮುಖ ಕಾಣದಂತೆ ಬಿಳಿ ಹಾಳೆಗಳಿಂದ ಮರೆಮಾಚಿತು. ಅನುಮತಿ ಪಡೆದಿದ್ದರಿಂದ ಚಿತ್ರಪ್ರದರ್ಶನಕ್ಕೆ ಅಡ್ಡಿಪಡಿಸಲಿಲ್ಲ. 'ಚಲನಚಿತ್ರ ಪ್ರದರ್ಶನ ವಾಣಿಜ್ಯ ಚಟುವಟಿಕೆಯಾದ್ದರಿಂದ ಚಿತ್ರಪ್ರದರ್ಶನಕ್ಕೆ ಅಡ್ಡಿಪಡಿಸಲು ಹಾಗೂ ಪೋಸ್ಟರ್ ಮುಚ್ಚಲು ಅವಕಾಶವಿಲ್ಲ. ಮಾಹಿತಿ ಕೊರತೆಯಿಂದ ಪೋಸ್ಟರ್ ಮರೆಮಾಚಿದೆ' ಎಂದು ಜಿಲ್ಲಾಧಿಕಾರಿ ಶಿವಾನಂದ ಕಾಪಶಿ ತಿಳಿಸಿದರು.

₹970 ಕೋಟಿ ಮೊತ್ತದ ಚುನಾವಣಾ ಬಾಂಡ್ ಮಾರಾಟ

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣೆಗೆ ಮುನ್ನ ಅಂದರೆ ಏಪ್ರಿಲ್‌ನಲ್ಲಿ ₹970.50 ಕೋಟಿ ಮೊತ್ತದ ಚುನಾವಣಾ ಬಾಂಡ್‌ಗಳು ಮಾರಾಟವಾಗಿವೆ.

2018ರಲ್ಲಿ ಚುನಾವಣಾ ಬಾಂಡ್ ವ್ಯವಸ್ಥೆ ಅಸ್ತಿತ್ವಕ್ಕೆ ಬಂದಿತ್ತು. ಅಂದಿನಿಂದ ಇಂದಿನವರೆಗೆ 26 ಆವೃತ್ತಿಗಳ ಮೂಲಕ ಅವುಗಳ ಮಾರಾಟ ಆಗಿದೆ. ಈವರೆಗೆ ₹12,979.09 ಕೋಟಿ ಮೊತ್ತದ ಬಾಂಡ್‌ಗಳು ಮಾರಾಟವಾಗಿವೆ. ನಗದೀಕರಣಗೊಳ್ಳದ ಬಾಂಡ್‌ಗಳ ಮೊತ್ತ ಅಂದಾಜು ₹24 ಕೋಟಿ. ಅವುಗಳನ್ನು ಪ್ರಧಾನಮಂತ್ರಿಗಳ ರಾಷ್ಟ್ರೀಯ ಪರಿಹಾರ ನಿಧಿಗೆ ವರ್ಗಾಯಿಸಲಾಗಿದೆ.

ಕಮೋಡೋರ್ ಲೋಕೇಶ್ ಬಾತ್ರಾ (ನಿವೃತ್ತ) ಎಂಬುವರು ಮಾಹಿತಿ ಹಕ್ಕು ಕಾಯ್ದೆಯಡಿ ಪಡೆದ ಮಾಹಿತಿ ಪ್ರಕಾರ, ಏಪ್ರಿಲ್ 3ರಿಂದ 12ರ ಅವಧಿಯಲ್ಲಿ 26ನೇ ಆವೃತ್ತಿಯ ಬಾಂಡ್‌ಗಳ ಮಾರಾಟ ಆಗಿದೆ. ಎಸ್‌ಬಿಐ 1,470 ಬಾಂಡ್‌ಗಳನ್ನು ಮಾರಿದೆ. ಈ ಪೈಕಿ, 923 ಅಥವಾ ಶೇ 95.10 ರಷ್ಟು ಬಾಂಡ್‌ಗಳು ₹1 ಕೋಟಿ ಮೌಲ್ಯದವುಗಳು. ಜತೆಗೆ ತಲಾ ₹1 ಲಕ್ಷ ಮೌಲ್ಯದ 568 ಹಾಗೂ ತಲಾ ₹10 ಸಾವಿರ ಮೌಲ್ಯದ 10 ಬಾಂಡ್‌ಗಳನ್ನು ಮಾರಿದೆ. ಎಸ್‌ಬಿಐನ ಬೆಂಗಳೂರು ಶಾಖೆ ₹46 ಕೋಟಿ ಮೊತ್ತದ ಬಾಂಡ್ ಮಾರಾಟ ಮಾಡಿದೆ.

ಚುನಾವಣಾ ಬಾಂಡ್‌ಗಳನ್ನು ನಗದೀಕರಣಗೊಳಿಸುವ ಸಲುವಾಗಿ ಎಸ್‌ಬಿಐನಲ್ಲಿ 25 ರಾಜಕೀಯ ಪಕ್ಷಗಳು ಖಾತೆಗಳನ್ನು ತೆರೆದಿವೆ. ಸೂಕ್ತ ಅನುಮೋದನೆ ದೊರೆತ ನಂತರ ಶಾಖೆಗಳಲ್ಲಿ ಖಾತೆಗಳನ್ನು ತೆರೆಯಲಾಗುತ್ತಿದೆ ಎಂದು ಬ್ಯಾಂಕ್ ತಿಳಿಸಿದೆ.

ಎಡಿಆರ್ ವರದಿಯ ಪ್ರಕಾರ, ಆಡಳಿತಾರೂಢ ಬಿಜೆಪಿಯ ಆದಾಯವು ಹಿಂದಿನ ಹಣಕಾಸು ವರ್ಷಕ್ಕೆ ಹೋಲಿಸಿದರೆ ಶೇ 154ರಷ್ಟು ಹೆಚ್ಚಳ ಆಗಿದೆ. ಅದು 2021–22ರಲ್ಲಿ ₹1,917 ಕೋಟಿಗೆ ತಲುಪಿದೆ. ಅದರಲ್ಲಿ ಶೇ 54ರಷ್ಟು ಚುನಾವಣಾ ಬಾಂಡ್‌ಗಳ ಮೂಲಕ ಬಂದಿದೆ. ಬಿಜೆಪಿ, ಕಾಂಗ್ರೆಸ್, ತೃಣಮೂಲ ಕಾಂಗ್ರೆಸ್ ಹಾಗೂ ಎನ್‌ಸಿಪಿ ಪಕ್ಷಗಳು ಶೇ 55.09 ಅಂದರೆ ₹1811.94 ಕೋಟಿ ಮೊತ್ತದ ದೇಣಿಗೆಗಳನ್ನು ಚುನಾವಣಾ ಬಾಂಡ್‌ಗಳ ಮೂಲಕ ಪಡೆದಿವೆ. ಇತರ ರಾಷ್ಟ್ರೀಯ ಪಕ್ಷಗಳಾದ ಸಿಪಿಎಂ, ಸಿಪಿಐ, ಬಿಎಸ್‌ಪಿ ಹಾಗೂ ಎನ್‌ಪಿಪಿಗೆ ಈ ವಿಧಾನದ ಮೂಲಕ ದೇಣಿಗೆ ಬಂದಿಲ್ಲ.

ಪಂಚಮಸಾಲಿ ಪೀಠಗಳು ಬಿಜೆಪಿ ನಾಯಕರ ಹಿಡಿತದಲ್ಲಿ: ಕುನ್ನೂರ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಪಂಚಮಸಾಲಿ ಸಮಾಜದ ಒಂದೊಂದು ಪೀಠಗಳು ಒಬ್ಬೊಬ್ಬ ಬಿಜೆಪಿ ನಾಯಕರ ಹಿಡಿತದಲ್ಲಿವೆ. ಹರಿಹರ ಪೀಠ ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ, ಕೂಡಲಸಂಗಮ ಪೀಠ ಬಸನಗೌಡ ಪಾಟೀಲ ಯತ್ನಾಳ ಮತ್ತು ಇನ್ನೊಂದು ಪೀಠದ ಮೇಲೆ ಮುರುಗೇಶ ನಿರಾಣಿ ಹಿಡಿತ ಸಾಧಿಸಿದ್ದಾರೆ' ಎಂದು ಅಖಿಲ ಭಾರತ ವೀರಶೈವ ಮಹಾಸಭಾದ ಕೇಂದ್ರ ಸಮಿತಿ ಸದಸ್ಯ ಹಾಗೂ ಮಾಜಿ ಸಂಸದ ಮಂಜುನಾಥ ಕುನ್ನೂರ ಆರೋಪಿಸಿದರು.

'ಈ ಪೀಠಗಳು 2008ರ ನಂತರ ಹುಟ್ಟಿಕೊಂಡಿವೆ. ನಮ್ಮ ಸಮಾಜಕ್ಕೆ ಪಂಚಪೀಠಗಳೇ ಮೂಲ. ನಾನು ಒಕ್ಕಲಿಗರ ಸಂಘದ ರೀತಿ ಸ್ವಾಮೀಜಿಗಳ ರಹಿತವಾದ ಪಂಚಮಸಾಲಿ ಸಮಾಜದ ಸಂಘವನ್ನು ಸ್ಥಾಪಿಸುವ ಗುರಿ ಹೊಂದಿದ್ದೇನೆ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ಅವರು ಹೇಳಿದರು.

'ಸರ್ಕಾರ ನೀಡಿರುವ ಮೀಸಲಾತಿಯನ್ನು ಪಂಚಮಸಾಲಿ ಸಮಾಜ ಒಪ್ಪುವುದಿಲ್ಲ. ಸರ್ಕಾರ ಮೀಸಲಾತಿ ನೀಡಿದೆ ಎಂದು ಬಸನಗೌಡ ಪಾಟೀಲ ಯತ್ನಾಳ, ಬಸವಜಯ ಮೃತ್ಯುಂಜಯ ಸ್ವಾಮೀಜಿ ಕೃತಜ್ಞತೆ ಸಲ್ಲಿಸಿ, ಸಮಾಜಕ್ಕೆ ನ್ಯಾಯ ಸಿಕ್ಕಿದೆ ಎಂದು ಹೇಳುತ್ತಿರುವುದು ಸಮಂಜಸವಲ್ಲ. ಇದೆಲ್ಲವೂ ಚುನಾವಣಾ ಗಿಮಿಕ್' ಎಂದು ದೂರಿದರು.

ರಾಜಕೀಯ ವಿಶ್ಲೇಷಕ ಸುಧೀಂದ್ರ ಕುಲಕರ್ಣಿ ಅಭಿಪ್ರಾಯ

ಕಾಂಗ್ರೆಸ್ ಗೆದ್ದರೆ ಬಿಜೆಪಿ ವಿರೋಧಿ ಒಕ್ಕೂಟಕ್ಕೆ ಬಲ

ಪ್ರಜಾವಾಣಿ ವಾರ್ತೆ

ಹುಬ್ಬಳ್ಳಿ: 'ಕರ್ನಾಟಕದ ಚುನಾವಣೆಯು ರಾಷ್ಟ್ರ ರಾಜಕಾರಣದ ದಿಕ್ಸೂಚಿಯಾಗಿದೆ. ಕಾಂಗ್ರೆಸ್ ಗೆದ್ದರೆ, ರಾಷ್ಟ್ರ ಮಟ್ಟದಲ್ಲಿ ಬಿಜೆಪಿ ವಿರೋಧಿ ಒಕ್ಕೂಟಕ್ಕೆ ಬಲ ಬರಲಿದೆ' ಎಂದು ರಾಜಕೀಯ ವಿಶ್ಲೇಷಕ ಸುಧೀಂದ್ರ ಕುಲಕರ್ಣಿ ಅಭಿಪ್ರಾಯಪಟ್ಟರು.

'ರಾಜ್ಯದ ಚುನಾವಣೆಯ ಫಲಿತಾಂಶವನ್ನು ದೇಶವೇ ಕಾತರದಿಂದ ಕಾಯುತ್ತಿದೆ. ಬಿಜೆಪಿ ಸೋಲುವ ಲಕ್ಷಣಗಳು ಕಾಣುತ್ತಿವೆ. ಇಲ್ಲಿ ಸೋತರೇ ದೇಶದಾದ್ಯಂತ ವಿರೋಧ ಪಕ್ಷಗಳಿಗೆ ನೈತಿಕ ಶಕ್ತಿ ಬರುತ್ತದೆ' ಎಂದು ಬುಧವಾರ ಸುದ್ದಿಗೋಷ್ಠಿಯಲ್ಲಿ ಹೇಳಿದರು.

'ಬಿಜೆಪಿ ಈಗ ಸಂಪೂರ್ಣ ಬದಲಾಗಿದೆ. ಕೇಂದ್ರ ಮತ್ತು ರಾಜ್ಯದಲ್ಲಿಯೂ ಅಧಿಕಾರದಲ್ಲಿರುವ ಡಬಲ್ ಎಂಜಿನ್ ಸರ್ಕಾರದಿಂದ ಮಾತ್ರ ಅಭಿವೃದ್ಧಿ ಸಾಧ್ಯ ಎನ್ನುತ್ತಿದ್ದಾರೆ. ಬಿಜೆಪಿಯ ಈ ಪರಿಕಲ್ಪನೆ ಪ್ರಜಾಪ್ರಭುತ್ವ ಮತ್ತು ಸಂವಿಧಾನಕ್ಕೆ ವಿರುದ್ಧವಾಗಿದೆ. ಇವರ ಹೇಳುವ ಡಬಲ್ ಎಂಜಿನ್ ಸರ್ಕಾರದಲ್ಲಿ ಒಬ್ಬನೇ ಚಾಲಕನಿದ್ದು, ಕೇಂದ್ರ ಮತ್ತು ರಾಜ್ಯವನ್ನು ಸಹ ನಿಯಂತ್ರಿಸುತ್ತಿರುತ್ತಾನೆ. ಇಲ್ಲಿ ಯಾರೇ ಮುಖ್ಯಮಂತ್ರಿಯಾದರೂ, ಅವರ ರಿಮೋಟ್ ಕಂಟ್ರೋಲ್ ಮೋದಿ ಮತ್ತು ಅಮಿತ್ ಶಾ ಬಳಿ ಇರುತ್ತದೆ' ಎಂದು ವಾಗ್ದಾಳಿ ನಡೆಸಿದರು.

'ಬಹುಪಕ್ಷೀಯ ವ್ಯವಸ್ಥೆ ನಮ್ಮ ಪ್ರಜಾಪ್ರಭುತ್ವದ ಬುನಾದಿ. ಯಾವುದೇ ಸರ್ಕಾರವಿದ್ದರೂ, ಕೇಂದ್ರ ಸರ್ಕಾರ ಎಲ್ಲಾ ರಾಜ್ಯಗಳೊಂದಿಗೆ ಸಮಾನ ನ್ಯಾಯ ಮತ್ತು ಪಕ್ಷಪಾತವಿಲ್ಲದ ತತ್ವಗಳ ಆಧಾರದ ಮೇಲೆ ಕೆಲಸ ಮಾಡಬೇಕು ಎಂದು ಸಂವಿಧಾನ ಹೇಳುತ್ತದೆ. ಬಿಜೆಪಿಯ ನೀತಿ ಇದಕ್ಕೆ ವಿರುದ್ಧವಾಗಿದೆ. ಇವರಿಗೆ ಕಮ್ಯುನಿಸ್ಟ್ ಚೀನಾ ದೇಶದಂತಹ ವಿರೋಧ ಪಕ್ಷ ಮುಕ್ತ ಭಾರತ ಬೇಕಿದೆ' ಎಂದು ಅಸಮಾಧಾನ ವ್ಯಕ್ತಪಡಿಸಿದರು.

'ರಾಜ್ಯದ ಮತದಾರರು ಅಸ್ಥಿರ ಸರ್ಕಾರದ ಬದಲು, ಸ್ಥಿರ ಕಾಂಗ್ರೆಸ್ ಸರ್ಕಾರವನ್ನು ತರಬೇಕು. ಬಿಜೆಪಿಯ ಮಾಜಿ ನಾಯಕ ಜಗದೀಶ ಶೆಟ್ಟರ್ ಸೇರಿದಂತೆ ಉತ್ತರ ಕರ್ನಾಟಕದಾದ್ಯಂತ ಕಾಂಗ್ರೆಸ್ ಅಭ್ಯರ್ಥಿಗಳನ್ನು ಗೆಲ್ಲಿಸಬೇಕು. ಆಪರೇಷನ್ ಕಮಲವೆಂಬ ಅನೈತಿಕ ರಾಜಕಾರಣ ಪುನರಾವರ್ತನೆಯಾಗದಂತೆ ತಡೆಯಬೇಕು' ಎಂದರು.

'ಅನೈತಿಕ ರಾಜಕಾರಣ ಮಾಡದ ವಾಜಪೇಯಿ'

'ವಾಜಪೇಯಿ ಇಂದು ಬದುಕಿದ್ದರೆ ಮತ್ತು ಎಲ್.ಕೆ. ಅಡ್ವಾಣಿ ಅವರು ರಾಜಕೀಯವಾಗಿ ಸಕ್ರಿಯವಾಗಿದ್ದಿದ್ದರೆ, ಬಿಜೆಪಿಯ ಈಗಿನ ರಾಜಕಾರಣವನ್ನು ವಿರೋಧಿಸುತ್ತಿದ್ದರು. ಕೇವಲ ಒಂದು ಮತದಿಂದ ವಾಜಪೇಯಿ ಕೇಂದ್ರದಲ್ಲಿ ಅಧಿಕಾರ ಕಳೆದುಕೊಂಡರು. ಅವರೇನಾದರೂ, ಈಗಿನ ಬಿಜೆಪಿಯ ಆಪರೇಷನ್ ಕಮಲ ಮಾದರಿಯನ್ನು ಅನುಸರಿಸಿದ್ದಿದ್ದರೆ ಸರ್ಕಾರ ಉಳಿಸಿಕೊಳ್ಳಬಹುದಿತ್ತು. ಅವರು ಅನೈತಿಕ ರಾಜಕಾರಣ ಮಾಡಲಿಲ್ಲ. ಅದರ ಫಲವಾಗಿ, ಬಿಜೆಪಿ ಪೂರ್ಣ ಬಹುಮತದೊಂದಿಗೆ ದೇಶದಲ್ಲಿ ಅಧಿಕಾರ ಹಿಡಿಯಿತು. ಜಾತಿ ಮತ್ತು ಧರ್ಮಾಧಾರಿತ ಮತ ಬ್ಯಾಂಕ್ ಪ್ರಜಾಪ್ರಭುತ್ವಕ್ಕೆ ಮಾರಕ' ಎಂದು ಸುಧೀಂದ್ರ ಕುಲಕರ್ಣಿ ಹೇಳಿದರು.

ಬಿಜೆಪಿಯಿಂದಲೇ ಕಾಂಗ್ರೆಸ್ ನಾಯಕರಿಗೆ ನಿಂದನೆ–ಟೀಕೆ

ಮೋದಿಯಂತೆ ಅಳುತ್ತಾ ಕೂರಲಾರೆ: ಖರ್ಗೆ

ಪ್ರಜಾವಾಣಿ ವಾರ್ತೆ

ಕಲಬುರಗಿ: 'ಅವರಿವರು ಬಯ್ದರು ಎಂದು ಪ್ರಧಾನಿ ಮೋದಿಯಂತೆ ನಾನು ಅಳುತ್ತಾ ಕೂರಲಾರೆ. ತಮ್ಮದು ಕೆಳಜಾತಿ ಎಂದು ಅವರು ಅನುಕಂಪ ಗಿಟ್ಟಿಸಲು ನೋಡುತ್ತಾರೆ. ನನ್ನದು ಶ್ರೇಣೀಕೃತ ವ್ಯವಸ್ಥೆಯಲ್ಲಿ ಅತ್ಯಂತ ಕೆಳಜಾತಿ. ಎಲ್ಲರೂ ನನ್ನ ಹೆಗಲ ಮೇಲೆ ಕಾಲಿಟ್ಟೇ ಮೇಲೆ ನಿಲ್ಲುತ್ತಾರೆ. ಹಾಗಿದ್ದರೆ, ನಾನೆಷ್ಟು ಅಳಬೇಕಿತ್ತು' ಎಂದು ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಮೋದಿ ಅವರನ್ನು ಪ್ರಶ್ನಿಸಿದರು.

'ನನಗೆ ಯಾರಾದರೂ ನಿಂದಿಸಿದರೆ, ಹಿಮ್ಮತ್ (ಧೈರ್ಯ) ನಿಂದ ಎದುರಿಸುವೆ. ಮೋದಿ ಮತ್ತು ಅವರ ಪಕ್ಷದವರು ಸೋನಿಯಾ ಗಾಂಧಿ ಅವರನ್ನು ಇಟಲಿ ಮಹಿಳೆ ಎಂದರು. ರಾಹುಲ್ ಗಾಂಧಿ ಅವರನ್ನು ಸತತವಾಗಿ ನಿಂದಿಸಿದರು. ಇದನ್ನು ನಾವು ರಾಜಕೀಯವಾಗಿಯೇ ಎದುರಿಸಿದ್ದೇವೆ' ಎಂದು ಬುಧವಾರ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.

ಆಳಂದದಲ್ಲಿ ನಡೆದ ಕಾಂಗ್ರೆಸ್ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, 'ನಾನು, ನನ್ನ ಮಗ ಪ್ರಿಯಾಂಕ್ ಅವಮಾನಿಸಿದ್ದೇವೆ ಎಂದು ನರೇಂದ್ರ ಮೋದಿ ಪದೇ ಪದೇ ಹೇಳುತ್ತಿದ್ದಾರೆ. ದೇಶದ ಪ್ರಧಾನಿಯಾದ ಅವರನ್ನು ಅಪಮಾನಿಸಲು ಹೇಗೆ ಸಾಧ್ಯ? ಪ್ರಧಾನಿ ಸ್ಥಾನದಲ್ಲಿ ಯಾರೇ ಆಗಿದ್ದರೂ ಅವರು ನಮ್ಮವರು' ಎಂದರು.

'ದೇವತಾ ಮನುಷ್ಯ, ಸಾಧು, ಸಂತ ಎನಿಸಿಕೊಂಡು ಕಾವಿ ತೊಟ್ಟಿರುವ ನೀವು ಮನುಷ್ಯರನ್ನು ಉದ್ಧಾರ ಮಾಡುತ್ತಿದ್ದೀರಾ ಅಥವಾ ಅವರಲ್ಲೇ ಜಗಳ ತಂದಿಡುತ್ತಿದ್ದೀರಾ' ಎಂದು ಉತ್ತರಪ್ರದೇಶದ ಮುಖ್ಯಮಂತ್ರಿ ಯೋಗಿ ಆದಿತ್ಯನಾಥ್ ಅವರನ್ನು ಪ್ರಶ್ನಿಸಿದರು. ಇದರ ಮಧ್ಯೆ ಮಧ್ಯಾಹ್ನ 1.30ರ ಆಜಾನ್(ನಮಾಜ್) ಆರಂಭವಾದ ಹಿನ್ನೆಲೆಯಲ್ಲಿ ಅವರು ಕೆಲ ನಿಮಿಷ ಭಾಷಣ ನಿಲ್ಲಿಸಿದರು.

ಹಾಸನ ಖಾತೆ ತೆರೆಯಲು ಕಾಂಗ್ರೆಸ್ ಹರಸಾಹಸ • ಅರಕಲಗೂಡಿನಲ್ಲಿ ಬಂಡಾಯ ಭೀತಿ

ಜೆಡಿಎಸ್ ಕೋಟೆ: ‘ಕಮಲ’ದ ಕನಸು

• ಚಿದಂಬರಪ್ರಸಾದ

ಹಾಸನ: ಜೆಡಿಎಸ್ ಕೋಟೆಯಲ್ಲಿ ಹೇಗಾದರೂ ಸರಿಯೇ ಸ್ವಲ್ಪವಾದರೂ ನೆಲೆ ಕಂಡುಕೊಳ್ಳಬೇಕು ಎನ್ನುವುದು ಬಿಜೆಪಿ ತವಕ. ಈ ಬಾರಿ ಶತಾಯಗತಾಯ ಖಾತೆ ತೆರೆಯಬೇಕು ಎಂಬುದು ಕಾಂಗ್ರೆಸ್‌ನ ಹಂಬಲ. ಇರುವ ಕ್ಷೇತ್ರಗಳ ಜೊತೆ ಕೈತಪ್ಪಿರುವ ಹಾಸನವನ್ನೂ ಮರಳಿ ಪಡೆಯಬೇಕೆಂಬುದು ಜೆಡಿಎಸ್‌ನ ಹಟ.

ರಾಜಕೀಯವನ್ನೇ ಹಾಸಿ, ಹೊದ್ದು ಮಲಗುವ ಜಿಲ್ಲೆಯಲ್ಲಿ ಪ್ರತಿ ಚುನಾವಣೆಯಲ್ಲೂ ಕಾಂಗ್ರೆಸ್-ಜೆಡಿಎಸ್ ನಡುವೆಯೇ ಪೈಪೋಟಿ ಇರುತ್ತಿತ್ತು. ಈಗ ಜೆಡಿಎಸ್ ಮತ್ತು ಬಿಜೆಪಿಯ ಜಿದ್ದಾಜಿದ್ದಿಗೆ ಸಾಕ್ಷಿಯಾಗುತ್ತಿದೆ.

ಜಿಲ್ಲೆಯಲ್ಲಿ ಪಕ್ಷಕ್ಕಿಂತ ವ್ಯಕ್ತಿಯ ವರ್ಚಸ್ಸೇ ಮುಖ್ಯವಾಗಿರುವುದರಿಂದ ಪಕ್ಷಾಂತರವೂ ಸಲೀಸಾಗಿ ನಡೆದಿದೆ. ‘ಬೆಂಬಲಿಗರ ಪಡೆ’ಯುಳ್ಳ ನಾಯಕರು, ತಮ್ಮ ಮತಗಳೆಲ್ಲವನ್ನೂ ತಾವು ಸೇರ್ಪಡೆಗೊಳ್ಳುವ ಪಕ್ಷಕ್ಕೆ ಸಲೀಸಾಗಿ ಕೊಂಡೊಯ್ಯುವ ಕಲೆಯನ್ನೂ ಕರಗತ ಮಾಡಿಕೊಂಡಿದ್ದಾರೆ.

ಜೆಡಿಎಸ್ ವಿರೋಧಿಸುತ್ತಿದ್ದ ಎ.ಮಂಜು ಅರಕಲಗೂಡಿನಲ್ಲಿ ಅದೇ ಪಕ್ಷದ ಅಭ್ಯರ್ಥಿ. ಕಾಂಗ್ರೆಸ್ ವಿರೋಧಿ ರಾಜಕಾರಣ ಮಾಡಿಕೊಂಡು ಬಂದಿದ್ದ ಕೆ.ಎಂ.ಶಿವಲಿಂಗೇಗೌಡ ಅರಸೀಕೆರೆಯಲ್ಲಿ ‘ಕೈ’ ಅಭ್ಯರ್ಥಿಯಾಗಿದ್ದರೆ, ಜೆಡಿಎಸ್ ವಿರುದ್ಧವೇ ಹೋರಾಡುತ್ತಿದ್ದ ಎನ್.ಆರ್. ಸಂತೋಷ್ ಅಲ್ಲಿ ಅದೇ ಪಕ್ಷದ ಅಭ್ಯರ್ಥಿ. ಬಿಜೆಪಿಯನ್ನು ಕೋಮುವಾದಿ ಎನ್ನುತ್ತಿದ್ದ ಎ.ಟಿ. ರಾಮಸ್ವಾಮಿ ಕಮಲದ ಬಾವುಟ ಹಿಡಿದಿದ್ದಾರೆ. ಹಾಸನ, ಅರಕಲಗೂಡು, ಅರಸೀಕೆರೆ, ಬೇಲೂರು ಮೂರೂ ಪಕ್ಷಗಳಿಗೂ ಪ್ರತಿಷ್ಠೆಯ ಕಣಗಳು.

ಹಾಸನ ಕ್ಷೇತ್ರದಲ್ಲಿ ಬಿಜೆಪಿಯ ಪ್ರೀತಂಗೌಡರ ಸವಾಲು ಸ್ವೀಕರಿಸಿರುವ ಶಾಸಕ ಎಚ್.ಡಿ.ರೇವಣ್ಣ ಕುಟುಂಬವು ಜೆಡಿಎಸ್ ಅಭ್ಯರ್ಥಿ ಎಚ್.ಪಿ.ಸ್ವರೂಪ್ ಪರವಾಗಿ ನಿಂತಿದೆ. ಹೀಗಾಗಿ ಪೈಪೋಟಿ ಮೇರೆಮೀರಿದೆ. ಕ್ಷೇತ್ರದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿರುವ ದಾಸ ಒಕ್ಕಲಿಗರನ್ನೇ ಮೂರೂ ಪಕ್ಷಗಳು ಕಣಕ್ಕಿಳಿಸಿ ಆ ಸಮುದಾಯವನ್ನು ಸೆಳೆಯುವ ಪ್ರಯತ್ನದಲ್ಲಿವೆ.

ರೇವಣ್ಣ ಕುಟುಂಬ ಪ್ರಚಾರದಲ್ಲಿ ಸಕ್ರಿಯವಾಗಿರುವುದು ಬಿಜೆಪಿ ಪಾಳಯದಲ್ಲಿ ಆತಂಕ ಸೃಷ್ಟಿಸಿದೆ. ಅದಕ್ಕಾಗಿಯೇ ಪ್ರೀತಂ ಗೌಡರೂ ಪ್ರಧಾನಿ, ಕೇಂದ್ರ ಗೃಹ ಸಚಿವರು ಸೇರಿದಂತೆ ಗಣ್ಯರನ್ನು ಕರೆ ತಂದು ಮತಬೇಟೆಗೆ ಪ್ರತಿತಂತ್ರ ರೂಪಿಸಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿ ಬನವಾಸೆ ರಂಗಸ್ವಾಮಿ, ರಾಜ್ಯಮಟ್ಟದ ನಾಯಕರಿಲ್ಲದೇ ಮನೆ ಪ್ರಚಾರಕ್ಕೆ ಆದ್ಯತೆ ನೀಡಿದ್ದಾರೆ. ಜೆಡಿಎಸ್‌ನ ಲ್ಲಿದ್ದು, ವರ್ಷದ ಹಿಂದಷ್ಟೇ ಆಮ್ ಆದ್ಮಿ ಪಕ್ಷ (ಎಎಪಿ) ಸೇರಿರುವ ಅಗಿಲೆ ಯೋಗೀಶ್ ಜೆಡಿಎಸ್ ಮತ ಗಳನ್ನು ಸೆಳೆಯುವ ಹುಮ್ಮಸ್ಸಿನಲ್ಲಿ ಇದ್ದಾರೆ.

ಅರಕಲಗೂಡಿನಲ್ಲಿ ಎ.ಮಂಜು ಅವರಿಗೆ ರೇವಣ್ಣ ಜೊತೆಯಾಗಿದ್ದರೆ, ಬಿಜೆಪಿಯ ಯೋಗಾ ರಮೇಶ್ ಬೆಂಬಲಕ್ಕೆ ರಾಮಸ್ವಾಮಿ ನಿಂತಿದ್ದು, ಸಮಬಲದ ಪೈಪೋಟಿ ಕಾಣುತ್ತಿದೆ. ಕೊನೇ ಕ್ಷಣದಲ್ಲಿ ಕಾಂಗ್ರೆಸ್ ಟಿಕೆಟ್ ಸಿಗದೇ ಬಂಡಾಯ ಅಭ್ಯರ್ಥಿಯಾಗಿರುವ ಎಂ.ಟಿ. ಕೃಷ್ಣೇಗೌಡ, ಕಾಂಗ್ರೆಸ್ ಅಭ್ಯರ್ಥಿ ಶ್ರೀಧರಗೌಡರಿಗೆ ನುಂಗಲಾರದ ತುತ್ತು.

ಅರಸೀಕೆರೆಯಲ್ಲಿ ಕಾಂಗ್ರೆಸ್‌ನ ಕೆ.ಎಂ. ಶಿವಲಿಂಗೇಗೌಡ ಹಾಗೂ ಜೆಡಿಎಸ್‌ನ ಎನ್.ಆರ್. ಸಂತೋಷ್ ನಡುವೆ ಪ್ರಬಲ ಪೈಪೋಟಿ ಏರ್ಪಟ್ಟಿದೆ. ‘ಕ್ಷೇತ್ರದಲ್ಲಿ ಹೆಚ್ಚಿರುವ ಲಿಂಗಾಯತ ಮತಗಳನ್ನು ಅದೇ ಸಮುದಾಯದ ಸಂತೋಷ್ ಸೆಳೆದರೆ ಅನುಕೂಲವಾಗಬಹುದು’ ಎಂಬ ಲೆಕ್ಕಾಚಾರವೂ ಇದೆ.

ಸಿದ್ದರಾಮಯ್ಯ ಅವರ ಮೂಲಕ ಕ್ಷೇತ್ರದ ಕುರುಬ ಸಮುದಾಯದ ಮತಗಳ ಮೇಲೆ ಕಣ್ಣಿಟ್ಟಿರುವ ಶಿವಲಿಂಗೇಗೌಡ, ತಮ್ಮ ಬೆಂಬಲಿಗರ ಮತಗಳು, ಕಾಂಗ್ರೆಸ್‌ನ ಸಾಂಪ್ರದಾಯಿಕ ಮತಗಳೊಂದಿಗೆ ಗೆಲುವಿನ ದಡ ಸೇರಬಹುದೆಂಬ ನಿರೀಕ್ಷೆಯಲ್ಲಿದ್ದಾರೆ. ಇನ್ನು ಜಿ.ವಿ.ಟಿ. ಬಸವರಾಜು ಅವರನ್ನು ಬಿಜೆಪಿ ಕಣಕ್ಕಿಳಿಸಿದ್ದು, ಅವರಿಗೆ ‘ಡಬಲ್ ಎಂಜಿನ್ ಸರ್ಕಾರ’ವೇ ಪ್ರಚಾರದ ಪ್ರಮುಖ ಸರಕು.

ಬೇಲೂರಿನಲ್ಲಿ ಬಿಜೆಪಿಯಿಂದ ಎಚ್.ಕೆ. ಸುರೇಶ್, ಕಾಂಗ್ರೆಸ್‌ನಿಂದ ಮಾಜಿ ಸಚಿವ ಬಿ. ಶಿವರಾಂ, ಜೆಡಿಎಸ್‌ನಿಂದ ಶಾಸಕ ಕೆ.ಎಸ್. ಲಿಂಗೇಶ್ ಕಣದಲ್ಲಿದ್ದು, ತ್ರಿಕೋನ ಸ್ಪರ್ಧೆ ಏರ್ಪಟ್ಟಿದೆ. ‘ಕೊನೆಯ ಚುನಾವಣೆ’ ಎದುರಿಸುವುದಾಗಿ ಹೇಳಿರುವ ಶಿವರಾಂ ಅವರಿಗೆ ಟಿಕೆಟ್ ನೀಡಿರುವುದರಿಂದ ಪಕ್ಷದಲ್ಲಿನ ಭಿನ್ನಮತ ಶಮನಗೊಂಡಿದೆ.

ಸಕಲೇಶಪುರ-ಆಲೂರು ಕ್ಷೇತ್ರದಲ್ಲಿ ನಾಲ್ಕನೇ ಬಾರಿಗೆ ಕಣಕ್ಕಿಳಿದಿರುವ ಎಚ್.ಕೆ.ಕುಮಾರಸ್ವಾಮಿ, ಮೂಲಸೌಕರ್ಯಗಳ ಕೊರತೆ, ಕಾಡಾನೆ ಸಮಸ್ಯೆಗಳ ಕಾರಣಕ್ಕೆ ಮತದಾರರ ಆಕ್ರೋಶವನ್ನು ಎದುರಿಸುವಂತಾಗಿದೆ. ಅದನ್ನೇ ಬಂಡವಾಳ ಮಾಡಿಕೊಂಡಿರುವ ಪ್ರತಿಪಕ್ಷಗಳು, ಕಾಂಗ್ರೆಸ್‌ನಿಂದ ಮುರುಳಿಮೋಹನ್, ಬಿಜೆಪಿಯಿಂದ ಎಸ್.ಮಂಜುನಾಥ್ ಅವರನ್ನು ಕಣಕ್ಕಿಳಿಸಿ ಮತದಾರರನ್ನು ಸೆಳೆಯಲೆತ್ನಿಸುತ್ತಿವೆ.

ಹೊಳೆನರಸೀಪುರದಲ್ಲಿ ಸಲೀಸಾಗಿ ಗೆಲ್ಲುತ್ತಿದ್ದ ಎಚ್.ಡಿ. ರೇವಣ್ಣ, ಈ ಬಾರಿ ಮಾಜಿ ಸಚಿವ ಜಿ.ಪುಟ್ಟಸ್ವಾಮಿಗೌಡರ ಮೊಮ್ಮಗ, ಕಾಂಗ್ರೆಸ್‌ನ ಶ್ರೇಯಸ್ ಪಟೇಲ್ ಅವರ ಪ್ರಬಲ ಪೈಪೋಟಿ ಎದುರಿಸುತ್ತಿದ್ದಾರೆ. ಸಂಸದ ಪ್ರಜ್ವಲ್ ರೇವಣ್ಣ, ಶಾಸಕ ಎಚ್.ಡಿ.ರೇವಣ್ಣ ಅವರು ದುರಾಡಳಿತ ನೀಡಿದ್ದಾರೆ ಎಂದು ಹೇಳುತ್ತಿರುವ ಶ್ರೇಯಸ್ ತಮ್ಮ ಅಜ್ಜ ಮಾಡಿದ ಕೆಲಸಗಳನ್ನು ನೆನಪಿಸುತ್ತಿದ್ದಾರೆ. ಸಂಸದ ಪ್ರಜ್ವಲ್ ವಿರುದ್ಧ ಹೈಕೋರ್ಟ್‌ನಲ್ಲಿ ಚುನಾವಣಾ ತಕರಾರು ಅರ್ಜಿ ಸಲ್ಲಿಸಿರುವ ವಕೀಲ ದೇವರಾಜೇಗೌಡ ಬಿಜೆಪಿ ಅಭ್ಯರ್ಥಿ.

ಶ್ರವಣಬೆಳಗೊಳದಲ್ಲಿ ಹ್ಯಾಟ್ರಿಕ್ ಗೆಲುವಿನ ಪ್ರಯತ್ನದಲ್ಲಿರುವ ಜೆಡಿಎಸ್ ಅಭ್ಯರ್ಥಿ ಸಿ.ಎನ್. ಬಾಲಕೃಷ್ಣ, ಒಂದು ಸುತ್ತಿನ ಪ್ರಚಾರ ಮುಗಿಸಿದ್ದಾರೆ. ಕೊನೇ ಗಳಿಗೆಯಲ್ಲಿ ವಿಧಾನ ಪರಿಷತ್ ಮಾಜಿ ಸದಸ್ಯ ಎಂ.ಗೋಪಾಲಸ್ವಾಮಿ ಅವರನ್ನು ಅಭ್ಯರ್ಥಿಯನ್ನಾಗಿಸಿ ಘೋಷಿಸಿದ್ದು ಕಾಂಗ್ರೆಸ್‌ಗೆ ಕೊಂಚ ಹಿನ್ನಡೆಯಾಗಿದೆ. ಬಿಜೆಪಿಯಿಂದ ಚಿದಾನಂದ ಕಣದಲ್ಲಿದ್ದರೂ ಜೆಡಿಎಸ್-ಕಾಂಗ್ರೆಸ್ ಮಧ್ಯೆಯೇ ಪೈಪೋಟಿ ಕಾಣುತ್ತಿದೆ.

ಹಿಂದಿನ ಚುನಾವಣೆಯ ಬಲಾಬಲ		
ಕ್ಷೇತ್ರ	2013	2018
ಶ್ರವಣಬೆಳಗೊಳ	ಜೆಡಿಎಸ್	ಜೆಡಿಎಸ್
ಅರಸೀಕೆರೆ	ಜೆಡಿಎಸ್	ಜೆಡಿಎಸ್
ಬೇಲೂರು	ಕಾಂಗ್ರೆಸ್	ಜೆಡಿಎಸ್
ಹಾಸನ	ಜೆಡಿಎಸ್	ಬಿಜೆಪಿ
ಹೊಳೆನರಸೀಪುರ	ಜೆಡಿಎಸ್	ಜೆಡಿಎಸ್
ಅರಕಲಗೂಡು	ಕಾಂಗ್ರೆಸ್	ಜೆಡಿಎಸ್
ಸಕಲೇಶಪುರ	ಜೆಡಿಎಸ್	ಜೆಡಿಎಸ್



ಗದಗ ಲಿಂಗಾಯತ ಮತಗಳೇ ನಿರ್ಣಾಯಕ

ಕಾಂಗ್ರೆಸ್– ಬಿಜೆಪಿ ಪೈಪೋಟಿ

• ಕೆ.ಎಂ.ಸತೀಶ್ ಬೆಳ್ಳಕ್ಕಿ



ಗದಗ: ಜಿಲ್ಲೆಯಲ್ಲಿನ ನಾಲ್ಕು ವಿಧಾನಸಭಾ ಕ್ಷೇತ್ರಗಳ ಪೈಕಿ ಸದ್ಯಕ್ಕೆ ಮೂರರಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇದ್ದರೆ, ಇನ್ನೊಂದು ಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಕಂಡುಬರುತ್ತಿದೆ. ಜೆಡಿಎಸ್ ಮತ್ತು ಆಮ್ ಆದ್ಮಿ ಪಕ್ಷಗಳು ಅಸ್ತಿತ್ವಕ್ಕಾಗಿ ಸೆಣಸುತ್ತಿವೆ.

2004 ರ ವರೆಗೆ ಜಿಲ್ಲೆ ಕಾಂಗ್ರೆಸ್‌ನ ಭದ್ರಕೋಟೆಯಾಗಿತ್ತು. 2008ರಲ್ಲಿ ಬಿಜೆಪಿ ‘ಪ್ರಯೋಗ ಶಾಲೆ’ಯಂತಾದ ಗದಗ ಜಿಲ್ಲೆ ನಾಲ್ಕೂ ಕ್ಷೇತ್ರದಲ್ಲಿ ಜಯಗಳಿಸಿ ‘ಕೈ’ ಪ್ರಾಬಲ್ಯದ ನಾಡಿನಲ್ಲಿ ಕಮಲ ಅರಳಿಸಿತ್ತು. 2013ರ ಚುನಾವಣೆಯಲ್ಲಿ ಫಲಿತಾಂಶ ತದ್ವಿರುದ್ಧವಾಗಿತ್ತು. ಕಾಂಗ್ರೆಸ್ ನಾಲ್ಕು ಕ್ಷೇತ್ರಗಳನ್ನು ಗೆದ್ದು ಹಿಂದಿನ ‘ಸೋಲಿನ ಸೇಡು’ ತೀರಿಸಿಕೊಂಡಿತ್ತು. 2018ರ ಚುನಾವಣೆಯಲ್ಲಿ ನರಗುಂದ, ರೋಣ ಹಾಗೂ ಶಿರಹಟ್ಟಿ ಮೀಸಲು ಕ್ಷೇತ್ರಗಳಲ್ಲಿ ಬಿಜೆಪಿ ಜಯ ಸಾಧಿಸಿತ್ತು. ಗದಗ ವಿಧಾನಸಭಾ ಕ್ಷೇತ್ರದಿಂದ ಎಚ್.ಕೆ.ಪಾಟೀಲ ಆಯ್ಕೆಯಾಗಿದ್ದರು. ಲಿಂಗಾಯತ ಪ್ರಾಬಲ್ಯವಿರುವ ಜಿಲ್ಲೆಯಲ್ಲಿ ಈ ಎರಡೂ ಪ್ರಮುಖ ಪಕ್ಷಗಳೂ ‘ಜಾತಿ’ ದಾಳ ಉರುಳಿಸಿ ಚುನಾವಣೆ ನಡೆಸುವುದು ವಿಶೇಷ.

ಗದಗ ಕ್ಷೇತ್ರದಲ್ಲಿ ಕಾಂಗ್ರೆಸ್‌ನಿಂದ ಎಚ್.ಕೆ.ಪಾಟೀಲ ಮತ್ತು ಬಿಜೆಪಿಯಿಂದ ಅನಿಲ್ ಮೆಣಸಿನಕಾಯಿ ಮುಖಾಮುಖಿಯಾಗಿದ್ದಾರೆ. 2018ರ ಚುನಾವಣೆಯಂತೆ ಈ ಸಲವೂ ಉಸಿರು ಬಿಗಿಹಿಡಿಯುವಂತಹ ಸ್ಪರ್ಧೆ ನಿಶ್ಚಿತ. ಕಾಂಗ್ರೆಸ್ ಗ್ರಾಮೀಣ ಭಾಗದಲ್ಲಿ ಹೆಚ್ಚಿನ ಪ್ರಾಬಲ್ಯ ಹೊಂದಿದ್ದರೆ, ನಗರ ಪ್ರದೇಶದಲ್ಲಿ ಬಿಜೆಪಿ ಮುಂದಿದೆ. ಎರಡೂ ಪಕ್ಷಗಳ ಮುಖಂಡರು ಮನೆ ಮನೆ ಪ್ರಚಾರಕ್ಕಿಂತಲೂ ಜಾತಿಗಳ ಸಭೆ ನಡೆಸಿ, ಮತ ಕ್ರೋಡೀಕರಿಸುವಲ್ಲಿ ನಿರತರಾಗಿದ್ದಾರೆ.

ಈ ಕ್ಷೇತ್ರ 40 ವರ್ಷಗಳಿಂದ ಪಾಟೀಲರ ಮನೆತನದ ಹಿಡಿತದಲ್ಲಿದೆ. 1957ರಿಂದ ಈವರೆಗೆ ನಡೆದಿರುವ ಚುನಾವಣೆಗಳಲ್ಲಿ ಮೂರು ಬಾರಿ ಮಾತ್ರ ಕಾಂಗ್ರೆಸ್ಸೇತರರು ಗೆದ್ದಿದ್ದಾರೆ. ಇಲ್ಲಿ ಪಂಚಮಸಾಲಿ ಸಮುದಾಯದ ಮತಗಳೇ ನಿರ್ಣಾಯಕ. ಲಿಂಗಾಯತ ಸಮುದಾಯದ ಇನ್ನಿತರ ಒಳಪಂಗಡಗಳು ಒಟ್ಟಿಗೆ ಸೇರಿದರೆ ಆ ಅಭ್ಯರ್ಥಿಗೆ ಗೆಲುವು ನಿಶ್ಚಿತ. ರೆಡ್ಡಿ ಲಿಂಗಾಯತರಾಗಿರುವ ಎಚ್.ಕೆ.ಪಾಟೀಲ ಅವರ ಗೆಲುವು ಲಿಂಗಾಯತ ಒಳಪಂಗಡದ ಮತಗಳ ವಿಭಜನೆಯಲ್ಲೇ ಅಡಗಿದೆ.

ಸಮಬಲದ ಸ್ಪರ್ಧೆ: ಬಂಡಾಯದ ನೆಲ ನರಗುಂದದಲ್ಲಿ ಪಂಚಮಸಾಲಿ ಸಮುದಾಯ ಪ್ರಾಬಲ್ಯ ಹೊಂದಿದೆ. ಅದೇ ಸಮುದಾಯದ ಸಚಿವ ಸಿ.ಸಿ.ಪಾಟೀಲ ಬಿಜೆಪಿ ಅಭ್ಯರ್ಥಿ, ಅಬ್ಬರದ ಪ್ರಚಾರ ನಡೆಸುತ್ತಿದ್ದಾರೆ. ಪಾಟೀಲರ ಅಭಿವೃದ್ಧಿಯ ‘ರಿಪೋರ್ಟ್ ಕಾರ್ಡ್’ ಹಿಡಿದುಕೊಂಡು ಅವರ ಮಕ್ಕಳು, ಸೊಸೆಯಂದಿರು, ಕಾರ್ಯಕರ್ತರು ಪ್ರಚಾರದಲ್ಲಿ ತೊಡಗಿಸಿ ಕೊಂಡಿದ್ದಾರೆ.

ಮಾಜಿ ಸಚಿವ ಬಿ.ಆರ್.ಯಾವಗಲ್ ಕಾಂಗ್ರೆಸ್‌ನಿಂದ ಅಖಾಡಕ್ಕೆ ಇಳಿದಿದ್ದು ಬಿಜೆಪಿಗೆ ಪ್ರಬಲ ಪೈಪೋಟಿ ನೀಡುತ್ತಿದ್ದಾರೆ. ಇವರು ಸಾಂಪ್ರದಾಯಿಕ ಕಾಂಗ್ರೆಸ್ ಮತಗಳ ಜತೆಗೆ ಕುರುಬ, ಮುಸ್ಲಿಂ ಹಾಗೂ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮತಗಳನ್ನು ಒಟ್ಟುಗೂಡಿಸುವ ಪ್ರಯತ್ನ ನಡೆಸಿದ್ದಾರೆ. ಕಾಂಗ್ರೆಸ್‌ನಿಂದ ನರಗುಂದ ಟಿಕೆಟ್ ಆಕಾಂಕ್ಷಿಯಾಗಿದ್ದ ಡಾ. ಸಂಗಮೇಶ ಕೊಳ್ಳಿ ತಟಸ್ಥರಾಗಿದ್ದಾರೆ. ಮಹದಾಯಿ, ಕಳಸಾ ಬಂಡೂರಿ ಹೋರಾಟಗಾರ ವೀರೇಶ ಸೊಬರದಮಠ ರೈತರ ಒತ್ತಾಸೆಯಂತೆ ಕಣದಲ್ಲಿದ್ದಾರೆ.

ದಾಯಾದಿ ಕಲಹ; ಕಾಂಗ್ರೆಸ್‌ಗೆ ಬಲ: ರೋಣ ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ನಡುವೆ ನೇರ ಪೈಪೋಟಿ ಇದ್ದು, ಆಮ್ ಆದ್ಮಿ ಪಕ್ಷದಿಂದ ಆನೇಕಲ್ ದೊಡ್ಡಯ್ಯ ಕಣದಲ್ಲಿದ್ದಾರೆ. ಕಾಂಗ್ರೆಸ್‌ನಿಂದ ಮಾಜಿ ಶಾಸಕ ಜಿ.ಎಸ್.ಪಾಟೀಲ ಕಣದಲ್ಲಿದ್ದು, ರೋಣ ಭಾಗದಲ್ಲಿ ಬಿಗಿಹಿಡಿತ ಹೊಂದಿದ್ದಾರೆ. ಬಿಜೆಪಿಯಿಂದ ಕಣದಲ್ಲಿರುವ ಕಳಕಪ್ಪ ಬಂಡಿ ಗಜೇಂದ್ರಗಡ ಭಾಗದಲ್ಲಿ ಪಾರಮ್ಯ ಸಾಧಿಸಿದ್ದಾರೆ. ಬಂಡಿ ಅವರ ಬಲಗೈ ಆಗಿದ್ದುಕೊಂಡು, ಅವರ ಎಲ್ಲ ಚುನಾವಣೆಗಳನ್ನು ನಿಖರವಾಗಿ ಕೆಲಸ ಮಾಡುತ್ತಿದ್ದ ಸಹೋದರ ಸಿದ್ದಪ್ಪ ಬಂಡಿ ಟಿಕೆಟ್ ಸಿಗದೆ ಪಕ್ಷ ತೊರೆದು ಕಾಂಗ್ರೆಸ್ ಸೇರಿದ್ದಾರೆ. ಇದು ಕಾಂಗ್ರೆಸ್‌ಗೆ ಆನೆಬಲ ತಂದು ಕೊಟ್ಟಿದೆ. ರೋಣ ಕ್ಷೇತ್ರದಲ್ಲೂ ಪಂಚಮಸಾಲಿ ಮತಗಳೇ ನಿರ್ಣಾಯಕ. ಉಳಿದಂತೆ ಗಾಣಿಗ, ಕುರುಬ, ಎಸ್‌ಸಿ, ಎಸ್‌ಟಿ ಮತದಾರರು ಹೆಚ್ಚಿನ ಸಂಖ್ಯೆಯಲ್ಲಿ ಇದ್ದಾರೆ.

ಶಿರಹಟ್ಟಿ ಮೀಸಲು ಮತಕ್ಷೇತ್ರದಲ್ಲಿ ತ್ರಿಕೋನ ಸ್ಪರ್ಧೆ ಕಂಡುಬರುತ್ತಿದೆ. ಕಾಂಗ್ರೆಸ್‌ನಿಂದ ಸುಜಾತಾ ದೊಡ್ಡಮನಿ, ಬಿಜೆಪಿಯಿಂದ ಡಾ. ಚಂದ್ರು ಲಮಾಣಿ, ಪಕ್ಷೇತರರಾಗಿ ಮಾಜಿ ಶಾಸಕ ರಾಮಕೃಷ್ಣ ದೊಡ್ಡಮನಿ ಕಣದಲ್ಲಿದ್ದಾರೆ. ಇಲ್ಲಿಯೂ ಲಿಂಗಾಯತ ಮತಗಳೇ ನಿರ್ಣಾಯಕ. ಶಾಸಕ ರಾಮಣ್ಣ ಲಮಾಣಿ ಬದಲಿಗೆ ಡಾ. ಚಂದ್ರು ಲಮಾಣಿಗೆ ಬಿಜೆಪಿ ಟಿಕೆಟ್ ನೀಡಿದ್ದು, ‘ಪಕ್ಷ ನನ್ನನ್ನು ಕಡೆಗಣಿಸಿದೆ’ ಎಂಬ ಅಸಮಾಧಾನ ರಾಮಣ್ಣ ಅವರಲ್ಲಿದೆ.

ಕಾಂಗ್ರೆಸ್ ಟಿಕೆಟ್‌ನಿಂದ ವಂಚಿತರಾಗಿರುವ ರಾಮಕೃಷ್ಣ ದೊಡ್ಡಮನಿ ಸಿಟ್ಟಿಗೆದ್ದಿದ್ದ ಅವರು ಪಕ್ಷೇತರ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿದ್ದಾರೆ. ಜಿಲ್ಲಾ ಪಂಚಾಯ್ತಿ ಮಾಜಿ ಅಧ್ಯಕ್ಷೆ ಸುಜಾತಾ ದೊಡ್ಡಮನಿ ಕಾಂಗ್ರೆಸ್ ಹುರಿಯಾಳು ಆಗಿದ್ದು ಅವರು ಮಾದಿಗ ಸಮಾಜದ ಮತಗಳ ಜತೆಗೆ ಲಿಂಗಾಯತ ಮತ್ತು ಕುರುಬ ಸಮಾಜದ ಮತ ಸೆಳೆಯುವ ಪ್ರಯತ್ನದಲ್ಲಿದ್ದಾರೆ.

ಮೀಸಲು ಕ್ಷೇತ್ರದಲ್ಲಿ ಬಿಜೆಪಿ ಮತ್ತು ಕಾಂಗ್ರೆಸ್ ಎರಡೂ ಪಕ್ಷಗಳ ಅಭ್ಯರ್ಥಿಗಳಿಗೆ ಬಂಡಾಯದ ಬಿಸಿ ತಟ್ಟಿದ್ದು, ಎದುರಾಳಿಗಳ ಜತೆಗೆ ಸ್ವಪಕ್ಷೀಯರ ಸವಾಲನ್ನೂ ಮೆಟ್ಟಿನಿಲ್ಲಬೇಕಿದೆ.

ಹಿಂದಿನ ಚುನಾವಣೆಯ ಬಲಾಬಲ		
ಕ್ಷೇತ್ರ	2013	2018
ಗದಗ	ಕಾಂಗ್ರೆಸ್	ಕಾಂಗ್ರೆಸ್
ನರಗುಂದ	ಕಾಂಗ್ರೆಸ್	ಬಿಜೆಪಿ
ರೋಣ	ಕಾಂಗ್ರೆಸ್	ಬಿಜೆಪಿ
ಶಿರಹಟ್ಟಿ	ಕಾಂಗ್ರೆಸ್	ಬಿಜೆಪಿ



ಕಲಬುರಗಿ ಕಾಂಗ್ರೆಸ್ ಕಟ್ಟಿ ಹಾಕಲು ಬಿಜೆಪಿ ಪ್ರತಿತಂತ್ರ • ನೆಲೆ ವಿಸ್ತರಿಸಲು ಜೆಡಿಎಸ್ ಪ್ರಯತ್ನ

ಖರ್ಗೆ ತವರಲ್ಲಿ ‘ಕೈ’ ಗೆಲುವಿನ ಮಂತ್ರ

• ಮನೋಜಕುಮಾರ್ ಗುದ್ದಿ



ಕಲಬುರಗಿ: ಕಾಂಗ್ರೆಸ್ ಪಕ್ಷದ ಅತ್ಯುನ್ನತ ಹುದ್ದೆಯಲ್ಲಿರುವ ಮಲ್ಲಿಕಾರ್ಜುನ ಖರ್ಗೆ ಅವರು ತವರು ಜಿಲ್ಲೆಯಲ್ಲಿ ಪಕ್ಷದ ವಿಜಯಪತಾಕೆಯನ್ನು ಹಾರಿಸುವ ಸವಾಲಿಗೆ ಒಡ್ಡಿಕೊಂಡಿದ್ದಾರೆ. ಹೇಗಾದರೂ ಸರಿಯೇ ಕಾಂಗ್ರೆಸ್ ಕೋಟೆಯನ್ನು ವಶಪಡಿಸಿಕೊಂಡು ಖರ್ಗೆ ಅವರಿಗೆ ಮುಖಭಂಗ ಮಾಡಬೇಕು ಎನ್ನುವ ಹಟದೊಂದಿಗೆ ಬಿಜೆಪಿ ಅಬ್ಬರದ ಪ್ರಚಾರಕ್ಕೆ ಮುಂದಾಗಿದೆ. ಇವೆರಡೂ ರಾಷ್ಟ್ರೀಯ ಪಕ್ಷಗಳ ನಡುವೆ ಈ ಬಾರಿ ತೀವ್ರ ಪೈಪೋಟಿಗೆ ಇಳಿದಿರುವ ಜೆಡಿಎಸ್ ಸಮರ್ಥ ಅಭ್ಯರ್ಥಿಗಳನ್ನು ಕಣಕ್ಕೆ ಇಳಿಸುವ ಮೂಲಕ ನೆಲೆಯನ್ನು ವಿಸ್ತರಿಸಿಕೊಳ್ಳಲು ಮುಂದಾಗಿದೆ.

ಜಿಲ್ಲೆಯ ಬಹುತೇಕ ಕ್ಷೇತ್ರಗಳಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ ನಡುವೆ ಹಣಾಹಣಿಯಿದ್ದು, ಕೆಲ ಕಡೆ ಜೆಡಿಎಸ್ ತೀವ್ರ ಪೈಪೋಟಿ ನೀಡಲಿದೆ. ಮಲ್ಲಿಕಾರ್ಜುನ ಖರ್ಗೆ ಅವರು ಸ್ಥಳೀಯ ನಾಯಕರ ಸಂಪರ್ಕದಲ್ಲಿದ್ದು, ಹೆಚ್ಚಿನ ಸ್ಥಾನ ಗೆಲ್ಲಲು ಕಾರ್ಯತಂತ್ರ ಹೆಣೆದಿದ್ದಾರೆ. ಚಿತ್ತಾಪುರದಲ್ಲಿ ಪ್ರಿಯಾಂಕ್ ಖರ್ಗೆ ಅವರನ್ನು ಸೋಲಿಸಿ,ಇತರ ಕ್ಷೇತ್ರಗಳಲ್ಲೂ ಗೆಲುವು ದಾಖಲಿಸಲು ಬಿಜೆಪಿಯವರು ತಂತ್ರ ರೂಪಿಸುತ್ತಿದ್ದಾರೆ.

ಚಿತ್ತಾಪುರ ವಿಧಾನಸಭಾ ಕ್ಷೇತ್ರದಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರ ಪುತ್ರ ಪ್ರಿಯಾಂಕ್ ಖರ್ಗೆ ಕಾಂಗ್ರೆಸ್ ಅಭ್ಯರ್ಥಿಯಾಗಿದ್ದು, ಅವರಿಗೆ ಬಿಜೆಪಿಯ ಅಭ್ಯರ್ಥಿ ರೌಡಿಶೀಟರ್ ಮಣಿಕಂಠ ರಾಠೋಡ ಎದುರಾಳಿಯಾಗಿದ್ದಾರೆ. ‘ಲೋಕಸಭಾ ಚುನಾವಣೆಯಲ್ಲಿ ಮಲ್ಲಿಕಾರ್ಜುನ ಖರ್ಗೆ ಅವರನ್ನು ಸೋಲಿಸಿದ ರೀತಿ ಅವರ ಪುತ್ರನನ್ನೂ ಪರಾಭವಗೊಳಿಸುತ್ತೇವೆ’ ಎಂದು ಬಿಜೆಪಿ ನಾಯಕರು ಹೇಳಿದರೆ, ಪ್ರಿಯಾಂಕ್ ಖರ್ಗೆ, ‘ರೌಡಿಶೀಟರ್ ಬೇಕೆ ಅಥವಾ ಜನರ ಮತ್ತು ಕ್ಷೇತ್ರದ ಅಭಿವೃದ್ಧಿ ಬಯಸುವ ಅಭ್ಯರ್ಥಿ ಬೇಕೆ’ ಎಂದು ಜನರನ್ನು ಪ್ರಶ್ನಿಸುತ್ತಿದ್ದಾರೆ.

ಅಫಜಲಪುರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಎಂ.ವೈ. ಪಾಟೀಲ ಮತ್ತು ಬಿಜೆಪಿಯ ಮಾಲೀಕಯ್ಯ ಗುತ್ತೇದಾರ ನಡುವೆ ನೇರ ಪೈಪೋಟಿ ಇದೆ. ಬಿಜೆಪಿ ಟಿಕೆಟ್ ಸಿಗದೇ ಬಂಡಾಯವೆದ್ದು ಪಕ್ಷೇತರರಾಗಿ ಕಣಕ್ಕಿಳಿದಿರುವ ನಿತಿನ್ ಗುತ್ತೇದಾರ ಅವರು ಅಣ್ಣ ಮಾಲೀಕಯ್ಯ ಗುತ್ತೇದಾರ ಅವರ ಸುಗಮ ಹಾದಿಗೆ ಅಡ್ಡಗಾಲು ಆಗುವ ಸಾಧ್ಯತೆ ಹೆಚ್ಚಿದೆ. ‘ಹೊಸ ಮುಖದ ನಿರೀಕ್ಷೆಯಲ್ಲಿ ಜನರಿದ್ದು, ಜೆಡಿಎಸ್ ಪರ ಒಲವಿದೆ’ ಎಂದು ಪಕ್ಷದ ಅಭ್ಯರ್ಥಿ ಶಿವಕುಮಾರ ನಾಟೀಕಾರ ಹೇಳುತ್ತಾರೆ.

ಕಲಬುರಗಿ ದಕ್ಷಿಣ ಕ್ಷೇತ್ರದಲ್ಲಿ ಬಿಜೆಪಿಯ ದತ್ತಾತ್ರೇಯ ಪಾಟೀಲ ರೇವೂರ ‘ಹ್ಯಾಟ್ರಿಕ್ ಸಾಧನೆ’ ಮಾಡುವ ಆತ್ಮವಿಶ್ವಾಸದಲ್ಲಿದ್ದರೆ, ‘ಕಳೆದ ಚುನಾವಣೆಯ ಸೋಲಿನ ಸೇಡು ತೀರಿಸಿಕೊಳ್ಳುವ’ ಉಮೇದಿನಲ್ಲಿ ಕಾಂಗ್ರೆಸ್‌ನ ಅಲ್ಲಮಪ್ರಭು ಪಾಟೀಲ ಇದ್ದಾರೆ.

ಕಲಬುರಗಿ ಉತ್ತರ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ಶಾಸಕಿ ಕನೀಜ್ ಫಾತಿಮಾ ಪುನರಾಯ್ಕೆ ಬಯಸಿದರೆ, ವಿಧಾನಪರಿಷತ್ ಸದಸ್ಯ ಬಿ.ಜಿ. ಪಾಟೀಲ ಪುತ್ರ, ಕ್ರೆಡೆಲ್ ಅಧ್ಯಕ್ಷ, ಬಿಜೆಪಿ ಚಂದು ಪಾಟೀಲ ಕಳೆದ ಚುನಾವಣೆ ಸೋಲಿನ ‘ಅನುಕಂಪ’ ಈ ಸಲ ಗೆಲುವಿಗೆ ನೆರವಾಗಬಹುದು ಎಂಬ ನಿರೀಕ್ಷೆಯಲ್ಲಿದ್ದಾರೆ.

ಆಳಂದ ಕ್ಷೇತ್ರದಲ್ಲಿ ಪುನರಾಯ್ಕೆಗೆ ಬಿಜೆಪಿ ಶಾಸಕ ಸುಭಾಷ್ ಗುತ್ತೇದಾರ ಅವರು ಅಲ್ಲಿನ ಲಾಡ್ಲೆ ಮಶಾಕ್ ದರ್ಗಾದಲ್ಲಿನ ರಾಘವ ಚೈತನ್ಯ ಲಿಂಗದ ವಿವಾದವನ್ನು ‘ಆಸರೆ’ ಮಾಡಿಕೊಳ್ಳಲು ಪ್ರಯತ್ನಿಸಿದರೆ, ಪ್ರತಿಸ್ಪರ್ಧಿ ಕಾಂಗ್ರೆಸ್‌ನ ಬಿ.ಆರ್.ಪಾಟೀಲ ‘ಸೌಹಾರ್ದ’ದ ಸಂದೇಶದೊಂದಿಗೆ ಮತ ಯಾಚಿಸುತ್ತಿದ್ದಾರೆ.

ಜೇವರ್ಗಿ ಕ್ಷೇತ್ರದಲ್ಲಿ ಬಿಜೆಪಿ ಟಿಕೆಟ್ ಸಿಗದೇ ಬಂಡಾಯವೆದ್ದು ಜೆಡಿಎಸ್‌ನಿಂದ ಸ್ಪರ್ಧಿಸಿರುವ ದೊಡ್ಡಪ್ಪಗೌಡ ಪಾಟೀಲ ನರಿಬೋಳ ಅವರು ಕಾಂಗ್ರೆಸ್‌ನ ಶಾಸಕ ಡಾ. ಅಜಯ್ ಸಿಂಗ್ ಅವರಿಗೆ ತೀವ್ರ ಪೈಪೋಟಿ ಒಡ್ಡಿದ್ದಾರೆ. ಅವರಿಬ್ಬರಿಗೂ ಸವಾಲೊಡ್ಡಿ ಬಿಜೆಪಿಯಿಂದ ಶಿವರಾಜ ಪಾಟೀಲ ರದ್ದೇವಾಡಗಿ ಸ್ಪರ್ಧಿಸಿದ್ದಾರೆ. ಬಿಜೆಪಿ ಕಾರ್ಯಕರ್ತರ ಮತಗಳು ಪಕ್ಷದ ಅಭ್ಯರ್ಥಿ ಪರ ಬೀಳುವುದೇ ಅಥವಾ ‘ಬಂಡಾಯ’ದ ನೆಪದಲ್ಲಿ ವಿಭಜನೆ ಆಗುವುದೇ ಎಂಬುದೇ ಕುತೂಹಲ.

ಕಲಬುರಗಿ ಗ್ರಾಮೀಣ ಕ್ಷೇತ್ರದಲ್ಲಿ ಕಾಂಗ್ರೆಸ್‌ನ ರೇವುನಾಯಕ ಬೆಳಮಗಿ ಮತ್ತು ಶಾಸಕ, ಬಿಜೆಪಿಯ ಬಸವರಾಜ ಮತ್ತಿಮಡು ನಡುವೆ ನೇರ ಸ್ಪರ್ಧೆ ಇದೆ. ‘5 ವರ್ಷಗಳಲ್ಲಿ ಕ್ಷೇತ್ರದಲ್ಲಿ ಕೈಗೊಂಡ ಅಭಿವೃದ್ಧಿ’ ಆಸರೆ ಆಗಲಿದೆ ಎಂದು ಮತ್ತಿಮಡು ಹೇಳಿದರೆ, ‘ಕಾಂಗ್ರೆಸ್ ಆಡಳಿತ ಅವಧಿಯಲ್ಲಿ ಕೈಗೊಂಡ ಸಾಧನೆ’ಯನ್ನು ಮತದಾರರ ಮುಂದಿರಿಸಿ ಬೆಳಮಗಿ ಮತ ಯಾಚಿಸುತ್ತಿದ್ದಾರೆ.

ಚಿಂಚೋಳಿ ಕ್ಷೇತ್ರದಲ್ಲಿ ಸಂಸದ ಡಾ. ಉಮೇಶ ಜಾಧವ ಪುತ್ರ ಬಿಜೆಪಿಯ ಡಾ. ಅವಿನಾಶ ಜಾಧವ, ಕಾಂಗ್ರೆಸ್‌ನ ಸುಭಾಷ ರಾಠೋಡ ಮತ್ತು ಜೆಡಿಎಸ್‌ನ ಸಂಜೀವನ್ ಯಾಕಾಪುರ ನಡುವೆ ಪೈಪೋಟಿಯಿದೆ. ಕಳೆದ ಉಪಚುನಾವಣೆಯಲ್ಲಿ ಸೋಲುಂಡ ಸುಭಾಷ ರಾಠೋಡ ಈ ಬಾರಿ ಡಾ. ಅವಿನಾಶ ಜಾಧವ ಅವರನ್ನು ಹೇಗಾದರೂ ಮಾಡಿ ಮಣಿಸಬೇಕೆಂದು ವ್ಯಾಪಕ ಪ್ರಚಾರ ನಡೆಸಿದ್ದಾರೆ.

ಸೇಡಂ ಕ್ಷೇತ್ರದಲ್ಲಿ ಸ್ಪರ್ಧಿಸಿರುವ ಮಾಜಿ ಸಚಿವ, ಕಾಂಗ್ರೆಸ್‌ನ ಡಾ. ಶರಣಪ್ರಕಾಶ ಪಾಟೀಲ ಅವರು ‘ಕಾಂಗ್ರೆಸ್‌ನ ಕೊಡುಗೆ ಮತ್ತು 371 (ಜೆ) ಪ್ರಯೋಜನಗಳನ್ನು’ ಹೇಳುತ್ತ ಮತ ಯಾಚಿಸಿದರೆ, ಬಿಜೆಪಿಯ ರಾಜಕುಮಾರ ಪಾಟೀಲ ತೆಲ್ಕೂರ ಕ್ಷೇತ್ರದಲ್ಲಿ ‘ಅಭಿವೃದ್ಧಿ’ ಕಾರ್ಯ ತೋರಿಸಿ ಮತದಾರರ ಒಲವು ಗಳಿಸಲು ಪ್ರಯತ್ನಿಸುತ್ತಿದ್ದಾರೆ. ಜೆಡಿಎಸ್‌ನ ಬಾಲರಾಜ ಗುತ್ತೇದಾರ ಪೈಪೋಟಿ ಒಡ್ಡಿದ್ದಾರೆ.

ಪಿಎಸ್‌ಐ ಅಕ್ರಮ ಆರೋಪಿ ಸ್ಪರ್ಧೆ



ಆರ್‌.ಡಿ.ಪಾಟೀಲ

ಪಿಎಸ್‌ಐ ಅಕ್ರಮ ನೇಮಕಾತಿ ಪ್ರಕರಣದಲ್ಲಿ ಪ್ರಮುಖ ಆರೋಪಿಯಾಗಿದ್ದು, ಜಾಮೀನು ಪಡೆದಿರುವ ಆರ್.ಡಿ.ಪಾಟೀಲ ಅಫಜಲಪುರ ಕ್ಷೇತ್ರದಿಂದ ಸಮಾಜವಾದಿ ಪಕ್ಷದ ಅಭ್ಯರ್ಥಿಯಾಗಿದ್ದಾರೆ. ಅವರು ಕಾಂಗ್ರೆಸ್ ಜೊತೆ ಗುರುತಿಸಿಕೊಂಡಿದ್ದರು. ನಂತರ ಪಕ್ಷವು ಅವರಿಂದ ಅಂತರ ಕಾಯ್ದುಕೊಂಡಿತು. ಜನಾರ್ದನ ರೆಡ್ಡಿ ಸ್ಥಾಪಿತ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದಿಂದ ಟಿಕೆಟ್ ಸಿಗದು ಎಂದು ಗೊತ್ತಾದಾಗ, ಸಮಾಜವಾದಿ ಪಕ್ಷದಿಂದ ಕಣಕ್ಕಿಳಿದಿದ್ದಾರೆ.

ಹಿಂದಿನ ಚುನಾವಣೆಯಲ್ಲಿ ಪಕ್ಷಗಳ ಬಲಾಬಲ		
ಕ್ಷೇತ್ರ	2013	2018
ಕಲಬುರಗಿ ದಕ್ಷಿಣ	ಬಿಜೆಪಿ	ಬಿಜೆಪಿ
ಕಲಬುರಗಿ ಉತ್ತರ	ಕಾಂಗ್ರೆಸ್	ಕಾಂಗ್ರೆಸ್
ಕಲಬುರಗಿ ಗ್ರಾಮೀಣ	ಕಾಂಗ್ರೆಸ್	ಬಿಜೆಪಿ
ಆಳಂದ	ಕೆಜೆಪಿ	ಬಿಜೆಪಿ
ಚಿತ್ತಾಪುರ	ಕಾಂಗ್ರೆಸ್	ಕಾಂಗ್ರೆಸ್
ಸೇಡಂ	ಕಾಂಗ್ರೆಸ್	ಬಿಜೆಪಿ
*ಚಿಂಚೋಳಿ	ಕಾಂಗ್ರೆಸ್	ಕಾಂಗ್ರೆಸ್
ಜೇವರ್ಗಿ	ಕಾಂಗ್ರೆಸ್	ಕಾಂಗ್ರೆಸ್
ಅಫಜಲಪುರ	ಕಾಂಗ್ರೆಸ್	ಕಾಂಗ್ರೆಸ್

*2018ರಲ್ಲಿ ಕಾಂಗ್ರೆಸ್ ಶಾಸಕ ಡಾ. ಉಮೇಶ ಜಾಧವ ರಾಜೀನಾಮೆ ನೀಡಿ ಬಿಜೆಪಿ ಸೇರಿದರು. ಉಪಚುನಾವಣೆಯಲ್ಲಿ ಅವರ ಪುತ್ರ ಡಾ. ಅವಿನಾಶ ಜಾಧವ ಬಿಜೆಪಿಯಿಂದ ಆಯ್ಕೆಯಾದರು

ಪ್ರಚಾರ ಸಭೆಯಲ್ಲಿ ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯೆ ಟೀಕೆ

ಪ್ರಧಾನಿಗೆ ಶ್ರೀಮಂತ ಗೆಳೆಯರ ಬಗ್ಗೆಯೇ ಆಸಕ್ತಿ: ಬೃಂದಾ ಕಾರಟ್

ಕಲಬುರಗಿ ಗ್ರಾಮೀಣ ಕ್ಷೇತ್ರದ ಸಿಪಿಎಂ ಅಭ್ಯರ್ಥಿ ಪಾಂಡುರಂಗ ಮಾವಿನಕರ ಪರ ಆಳಂದ ತಾಲ್ಲೂಕಿನ ನರೋಣಾ ಗ್ರಾಮದಲ್ಲಿ ಪ್ರಚಾರಕ್ಕೆ ಬಂದಿದ್ದ ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯೆ ಬೃಂದಾ ಕಾರಟ್ ಪಕ್ಷದ ಕಾರ್ಯಕರ್ತೆಯರೊಂದಿಗೆ ಘೋಷಣೆ ಕೂಗಿದರು –ಪ್ರಜಾವಾಣಿ ಚಿತ್ರ: ತಾಜುದ್ದೀನ್ ಆಜಾದ್

ಪ್ರಜಾವಾಣಿ ವಾರ್ತೆ

ಕಲಬುರಗಿ: ‘ಪ್ರಧಾನಿ ನರೇಂದ್ರ ಮೋದಿ ಅವರಿಗೆ ಬಡಜನರ ಹಿತಕ್ಕಿಂತ ತಮ್ಮ ಶ್ರೀಮಂತ ಗೆಳೆಯರಾದ ಅದಾನಿ, ಅಂಬಾನಿ ಬಗ್ಗೆಯೇ ಹೆಚ್ಚು ಆಸಕ್ತಿ. ಅದಕ್ಕೆ ಲಕ್ಷಾಂತರ ಕೋಟಿ ಕಾರ್ಪೊರೇಟ್ ತೆರಿಗೆ ಮನ್ನಾ ಮಾಡಿದ್ದಾರೆ. ಇತ್ತ ಬಡವರಿಗೆ ಆಸರೆಯಾದ ಉದ್ಯೋಗ ಖಾತ್ರಿ ಯೋಜನೆಯ ಮೊತ್ತವನ್ನು ಕಡಿತಗೊಳಿಸಿದ್ದಾರೆ’ ಎಂದು ಸಿಪಿಎಂ ಪಾಲಿಟ್ ಬ್ಯುರೊ ಸದಸ್ಯೆ ಬೃಂದಾ ಕಾರಟ್ ಟೀಕಿಸಿದರು.

ಕಲಬುರಗಿ ಗ್ರಾಮೀಣ ಕ್ಷೇತ್ರದ ಪಕ್ಷದ ಅಭ್ಯರ್ಥಿ ಪಾಂಡುರಂಗ ಮಾವಿನಕರ ಪರ ಬುಧವಾರ ಆಳಂದ ತಾಲ್ಲೂಕಿನ ನರೋಣಾದಲ್ಲಿ ಪ್ರಚಾರ ಸಭೆಯಲ್ಲಿ ಮಾತನಾಡಿದ ಅವರು, ‘ಮೋದಿ ಮನ್ ಕಿ ಬಾತ್ ಬಿಟ್ಟು ಜನರ ಬಡತನ, ನಿರುದ್ಯೋಗದ ಬಗ್ಗೆ ಮಾತಾಡಲಿ’ ಎಂದರು.

‘ಡಬಲ್ ಎಂಜಿನ್ ಸರ್ಕಾರದ ನೀತಿಯಿಂದ ಶೇ 1ರಷ್ಟು ಜನರ ಬಳಿ ಶೇ 40ರಷ್ಟು ಸಂಪತ್ತು ಕ್ರೋಢೀಕರಣಗೊಂಡಿದೆ. ಉಳಿದ ಶೇ 99 ಜನರು ಶೇ 60ರಷ್ಟು ಸಂಪತ್ತು ಹಂಚಿಕೊಳ್ಳಬೇಕಿದೆ. ಪ್ರತಿ ವರ್ಷ 2 ಕೋಟಿ ಉದ್ಯೋಗ ಸೃಷ್ಟಿಸುವುದಾಗಿ ಹೇಳಿದ್ದರು. ಅವು ಎಲ್ಲಿ ಹೋದವು? ಸರ್ಕಾರವು ಜನರ ಕವಚವಾಗಬೇಕು ಎಂದರು.

‘ಬಿಜೆಪಿ ಅತಿ ಕ್ರೂರ ಅಪರಾಧಿಗಳಿಗೆ ಟಿಕೆಟ್ ಕೊಡುತ್ತಿದೆ. ದೇಶಕ್ಕೆ ಪದಕ ತಂದುಕೊಟ್ಟ ಕುಸ್ತಿಪಟುಗಳು ಲೈಂಗಿಕ ದೌರ್ಜನ್ಯ ಎಸಗಿದ ಕುಸ್ತಿ ಫೆಡರೇಶನ್ ಅಧ್ಯಕ್ಷ, ಸಂಸದ ಬ್ರಿಜ್ ಭೂಷಣ್ ಸಿಂಗ್ ವಿರುದ್ಧ ಕ್ರಮಕ್ಕೆ ಒತ್ತಾಯಿಸಿ ದೆಹಲಿಯ ಜಂತರ್ ಮಂತರ್‌ನಲ್ಲಿ ಪ್ರತಿಭಟನೆ ನಡೆದಿದೆ. ದೇಶವೆಲ್ಲ ತಿರುಗುವ ಮೋದಿಗೆ ಈ ಸಂತ್ರಸ್ತ ಕುಸ್ತಿಪಟುಗಳು ಕಾಣುತ್ತಿಲ್ಲವೇ’ ಎಂದರು.

ಸಿಪಿಎಂ ಜಿಲ್ಲಾ ಕಾರ್ಯದರ್ಶಿ ಕೆ. ನೀಲಾ ಮಾತನಾಡಿದರು. ಡಾ.ಮೀನಾಕ್ಷಿ ಬಾಳಿ, ಬಾಬು ಹಿರಮಶೆಟ್ಟಿ, ಸುಧಾಮ ಧನ್ನಿ, ಮೇಘರಾಜ ಕಠಾರೆ, ಶ್ರೀದೇವಿ ಚಿವಡೆ, ಪದ್ಮಿನಿ ಕಿರಣಗಿ ಇದ್ದರು.

ಪ್ರಿಯಾಂಕ್ ಖರ್ಗೆ, ಯತ್ನಾಳ್‌ಗೆ ಚುನಾವಣಾ ಆಯೋಗ ನೋಟಿಸ್

ಪ್ರಜಾವಾಣಿ ವಾರ್ತೆ

ನವದೆಹಲಿ: ಕರ್ನಾಟಕ ವಿಧಾನಸಭಾ ಚುನಾವಣಾ ಪ್ರಚಾರದ ವೇಳೆ ಎದುರಾಳಿ ಪಕ್ಷದ ನಾಯಕರ ವೈಯಕ್ತಿಕ ನಿಂದನೆ ಮಾಡಿ ಮಾದರಿ ನೀತಿ ಸಂಹಿತೆ ಉಲ್ಲಂಘಿಸಿದ ಕಾರಣಕ್ಕೆ ಬಿಜೆಪಿಯ ವಿಜಯಪುರ ನಗರ ಕ್ಷೇತ್ರದ ಅಭ್ಯರ್ಥಿ ಬಸನಗೌಡ ಪಾಟೀಲ ಯತ್ನಾಳ ಹಾಗೂ ಕಾಂಗ್ರೆಸ್‌ನ ಚಿತ್ತಾಪುರ ಕ್ಷೇತ್ರದ ಅಭ್ಯರ್ಥಿ ಪ್ರಿಯಾಂಕ್ ಖರ್ಗೆ ಅವರಿಗೆ ಕೇಂದ್ರ ಚುನಾವಣಾ ಆಯೋಗ ಬುಧವಾರ ಷೋಕಾಸ್ ನೋಟಿಸ್ ನೀಡಿದೆ.

ಪ್ರಚಾರದ ವೇಳೆ ಯತ್ನಾಳ, ‘ಸೋನಿಯಾ ನಾಗಕನ್ನಿಕೆಯೇ’ ಎಂದು ಪ್ರಶ್ನಿಸಿದ್ದರು. ‘ಕೆಲಸ ಮಾಡದವರು ನಾಲಾಯಕ್’ ಎಂದು ಪ್ರಿಯಾಂಕ್ ಟೀಕಿಸಿದ್ದರು. ಯತ್ನಾಳ ವಿರುದ್ಧ ಕಾಂಗ್ರೆಸ್ ನಿಯೋಗ ಹಾಗೂ ಪ್ರಿಯಾಂಕ್ ವಿರುದ್ಧ ಬಿಜೆಪಿ ನಿಯೋಗವು ಆಯೋಗಕ್ಕೆ ದೂರು ನೀಡಿದ್ದವು.

ಏ.28ರಂದು ಕೊಪ್ಪಳ ಜಿಲ್ಲೆಯ ಯಲಬುರ್ಗಾದಲ್ಲಿ ಬಿಜೆಪಿ ಅಭ್ಯರ್ಥಿ ಹಾಲಪ್ಪ ಆಚಾರ್ ಪರ ಮತಯಾಚನೆ ಮಾಡುವ ಸಮಯದಲ್ಲಿ ಯತ್ನಾಳ, ‘ಸೋನಿಯಾ ಗಾಂಧಿ ನಾಗಕನ್ನಿಕೆಯೇ’ ಎಂದು ಪ್ರಶ್ನಿಸಿದ್ದರು.

ಅಂದಿನ ಭಾಷಣದಲ್ಲಿ ಯತ್ನಾಳ, ‘ಮೋದಿ ಜಗತ್ತಿನ ನಾಯಕ ಎನ್ನುವುದನ್ನೂ ಎಲ್ಲರೂ ಒಪ್ಪಿಕೊಂಡಿದ್ದಾರೆ. ಅಂಥ ನಾಯಕನನ್ನು ನಾಗರಹಾವಿಗೆ ಹೋಲಿಸುವುದು ಸರಿಯೇ? ಎಂದು ಕೇಳಿದ್ದರು.

‘ಪ್ರಧಾನಿ ನರೇಂದ್ರ ಮೋದಿ ಅವರನ್ನು ನಾಲಾಯಕ್ ಎಂದು ಕರೆದಿರುವ ಪ್ರಿಯಾಂಕ್ ಖರ್ಗೆ ವಿರುದ್ಧ ಕ್ರಮ ಕೈಗೊಳ್ಳಬೇಕು’ ಎಂದು ಆಗ್ರಹಿಸಿ ಬಿಜೆಪಿಯ ನಿಯೋಗವು ಆಯೋಗಕ್ಕೆ ಮಂಗಳವಾರ ದೂರು ನೀಡಿತ್ತು.

ಆಯೋಗವು, ಮೇ 4ರ ಸಂಜೆ 5 ಗಂಟೆಯೊಳಗೆ ಉತ್ತರ ನೀಡುವಂತೆ ಸೂಚಿಸಿದೆ. ಒಂದು ವೇಳೆ ಉತ್ತರ ನೀಡದೆ ಇದ್ದಲ್ಲಿ ಸೂಕ್ತ ಕ್ರಮ ಕೈಗೊಳ್ಳಲಾಗುವುದು ಎಂದೂ ತಿಳಿಸಿದೆ.

❦ ಸುಭಾಷಿತ ❦

ನಿಮ್ಮ ನೈತಿಕ ಪ್ರವೃತ್ತಿ ಎಷ್ಟು ಉನ್ನತವಾಗಿರುತ್ತದೋ, ನಿಮ್ಮ ಉನ್ನತಿಯೂ ಅಷ್ಟೇ ಎತ್ತರದ್ದಾಗಿರುತ್ತದೆ.

–ಸ್ವಾಮಿ ವಿವೇಕಾನಂದ

ದ್ವೇಷ ಭಾಷಣವೆಂಬುದು ಅಸ್ತ್ರ 'ಸುಪ್ರೀಂ' ಸೂಚನೆ ಸ್ವಾಗತಾರ್ಹ

ದ್ವೇಷ ಭಾಷಣಕ್ಕೆ ಸಂಬಂಧಿಸಿದ ಪ್ರಕರಣಗಳಲ್ಲಿ ದೂರು ಸಲ್ಲಿಕೆ ಆಗದಿದ್ದರೂ, ಪೊಲೀಸರು ತಾವೇ ಮುಂದಾಗಿ ಪ್ರಥಮ ಮಾಹಿತಿ ವರದಿಯನ್ನು (ಎಫ್‌ಐಆರ್) ದಾಖಲು ಮಾಡಿಕೊಳ್ಳಬೇಕು ಎಂದು ಸುಪ್ರೀಂ ಕೋರ್ಟ್ ತಾಕೀತು ಮಾಡಿರುವುದು ಸ್ವಾಗತಾರ್ಹ. ಗಂಭೀರ ಸ್ವರೂಪವನ್ನು ಪಡೆದುಕೊಂಡಿರುವ ಸಾಮಾಜಿಕ ಹಾಗೂ ರಾಜಕೀಯ ಸಮಸ್ಯೆಯೊಂದರ ನಿವಾರಣೆಗೆ ಇದು ಒಂದು ಹೆಜ್ಜೆ ಮುಂದಿರಿಸಿದಂತೆ. ಸುಪ್ರೀಂ ಕೋರ್ಟ್ ಈ ನಿರ್ದೇಶನವನ್ನು ಎಲ್ಲ ಸರ್ಕಾರಗಳಿಗೂ ನೀಡಿದೆ. ಇದು 2022ರ ಅಕ್ಟೋಬರ್ 21ರಂದು ದೆಹಲಿ, ಉತ್ತರಪ್ರದೇಶ ಮತ್ತು ಉತ್ತರಾಖಂಡ ಸರ್ಕಾರಗಳಿಗೆ ನೀಡಿದ್ದ ನಿರ್ದೇಶನದ ವಿಸ್ತರಣೆಯಂತೆ ಇದೆ. 'ಈ ನಿರ್ದೇಶನಕ್ಕೆ ಅನುಗುಣವಾಗಿ ಕ್ರಮ ಕೈಗೊಳ್ಳುವುದಕ್ಕೆ ಹಿಂದೇಟು ಹಾಕುವುದನ್ನು ನ್ಯಾಯಾಂಗ ನಿಂದನೆ ಎಂದು ಪರಿಗಣಿಸಲಾಗುತ್ತದೆ. ತಪ್ಪು ಮಾಡುವ ಅಧಿಕಾರಿಗಳ ವಿರುದ್ಧ ಸೂಕ್ತ ಕ್ರಮ ಜರುಗಿಸಲಾಗುತ್ತದೆ' ಎಂದು ಕೋರ್ಟ್ ಎಚ್ಚರಿಸಿದೆ. ದ್ವೇಷ ಭಾಷಣದ ಸಮಸ್ಯೆಯನ್ನು ನಿವಾರಿಸಲು ಸುಪ್ರೀಂ ಕೋರ್ಟ್ ಬಹಳ ಸಮಯದಿಂದ ಕಾರ್ಯನಿರತವಾಗಿದೆ. ಅಲ್ಲದೆ, ಈ ಸಮಸ್ಯೆಯು ದೇಶದ ಧರ್ಮನಿರಪೇಕ್ಷ ವ್ಯವಸ್ಥೆಯನ್ನು ಹಾಳುಮಾಡುತ್ತಿರುವ 'ಅಪಾಯ' ಎಂದು ಅದು ಗುರುತಿಸಿದೆ. ದ್ವೇಷ ಭಾಷಣಗಳು ಮತಧರ್ಮವನ್ನು ಗುರಿಯಾಗಿಸಿಕೊಳ್ಳುವುದಕ್ಕೆ ಮಾತ್ರ ಸೀಮಿತವಾಗಿಲ್ಲ. ಬದಲಿಗೆ, ಮನುಷ್ಯನ ಜಾತಿ, ಪ್ರದೇಶ, ಲಿಂಗ ಅಥವಾ ಲೈಂಗಿಕ ಅಭಿರುಚಿಯನ್ನು ಗುರಿಯಾಗಿಸಿಯೂ ಇಂತಹ ಭಾಷಣಗಳು ಆಗಿವೆ. ಸಮಾಜದಲ್ಲಿ ಹುಳಿ ಹಿಂಡುವ, ಯಾವುದೇ ರೀತಿಯಲ್ಲಿ ವಿಭಜನೆಗೆ ಇಂಬು ಕೊಡುವ ಮಾತುಗಳು ದ್ವೇಷ ಭಾಷಣ ಆಗಬಲ್ಲವು.

ಕೋರ್ಟ್ ನೀಡಿರುವ ಸೂಚನೆಯು ಬಹಳ ಮಹತ್ವದ್ದಾಗಿದ್ದು, ಸಮಾಜದಲ್ಲಿ ಒಳ್ಳೆಯ ಪರಿಣಾಮವನ್ನು ಬೀರುವ ನಿರೀಕ್ಷೆ ಹೊಂದುವಂತಿದೆ

ದ್ವೇಷ ಭಾಷಣಗಳು ವಿಷವರ್ತುಲವೊಂದರ ಭಾಗ ಎಂದು ಕೋರ್ಟ್ ಈ ಹಿಂದೆ ಟೀಕಿಸಿತ್ತು. ಅಲ್ಪಸಂಖ್ಯಾತ ಸಮುದಾಯಗಳನ್ನು ಗುರಿಯಾಗಿಸಿಕೊಂಡು ಮಾಡುವ ದ್ವೇಷ ಭಾಷಣಗಳು ಹೆಚ್ಚಾಗುತ್ತಿದ್ದರೂ, 'ವ್ಯವಸ್ಥೆಯ ಮೌನ'ವನ್ನು ಕೋರ್ಟ್ ತರಾಟೆಗೆ ತೆಗೆದುಕೊಂಡಿತ್ತು. ಆದರೆ, ದ್ವೇಷ ಭಾಷಣಗಳನ್ನು ನಿಭಾಯಿಸುವಲ್ಲಿನ ಸಮಸ್ಯೆಯು ಹೇಗಿದೆ ಎಂಬುದು ಕೋರ್ಟ್‌ಗೆ ಕೇಂದ್ರ ಸರ್ಕಾರ ನೀಡಿದ ಪ್ರತಿಕ್ರಿಯೆಯನ್ನು ಗಮನಿಸಿದರೆ ಗೊತ್ತಾಗುತ್ತದೆ. ಬಹುಸಂಖ್ಯಾತ ಸಮುದಾಯಗಳನ್ನು ಉದ್ದೇಶಿಸಿ ಮಾಡಿದ ದ್ವೇಷ ಭಾಷಣಗಳ ವಿಚಾರದಲ್ಲಿ ಕೋರ್ಟ್ ಏಕೆ ಕಳವಳ ಹೊಂದಿಲ್ಲ ಎಂದು ಕೇಂದ್ರ ಕೇಳಿದೆ. ಈ ಪ್ರತಿಕ್ರಿಯೆಯು, ದ್ವೇಷ ಭಾಷಣಕ್ಕೆ ಇರುವ ರಾಜಕೀಯ ಆಯಾಮವನ್ನು ತೋರಿಸುತ್ತಿದೆ, ದ್ವೇಷ ಭಾಷಣಗಳ ವಿರುದ್ಧ ಯಾವುದೇ ಪರಿಣಾಮಕಾರಿ ಕ್ರಮವನ್ನು ತೆಗೆದುಕೊಂಡಿಲ್ಲದಿರುವುದು ಏಕೆಂಬುದನ್ನು ತೋರಿಸುತ್ತದೆ. ದ್ವೇಷ ಭಾಷಣಗಳು ಈಗ ಪ್ರಮುಖ ರಾಜಕೀಯ ಅಸ್ತ್ರವೂ ಹೌದು. ಸಮಾಜದ ಧ್ರುವೀಕರಣಕ್ಕೆ ಇದನ್ನು ಬಳಸಲಾಗುತ್ತಿದೆ. ಇದಕ್ಕೆ ಸರ್ಕಾರಗಳ ಬೆಂಬಲವೂ ಇರುತ್ತದೆ. ದ್ವೇಷದ ಮಾತುಗಳನ್ನು ಹಿಂದೆ ಪಕ್ಷ ಅಥವಾ ಸಂಘಟನೆಗಳಲ್ಲಿನ ಕೆಲವು ಗುಂಪುಗಳು ಆಡುವ ಬೇಜವಾಬ್ದಾರಿಯ ಮಾತುಗಳು ಎಂದು ಉಪೇಕ್ಷೆ ಮಾಡಲಾಗುತ್ತಿತ್ತು. ಆದರೆ ಈಗ ಜವಾಬ್ದಾರಿಯುತ ಸ್ಥಾನ ಹೊಂದಿರುವವರು, ಕೇಂದ್ರ ಸರ್ಕಾರದ ಕೆಲವು ಸಚಿವರು ಕೂಡ ಇಂತಹ ಮಾತುಗಳನ್ನು ಆಡುತ್ತಿದ್ದಾರೆ. ದ್ವೇಷ ಭಾಷಣಗಳನ್ನು ಈಗ ಬಹಿರಂಗವಾಗಿ ಸಮರ್ಥಿಸಲಾಗುತ್ತಿದೆ. ದ್ವೇಷ ಭಾಷಣಗಳು ಸರಿ ಎಂದು ಹೇಳುವುದಕ್ಕೆ ವಿಷಯಾಂತರ ಮಾಡುವುದು, ಆರೋಪಗಳಿಗೆ ಉತ್ತರಿಸುವ ಬದಲು, ಆರೋಪ ಹೊರಿಸಿದವರ ವಿರುದ್ಧ ಇನ್ನೊಂದು ಆರೋಪ ಹೊರಿಸುವ ತಂತ್ರಗಳ ಮೊರೆ ಹೋಗಲಾಗುತ್ತಿದೆ. ದ್ವೇಷ ಭಾಷಣಗಳನ್ನು ಸಮರ್ಥಿಸಲು ಕೆಲವು ಸಂದರ್ಭಗಳಲ್ಲಿ ಅಭಿವ್ಯಕ್ತಿ ಸ್ವಾತಂತ್ರ್ಯದ ಆಶ್ರಯ ಪಡೆಯಲಾಗುತ್ತಿದೆ. ಆದರೆ, ಅಭಿವ್ಯಕ್ತಿ ಸ್ವಾತಂತ್ರ್ಯಕ್ಕೆ ಇರುವ ಸಕಾರಣ ನಿರ್ಬಂಧವು, ದ್ವೇಷ ಭಾಷಣಗಳನ್ನು ತಡೆಯುವ ಉದ್ದೇಶ ಹೊಂದಿವೆ ಎಂಬುದು ಸ್ಪಷ್ಟ.

ದ್ವೇಷ ಭಾಷಣಗಳನ್ನು ತಡೆಯಲು ಕಾನೂನು ಕ್ರಮವೊಂದೇ ಎಲ್ಲ ಸಂದರ್ಭಗಳಲ್ಲಿ ಪರಿಣಾಮಕಾರಿ ಆಗಲಿಕ್ಕಿಲ್ಲ. ಆದರೆ, ಈ ಸಮಸ್ಯೆಯನ್ನು ನಿಭಾಯಿಸಲು ಕಾನೂನನ್ನು ಕೂಡ ಬಳಸಿಕೊಳ್ಳಬೇಕು ಎಂಬುದು ನಿಜ. ದ್ವೇಷ ಭಾಷಣ ಅಂದರೆ ಏನು ಎಂಬುದಕ್ಕೆ ಕಾನೂನಿನ ಅಡಿ ನಿರ್ದಿಷ್ಟ ವ್ಯಾಖ್ಯಾನ ಇಲ್ಲ. ದ್ವೇಷ ಭಾಷಣಗಳನ್ನು ಭಾರತೀಯ ದಂಡ ಸಂಹಿತೆಯ (ಐಪಿಸಿ) ಅಡಿಯಲ್ಲಿ ಕ್ರಿಮಿನಲ್ ಅಪರಾಧವೆಂದು ಪರಿಗಣಿಸಬೇಕು ಎಂಬ ಸಲಹೆಯನ್ನು ಕಾನೂನು ಆಯೋಗ ನೀಡಿದೆ. ಈಗಿನ ಸಂದರ್ಭದಲ್ಲಿ ದ್ವೇಷ ಭಾಷಣಗಳ ವಿರುದ್ಧ ಐಪಿಸಿಯ ಸೆಕ್ಷನ್ 295(ಎ), 153(ಎ) ಮತ್ತು 153(ಬಿ), 505ರ ಅಡಿಯಲ್ಲಿ ಕ್ರಮ ಕೈಗೊಳ್ಳಲಾಗುತ್ತದೆ. ಆದರೆ ಈ ಸೆಕ್ಷನ್‌ಗಳು ವಾಸ್ತವದಲ್ಲಿ ದ್ವೇಷ ಭಾಷಣಗಳನ್ನು ನಿಯಂತ್ರಿಸುವ ಉದ್ದೇಶದಿಂದ ರೂಪುಗೊಂಡವಲ್ಲ. ಈ ಮಿತಿಗಳು ಏನೇ ಇದ್ದರೂ, ಕೋರ್ಟ್ ನೀಡಿರುವ ಸೂಚನೆಯು ಬಹಳ ಮಹತ್ವದ್ದು. ಇದು ಸಮಾಜದಲ್ಲಿ ಒಳ್ಳೆಯ ಪರಿಣಾಮವನ್ನು ಬೀರುವ ನಿರೀಕ್ಷೆ ಹೊಂದಬಹುದು.

ದಿನದ ಟ್ವೀಟ್

ಪತ್ರಿಕಾ ಸ್ವಾತಂತ್ರ್ಯ ಎತ್ತಿಹಿಡಿಯಬೇಕಿದೆ

ತೀವ್ರ ಕುಸಿತ: ಜಾಗತಿಕ ಪತ್ರಿಕಾ ಸ್ವಾತಂತ್ರ್ಯ ಸೂಚ್ಯಂಕದಲ್ಲಿ ಭಾರತವು 11 ಸ್ಥಾನಗಳಷ್ಟು ಕುಸಿತ ಕಂಡಿದೆ. ಈಗ ಕಡೆಯ 19 ರಾಷ್ಟ್ರಗಳಲ್ಲಿ ಭಾರತ ಒಂದಾಗಿದೆ. 180 ರಾಷ್ಟ್ರಗಳ ಪೈಕಿ ಭಾರತ 161ನೇ ಸ್ಥಾನದಲ್ಲಿದೆ. ಹಿಂದಿನ ಬಾರಿ ಭಾರತ 150ನೇ ಸ್ಥಾನದಲ್ಲಿತ್ತು, ಕಡೆಯ 30 ದೇಶಗಳ ಪೈಕಿ ಒಂದಾಗಿತ್ತು. ಈ ವರ್ಷ ಪಾಕಿಸ್ತಾನವು 150ನೇ ಸ್ಥಾನಕ್ಕೆ ಬಂದಿದೆ.

ಸೀಮಾ ಚಿಷ್ತಿ, ಪತ್ರಕರ್ತೆ

ಕಿಡಿನುಡಿ

ಯಾವ ಡಬಲ್ ಎಂಜಿನ್?! ಕರ್ನಾಟಕ ರಾಜ್ಯದ 94% ಆದಾಯವು ಸ್ವಯಂ ಸಂಪಾದನೆ + ಕೇಂದ್ರದಲ್ಲಿನ ರಾಜ್ಯದ ಪಾಲಿನ ತೆರಿಗೆಗಳಿಂದ ಕೂಡಿದೆ. ಇದನ್ನು ನಿರ್ಧರಿಸುವುದು ಹಣಕಾಸು ಆಯೋಗದ ಸೂತ್ರದಿಂದಲೇ ಹೊರತು 'ಮೋದಿ ಆಶೀರ್ವಾದ'ದಿಂದಲ್ಲ. ಬಿಜೆಪಿಯಿಂದಾಗಿ ಕಳೆದ 4 ವರ್ಷಗಳಿಂದ ಹಳಿ ತಪ್ಪಿರುವ ಕರ್ನಾಟಕದ ಎಂಜಿನ್ ಅನ್ನು ಸರಿದಾರಿಗೆ ಮರಳಿಸಲು ಮೇ 10ರ ಚುನಾವಣೆ ಸಾಕ್ಷಿಯಾಗಲಿದೆ. ಇದು ಸಾಮಾಜಿಕ ಸಾಮರಸ್ಯದೊಂದಿಗೆ ರಾಜ್ಯದ ಬೆಳವಣಿಗೆಯ ಎಂಜಿನ್ ಆಗಿರಲಿದೆಯೇ ಹೊರತು, ಕೇವಲ ಗಾಳಿಯಲ್ಲೇ ಚಲಿಸುವ 40% ಕಮಿಷನ್ ಎಂಜಿನ್ ಅಲ್ಲ.

ಜೈರಾಮ್ ರಮೇಶ್, ಕಾಂಗ್ರೆಸ್ ಮುಖಂಡ

25 ವರ್ಷಗಳ ಹಿಂದೆ

ಸೋಮವಾರ, 4-5-1998

- **ದಳದ 5 ಸದಸ್ಯರ ಅನರ್ಹತೆ ಕೋರಿ ಸಭಾಧ್ಯಕ್ಷರಿಗೆ ಪತ್ರ?**

ಬೆಂಗಳೂರು, ಮೇ 3– ವಿಧಾನಸಭೆಯಿಂದ ವಿಧಾನಪರಿಷತ್‌ನ 7 ಸ್ಥಾನಗಳಿಗೆ ನಡೆಯಲಿರುವ ಚುನಾವಣೆಗೆ ಲೋಕಶಕ್ತಿಯಿಂದ ಅಭ್ಯರ್ಥಿಯಾಗಿರುವ ಜನತಾದಳದ ಶಾಸಕ ವಿ.ಎಸ್. ಉಗ್ರಪ್ಪ ಅವರ ನಾಮಪತ್ರಕ್ಕೆ ಸೂಚಕರಾಗಿ ಸಹಿ ಹಾಕಿರುವ ಐವರು ಜನತಾದಳದ ಶಾಸಕರ ಸದಸ್ಯತ್ವವನ್ನು ಅನರ್ಹಗೊಳಿಸಲು ಕೋರಿ ವಿಧಾನಸಭಾಧ್ಯಕ್ಷರಿಗೆ ಜನತಾದಳದ ಶಾಸಕಾಂಗ ಪಕ್ಷದ ಕಾರ್ಯದರ್ಶಿ ಜ್ಯೋತಿ ರೆಡ್ಡಿ ಅವರು ಸದ್ಯದಲ್ಲೇ ಪತ್ರ ಬರೆಯಲಿದ್ದಾರೆ.

ಪಕ್ಷದಿಂದ ಅಧಿಕೃತ ಅಭ್ಯರ್ಥಿಗಳ ನಾಮಪತ್ರಗಳಿಗಷ್ಟೇ ಸೂಚಕರಾಗಿ ಸಹಿ ಹಾಕಲು ನೀಡಿದ್ದ 'ವಿಪ್' ಉಲ್ಲಂಘಿಸಿರುವವರಲ್ಲಿ ಮಾಜಿ ಸಚಿವರಾದ ಗುರುಪಾದಪ್ಪ ನಾಗಮಾರಪಲ್ಲಿ, ಕೆ.ಎಸ್. ಬೀಳಗಿ, ಪಿ.ಸಿ. ಸಿದ್ದನಗೌಡರ್ ಮತ್ತು ಶಾಸಕ ವೆಂಕಟಾಚಲಯ್ಯ ಅವರಿದ್ದಾರೆ.

- **ಚೀನಾದಿಂದಲೇ ಭಾರತಕ್ಕೆ ಅಪಾಯ: ಜಾರ್ಜ್**

ನವದೆಹಲಿ, ಮೇ 3 (ಪಿಟಿಐ)– ಪಾಕಿಸ್ತಾನ ಅಥವಾ ಇತರ ಯಾವುದೇ ನೆರೆಯ ರಾಷ್ಟ್ರಗಳಿಗಿಂತ ಹೆಚ್ಚಾಗಿ ಭಾರತಕ್ಕೆ ಚೀನಾದಿಂದ ಅಪಾಯ ಎದುರಾಗಿದೆ. ಚೀನಾದ ಮಿಲಿಟರಿ ಮತ್ತು ನೌಕಾಪಡೆ ಭಾರತದ ಗಡಿಯನ್ನು ಸುತ್ತುವರಿದಿವೆ ಎಂದು ರಕ್ಷಣಾ ಸಚಿವ ಜಾರ್ಜ್ ಫರ್ನಾಂಡಿಸ್ ಹೇಳಿದ್ದಾರೆ.

ಭಾರತದ ಭದ್ರತೆಯ ಬಗ್ಗೆ ಕಾಳಜಿ ಇರುವ ಪ್ರತಿಯೊಬ್ಬರೂ ಈ ಕಟು ಸತ್ಯವನ್ನು ಒಪ್ಪಿಕೊಳ್ಳಬೇಕಿದೆ. ಇದನ್ನು ಸಮರ್ಥವಾಗಿ ಎದುರಿಸಲು ಭಾರತ ತಕ್ಷಣದ ಕ್ರಮಗಳನ್ನು ಕೈಗೊಳ್ಳಬೇಕಾಗಿದೆ ಎಂದು ಅವರು ಖಾಸಗಿ ಟೆಲಿವಿಷನ್ ಚಾನೆಲ್‌ಗೆ ನೀಡಿದ ಸಂದರ್ಶನದಲ್ಲಿ ಅಭಿಪ್ರಾಯಪಟ್ಟಿದ್ದಾರೆ.

50 ವರ್ಷಗಳ ಹಿಂದೆ

ಶುಕ್ರವಾರ, 4-5-1973

- **ಸಿದ್ಧಪಡಿಸಿದ ಗಾಳಿ ಆರೋಪ ಹೊರಿಸುವ ಶಾಸಕರ ಪ್ರವೃತ್ತಿಗೆ ಮುಖ್ಯಮಂತ್ರಿ ತೆಗಳಿಕೆ**

ಬೆಂಗಳೂರು, ಮೇ 3– ಪ್ರಥಮ ನೋಟಕ್ಕೆ ಹೌದು ಅನ್ನಿಸುವ ಯಾವ ಆರೋಪವನ್ನೂ ಸಿದ್ಧಗೊಳಿಸದೆ ಮಂತ್ರಿಗಳ ಮೇಲೆ ಭ್ರಷ್ಟಾಚಾರ, ಲಂಚಗಳ ಗಾಳಿ ಆರೋಪಗಳನ್ನು ಹೊರಿಸುವ ಶಾಸಕರ ಪ್ರವೃತ್ತಿಯನ್ನು ಮುಖ್ಯಮಂತ್ರಿ ದೇವರಾಜ ಅರಸು ಅವರು ಇಂದು ವಿಧಾನಸಭೆಯಲ್ಲಿ ತೀವ್ರವಾಗಿ ವಿರೋಧಿಸಿದರು.

ಲಂಚದ ಆರೋಪಗಳಿಂದ ಮಂತ್ರಿಗಳಿಗೆ ರಕ್ಷಣೆ ಕೊಡುವವನು ನಾನಲ್ಲ. ಅಂಥ ಪರಿಸ್ಥಿತಿಯೂ ನನಗೆ ಬಂದಿಲ್ಲ. ಆದರೆ ಸಾಬೀತುಪಡಿಸುವ ಯಾವುದೇ ಒಂದು ಆರೋಪವನ್ನು ಯಾರೂ ನನ್ನ ಮುಂದೆ ಇಟ್ಟಿಲ್ಲವಲ್ಲಾ ಎಂದು ಅವರು, ಈ ಬಗ್ಗೆ ಆಗಾಗ ಸದನದಲ್ಲಿ ಮಾತುಗಳನ್ನು ಎತ್ತುವ ಸದಸ್ಯರಿಗೆ ತಿರುಗಿಸಿ ಹೇಳಿದರು.

ಕನ್ನಡಿಗರ ನಿಜಧ್ವನಿಯಾಗುವ ಅವಕಾಶ ಕೈಚೆಲ್ಲಿತೇ ಜೆಡಿಎಸ್?

ಬೇಲಿ ಮೇಲೆಯೇ ಹಾಲ್ತುಂಬಿಕೊಂಡ 'ತೆನೆ'

ಗತಿಬಿಂಬ

ವೈ.ಗ.ಜಗದೀಶ್

ಹದ ಮಳೆಯಿಂದ ತೋಯ್ದು ಗದ್ದೆಗೆ ಹಸಿಗೊಬ್ಬರ ಹಾಕಿ, ಚೆನ್ನಾಗಿ ಉತ್ತಿ ಭತ್ತದ ಸಸಿ ನಾಟಿ ಮಾಡಬೇಕು; ಸಕಾಲಕ್ಕೆ ನೀರು, ಗೊಬ್ಬರ ಹಾಕಿ, ರೋಗ ಬರದಂತೆ ತಡೆದಾಗಲಷ್ಟೇ ತೆನೆಗಳು ಪುಟಿದೇಳುತ್ತವೆ. ಪರಾಗ ಸ್ಪರ್ಶವಾದರಷ್ಟೇ ಭತ್ತದೊಳಗೆ ಹಾಲ್ತುಂಬಿ, ಕಾಳು ಬಲಿಯುತ್ತದೆ. ಕೊಯ್ಲು ಮತ್ತು ಒಕ್ಕಲಾಟದ ಮೇಲಷ್ಟೇ ಹೊಸ ಅಕ್ಕಿಯಿಂದ ಮಾಡಿದ ಅನ್ನದ ಘಮ ಮನೆ ತುಂಬುತ್ತದೆ. ಇದು ಮಣ್ಣಿನ ಮಕ್ಕಳು ಪ್ರತಿ ಹಂಗಾಮಿನಲ್ಲೂ ಪಡುವ ಕಷ್ಟದ ಕಥನ...

ಸುಮಾರು 30 ವರ್ಷಗಳ ಇತಿಹಾಸ ಮೆಲುಕು ಹಾಕಿದರೆ, ಮಣ್ಣಿನ ಮಕ್ಕಳ ಪಕ್ಷ ಎಂದು ಬೀಗುವ ಜನತಾದಳ 1994ರಲ್ಲಿ ಬಿಟ್ಟರೆ ಮತ್ತೆಂದೂ ಸಸಿ ನೆಟ್ಟು, ಗೊಬ್ಬರವಿಕ್ಕಿ, ಫಸಲು ತೆಗೆದದ್ದೇ ಇಲ್ಲ. ವಿಧಾನಸಭೆ ಚುನಾವಣೆ ಒಂದು ವರ್ಷವಿದ್ದಾಗ ಪುಟಿದೇಳುವ ಈ ಪಕ್ಷದ ನಾಯಕರು, ಬೇಲಿ ಮೇಲೆ ನಿಂತದ್ದೇ ಹೆಚ್ಚು. ಗಾಳಿ ಬೀಸಿದ ಕಡೆ ಸಾಗಿ, ಅಧಿಕಾರ ಅನುಭವಿಸಿದ್ದನ್ನು ನಾಡು ಕಂಡಿದೆ.

80ರ ದಶಕದಲ್ಲಿ ಕಾಂಗ್ರೆಸ್ ದಬ್ಬಾಳಿಕೆ, ರೈತರ ಮೇಲಿನ ಗೂಂಡಾಗಿರಿಯಿಂದಾಗಿ ಜನ ಬೇಸತ್ತಿದ್ದರು. ಸಮಾಜವಾದಿ ತಾತ್ವಿಕತೆಯನ್ನು ನೆಚ್ಚಿಕೊಂಡು ರಾಜಕಾರಣಕ್ಕೆ ಇಳಿದ ಅನೇಕರು, ಕಾಂಗ್ರೆಸ್‌ಗೆ ಪರ್ಯಾಯವಾಗಿ ಜನತಾ ಪಕ್ಷ ಕಟ್ಟಿದರು. 1983ರಲ್ಲಿ ಕಾಂಗ್ರೆಸ್‌ಗೆ ಪರ್ಯಾಯವಾದ ಬಲಿಷ್ಠ ರಾಜಕಾರಣವೊಂದು ಕರ್ನಾಟಕದಲ್ಲೂ ತಲೆ ಎತ್ತಿತು. ಆ ಹೊತ್ತಿಗೆ ಕ್ರಾಂತಿರಂಗ ಕಟ್ಟಿದ್ದ ಎಸ್.ಬಂಗಾರಪ್ಪ ಹಾಗೂ ಜನತಾ ಪಕ್ಷದ ನೇತಾರರಾಗಿದ್ದ ಎಚ್.ಡಿ.ದೇವೇಗೌಡರ ಪಾತ್ರ ಪ್ರಮುಖವಾಗಿತ್ತು. ರಾಷ್ಟ್ರಮಟ್ಟದಲ್ಲಿ ದೇಶವನ್ನೇ ಪ್ರಭಾವಿಸುವ ಅನೇಕ ನಾಯಕರೂ ಇದ್ದರು.

ಹೀಗೆ ರೂಪಿತಗೊಂಡ ಭೂಮಿಕೆ ಮತ್ತೆ ಛಿದ್ರಗೊಂಡು 1989ರಲ್ಲಿ ಪರ್ಯಾಯ ರಾಜಕಾರಣ ಸೋಲನುಭವಿಸಿತು. ಅಷ್ಟೊತ್ತಿಗೆ ದೇಶದ ರಾಜಕಾರಣದಲ್ಲೂ ಬದಲಾವಣೆಯಾಗಿತ್ತು. ಸಮಾಜವಾದಿ ಜನತಾ ಪಕ್ಷ ಮತ್ತು ಜನತಾ ಪಕ್ಷ ಎಂಬ ಎರಡು ಬಣಗಳು ರೂಪುಗೊಂಡಿದ್ದವು. 1993ರಲ್ಲಿ ಈ ಬಣಗಳು ವಿಲೀನಗೊಂಡು ಮತ್ತೆ ಜನತಾದಳವೇ ಅಸ್ತಿತ್ವ ಪಡೆಯಿತು. ದೇವೇಗೌಡರು ರಾಜ್ಯ ಘಟಕದ ಅಧ್ಯಕ್ಷರಾದರೆ, ಎಸ್.ಆರ್.ಬೊಮ್ಮಾಯಿ ರಾಷ್ಟ್ರೀಯ ಅಧ್ಯಕ್ಷರಾದರು. ಜಾತಿ ಅಥವಾ ಪ್ರದೇಶದ ಹಂಗಿಲ್ಲದಂತೆ ಎಲ್ಲ ಸಮುದಾಯದವರೂ ಜನತಾದಳದಲ್ಲಿದ್ದರು. 1989–1994ರ ಅವಧಿಯಲ್ಲಿ ಅಧಿಕಾರದಲ್ಲಿದ್ದ ಕಾಂಗ್ರೆಸ್, ಮುಖ್ಯಮಂತ್ರಿಗಳನ್ನು ಬದಲಾವಣೆ ಮಾಡಿದ್ದರಿಂದಾಗಿ ರಾಜ್ಯವು ಮೂವರು ಮುಖ್ಯಮಂತ್ರಿಗಳನ್ನು ನೋಡಿತ್ತು. ವೀರೇಂದ್ರ ಪಾಟೀಲರನ್ನು ಅಕಾಲಿಕವಾಗಿ ಕುರ್ಚಿಯಿಂದ ಇಳಿಸಿದ ಸಿಟ್ಟು ಕಾಂಗ್ರೆಸ್‌ಗೆ ಶಾಪವಾಗಿ ಪರಿಣಮಿಸಿತ್ತು. ಇದೇ ಹೊತ್ತಿಗೆ ಕಾಂಗ್ರೆಸ್ ರಾಜಕಾರಣದಿಂದ ರೋಸಿದ್ದ ಎಸ್.ಬಂಗಾರಪ್ಪ, ಕರ್ನಾಟಕ ಕಾಂಗ್ರೆಸ್ ಪಕ್ಷ (ಕೆಸಿಪಿ) ಕಟ್ಟಿದ್ದರು. ದೇವೇಗೌಡರು ರಾಜ್ಯವ್ಯಾಪಿ ನಡೆಸಿದ ಯಾತ್ರೆಯೂ ಬೆಂಬಲಕ್ಕೆ ಬಂದಿದ್ದರಿಂದಾಗಿ 1994ರಲ್ಲಿ 115 ಸ್ಥಾನ ಪಡೆದ ಜನತಾದಳ ಅಧಿಕಾರದ ಚುಕ್ಕಾಣಿ ಹಿಡಿಯಿತು.

ಎರಡೇ ವರ್ಷದಲ್ಲಿ ದೇವೇಗೌಡರು ಪ್ರಧಾನಿಯಾಗಿ ದೆಹಲಿಗೆ ಹೋದರು. ಅವರು ರಾಷ್ಟ್ರ ರಾಜಕಾರಣಕ್ಕೆ ಹೋಗದೇ ಇದ್ದರೆ ಕರ್ನಾಟಕದಲ್ಲೊಂದು ಪ್ರಬಲ ಪಕ್ಷವಾಗಿ ಜನತಾದಳ ಇರುತ್ತಿದ್ದುದರಲ್ಲಿ ಸಂಶಯ ಬೇಕಿಲ್ಲ. ನಂತರದ ದಿನಗಳಲ್ಲಿ ಜನತಾದಳದ ಒಳಜಗಳಗಳು ತಾರಕಕ್ಕೇರಿ, ಪಕ್ಷ ಚೂರುಚೂರಾಗಿ ಒಡೆಯಿತು. ರಾಷ್ಟ್ರಮಟ್ಟದ ವಿದ್ಯಮಾನ ಕರ್ನಾಟಕದಲ್ಲೂ ಪರಿಣಾಮ ಬೀರಿತು.

1994 ಕೊನೆ. ಜನತಾದಳಕ್ಕೆ ಮತ್ತೆಂದೂ ವಿಧಾನಸಭೆಯಲ್ಲಿ ಬಹುಮತ ಪಡೆಯಲು ಸಾಧ್ಯವಾಗಲೇ ಇಲ್ಲ. 1999ರಲ್ಲಿ ಜೆಡಿಎಸ್ 10 ಸ್ಥಾನ ಪಡೆದರೆ, ಜೆಡಿಯು 18 ಸ್ಥಾನಗಳನ್ನು ಪಡೆದಿತ್ತು. ಪಕ್ಷದೊಳಗಿನ ಸಂಘರ್ಷ ಜನತಾ ಪರಿವಾರವನ್ನು ತಳಾತಳಕ್ಕೆ ತಳ್ಳಿತ್ತು. 1999ರಲ್ಲಿ ಜನತಾದಳ ವಿಘಟನೆಯಾದಾಗ ದೇವೇಗೌಡರ ಗುಂಪು ಜನತಾದಳ (ಜಾತ್ಯತೀತ) ಎಂದು ಗುರುತಿಸಿಕೊಂಡಿತು. ಸಿದ್ದರಾಮಯ್ಯ ರಾಜ್ಯ ಘಟಕದ ಅಧ್ಯಕ್ಷರಾದರು. ಗೌಡರು–ಸಿದ್ದರಾಮಯ್ಯ ಜೋಡಿ 2004ರಲ್ಲಿ ಚುನಾವಣೆಯ ನೇತೃತ್ವ ವಹಿಸಿದಾಗ ಮತ್ತೆ ಚಿಗುರಿದ ಜೆಡಿಎಸ್ 58 ಸ್ಥಾನಗಳಿಗೆ ಏರಿತು. 2006ರಲ್ಲಿ ಸಿದ್ದರಾಮಯ್ಯ ಕಾಂಗ್ರೆಸ್ ಸೇರಿದರು. ಅದಾದ ಬಳಿಕ ನಡೆದ ಚುನಾವಣೆಗಳಲ್ಲಿ ಜೆಡಿಎಸ್ 40ರ ಗಡಿ ದಾಟಲಿಲ್ಲ. 2008ರಲ್ಲಿ 28, 2013ರಲ್ಲಿ 40, 2018ರಲ್ಲಿ 37 ಸ್ಥಾನಗಳನ್ನು ಪಡೆಯಲಷ್ಟೇ ಶಕ್ಯವಾಯಿತು.

ಪರಿಸ್ಥಿತಿ ಪ್ರತಿಕೂಲವಾಗಿದ್ದರೂ ದೇಶದಲ್ಲಾದ ರಾಜಕೀಯ ಪಲ್ಲಟಗಳು, ವಿಸ್ತಾರಗೊಳ್ಳಲಾರಂಭಿಸಿದ್ದ ಬಿಜೆಪಿ ನೆಲೆ, ಕಾಂಗ್ರೆಸ್‌ನ ಹೀನಾಯ ಅಧಃಪತನವು ಜೆಡಿಎಸ್‌ಗೆ ಅನುಕೂಲಕಾರಿಯಾಯಿತು. 2004ರಲ್ಲಿ ಯಾವುದೇ ಪಕ್ಷಕ್ಕೆ ಬಹುಮತ ಸಿಗಲಿಲ್ಲ. ಎಸ್.ಬಂಗಾರಪ್ಪ ಬಿಜೆಪಿ ಸೇರಿದ್ದ ಕಾರಣಕ್ಕೆ ಬಿಜೆಪಿ 79 ಸ್ಥಾನಗಳನ್ನು ಗೆದ್ದು ಅತಿದೊಡ್ಡ ಪಕ್ಷವಾಗಿತ್ತು. ಕೋಮುವಾದಿ ಶಕ್ತಿಗಳನ್ನು ಹೊರಗಿಡಬೇಕೆಂಬ ಸೂತ್ರದ ಅನುಸಾರ, 65 ಸ್ಥಾನ ಪಡೆದಿದ್ದ ಕಾಂಗ್ರೆಸ್ 58 ಸ್ಥಾನ ಗಳಿಸಿದ್ದ ಜೆಡಿಎಸ್ ಜತೆ ಮೈತ್ರಿ ಮಾಡಿಕೊಂಡು ಅಧಿಕಾರ ನಡೆಸಿದವು. 2006ರಲ್ಲಿ ಮೈತ್ರಿ ತೊರೆದ ಎಚ್.ಡಿ.ಕುಮಾರಸ್ವಾಮಿ ಅವರು ಬಿ.ಎಸ್.ಯಡಿಯೂರಪ್ಪ ಅವರ ಜತೆ ಸೇರಿ ಮೈತ್ರಿ ಸರ್ಕಾರ ಕಟ್ಟಿದರು. ಹೀಗೆ 2004ರಿಂದ 2007ರವರೆಗೆ ಜೆಡಿಎಸ್‌ಗೆ ಅಧಿಕಾರ ದಕ್ಕಿತು. ಮತ್ತೆ, 2018ರಲ್ಲಿ ಅತಂತ್ರ ಪರಿಸ್ಥಿತಿ ನಿರ್ಮಾಣವಾದಾಗ, ಕಾಂಗ್ರೆಸ್ ನಾಯಕರೇ ಜೆಡಿಎಸ್‌ಗೆ ದುಂಬಾಲು ಬಿದ್ದರು. ಕುಮಾರಸ್ವಾಮಿ ಮತ್ತೆ ಮುಖ್ಯಮಂತ್ರಿಯಾದರು.

ಮೈತ್ರಿ ಸರ್ಕಾರ ಹೆಚ್ಚು ಕಾಲ ಬಾಳಲು ಕಾಂಗ್ರೆಸ್ ನಾಯಕರೇ ಬಿಡಲಿಲ್ಲ. ಎರಡು ಬಾರಿ ಕಾಂಗ್ರೆಸ್, ಒಮ್ಮೆ ಬಿಜೆಪಿ ಜತೆಗೆ ಸಖ್ಯ ಮಾಡಿದ್ದರಿಂದಾಗಿ, ಬದಲಾಗುತ್ತಲೇ ಹೋದ ಪಕ್ಷದ ನಿಲುವಿನಿಂದಾಗಿ ಜೆಡಿಎಸ್ ರಾಜ್ಯ ದುದ್ದಕ್ಕೂ ಇದ್ದ ತನ್ನ ಬಲಿಷ್ಠ ಕಾರ್ಯಕರ್ತರ ಪಡೆಯನ್ನೇ ಕಳೆದುಕೊಂಡಿತು. 2018ರ ಚುನಾವಣೆಯಲ್ಲಂತೂ ಕಾಂಗ್ರೆಸ್ ನಾಯಕರು ಜೆಡಿಎಸ್ ಅನ್ನು ಬಿಜೆಪಿಯ 'ಬಿ' ಟೀಂ ಎಂದೇ ಪ್ರಚಾರದುದ್ದಕ್ಕೂ ಹಂಗಿಸಿದರು. ಆದರೆ, ಫಲಿತಾಂಶ ಹೊರಬಿದ್ದ ಬಳಿಕ 'ಬಿ' ಟೀಂ ಜತೆಗೆ ಅಧಿಕಾರ ಹಂಚಿಕೊಂಡಿದ್ದು ಮಾತ್ರ ಚೋದ್ಯ.

ನಾಡಿನ ಹಕ್ಕು, ನ್ಯಾಯ ಕಾಪಾಡಬೇಕಾದ, ಕನ್ನಡಿಗರ ಧ್ವನಿಯಾಗಿರಬೇಕಾದ ಪ್ರಾದೇಶಿಕ ಪಕ್ಷವೊಂದು ಕರ್ನಾಟಕಕ್ಕೆ ಎಂದಿಗೂ ಅಗತ್ಯವಿದೆ. ಅಂತಹದ್ದೊಂದು ಅವಕಾಶವೂ ಜೆಡಿಎಸ್‌ಗೆ ಇತ್ತು. ತಮಿಳುನಾಡಿನಲ್ಲಿ ಎಂ.ಕೆ. ಸ್ಟಾಲಿನ್ ಹಾಗೂ ಆಂಧ್ರಪ್ರದೇಶದಲ್ಲಿ ಜಗನ್‌ಮೋಹನ್ ರೆಡ್ಡಿ, ಪಶ್ಚಿಮ ಬಂಗಾಳದಲ್ಲಿ ಮಮತಾ ಬ್ಯಾನರ್ಜಿ, ಒಡಿಶಾದಲ್ಲಿ ನವೀನ್ ಪಟ್ನಾಯಕ್ ಅವರೆಲ್ಲ ಪ್ರಾದೇಶಿಕ ಸೊಗಡುಳ್ಳ, ಕೇಂದ್ರದ ಎದುರು ನಿಂತು ರಾಜ್ಯಕ್ಕೆ ಬರಬೇಕಾದ ನ್ಯಾಯಯುತ ಪಾಲು ಕೇಳಬಲ್ಲ ಪಕ್ಷವನ್ನು ಅಧಿಕಾರಕ್ಕೆ ತಂದಿದ್ದಾರೆ. ತಳ ಮುಟ್ಟಿಹೋಗಿದ್ದ ತಮ್ಮ ಪಕ್ಷವನ್ನು ಬುಡಮಟ್ಟದಿಂದ ಮೇಲೆತ್ತಿ, ಅಧಿಕಾರದ ಕುರ್ಚಿಗೇರಿಸಿದವರು ಸ್ಟಾಲಿನ್ ಮತ್ತು ಜಗನ್.

ಎಚ್.ಡಿ.ಕುಮಾರಸ್ವಾಮಿಯವರಿಗೂ ಅಂತಹದ್ದೊಂದು ವರ್ಚಸ್ಸು ಇದೆ. ಒಂದು ಕುಟುಂಬದ ಪಕ್ಷ ಎಂದು ಬಿಂಬಿತವಾಗುವುದರ ಜತೆಗೆ, ಒಂದು ಜಾತಿಗೆ ಸೀಮಿತವಾಗುವ ನಾಯಕರಾಚೆಗೆ ಪಕ್ಷದ ನೆಲೆಯನ್ನು ವಿಸ್ತರಿಸುವ ಗೋಜಿಗೇ ಅವರು ಹೋಗಲಿಲ್ಲ. ಹೀಗಾಗಿ, ಹಳೆ ಮೈಸೂರು ಭಾಗಕ್ಕೆ ಹರಡಿಕೊಂಡ ಪಕ್ಷವಾಗಿ ಅದು ಬೆಳೆಯಿತೇ ವಿನಾ ಕಲ್ಯಾಣ ಮತ್ತು ಕಿತ್ತೂರು ಕರ್ನಾಟಕದ ಕಡೆಗೆ ಹೆಚ್ಚಿನ ಒಲವು ಬೆಳೆಸಿಕೊಳ್ಳಲಿಲ್ಲ. ಎಲ್ಲ ಪಕ್ಷಗಳು ಕುಟುಂಬ ರಾಜಕಾರಣವನ್ನೇ ಆಶ್ರಯಿಸಿಕೊಂಡಿದ್ದರೂ, ಜೆಡಿಎಸ್‌ಗೆ ಮಾತ್ರ ಆ ಹಣೆಪಟ್ಟಿ ಅಂಟಿಸಿ ಅಪರಾಧವೆಂಬಂತೆ ರಾಷ್ಟ್ರೀಯ ಪಕ್ಷಗಳು ಬಿಂಬಿಸುತ್ತಿರುವುದು ದಳಪತಿಗಳ ನಡೆಗೆ ಬೇಲಿಯನ್ನೂ ಹಾಕಿದೆ.

ಪಕ್ಷವನ್ನು ಸ್ವಂತ ಬಲದ ಮೇಲೆ ಅಧಿಕಾರಕ್ಕೆ ತರಬೇಕೆಂಬ ಮಹತ್ವಾಕಾಂಕ್ಷೆಯಿಂದ ವರ್ಷದ ಮೊದಲೇ ಚುನಾವಣೆ ತಯಾರಿಯನ್ನು ಕುಮಾರಸ್ವಾಮಿ ನಡೆಸಿದರು. ಜನತಾ ಜಲಧಾರೆ, ಪಂಚರತ್ನಯಾತ್ರೆ ಮೂಲಕ ಬಹುತೇಕ ಏಕಾಂಗಿಯಾಗಿ ಇಡೀ ರಾಜ್ಯ ಸುತ್ತಿದರು. ಜನಹಿತಕಾರಿಯಾದ ಭರವಸೆಗಳನ್ನೂ ಪ್ರಕಟಿಸಿದರು. ಆದರೆ, ಕರ್ನಾಟಕಕ್ಕೆ ಬೇಕಾದ ಪ್ರಾದೇಶಿಕ ಪಕ್ಷವೊಂದರ ಅಗತ್ಯ ಮತ್ತು ಜೆಡಿಎಸ್‌ಗಿದ್ದ ಅವಕಾಶವನ್ನು ಅವರು ಪ್ರಜ್ಞಾಪೂರ್ವಕವಾಗಿ ಬಳಸಿಕೊಂಡಂತೆ ಕಾಣುತ್ತಿಲ್ಲ.

ಸ್ವತಂತ್ರ ಅಧಿಕಾರದ ಬದಲು ಅತಂತ್ರದ ಹಾಯಿ ದೋಣಿಯಲ್ಲಿ ಸಾಗುವ ಸುಲಭ ದಾರಿ ಬಿಟ್ಟು, ಕುಮಾರಸ್ವಾಮಿ ಅವರೇ ಹೇಳಿಕೊಳ್ಳುತ್ತಿರುವಂತೆ '123ರ ಮ್ಯಾಜಿಕ್ ಸಂಖ್ಯೆ'ಯನ್ನು ತಲುಪಲು ಐದು ವರ್ಷದ ಹಿಂದೆಯೇ ರೂಪುರೇಷೆ ಹಾಕಿದ್ದರೆ, ಕರ್ನಾಟಕಕ್ಕೆ ತನ್ನದೇ ಆದ ಒಂದು ಪ್ರಾದೇಶಿಕ ಪಕ್ಷದ ಬಲ ಸಿಗುತ್ತಿತ್ತು.

ಚುರುಮುರಿ

ಬುಲ್ಡೋಜರ್ ಪ್ರಾಜೆಕ್ಟ್!

• ತುರುವೇಕೆರೆ ಪ್ರಸಾದ್

ಪದ್ಮಮ್ನೋರು ಪೆನ್ ಹಿಡ್ಕೊಂಡು ಪೇಪರ್ ಮೇಲೆ ಏನೋ ಗೀಚಿ ಲೆಕ್ಕ ಹಾಕ್ತಿದ್ರು. ಪರ್ಮೇಶಿ ನೋಡಿ ಕೇಳಿದ: 'ಏನೇ ಇದು? ಬೇರೆಯವರ ಲೆಕ್ಕಾಚಾರ ಬುಡಮೇಲ್ ಮಾಡೋ ನೀನೇ ಪಲ್ಟಿ ಹೊಡೀತಿರೋ ಹಾಗಿದೀಯ?'

'ರೀ, 800 ಸೀರೇನ 800 ಬ್ಲೌಸ್, 800 ಸ್ಯಾಂಡಲ್ಸ್ ಜೊತೆ ಎಷ್ಟು ರೀತಿಲಿ ಮ್ಯಾಚ್ ಮಾಡ್ಬಹುದು ಅಂತ ಲೆಕ್ಕ ಹಾಕ್ತಿದೀನಿ...'

'ಅಲ್ಲ, ಈಗ್ಯಾಕೆ ಈ ಘನಘೋರ ಲೆಕ್ಕಾಚಾರ? ಯಾವ 'ಗೇಟ್' ತಗಂಡಿದೀಯ ನೀನು?'

'ಇದು ಗೇಟಿನ್ ಲೆಕ್ಕ ಅಲ್ಲ, ಸ್ಲೇಟ್ ಹಿಡಿಯೋ ಲೆಕ್ಕ. ಪೇಪರ್ ಓದುದ್ರಾ? ಒಬ್ರು ಅಧಿಕಾರಿ ಹತ್ರ ನಾನೂರು ಬ್ಲೇಜರ್ ಸಿಕ್ಕಿವೆಯಂತೆ'.

'ಹ್ಞೂಂ ಓದ್ದೆ, ನಾನು ನೋಡು, ನಮ್ ಮದುವೆಗೆ ಹೊಲೆಸಿದ್ದ ಕೋಟ್ನೇ ತಿರುಗಿಸಿ ಮುರುಗಿಸಿ ಸೆಂಟ್ ಹಾಕ್ಕೊಂಡ್ ನೇತಾಕ್ಕೊತಿದೀನಿ. ಹೊಸದೊಂದು ಬ್ಲೇಜರ್ ಹೊಲಿಸಕ್ಕೂ ಬಿಡ್ಲಿಲ್ಲ ನೀನು. ನೀವು ಬೀರು, ಕಬೋರ್ಡು, ಅಜ್ಜಿ ಕಾಲದ ಟ್ರಂಕಲ್ಲೆಲ್ಲಾ ಸಾವಿರಾರು ಸೀರೆ ತುಂಬ್ಕೊಳ್ಳಲ್ವಾ? ಅಂಥದ್ರಲ್ಲಿ ಒಬ್ಬ ಗಂಡಸಾದ್ರೂ 400 ಬ್ಲೇಜರ್ ಇಟ್ಟಿದಾರಲ್ಲ ಅಂತ ಹೆಮ್ಮೆಪಡ್ಬೇಕು. ಹೌದು, ಆ ಬ್ಲೇಜರ್ಗೂ ಈ ಸೀರೆಗೂ ಏನು ಸಂಬಂಧ?'

'ಗಂಡಸರು 400 ಬ್ಲೇಜರ್ ಇಟ್ಕೊಂಡಿದ್ರೆ ಹೆಂಗಸರು ಸುಮ್ನೆ ಇದ್ಬಿಡ್ತಾರಾ? ಅದಕ್ಕೆ ಡಬಲ್ ಸೀರೆ, ಬ್ಲೌಸ್, ಮ್ಯಾಚಿಂಗ್ ಆರ್ನಮೆಂಟ್ಸ್ ಅಂತ ವಸೂಲಿ ಮಾಡಿರ್ತಾರಲ್ವಾ?'

'ಅಬ್ಬಬ್ಬಾ! ಎಂಥ ಲೆಕ್ಕಾಚಾರನೇ ನಿಂದು, ಲೋಕಾಯುಕ್ತರೋರಿಗೂ ಹೊಳೆದಿಲ್ಲ ಅನ್ಸುತ್ತೆ'.

'ಹ್ಞೂಂ, 400 ಬ್ಲೇಜರ್, ಅದಕ್ಕೆ 400 ಶರ್ಟ್, 400 ಪ್ಯಾಂಟ್ ಮತ್ತೆ 400 ಶೂಸ್, ಜೊತೆಗೆ ಬ್ಲೇಜರ್‌ಗೆ ನಾಕ್ ಜೇಬು, ಒಂದೊಂದ್ ಜೇಬಲ್ಲಿ 400 ಡಾಲರ್ರು ಅಂದ್ರೂ ಎಷ್ಟು ಜನಕ್ಕೆ ರೇಜರ್ ಹಾಕ್ಬೇಕೋ ಏನೋ?'

'ಅಯ್ಯೋ ರೇಜರ್ ಹಾಕುದ್ರೆ ಚಿಕ್ಕ ಪುಟ್ಟ ಪ್ಯಾಂಟು ಶರ್ಟು ಬರುತ್ತೆ ಅಷ್ಟೇ, ಈ ಥರ ನೂರಾರು ಬ್ಲೇಜರ್ ಬರ್ಬೇಕು ಅಂದ್ರೆ ಯಾವುದಾದ್ರೂ ದೊಡ್ಡ ಯೋಜನೆಗೇ ಬುಲ್ಡೋಜರ್ ಹೊಡಿಸ್ಬೇಕು. ಬ್ಲೇಜರ್ನ ಜೇಬು ನುಂಗಿತ್ತಾ, ಜೇಬನ್ನೇ ಬುಲ್ಡೋಜರ್ ನುಂಗಿತ್ತಾ...' ಎಂದು ಗುನುಗಿದ ಪರ್ಮೇಶಿ. ಪದ್ಮಮ್ಮ ನಕ್ಕರು!

ಸಂಗತ

ಯಾಕೀ ಭ್ರಷ್ಟಾಚಾರದ ಬುಡುಬುಡಿಕೆ?

ಚುನಾವಣಾ ವ್ಯವಸ್ಥೆಯು ಅಧಿಕಾರಕ್ಕಾಗಿ ಕೊಪ್ಪರಿಗೆಗಟ್ಟಲೆ ಹಣ ಚೆಲ್ಲುವ, ಚೆಲ್ಲಿದ ಹತ್ತರಷ್ಟನ್ನು ವಾಪಸು ದುಡಿಯಲು ಅಧಿಕಾರವನ್ನೇ ಬಳಸುವ ಭ್ರಷ್ಟ ವರ್ತುಲ ಸೃಷ್ಟಿಯಾಗಿದೆ

• ಎನ್.ಎಸ್.ಶಂಕರ್

ಪ್ರಧಾನಿ ನರೇಂದ್ರ ಮೋದಿ ಅವರು ದೇಶವನ್ನು 'ಭ್ರಷ್ಟಾಚಾರಮುಕ್ತ' ಮಾಡುವ ಭರವಸೆಯೊಂದಿಗೆ ಈ ಬಾರಿಯ ಚುನಾವಣೆಯಲ್ಲಿ ಪ್ರಚಾರಕಣಕ್ಕೆ ಇಳಿದಿದ್ದಾರೆ. ಸಂತೋಷದ ವಿಷಯವೇ. ಲಂಚಗುಳಿತನ ಎಂಬುದು, ದೇಶದ ಆರ್ಥಿಕ ಚಕ್ರವನ್ನೇ ಹಳಿ ತಪ್ಪಿಸಿ ಕಳ್ಳರಿಗೂ ಪೊಲೀಸರಿಗೂ ನಡುವಣ ಗೆರೆಯನ್ನೇ ಅಳಿಸಿ ಹಾಕುವ ಪೆಡಂಭೂತ. ಆದರೆ ಈ ಆರೋಪಲಹರಿಯ ವಿಪರ್ಯಾಸವನ್ನು ಯಾರೂ ಗಮನಿಸಿಲ್ಲ- ಭ್ರಷ್ಟಾಚಾರದ ಆಪಾದನೆ ಮಾಡುತ್ತಿರುವುದು ಆಡಳಿತ ಪಕ್ಷ. ಅಂದರೆ ಭ್ರಷ್ಟರಾಗಲು ಸುವರ್ಣಾವಕಾಶ ಪಡೆದ ಅಧಿಕಾರದ ಶಕ್ತಿಕೇಂದ್ರ. ಆರೋಪ ಹೊರೆಸುತ್ತಿರುವುದು ವಿರೋಧ ಪಕ್ಷಗಳ ವಿರುದ್ಧ! ಅಂತೂ ಚುನಾವಣೆ ಸಂದರ್ಭ ಎಂದ ಮೇಲೆ ಇಂಥ ಅಸಂಗತ ಪ್ರಹಸನಗಳು ಕಾಣಲೇಬೇಕಲ್ಲ?!

ಚೋದ್ಯದ ಸಂಗತಿಯೆಂದರೆ, ಕರ್ನಾಟಕದಲ್ಲಿ ಚುನಾವಣಾ ಪ್ರಚಾರ ಮಾಡುತ್ತ ಭ್ರಷ್ಟಾಚಾರದ ವಿರುದ್ಧ ಪ್ರಧಾನಿ ಸೊಲ್ಲೆತ್ತಿದ ದಿನವೇ ಇಲ್ಲಿ ಮಾಡಾಳ್ ಪ್ರಶಾಂತ್ ₹ 40 ಲಕ್ಷ ಲಂಚದ ಹಣದೊಂದಿಗೆ ಸಿಕ್ಕಿಬಿದ್ದರೆ, ಮರುದಿನ ಅವರ ತಂದೆ, ಬಿಜೆಪಿ ಶಾಸಕ ಮಾಡಾಳ್ ವಿರೂಪಾಕ್ಷಪ್ಪ ಅವರ ಮನೆಯಲ್ಲಿ ₹ 6 ಕೋಟಿಗೂ ಹೆಚ್ಚು ಹಣವು ಲೋಕಾಯುಕ್ತ ಪೊಲೀಸ್ ಅಧಿಕಾರಿಗಳ ಕೈವಶವಾಯಿತು!

ಅದು ಹೇಗಾದರೂ ಇರಲಿ, ಇಲ್ಲಿ ಕೆಲವು ಅಂಕಿಅಂಶಗಳು ಪರಿಶೀಲನೆಗೆ ಯೋಗ್ಯವಾಗಿವೆ: 2019ರಲ್ಲಿ ದೇಶದ 543 ಲೋಕಸಭಾ ಕ್ಷೇತ್ರಗಳ ಪೈಕಿ 542ರಲ್ಲಿ ಮತದಾನ ನಡೆಯಿತು. ಬಿಜೆಪಿಯನ್ನು ಅಭೂತಪೂರ್ವ ಬಹುಮತದೊಂದಿಗೆ ಅಧಿಕಾರಕ್ಕೆ ತಂದ ಆ ಚುನಾವಣೆಯಲ್ಲಿ ಎಲ್ಲ ಪಕ್ಷಗಳು ಸೇರಿ ವೆಚ್ಚ ಮಾಡಿದ ಒಟ್ಟು ಹಣ ಸುಮಾರು ₹ 55 ಸಾವಿರ ಕೋಟಿ ಎಂದು ದೆಹಲಿಯ 'ಸೆಂಟರ್ ಫಾರ್ ಮೀಡಿಯಾ' ಸಂಸ್ಥೆ ಅಂದಾಜು ಮಾಡಿದೆ. ಇದಿಷ್ಟೂ ಲೆಕ್ಕಕ್ಕೆ ಸಿಗುವ ವೆಚ್ಚವೆಂದೂ, ವಾಸ್ತವದಲ್ಲಿ ಖರ್ಚುವೆಚ್ಚ ಇದಕ್ಕಿಂತಲೂ ಹೆಚ್ಚೆಂದೂ ಆ ಸಂಸ್ಥೆ ವಿವರಿಸಿತ್ತು. ಆ ಪೈಕಿ ಸುಮಾರು ಅರ್ಧದಷ್ಟು ಮೊತ್ತ ಆಳುವ ಬಿಜೆಪಿ ಪಕ್ಷವೊಂದೇ ಭರಿಸಿದ್ದು! ಅಂದರೆ ಬಿಜೆಪಿಯೊಂದೇ 542 ಕ್ಷೇತ್ರಗಳಿಗಾಗಿ ₹ 27 ಸಾವಿರ ಕೋಟಿಗೂ ಹೆಚ್ಚು ವ್ಯಯಿಸಿದೆ. ಒಂದು ಕ್ಷೇತ್ರಕ್ಕೆ ಸರಾಸರಿ 50 ಕೋಟಿ ರೂಪಾಯಿಗೂ ಹೆಚ್ಚು! ಈ ಮೊತ್ತ ಎಲ್ಲಿಂದ ಬಂತು? ಇದು, ಆ ಪಕ್ಷದ ಧುರೀಣರು ಹೊಲದಲ್ಲಿ ಉತ್ತು ಬಿತ್ತು ಕಳೆ ಕಿತ್ತು ಸಂಪಾದಿಸಿದ ಹಣವೇ? ಜೊತೆಗೆ ಇತರ ಪಕ್ಷಗಳು ಕೂಡ, ಇಷ್ಟಲ್ಲವಾದರೂ ಕೋಟಿ ಕೋಟಿ ಸುರಿದಿದ್ದಂತೂ ನಿಜವಲ್ಲವೇ? ಅದೆಲ್ಲಿಂದ ಬಂತು?

ಇದಾದ ಮೇಲೆ ಬೇರೆ ಬೇರೆ ರಾಜ್ಯಗಳಲ್ಲಿ ಯಾವುದೇ ಪಕ್ಷ ಆರಿಸಿ ಬಂದಿರಲಿ, ಬಿಜೆಪಿ ತನ್ನ ಕುಖ್ಯಾತ 'ಆಪರೇಷನ್ ಕಮಲ'ದ ಮೂಲಕ ಶಾಸಕರನ್ನು ಕೊಂಡುಕೊಂಡು ತನ್ನದೇ ನೇತೃತ್ವದ ಸರ್ಕಾರ ಸ್ಥಾಪಿಸಿದ್ದನ್ನು ದೇಶ ಕಣ್ಣು ಬಾಯಿ ಬಿಟ್ಟುಕೊಂಡು ನೋಡಲಿಲ್ಲವೇ? ಈವರೆಗೆ ದೇಶದಾದ್ಯಂತ ಅಂಥ ಆಪರೇಷನ್ನುಗಳಿಗಾಗಿ ಆ ಪಕ್ಷ ₹ 6,000 ಕೋಟಿಗೂ ಹೆಚ್ಚು ಹಣ ವಿನಿಯೋಗಿಸಿದೆ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಲೆಕ್ಕ ಕೊಟ್ಟರು.

ಇಷ್ಟರ ಮೇಲೆ ರಾಜಕೀಯ ಪಕ್ಷಗಳು ಯಾವುದೇ ಲೆಕ್ಕಪತ್ರವಿಲ್ಲದೆ ಚುನಾವಣಾ ಬಾಂಡ್‌ಗಳ ಮೂಲಕ ದೇಣಿಗೆ ಸಂಗ್ರಹಿಸಬಹುದೆಂಬ ಕಾನೂನು ತರಲಾಯಿತು. ಆ ಮೂಲಕ 17 ಪಕ್ಷಗಳು 2022ರ ವರೆಗೆ ಸಂಗ್ರಹಿಸಿದ ಒಟ್ಟು ಮೊತ್ತ ₹ 9,208 ಕೋಟಿಯಷ್ಟಾದರೆ, ಆ ಪೈಕಿ ಬಿಜೆಪಿಯೊಂದಕ್ಕೇ ₹ 5,270 ಕೋಟಿ ಸಂದಿದೆ ಎಂದು ವರದಿಯಾಗಿದೆ. ಅದಷ್ಟೂ 'ಬೇನಾಮಿ' ಹಣ. ಅಂದರೆ ಲೆಕ್ಕವಿಲ್ಲ, ಪತ್ರವಿಲ್ಲ. ಹಣ ಕೊಟ್ಟದ್ದು ಯಾರು, ಅದರ ಮೂಲವೇನು, ಯಾಕೆ ಕೊಟ್ಟರು, ಕೊಟ್ಟಿದ್ದಕ್ಕೆ ಯಾವ ಪ್ರತಿಫಲದ ಭರವಸೆ ಸಿಕ್ಕಿದೆ, ಯಾರೂ ಕೇಳುವಂತಿಲ್ಲ! ಚುನಾವಣಾ ಬಾಂಡ್ ಮೂಲಕ ಸಂಗ್ರಹವಾದದ್ದಷ್ಟೂ ದುಡ್ಡು ವಿನಿಯೋಗವಾಗುವುದು ಚುನಾವಣೆಗಾಗಿಯೇ! ಅಂದರೆ ಇಡೀ ಚುನಾವಣಾ ವ್ಯವಸ್ಥೆಯೇ ಅಧಿಕಾರ ಹಿಡಿಯಲು ಕೊಪ್ಪರಿಗೆಗಟ್ಟಲೆ ಹಣ ಚೆಲ್ಲುವ, ಚೆಲ್ಲಿದ ಹತ್ತರಷ್ಟನ್ನು ವಾಪಸು ದುಡಿಯಲು ಅಧಿಕಾರವನ್ನೇ ಬಳಸುವ ಭ್ರಷ್ಟ ವರ್ತುಲ. ಹೇಳುವುದೇನು? ಭ್ರಷ್ಟಾಚಾರದ ಬಟಾಬಯಲು ನಂಗಾನಾಚ್ ಇದು. ಯಾರೇನೇ ಹೇಳಲಿ, ರಾಜಕೀಯ ಪಕ್ಷಗಳು ಚುನಾವಣೆಯಲ್ಲಿ ಸುರಿಯುವ ಈ ದುಡ್ಡು ಅಂತಿಮವಾಗಿ ಯಾರದು?

ಉತ್ತರ ಸರಳವಾಗಿದೆ. ಇದಿಷ್ಟೂ ಜನರ ದುಡ್ಡು. ಅಂದರೆ ತೆರಿಗೆದಾರರ ಶ್ರಮದ ದುಡಿಮೆಯ ಫಲ. ಜನಸಾಮಾನ್ಯರು ಬೆವರು ಸುರಿಸಿ ದುಡಿದಿಟ್ಟ ಗಂಟಿಗೆ ಕನ್ನ ಕೊರೆದು ರಾಜಕೀಯ ಪಕ್ಷಗಳು ಸೂರೆ ಮಾಡುವ ಹಣ ಇದು. ಅಂದರೆ ನೇರಾನೇರ ಭ್ರಷ್ಟಾಚಾರದ ಹಣ. ಜನಕ್ಕೂ ಇದು ಗೊತ್ತಿಲ್ಲದ ವಿಷಯವಲ್ಲ. ಆದರೆ ವೋಟಿಗೆ ಇಂತಿಷ್ಟು ಹಣ, ಕುಕ್ಕರ್, ಸೀರೆಯಂಥ ಲಂಚ ಸ್ವೀಕರಿಸುವ ನಮ್ಮ ನತದೃಷ್ಟ ದೇಶದ ಮತದಾರರಿಗೂ ಭ್ರಷ್ಟಾಚಾರದ ಬಗ್ಗೆ ಗಂಭೀರ ಆಕ್ಷೇಪಗಳು ಇದ್ದಂತಿಲ್ಲ. ಹೇಗೂ ದುಡ್ಡಿಲ್ಲದೆ ಚುನಾವಣೆ ನಡೆಯುವುದನ್ನು ಇಲ್ಲಿ ಊಹಿಸುವುದೂ ಸಾಧ್ಯವಿಲ್ಲದಂಥ ಸ್ಥಿತಿ ತಲುಪಿದ್ದೇವೆ. ಅವರು ಮಾಡುತ್ತಾರೆ, ಇವರೂ ಒಪ್ಪಿಕೊಂಡಿದ್ದಾರೆ! ಅಲ್ಲಿಗೆ ಮುಗಿಯಿತಲ್ಲ?

ಮತ್ತೆ ಈ ಭ್ರಷ್ಟಾಚಾರದ ಬುಡುಬುಡಿಕೆ ಯಾಕೆ? ಆ ಒಣ ಮಾತುಗಳ, ವೀರಾವೇಶದ ಘೋಷಣೆಗಳ ಬಡಿವಾರವೇಕೆ? ಯಾರನ್ನು ಯಾಮಾರಿಸಲು ಆ ಉಗ್ರಪ್ರತಾಪ? ಇವರಿಗೆ ನಸುವಾದರೂ ಲಜ್ಜೆಯಿದ್ದರೆ ಕೊನೆಪಕ್ಷ ತಮ್ಮ ಪ್ರಚಾರದಲ್ಲಿ ಲಂಚ, ರುಷುವತ್ತಿನ ಪ್ರಸ್ತಾಪವನ್ನೇ ನಿಲ್ಲಿಸಲಿ. ಮಿಕ್ಕಂತೆ ಬೇರೆ ಏನನ್ನಾದರೂ ಹೇಳಿಕೊಳ್ಳಲಿ.

ವಾಚಕರ ವಾಣಿ

ಪ್ಲಾಸ್ಟಿಕ್ ತ್ಯಾಜ್ಯ: ಹಳ್ಳಿ ಯುವಕರೇ ಎಚ್ಚೆತ್ತುಕೊಳ್ಳಿ

ನನ್ನ ಕೃಷಿಕ ಗೆಳೆಯರೊಬ್ಬರು ತಮ್ಮ ಜಮೀನಿಗೆ ಹಾಕುವ ಕೊಟ್ಟಿಗೆ ಗೊಬ್ಬರದಲ್ಲಿ ಸೇರಿಕೊಳ್ಳುವ ಬಳಕೆಯಾದ ಶ್ಯಾಂಪೂ ಸ್ಯಾಶೆಗಳು, ಪ್ಲಾಸ್ಟಿಕ್ ಲೋಟಗಳನ್ನು ಆಯ್ದು ಬೇರ್ಪಡಿಸುವುದೇ ದೊಡ್ಡ ಸಮಸ್ಯೆಯಾಗಿದೆ ಎನ್ನುತ್ತಿದ್ದರು. ಹೌದು, ಈಗ ಪ್ರತಿ ಹಳ್ಳಿಯೂ ಪ್ಲಾಸ್ಟಿಕ್ ತ್ಯಾಜ್ಯದಿಂದ ಗಬ್ಬೆದ್ದು ನಾರುತ್ತಿದೆ. ಜಾತ್ರೆ, ಹಬ್ಬ ಹರಿದಿನಗಳಲ್ಲಿ ಪ್ಲಾಸ್ಟಿಕ್ ಲೋಟಗಳನ್ನು ಬಳಸುವ ಪರಿಪಾಟ ಅತಿಯಾಗಿಯೇ ಇದೆ. ಹಳ್ಳಿಯ ಮೂಲೆ ಮೂಲೆಗಳಲ್ಲಿ, ತಿಪ್ಪೆಗುಂಡಿಗಳಲ್ಲಿ, ಮೋರಿ, ಗಟಾರಗಳಲ್ಲಿ ಬಳಸಿ ಬಿಸಾಡಿದ ಲೋಟಗಳು, ಕುರುಕು ತಿಂಡಿಯ ಪೊಟ್ಟಣಗಳು ರಾಶಿಗಟ್ಟಲೇ ಹರಡಿರುತ್ತವೆ. ಪಟ್ಟಣಗಳಲ್ಲಿ ಈ ರೀತಿಯ ರಾಶಿಗಳು ಇಲ್ಲವೆಂದಲ್ಲ. ಆದರೆ ಪಟ್ಟಣಗಳಲ್ಲಿ ಸಂಗ್ರಹಿಸಿ ವಿಲೇ ಮಾಡಲು ವ್ಯವಸ್ಥೆ ಇದೆ. ಹಳ್ಳಿಗಳಿಗೆ ಈ ವ್ಯವಸ್ಥೆ ಇನ್ನೂ ಬಂದಿಲ್ಲವಾದ್ದರಿಂದ ಸ್ವಯಂಪ್ರೇರಿತರಾಗಿ ಜನರೇ ಬಳಕೆಯನ್ನು ನಿಯಂತ್ರಿಸಬೇಕು.

ಸಮಾರಂಭ ಮುಗಿದ ನಂತರ ತ್ಯಾಜ್ಯವನ್ನು ಊರ ಹೊರಗಿನ ಕೆರೆ ಬಯಲಿಗೋ ತಿಪ್ಪೆ ಗುಂಡಿಗೋ ಸಾಗಿಸಿದರೆ ಮುಗಿಯಿತು ಎಂಬಂತಿರುತ್ತದೆ ನಮ್ಮ ಹಳ್ಳಿಗಾಡಿನ ಕಾರ್ಯಕ್ರಮದ ಆಯೋಜಕರ ಮನೋಧೋರಣೆ. ಒಂದು ಬಾರಿ ಬಳಸಿ ಬಿಸಾಡುವ ಏಕಬಳಕೆಯ ಪ್ಲಾಸ್ಟಿಕ್ ಬಳಸದಂತೆ ನೋಡಿಕೊಳ್ಳುವುದು, ಸಮಾರಂಭಗಳಲ್ಲಿ ನೀರಿನ ಬಾಟಲಿಗಳ ಬದಲು ಶುದ್ಧೀಕರಿಸಿದ 20 ಲೀಟರ್ ನೀರಿನ ಟ್ಯಾಂಕ್‌ಗಳಿಂದ ಪೇಪರ್ ಲೋಟಗಳಲ್ಲಿ ನೀರು ಸರಬರಾಜು ಮಾಡುವಂತೆ ಜಾಗೃತಿ ಮೂಡಿಸುವುದು ಯುವಜನ ಮಾಡಬೇಕಾದ ತುರ್ತು ಕರ್ತವ್ಯವಾಗಿದೆ. ಫಲವತ್ತಾದ ಮಣ್ಣಿನ ನೈರ್ಮಲ್ಯವನ್ನು ಕಾಪಾಡಿ, ನಿಮ್ಮ ಮುಂದಿನ ಪೀಳಿಗೆಗೆ ನಿರ್ಮಲ ಪರಿಸರವನ್ನು ನೀಡಿ. ಇಲ್ಲವಾದರೆ, ನಗರದ ಜನರಂತೆ ನೀವೂ ನರಕಯಾತನೆ ಅನುಭವಿಸಬೇಕಾಗಬಹುದು.

ಎಸ್.ರವಿ, ಮೈಸೂರು

ಲಿಂಗಾಯತರು ಮತ್ತು ಬಿಜೆಪಿ: ಉತ್ಪ್ರೇಕ್ಷಿತ ಮಾತೇಕೆ?

'ಲಿಂಗಾಯತರಿಗೆ ಗೌರವ ತಂದುಕೊಟ್ಟಿದ್ದೇ ಬಿಜೆಪಿ' ಎಂಬ ಕನ್ನಡ ಗಡಿ ಅಭಿವೃದ್ಧಿ ಪ್ರಾಧಿಕಾರದ ಅಧ್ಯಕ್ಷ ಸಿ.ಸೋಮಶೇಖರ್ ಅವರ ಲೇಖನವು (ಪ್ರ.ವಾ., ಮೇ 2) ಬರೀ ಲಿಂಗಾಯತ ಸಮುದಾಯಕ್ಕೆ ಮಾಡಿದ ಅವಮಾನವಷ್ಟೇ ಅಲ್ಲ ಕನ್ನಡ ನಾಡಿನ ಪ್ರತಿಷ್ಠೆಗೆ ಕುಂದುಂಟು ಮಾಡುವಂತಿದೆ. ಬಿಜೆಪಿಯನ್ನು ಹೊರತುಪಡಿಸಿ ಲಿಂಗಾಯತರಿಗೆ ಗೌರವ ಇರಲಿಲ್ಲವೇ? ತುಮಕೂರಿನ ಸಿದ್ಧಗಂಗಾ ಮಠದ ಶಿವಕುಮಾರ ಸ್ವಾಮಿಯವರಿಂದ ಲಿಂಗಾಯತ ಸಮಾಜವು ಲೋಕದ ಮನ್ನಣೆಗೆ ಪಾತ್ರವಾಗಲಿಲ್ಲವೇ? ಇನ್ನೂ ಹಲವಾರು ಲಿಂಗಾಯತ ಮಠಗಳು ಮಾಡುತ್ತಿರುವ ಸಮಾಜಸೇವೆ ಕನ್ನಡಿಗರ ಹೆಮ್ಮೆಗೆ ಕಾರಣವಾಗಿಲ್ಲವೇ? ಹಾಗೆ ನೋಡಿದರೆ ವಿರೋಧ ಪಕ್ಷದ ನಾಯಕರಾಗಿ ಬಿ.ಎಸ್.ಯಡಿಯೂರಪ್ಪ ಅವರು ಮಾಡಿದ ದಿಟ್ಟ ಹೋರಾಟಗಳಿಂದಾಗಿ ಬಿಜೆಪಿಗೆ ಕರ್ನಾಟಕದಲ್ಲಿ ಒಂದು ಸ್ಥಾನ ಸಿಕ್ಕಿತೆಂಬುದು ಎಲ್ಲರೂ ಕಂಡ ಸತ್ಯ. 'ಕರ್ನಾಟಕದ ರಾಜಕಾರಣದಲ್ಲಿ ಲಿಂಗಾಯತ ಸಮುದಾಯವನ್ನು ನಿರ್ಲಕ್ಷಿಸಲಾಗುತ್ತಿದೆಯೇ?' ಎಂಬ ವಿಷಯದ ಬಗ್ಗೆ ನಿಷ್ಪಕ್ಷಪಾತವಾಗಿ ವಿವೇಚಿಸದೆ ಚರ್ಚಾಪಟುವಿನಂತೆ ಬಿಜೆಪಿ ಪರ ವಾದ ಮಂಡನೆ ಮಾಡಿ, ಪ್ರಸ್ತುತ ಸಂದರ್ಭದ ರಾಜಕೀಯ ವಿಶ್ಲೇಷಣೆಯಲ್ಲಿ ಲೇಖಕರು ಎಡವಿದ್ದಾರೆ ಎನ್ನಬೇಕಾಗುತ್ತದೆ.

ಮುಖ್ಯಮಂತ್ರಿ ಬಸವರಾಜ ಬೊಮ್ಮಾಯಿ ಅವರು ಕೈಗೊಂಡಿರುವ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದ ಮೀಸಲಾತಿಯ ಹೆಚ್ಚಳವಾಗಲಿ, ಒಳಮೀಸಲಾತಿಯ ಘೋಷಣೆಯಾಗಲಿ ಇನ್ನೂ ಲೋಕಸಭೆ ಮತ್ತು ರಾಜ್ಯ ಸಭೆಯಲ್ಲಿ ಅಂಗೀಕಾರವಾಗಿ ರಾಷ್ಟ್ರಪತಿಯವರ ಅಂಕಿತ ಪಡೆಯಬೇಕಾಗಿದೆ. ಅಂತೆಯೆ ಲಿಂಗಾಯತರು ಹಾಗೂ ಒಕ್ಕಲಿಗರ ಮೀಸಲಾತಿಯ ಹೆಚ್ಚಳವನ್ನು ನ್ಯಾಯಾಂಗದ ಆದೇಶದ ಮೇರೆಗೆ ಕರ್ನಾಟಕ ಸರ್ಕಾರವೇ ತಡೆಹಿಡಿದಿದೆ. ಹೀಗಿರುವಾಗ ಐತಿಹಾಸಿಕ ನಿರ್ಧಾರ ಎಂದು ಹೇಳುವುದು ಎಷ್ಟು ಸರಿ? ಇದು ಬರೀ ಚುನಾವಣಾ ಪೂರ್ವದ ಗಿಮಿಕ್ ಅಲ್ಲವೇ? ವಿಧಾನಸೌಧದ ಮುಂದೆ ಬಸವಣ್ಣನವರ ಪ್ರತಿಮೆ ಸ್ಥಾಪನೆಯ ಕುರಿತು ಶ್ರೀಯುತರು ಆಡಿರುವ ಉತ್ಪ್ರೇಕ್ಷಿತ ಮಾತುಗಳಂತೂ ಬಾಲಿಶ!

ಪು.ಸೂ.ಲಕ್ಷ್ಮೀನಾರಾಯಣ ರಾವ್, ಬೆಂಗಳೂರು

ಭಾವನಾತ್ಮಕ ಬ್ಲ್ಯಾಕ್‌ಮೇಲ್ ಸಲ್ಲ

ಕೆಲವು ರಾಜಕಾರಣಿಗಳು ಮತದಾರರ ಅನುಕಂಪ ಗಿಟ್ಟಿಸಲು 'ಇದೇ ನನ್ನ ಕೊನೆಯ ಚುನಾವಣೆ' ಎಂದು ಹಿಂದಿನ ಹಲವಾರು ವರ್ಷಗಳಿಂದ ಘೋಷಣೆ ಮೊಳಗಿಸುತ್ತಿರುವುದನ್ನು ಪ್ರಜ್ಞಾವಂತ ಮತದಾರರು ಗಮನಿಸುತ್ತಿರಬಹುದು. ಈ ರೀತಿ ಪ್ರತಿ ಚುನಾವಣೆಯಲ್ಲೂ ಹೇಳುತ್ತಾ ಮತದಾರರಿಗೆ ಅವರು ಮಂಕುಬೂದಿ ಎರಚುತ್ತಿರುವುದು ಸಹ ದಾಖಲಾಗುತ್ತಿದೆ.

ರಾಜಕೀಯದಲ್ಲಾಗಲಿ ಅಥವಾ ಇತರ ಯಾವುದೇ ರಂಗದಲ್ಲಾಗಲಿ ಯಾರೂ ಅನಿವಾರ್ಯರಲ್ಲ. ಹೊಸ ನೀರು ಬಂದಾಗ ಹಳೆಯ ನೀರು ಕೊಚ್ಚಿಕೊಂಡು ಹೋಗುವುದು ಅನಿವಾರ್ಯ ಮತ್ತು ಪ್ರಕೃತಿ ಧರ್ಮ. ಇದೇ ನನ್ನ ಕಡೆಯ ಚುನಾವಣೆ ಎಂಬುದು ಭಾವನಾತ್ಮಕ ಬ್ಲ್ಯಾಕ್‌ಮೇಲ್ ಅಲ್ಲದೆ ಬೇರೇನೂ ಅಲ್ಲ. ಇನ್ನು ಮುಂದಾದರೂ ರಾಜಕಾರಣಿಗಳು ಈ ರೀತಿಯ ಘೋಷಣೆ ಮೊಳಗಿಸುವುದು ಬೇಡ.

ಕೆ.ವಿ.ವಾಸು, ಮೈಸೂರು

ದಿ ಕೇರಳ ಸ್ಟೋರಿ: ಜನ ವಿಮರ್ಶಿಸಲಿ

'ದಿ ಕೇರಳ ಸ್ಟೋರಿ' ಸಿನಿಮಾದ ಬಿಡುಗಡೆಗೆ ತಡೆ ನೀಡಲು ಸುಪ್ರೀಂ ಕೋರ್ಟ್ ನಿರಾಕರಿಸಿರುವುದು (ಪ್ರ.ವಾ., ಮೇ 3) ಸ್ವಾಗತಾರ್ಹ ನಿಲುವಾಗಿದೆ. ಸಿನಿಮಾ ಬಿಡುಗಡೆಗೆ ಮುನ್ನವೇ ಇದರ ಟ್ರೇಲರ್ 1.6 ಕೋಟಿ ವೀಕ್ಷಣೆ ಪಡೆದಿರುವುದು ಕುತೂಹಲಕಾರಿಯಾಗಿದೆ. ಸೆನ್ಸಾರ್ ಮಂಡಳಿಯ ಪ್ರಮಾಣಪತ್ರ ಪಡೆದಿರುವುದರಿಂದ, ಒಂದು ಸಮುದಾಯವನ್ನು ಗುರಿ ಮಾಡುವುದಾಗಲಿ ಅಥವಾ ದ್ವೇಷ ಬಿತ್ತುವ ವಿಷಯಕ್ಕೆ ಆಸ್ಪದವಾಗಲಿ ಇರಲು ಸಾಧ್ಯವಿಲ್ಲ. ಅಷ್ಟಕ್ಕೂ ಚಿತ್ರ ವೀಕ್ಷಣೆಯ ನಂತರ ಯಾವುದು ಸರಿ ಯಾವುದು ತಪ್ಪು ಎಂದು ಜನರೇ ವಿಮರ್ಶಿಸುವರು ಮತ್ತು ತೀರ್ಮಾನಿಸುವರು.

ಎಚ್.ಎನ್.ಕಿರಣ್ ಕುಮಾರ್, ಹಳೇಹಳ್ಳಿ, ಗೌರಿಬಿದನೂರು

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

ಕರ್ನಾಟಕ ವಿಧಾನಸಭಾ ಚುನಾವಣೆ – 2023

ಅಪರಾಧ ಹಿನ್ನೆಲೆಯ ಅಭ್ಯರ್ಥಿಗಳ ಸಂಖ್ಯೆ ಹೆಚ್ಚಳ

ಕರ್ನಾಟಕ ವಿಧಾನಸಭಾ ಚುನಾವಣೆಯಲ್ಲಿ ಕಣಕ್ಕೆ ಇಳಿದಿರುವ ಅಭ್ಯರ್ಥಿಗಳ ಸಂಖ್ಯೆಯಲ್ಲಿ ಏರಿಕೆಯಾಗಿದೆ. 2018ರಲ್ಲಿ ಕಣಕ್ಕೆ ಇಳಿದಿದ್ದ ಒಟ್ಟು ಅಭ್ಯರ್ಥಿಗಳಲ್ಲಿ ಶೇ 15ರಷ್ಟು ಅಭ್ಯರ್ಥಿಗಳು ಮಾತ್ರ ತಮ್ಮ ವಿರುದ್ಧ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಘೋಷಿಸಿಕೊಂಡಿದ್ದರು. ಆದರೆ, ಈ ಬಾರಿ ಕಣಕ್ಕೆ ಇಳಿದಿರುವ ಅಭ್ಯರ್ಥಿಗಳಲ್ಲಿ, ಹೀಗೆ ಹೇಳಿಕೊಂಡವರ ಪ್ರಮಾಣ ಶೇ 22ಕ್ಕೆ ಏರಿಕೆಯಾಗಿದೆ.ರಾಜ್ಯದಲ್ಲಿ ಈವರೆಗೆ ನಡೆದ ಚುನಾವಣೆಗಳಲ್ಲಿ ಅಪರಾಧ ಹಿನ್ನೆಲೆಯ ಅಭ್ಯರ್ಥಿಗಳು ಗರಿಷ್ಠ ಪ್ರಮಾಣದಲ್ಲಿ ಕಣದಲ್ಲಿ ಇರುವುದು ಇದೇ ಮೊದಲು. ಎಡಿಆರ್ ಬಿಡುಗಡೆ ಮಾಡಿರುವ 'ಕರ್ನಾಟಕ ವಿಧಾನಸಭಾ ಚುನಾವಣೆಯ ಅಭ್ಯರ್ಥಿಗಳ ಅಪರಾಧಿಕ, ಆರ್ಥಿಕ ಮತ್ತು ಶೈಕ್ಷಣಿಕ ಹಿನ್ನಲೆಯ ವಿಶ್ಲೇಷಣೆ' ವರದಿಯಲ್ಲಿ ಈ ಮಾಹಿತಿ ಇದೆ

ಪಕ್ಷಗಳಲ್ಲಿ ಅಪರಾಧ ಹಿನ್ನೆಲೆಯ ಅಭ್ಯರ್ಥಿಗಳು



111 ರೆಡ್ ಅಲರ್ಟ್ ಕ್ಷೇತ್ರಗಳು

ತಮ್ಮ ವಿರುದ್ಧ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಘೋಷಿಸಿಕೊಂಡ ಅಭ್ಯರ್ಥಿಗಳ ಸಂಖ್ಯೆ ಒಂದು ಕ್ಷೇತ್ರದಲ್ಲಿ ಮೂರು ಅಥವಾ ಅದಕ್ಕಿಂತ ಹೆಚ್ಚು ಇದ್ದರೆ, ಅಂತಹ ಕ್ಷೇತ್ರವನ್ನು 'ರೆಡ್ ಅಲರ್ಟ್ ಕ್ಷೇತ್ರ' ಎಂದು ಕರೆಯಲಾಗುತ್ತದೆ. 2023ರ ವಿಧಾನಸಭಾ ಚುನಾವಣೆಯಲ್ಲಿ ರಾಜ್ಯದ 111 ಕ್ಷೇತ್ರಗಳಲ್ಲಿ, ಅಪರಾಧ ಹಿನ್ನೆಯ ಅಭ್ಯರ್ಥಿಗಳ ಸಂಖ್ಯೆ ಮೂರಕ್ಕಿಂತಲೂ ಹೆಚ್ಚು ಇದೆ. ಹೀಗಾಗಿ ಅಂತಹ ಕ್ಷೇತ್ರಗಳಲ್ಲಿ ಕಟ್ಟೆಚ್ಚರ ಅಗತ್ಯ ಎಂದು ಎಡಿಆರ್ ತನ್ನ ವರದಿಯಲ್ಲಿ ಶಿಫಾರಸು ಮಾಡಿದೆ. 2018ರಲ್ಲಿ 56 ಕ್ಷೇತ್ರಗಳನ್ನಷ್ಟೇ 'ರೆಡ್ ಅಲರ್ಟ್ ಕ್ಷೇತ್ರ'ಗಳು ಎಂದು ಘೋಷಿಸಲಾಗಿತ್ತು.

49 ತಮ್ಮ ವಿರುದ್ಧ ಮಹಿಳೆಯರ ವಿರುದ್ಧ ಎಸಗಲಾದ ಅಪರಾಧ ಕೃತ್ಯಗಳ ಸಂಬಂಧ ಪ್ರಕರಣ ದಾಖಲಾಗಿದೆ ಎಂದು ಘೋಷಿಸಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ (2018ರಲ್ಲಿ 23 ಅಭ್ಯರ್ಥಿಗಳ ವಿರುದ್ಧ ಮಾತ್ರ ಇಂತಹ ಪ್ರಕರಣಗಳು ದಾಖಲಾಗಿದ್ದವು)

1 ತಮ್ಮ ಇರುದ್ಧ ಅತ್ಯಾಚಾರ ಸಂಬಂಧಿ ಪ್ರಕರಣ ದಾಖಲಾಗಿದೆ ಎಂದು ಘೋಷಿಸಿಕೊಂಡಿರುವ ಅಭ್ಯರ್ಥಿ (2018ರಲ್ಲಿ ಒಬ್ಬ ಅಭ್ಯರ್ಥಿಯ ವಿರುದ್ಧವೂ ಇಂತಹ ಪ್ರಕರಣ ದಾಖಲಾಗಿರಲಿಲ್ಲ)

8 ತಮ್ಮ ವಿರುದ್ಧ ಕೊಲೆ ಪ್ರಕರಣಗಳು ದಾಖಲಾಗಿವೆ ಎಂದು ಘೋಷಿಸಿಕೊಂಡಿರುವ ಅಭ್ಯರ್ಥಿಗಳು (2018ರಲ್ಲಿ 4 ಅಭ್ಯರ್ಥಿಗಳ ವಿರುದ್ಧ ಮಾತ್ರ ಇಂತಹ ಪ್ರಕರಣಗಳು ದಾಖಲಾಗಿದ್ದವು)

35 ತಮ್ಮ ವಿರುದ್ಧ ಕೊಲೆ ಯತ್ನ ಪ್ರಕರಣಗಳು ದಾಖಲಾಗಿವೆ ಎಂದು ಘೋಷಿಸಿಕೊಂಡಿರುವ ಅಭ್ಯರ್ಥಿಗಳು (2018ರಲ್ಲಿ 25 ಅಭ್ಯರ್ಥಿಗಳ ವಿರುದ್ಧ ಮಾತ್ರ ಇಂತಹ ಪ್ರಕರಣಗಳು ದಾಖಲಾಗಿದ್ದವು)

404 ಜನರ ವಿರುದ್ಧ ಗಂಭೀರ ಅಪರಾಧ ಪ್ರಕರಣ

ಈ ಬಾರಿ ಕಣದಲ್ಲಿರುವ ಒಟ್ಟು ಅಭ್ಯರ್ಥಿಗಳಲ್ಲಿ ಶೇ 16ರಷ್ಟು ಮಂದಿಯ ವಿರುದ್ಧ ಗಂಭೀರ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಎಡಿಆರ್ ತನ್ನ ವರದಿಯಲ್ಲಿ ಹೇಳಿದೆ. 2018ಕ್ಕೆ ಹೋಲಿಸಿದರೆ, ಗಂಭೀರ ಅಪರಾಧ ಪ್ರಕರಣಗಳು ದಾಖಲಾಗಿರುವ ಅಭ್ಯರ್ಥಿಗಳ ಸಂಖ್ಯೆಯಲ್ಲೂ ಏರಿಕೆಯಾಗಿದೆ. 2018ರಲ್ಲಿ ಕಣದಲ್ಲಿದ್ದ ಒಟ್ಟು ಅಭ್ಯರ್ಥಿಗಳಲ್ಲಿ ಶೇ 10ರಷ್ಟು ಅಭ್ಯರ್ಥಿಗಳ ವಿರುದ್ಧ ಮಾತ್ರ ಗಂಭೀರ ಅಪರಾಧ ಪ್ರಕರಣಗಳು ದಾಖಲಾಗಿದ್ದವು

254 2018ರ ಚುನಾವಣೆಯಲ್ಲಿ ತಮ್ಮ ವಿರುದ್ಧ ಗಂಭೀರ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಘೋಷಿಸಿಕೊಂಡಿದ್ದ ಅಭ್ಯರ್ಥಿಗಳ ಸಂಖ್ಯೆ

404 ಈ ಚುನಾವಣೆಯಲ್ಲಿ ತಮ್ಮ ವಿರುದ್ಧ ಗಂಭೀರ ಅಪರಾಧ ಪ್ರಕರಣಗಳು ದಾಖಲಾಗಿವೆ ಎಂದು ಘೋಷಿಸಿಕೊಂಡಿರುವ ಅಭ್ಯರ್ಥಿಗಳ ಸಂಖ್ಯೆ

ಗಂಭೀರ ಅಪರಾಧ: ಪಕ್ಷವಾರು ಅಭ್ಯರ್ಥಿಗಳ ಸಂಖ್ಯೆ



ಗಂಭೀರ ಪ್ರಕರಣವೆಂದರೆ...

ಅಭ್ಯರ್ಥಿಗಳ ವಿರುದ್ಧ ದಾಖಲಾಗಿರುವ ಅಪರಾಧ ಪ್ರಕರಣಗಳನ್ನು ಸಾಮಾನ್ಯ ಮತ್ತು ಗಂಭೀರ ಅಪರಾಧ ಪ್ರಕರಣಗಳು ಎಂದು ಎಡಿಆರ್ ವರ್ಗೀಕರಿಸಿದೆ. ಎಂತಹ ಅಪರಾಧ ಪ್ರಕರಣಗಳು, ಗಂಭೀರ ಅಪರಾಧ ಪ್ರಕರಣಗಳು ಎನಿಸಿಕೊಳ್ಳುತ್ತವೆ ಎಂಬುದನ್ನು ಎಡಿಆರ್ ವಿವರಿಸಿದೆ

- ಐದು ವರ್ಷ ಅಥವಾ ಅದಕ್ಕಿಂತ ಹೆಚ್ಚು ಅವಧಿಯ ಜೈಲುಶಿಕ್ಷೆಗೆ ಅವಕಾಶ ಇರುವಂತಹ ಅಪರಾಧ ಕೃತ್ಯಗಳು
- ಜಾಮೀನುರಹಿತ ಅಪರಾಧ ಕೃತ್ಯಗಳು
- ಚುನಾವಣಾ ಅಪರಾಧಗಳು
- ಹಲ್ಲೆ, ಹತ್ಯೆ, ಅಪಹರಣ, ಅತ್ಯಾಚಾರ ಮತ್ತು ಲೈಂಗಿಕ ದೌರ್ಜನ್ಯದಂತಹ ಕೃತ್ಯಗಳು
- ಜನಪ್ರತಿನಿಧಿ ಕಾಯ್ದೆಯ ಎಂಟನೇ ಸೆಕ್ಷನ್‌ನಲ್ಲಿ ಉಲ್ಲೇಖಿಸಿರುವ ಕೃತ್ಯಗಳು
- ಭ್ರಷ್ಟಾಚಾರ ನಿಷೇಧ ಕಾಯ್ದೆ ಅಡಿ ಗುರುತಿಸಲಾದ ಕೃತ್ಯಗಳು
- ಮಹಿಳೆಯರ ವಿರುದ್ಧ ಎಸಗಲಾಗುವ ಯಾವುದೇ ಅಪರಾಧ ಕೃತ್ಯಗಳು

ಆಧಾರ: ಎಡಿಆರ್, ಚುನಾವಣಾ ಆಯೋಗ

ಮಣಿಕಂಠ ರಾಠೋಡ ವಿರುದ್ಧ ಗರಿಷ್ಠ ಪ್ರಕರಣ

ಕಲಬುರಗಿಯ ಚಿತ್ತಾಪುರ ಎಸ್‌ಸಿ ಮೀಸಲು ಕ್ಷೇತ್ರದಿಂದ ಬಿಜೆಪಿ ಅಭ್ಯರ್ಥಿಯಾಗಿ ಕಣಕ್ಕೆ ಇಳಿದಿರುವ ಮಣಿಕಂಠ ರಾಠೋಡ ವಿರುದ್ಧ 43 ಅಪರಾಧ ಪ್ರಕರಣಗಳು ದಾಖಲಾಗಿವೆ. ಈ ಬಾರಿ ಕಣದಲ್ಲಿರುವ ಅಭ್ಯರ್ಥಿಗಳ ವಿರುದ್ಧ ದಾಖಲಾದ ಗರಿಷ್ಠ ಪ್ರಕರಣಗಳ ಸಂಖ್ಯೆ ಇದು. ಕಾಂಗ್ರೆಸ್‌ನ ಪ್ರಿಯಾಂಕ್ ಖರ್ಗೆ ವಿರುದ್ಧ ಮಣಿಕಂಠ ಕಣಕ್ಕೆ ಇಳಿದಿದ್ದಾರೆ.

26 ವರ್ಷದ ಮಣಿಕಂಠ ವಿರುದ್ಧ ದಾಖಲಾಗಿರುವ 25 ಪ್ರಕರಣಗಳಲ್ಲಿ ಈಗಾಗಲೇ ಆರೋಪಪಟ್ಟಿ ಸಲ್ಲಿಕೆಯಾಗಿದೆ. ಇಷ್ಟೂ ಪ್ರಕರಣಗಳಲ್ಲಿ ಅವರು ನ್ಯಾಯಾಲಯದಲ್ಲಿ ಮೇಲ್ಮನವಿ ಸಲ್ಲಿಸಿದ್ದಾರೆ. ಅವರ ವಿರುದ್ಧದ ಮೂರು ಪ್ರಕರಣಗಳಲ್ಲಿ ಶಿಕ್ಷೆಯಾಗಿದೆ. ಎರಡು ಪ್ರಕರಣಗಳಲ್ಲಿ ದಂಡವನ್ನಷ್ಟೇ ವಿಧಿಸಲಾಗಿದೆ. ಒಂದು ಪ್ರಕರಣದಲ್ಲಿ ಒಂದು ವರ್ಷ ಸೆರೆವಾಸ ಮತ್ತು ₹10,000 ದಂಡ ವಿಧಿಸಲಾಗಿದೆ. ಇದರ ವಿರುದ್ಧ ಅವರು ಮೇಲ್ಮನವಿ ಸಲ್ಲಿಸಿದ್ದಾರೆ.

ಮಣಿಕಂಠ ವಿರುದ್ಧ ವಂಚನೆ (8), ಅಪರಾಧಕ್ಕೆ ಸಂಚು (3), ಕೊಲೆ ಯತ್ನ (2), ಮಾರಕಾಸ್ತ್ರಗಳಿಂದ ಹಲ್ಲೆ (2), ಶಾಂತಿ ಕದಡಲು ಯತ್ನ (5), ಗಲಭೆ (2), ಅಪಾಯಕಾರಿ ಚಾಲನೆ (1) ಸೇರಿ ಭಾರತೀಯ ದಂಡ ಸಂಹಿತೆಯ ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಒಟ್ಟು 28 ಆರೋಪಪಟ್ಟಿ ಸಲ್ಲಿಕೆಯಾಗಿವೆ.

ಅತಿ ಶ್ರೀಮಂತ ಅಭ್ಯರ್ಥಿಗಳ ಆಸ್ತಿಮೌಲ್ಯ ಹೆಚ್ಚಳ

(ಕೋಟಿಗಳಲ್ಲಿ)

- ಯೂಸುಫ್ ಷರೀಫ್ (ಕೆಜಿಎಫ್ ಬಾಬು) ಈ ಬಾರಿ ಕಣದಲ್ಲಿರುವ ಅತ್ಯಂತ ಶ್ರೀಮಂತ ಅಭ್ಯರ್ಥಿ ಎನಿಸಿದ್ದಾರೆ. ಷರೀಫ್ ಅವರು ತಮ್ಮ ಒಟ್ಟು ಆಸ್ತಿಯ ಮೌಲ್ಯ ₹ 1,633 ಕೋಟಿ ಎಂದು ಘೋಷಿಸಿಕೊಂಡಿದ್ದಾರೆ. 2018ರಲ್ಲಿ ಅವರ ಆಸ್ತಿಯ ಮೌಲ್ಯ ಎಷ್ಟು ಎಂಬ ಮಾಹಿತಿ ಲಭ್ಯವಿಲ್ಲದ ಕಾರಣ, ಅವರ ಆಸ್ತಿ ಮೌಲ್ಯದಲ್ಲಿ ಏರಿಕೆಯಾದ ಮಾಹಿತಿಯನ್ನು ಲೆಕ್ಕಾಚಾರ ಮಾಡಲು ಸಾಧ್ಯವಾಗಿಲ್ಲ
- ಕಣದಲ್ಲಿರುವ 1,087 ಅಭ್ಯರ್ಥಿಗಳು ₹1 ಕೋಟಿಗಿಂತಲೂ ಹೆಚ್ಚು ಆಸ್ತಿ ಹೊಂದಿದ್ದೇವೆ ಎಂದು ಘೋಷಿಸಿಕೊಂಡಿದ್ದಾರೆ
- ₹ 100 ಕೋಟಿಗೂ ಹೆಚ್ಚು ಆಸ್ತಿ ಹೊಂದಿರುವ 60 ಅಭ್ಯರ್ಥಿಗಳು ಕಣದಲ್ಲಿದ್ದಾರೆ
- ₹500 ಕೋಟಿಗೂ ಅಧಿಕ ಆಸ್ತಿ ಹೊಂದಿರುವ ಐದು ಅಭ್ಯರ್ಥಿಗಳು ಕಣದಲ್ಲಿದ್ದಾರೆ
- ₹ 1,000ಕ್ಕಿಂತ ಹೆಚ್ಚು ಮೌಲ್ಯದ ಆಸ್ತಿ ಹೊಂದಿರುವ ನಾಲ್ಕು ಅಭ್ಯರ್ಥಿಗಳು ಕಣದಲ್ಲಿದ್ದಾರೆ



'ಜಡ್ಜ್ ಮೆಂಟ್' ನೀಡಲು ಬರುತ್ತಿದ್ದಾರೆ ರವಿಚಂದ್ರನ್!

'ದ ಜಡ್ಜ್ ಮೆಂಟ್' ಪ್ರಾರಂಭ

ಕ್ರೇಜಿಸ್ಟಾರ್ ರವಿಚಂದ್ರನ್, ದೊಡ್ಡ ತಾರಾ ಬಳಗದೊಂದಿಗೆ ಕಾನೂನು ಸಮರವೊಂದರ ತೀರ್ಪು ನೀಡಲು ಬರುತ್ತಿದ್ದಾರೆ. ರವಿಚಂದ್ರನ್ ಮುಖ್ಯಭೂಮಿಕೆಯಲ್ಲಿರುವ 'ದ ಜಡ್ಜ್ ಮೆಂಟ್' ಚಿತ್ರದ ಮುಹೂರ್ತ ಸಮಾರಂಭ ಇತ್ತೀಚೆಗೆ ನಡೆಯಿತು.

'ಆಕ್ಸಿಡೆಂಟ್', 'ಲಾಸ್ಟ್ ಬಸ್' ಮೊದಲಾದ ಚಿತ್ರಗಳನ್ನು ನಿರ್ದೇಶಿಸಿದ್ದ ಗುರುರಾಜ್ ಬಿ ಕುಲಕರ್ಣಿ ಈ ಚಿತ್ರದ ನಿರ್ದೇಶಕರು. ಜಿ9 ಕಮ್ಯೂನಿಕೇಷನ್ ಮೀಡಿಯಾ ಮತ್ತು ಎಂಟರ್‌ಟೈನ್‌ಮೆಂಟ್ ನಿರ್ಮಿಸುತ್ತಿರುವ ಚಿತ್ರದಲ್ಲಿ ನಟ ದಿಗಂತ್, ನಟಿ ಧನ್ಯಾ ರಾಮ್‌ಕುಮಾರ್, ಲಕ್ಷ್ಮೀ ಗೋಪಾಲಸ್ವಾಮಿ, ರೂಪ ರಾಯಪ್ಪ, ಟಿ.ಎಸ್. ನಾಗಾಭರಣ, ಪ್ರಕಾಶ್ ಬೆಳವಾಡಿ, ರಂಗಾಯಣ ರಘು, ರಾಜೇಂದ್ರ ಕಾರಂತ್ ಮುಂತಾದವರು ನಟಿಸಲಿದ್ದಾರೆ.

ನಿರ್ದೇಶಕರು ಮತ್ತು ನಿರ್ಮಾಣ ಸಂಸ್ಥೆಗೂ ಇದು 4ನೇ ಚಿತ್ರವಾಗಿದೆ. 'ಈ ಹಿಂದೆ 'ಆಕ್ಸಿಡೆಂಟ್' ಮಾಡಿ, 'ಲಾಸ್ಟ್ ಬಸ್' ಹತ್ತಿಕೊಂಡು 'ಅಮೃತ ಅಪಾರ್ಟ್‌ಮೆಂಟ್' ಪ್ರವೇಶಿಸಿದ ನಿರ್ದೇಶಕರು ಇದೀಗ ಕಾನೂನು ಸಮರದ ಜಡ್ಜ್‌ಮೆಂಟ್ ಕೇಳಿಕೊಂಡು ಬಂದಿದ್ದಾರೆ. ಕಥೆ ಉತ್ತಮವಾಗಿದೆ. ನನಗೆ ಈ ತಂಡ ಹಾಗೂ ಜಾನರ್ ಎರಡೂ ಹೊಸತು. ಆರು ಜನ ಸ್ನೇಹಿತರು ಸೇರಿ ಈ ಚಿತ್ರ ನಿರ್ಮಾಣ ಮಾಡುತ್ತಿದ್ದಾರೆ. ಒಳ್ಳೆಯ ತಂಡದ ಜೊತೆ ಸಿನಿಮಾ ಮಾಡುತ್ತಿರುವ ಖುಷಿಯಿದೆ' ಎಂದರು ರವಿಚಂದ್ರನ್.

'ಇದೊಂದು ಕಾನೂನು ವ್ಯವಸ್ಥೆ ಕುರಿತಾದ ಚಿತ್ರ. ಶೀಘ್ರದಲ್ಲಿ ಚಿತ್ರೀಕರಣ ಆರಂಭವಾಗಲಿದ್ದು, ಬೆಂಗಳೂರಿನಲ್ಲೇ ಚಿತ್ರೀಕರಣ ನಡೆಯಲಿದೆ. ಅನೂಪ್ ಸೀಳಿನ್ ಸಂಗೀತ, ಶಿವು ಬಿ.ಕೆ.ಕುಮಾರ್ ಛಾಯಾಗ್ರಹಣ, ಬಿ.ಎಸ್ ಕೆಂಪರಾಜು ಸಂಕಲನ ಹಾಗೂ ಎಂ.ಎಸ್ ರಮೇಶ್ ಅವರ ಸಂಭಾಷಣೆ ಈ ಚಿತ್ರಕ್ಕಿದೆ' ಎಂದು ನಿರ್ದೇಶಕ ಗುರುರಾಜ ಬಿ ಕುಲಕರ್ಣಿ ಮಾಹಿತಿ ನೀಡಿದರು.

'ನಾವೆಲ್ಲ ಸದ್ಯದಲ್ಲೇ ಮತ್ತೊಂದು 'ಜಡ್ಜ್‌ಮೆಂಟ್'ಗಾಗಿ ಕಾಯುತ್ತಿದ್ದೇವೆ. ಅಷ್ಟರಲ್ಲಿ ಗುರುರಾಜ್ ಕುಲಕರ್ಣಿ ಮತ್ತು ತಂಡದವರ 'ದ ಜಡ್ಜ್‌ಮೆಂಟ್' ಶುರುವಾಗಿದೆ. ನನ್ನ ಪಾತ್ರ ಕೂಡ ಚೆನ್ನಾಗಿದೆ. ಚಿತ್ರತಂಡಕ್ಕೆ ಒಳ್ಳೆಯದಾಗಲಿ' ಎಂದು ನಾಗಾಭರಣ ಹಾರೈಸಿದರು.

ದಿಗಂತ್, ಧನ್ಯ ರಾಮ್‌ಕುಮಾರ್ ತಮ್ಮ ಪಾತ್ರಗಳ ಕುರಿತು ಮಾತನಾಡಿದರು.

ಹೊಸಬರ 'ಔಟ್ ಆಫ್ ಸಿಲಬಸ್'

ನಟ ಪ್ರದೀಪ್ ದೊಡ್ಡಯ್ಯ ಮತ್ತು ಹೃತಿಕಾ ಶ್ರೀನಿವಾಸ್ ಅಭಿನಯದ 'ಔಟ್ ಆಫ್ ಸಿಲಬಸ್' ಚಿತ್ರ ಮೊದಲ ನೋಟದಲ್ಲಿಯೇ ಪ್ರೇಕ್ಷಕರ ಗಮನ ಸೆಳೆಯುತ್ತಿದೆ. ಚಿತ್ರದ ಪಾತ್ರ ಪರಿಚಯಿಸುವ ವಿಡಿಯೊ ಸದ್ಯ ಸಾಮಾಜಿಕ ಮಾಧ್ಯಮಗಳಲ್ಲಿ ಹರಿದಾಡುತ್ತಿದೆ.

ನಟ ಅಚ್ಯುತ್ ಕುಮಾರ್ ಪಾತ್ರ ಪರಿಚಯದ ವಿಡಿಯೊ ಹೊರಬಂದಿದೆ. ಕ್ರಿಕೆಟ್ ಆಟಗಾರನ ಸಮವಸ್ತ್ರದಲ್ಲಿ ಕಾಣಿಸಿಕೊಂಡಿರುವ ಅಚ್ಯುತ್ ಕುಮಾರ್ ವಿಡಿಯೊದಲ್ಲಿ ಜೀವನ ಮತ್ತು ಅಹಂ ಬಗ್ಗೆ ಮಾತನಾಡುತ್ತಾರೆ.

ಈ ಹಿಂದೆ ಕೆಲ ಸಿನಿಮಾಗಳಲ್ಲಿ ಸಣ್ಣಪುಟ್ಟ ಪಾತ್ರಗಳಲ್ಲಿ ಕಾಣಿಸಿಕೊಂಡಿದ್ದ ಪ್ರದೀಪ್ ದೊಡ್ಡಯ್ಯ ಅವರೇ ಈ ಚಿತ್ರದ ಕಥೆ ಬರೆದು ನಿರ್ದೇಶಿಸಿದ್ದಾರೆ.

'ಪರೀಕ್ಷೆಗಳ ಪ್ರಶ್ನೆಪತ್ರಿಕೆಯಲ್ಲಿ ಪಠ್ಯಪುಸ್ತದಲ್ಲಿ ಇಲ್ಲದೇ ಇರುವಂಥ ಪ್ರಶ್ನೆಗಳು ಬಂದರೆ ಔಟ್ ಆಫ್ ಸಿಲಬಸ್ ಎನ್ನುವ ಆಪಾದನೆ ವಿದ್ಯಾರ್ಥಿಗಳಿಂದ ಕೇಳಿ ಬರುತ್ತದೆ. ಇದನ್ನೇ ಸಿನಿಮಾದ ಶೀರ್ಷಿಕೆಯಾಗಿಸಿದ್ದೇವೆ' ಎಂದು ಚಿತ್ರತಂಡ ಹೇಳಿದೆ.

'ಔಟ್ ಆಫ್ ಸಿಲಬಸ್' ಕನ್ನಡದ ಜತೆಗೆ ತಮಿಳು, ಮಲಯಾಳಂ, ತೆಲುಗು ಮತ್ತು ಹಿಂದಿ ಭಾಷೆಗಳಿಗೂ ಡಬ್ ಆಗಿ ಮೂಡಿಬರುತ್ತಿದೆ. ವಿಜಯಕಲಾ ಅವರು ಸಿನಿಮಾ ನಿರ್ಮಾಣ ಮಾಡುತ್ತಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ

ಬೆರಗಿನ ಬೆಳಕು

ಗುರುರಾಜ ಕರಜಗಿ

ಹಿಂತಿರುಗಲಾರದ ಜೀವಗತಿ

ಸಿಂಧುವನು ಹಿಮಗಿರಿಗೆ ಹಿಂದಿರುಗಿ ಬೇರೊಂದು |
ಚೆಂದದಲಿ ಪರಿದು ಬಾರೆಂದಾಣತಿಪೆಯಾ? ||
ಸಂದರ್ಭವಿಡಿದು ಜನಚೈತನ್ಯ ಪರಿದಿಹುದು |
ಅಂಧಗತಿಯಲ್ಲವದು- ಮಂಕುತಿಮ್ಮ || 876 ||

ಪದ-ಅರ್ಥ: ಪರಿದು = ಹರಿದು, ಬಾರೆಂದಾಣತಿಪೆಯಾ = ಬಾರೆಂದು + ಆಣತಿಪೆಯಾ(ಆಜ್ಞೆ ಮಾಡುತ್ತೀಯಾ), ಸಂದರ್ಭವಿಡಿದು = ಸಂದರ್ಭ-ನೋಡಿ, ಅಂಧಗತಿಯಲ್ಲವದು = ಅಂಧಗತಿ(ಗುರಿ-ಯಿಲ್ಲದ ದಾರಿ) + ಅಲ್ಲದು + ಅದು.

ವಾಚ್ಯಾರ್ಥ: ಹಿಮಗಿರಿಯಿಂದ ಇಳಿದು ಬಂದಿರುವ ನದಿಗೆ ಮರಳಿ ಹೋಗಿ ಮತ್ತೊಂದು ಚೆಂದದ ರೀತಿಯಲ್ಲಿ ಹರಿದು ಬಾ ಎಂದು ಅಪ್ಪಣೆ ಮಾಡುತ್ತೀಯಾ? ಜಗತ್ತಿನ ಸಂದರ್ಭಗಳಿಗೆ ಅನುಗುಣವಾಗಿ ಮನುಷ್ಯನ ಜೀವಗತಿ ನಡೆದು ಬಂದಿದೆ. ಅದು ಗೊತ್ತುಗುರಿಯಿಲ್ಲದ ನಡೆ ಅಲ್ಲ.

ವಿವರಣೆ: ಮಾನವನ ಜೀವ ಪ್ರಗತಿ ಯಾವಾಗಲೂ ಮುಮ್ಮುಖವಾಗಿರುವಂಥದ್ದು. ಅದರ ಸಂಕ್ಷಿಪ್ತ ರೂಪವೇ ಮನುಷ್ಯನೊಬ್ಬನ ಜೀವಗತಿ. ಮೊದಲು ಬಾಲ್ಯ, ಕೌಮಾರ್ಯ, ಯೌವನ, ವೃದ್ಧಾಪ್ಯ ಮತ್ತು ಕೊನೆಗೆ ಸಾವು. ಇದೇ ಪ್ರಕೃತಿಯ ನಿಯಮ. ಅದನ್ನು ತಡೆದು ನಿಲ್ಲಿಸುವುದು ಅಥವಾ ಹಿಂದಕ್ಕೆ ಮರಳಿಸುವುದು ಸಾಧ್ಯವಿಲ್ಲದ್ದು. ಎಲ್ಲರಿಗೂ ವೃದ್ಧಾಪ್ಯದಿಂದ ತಾರುಣ್ಯಕ್ಕೆ ಹೋಗಲು ಮನಸ್ಸಿದ್ದರೂ ಅದು ಅಸಾಧ್ಯ. ಒಂದು ಬಾರಿ ಜೀವ ಜಗತ್ತಿಗೆ ಬಂತೋ, ಅದು ಪ್ರತಿಕ್ಷಣ ಒಮ್ಮುಖವಾಗಿ ಹರಿಯುತ್ತದೆ. ಅದು ಕಾಲದ ಮಹಿಮೆ. ನಮ್ಮೆಲ್ಲರ ಬದುಕನ್ನು ಕಾಲದ ಕೈಗೊಪ್ಪಿಸಿ ಕುಳಿತುಕೊ-ಳ್ಳುತ್ತೇವೆ. ಕಾಲ ಸ್ಪರ್ಶಿಸಿದ್ದೆಲ್ಲ ಮಾಗುತ್ತದೆ, ಬಾಗುತ್ತದೆ, ಕೊನೆಗೆ ಮಣ್ಣಲ್ಲಿ ಮಣ್ಣಾಗುತ್ತದೆ. ಕಾಲಪ್ರವಾಹ ನೀರ ಹರಿವಿನಂತೆ. ಅದರದು ಒಂದೇ ದಿಶೆಯ ಚಲನೆ. ಅದಕ್ಕೆ ಕಗ್ಗ ಒಂದು ಸುಂದರ ಉದಾಹರಣೆಯನ್ನು ನೀಡಿ ಪ್ರಶ್ನೆ ಕೇಳುತ್ತದೆ. ಹಿಮಾಲಯದಿಂದ ಜಿನುಗಿ, ಹರಿದು ಕೆಳಗೆ ಬಂದ ನದಿ ಪ್ರವಾಹಕ್ಕೆ, ನೀನು ಬಂದ ದಾರಿ ಸರಿಯಾಗಿಲ್ಲ, ಮತ್ತೆ ಮೇಲಕ್ಕೆ ಹೋಗಿ ಚೆಂದವಾದ ರೀತಿಯಲ್ಲಿ ಹರಿದು ಬಾ ಎಂದು ಅಪ್ಪಣೆ ಮಾಡಬಹುದೆ? ಅಪ್ಪಣೆ ಮಾಡಿದರೂ ಅದು ಹಾಗೆ ಆಗುವುದು ಸಾಧ್ಯವೇ? ನದಿ ಎಂದಿಗೂ ಹಿಮ್ಮೊಗವಾಗಿ ಸಾಗಲಾರದು. ಅದೇ ರೀತಿ ಮನುಷ್ಯರ ಜೀವ ಚೈತನ್ಯದ ಪ್ರವಾಹ ಒಂದೇ ಸಮನಾಗಿ ಹರಿದು ಬರುತ್ತಿದೆ. ಅಂದಂದಿನ ಪರಿಸ್ಥಿತಿಗೆ ಸರಿಯಾಗಿ ಸಮಾಜ ವ್ಯವಸ್ಥೆ ನಿರ್ಮಾಣವಾಯಿತು. ನಂತರ ಬದಲಾದ ಸಂದರ್ಭಗಳಿಗೆ ಅನುಗುಣವಾಗಿ ಪರಿ-ವರ್ತನೆಯಾಗುತ್ತ ಬಂದು ಇಂದಿನ ಸ್ಥಿತಿಗೆ ಬಂದು ನಿಂತಿದೆ. ಅದಕ್ಕೆ ಸಾಮಾಜಿಕ ಆರ್ಥಿಕ, ವೈಜ್ಞಾನಿಕ ಬೆಳವಣಿಗೆಗಳು ಕಾರಣ. ಒಮ್ಮೆ ಹೆಪ್ಪಿಟ್ಟ ಹಾಲು ಮತ್ತೆ ಹಾಲಾಗಿ ಉಳಿಯದಂತೆ, ಮಾನವ ಸಮಾಜ ಮಾರ್ಪಡಿಸಲಾಗದ ಗತಿಯನ್ನು ಹಿಡಿದು ಸಾಗಿ ಬಂದಿದೆ. ಅದನ್ನು ಮರಳಿ ಹಿಂತಿರುಗಿಸುವುದು, ಬದಲಾಯಿಸುವುದು ಸಾಧ್ಯವೇ? ಅದು ನದಿಯನ್ನು ಮರಳಿ ಪರ್ವತ ಶಿಖರಕ್ಕೆ ಹೋಗಿ ಮರಳಿ ಬಾ ಎಂದು ಅಜ್ಞಾಪಿಸುವಷ್ಟೇ ಅಸಾಧುವಾದದ್ದು. ಜೀವಗತಿ ಹೀಗೆ ಸಾಗಿ ಬಂದಿದೆಯೆಂದರೆ ಅದೊಂದು ಗೊತ್ತುಗುರಿಯಿಲ್ಲದ ದಾರಿ ಎಂದೇನಲ್ಲ. ಪ್ರಪಂಚ ಬದಲಾವಣೆ ಹೊಂದುತ್ತಿರುವಂತೆ ಜೀವಗತಿಯೂ ನಿಧಾನವಾಗಿ ಆದರೆ ವ್ಯವಸ್ಥಿತವಾಗಿ ಬೆಳೆದು ಬಂದು ವರ್ತಮಾನ ಸ್ಥಿತಿಗೆ ಬಂದು ನಿಂತಿದೆ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ

ಗುರುವಾರ ಮೇ 4, 2023

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯನ ವಸಂತ ಋತು ತಿಥಿ: ವೈಶಾಖ ಶುದ್ಧ ಚತುರ್ದಶಿ ಗಂ. 23-45 ನಕ್ಷತ್ರ: ಚಿತ್ತಾ ಗಂ. 21.35 ಯೋಗ: ವಜ್ರ ಗಂ. 10-36, ಕರಣ: ಗರಜೆ ಗಂ. 11-52, ಮೇಷ ಮಾಸದ 20 ನೇ ದಿನ, ಮಳೆನಕ್ಷತ್ರ: ಭರಣಿ 2, ರಾಹುಕಾಲ : ಮಧ್ಯಾಹ್ನ 01-30 –03-00, ಸೂರ್ಯೋದಯ : 06-12 ಸೂರ್ಯಾಸ್ತ : 06-43
ಮುಸ್ಲಿಂ ದಿನಾಂಕ : 13 ಶವ್ವಾಲ್
ದಿನ ವಿಶೇಷ : ನೃಸಿಂಹ ಚತುರ್ದಶಿ
ಅದೃಷ್ಟ ಸಂಖ್ಯೆ : 3, 9

ಮೇಷ: ಸಂಕಟ ಬಂದಾಗ ವೆಂಕಟರಮಣ ಎನ್ನುವಂತೆ ಇಂದು ಆಪತ್ತು ಉಂಟಾದಾಗ ನಿಮ್ಮ ಹಳೆಯ ಹರಕೆಗಳ ನೆನಪು ಬರಬಹುದು. ಕಟ್ಟಡ ನಿರ್ಮಾಣವನ್ನು ಅನಿವಾರ್ಯ ಕಾರಣಗಳಿಂದ ನಿಲ್ಲಿಸುವಿರಿ.

ವೃಷಭ: ನೆಂಟರಿಷ್ಟರ ಕೊಂಕು ಮಾತುಗಳಿಗೆ ಮುಖ ಬಾಡಬಹುದು. ಮನೆಯಲ್ಲಿನ ಮಂಗಳ ಕಾರ್ಯಕ್ರಮಕ್ಕೆ ಆಪ್ತರ ಸಹಾಯ ನೀವಂದುಕೊಂಡ ಮಟ್ಟಕ್ಕೆ ದೊರೆಯದೆ ಖೇದ ಉಂಟಾದರೂ ಹಠದಿಂದ ಉತ್ತಮವಾಗಿ ಮಾಡುವಿರಿ.

ಮಿಥುನ: ಮುಗ್ಧವಾದ ಮಕ್ಕಳಂತಹ ನಿಮ್ಮ ವರ್ತನೆಯಿಂದಾಗಿ ಇಂದು ಹಲವರಿಗೆ ಸಹಾಯವಾಗುವುದು. ಮನರಂಜನೆಗಾಗಿ ತಮಾಷೆಯ ಮಾತುಗಳ-ನ್ನಾಡುವಾಗ ಕೆಲವು ಗುಪ್ತವಾದ ಸಂಗತಿಗಳು ಬಯಲಾಗಬಹುದು.

ಕರ್ಕಾಟಕ: ಸಂಪೂರ್ಣ ಜ್ಞಾನವನ್ನು ಹೊಂದದೆ ಇಂದು ನೀವು ವಾದಿಸಿದ ವಿಷಯದಲ್ಲಿ ನೀವು ಹಾಸ್ಯಾಸ್ಪದರಾಗಬಹುದು. ಕೆಲವರು ನಡೆಸುತ್ತಿರುವ ಕಾನೂನುಬಾಹಿರ ವಿಚಾರಗಳನ್ನು ಬಯಲು ಮಾಡುವಿರಿ.

ಸಿಂಹ: ಮನೆಯಿಂದ ದೂರ ಇರುವ ಮಕ್ಕಳ ವರ್ತನೆಗಳು ಇಂದು ಪದೇ ಪದೇ ನೆನಪಾಗುತ್ತದೆ. ಹಿಂದಿನ ದಿನದ ವಿಶೇಷ ಕಾರ್ಯಕ್ರಮದಲ್ಲಿ ಮಾಡಿದ ಭೋಜನವು ನಿಮಗೆ ಇಂದು ಅಡ್ಡಪರಿಣಾಮವನ್ನು ತೋರಿಸುವ ಸಾಧ್ಯತೆ ಇದೆ.

ಕನ್ಯಾ: ಪದವಿ ವಿದ್ಯಾರ್ಥಿಗಳ ಅತಿರೇಕದ ವರ್ತನೆ ಹಲವು ಬಾರಿ ಶಿಕ್ಷಕರಿಂದ ಗಮನಿಸಲ್ಪಟ್ಟದ್ದರಿಂದ ಕಠಿಣ ಕ್ರಮವನ್ನು ಕೈಗೊಳ್ಳಬಹುದು. ಆಹಾರ ಪದಾರ್ಥಗಳ ಅದರಲ್ಲೂ ಸಿಹಿ ತಿಂಡಿಗಳ ಉತ್ಪಾದನೆಯಿಂದ ಲಾಭ ಗಳಿಸುವಿರಿ.

ತುಲಾ: ಉತ್ತಮ ರುಚಿಯ ಭೋಜನದ ಹೆಸರಿನಲ್ಲಿ ನಿಮ್ಮ ಆರೋಗ್ಯದ ಮೇಲೆ ದುಷ್ಪರಿಣಾಮವನ್ನು ಬೀರುವ ಆಹಾರವನ್ನು ಸೇವಿಸದಿರಿ. ತಿಂಗಳ ಕೊನೆಯಲ್ಲಿ ಅನುಭವಿಸಿದ ಹಣದ ಕಷ್ಟವನ್ನು ಸಂಪೂರ್ಣವಾಗಿ ನಿವಾರಿಸಿಕೊಳ್ಳುವಿರಿ.

ವೃಶ್ಚಿಕ: ನೀವು ಗಳಿಸಿದ ಸಂಪಾದನೆಯಲ್ಲಿ ತೃಪ್ತಿ ಹೊಂದುವುದು ಅತ್ಯಂತ ಮುಖ್ಯವಾದ ವಿಚಾರವಾಗಿರುತ್ತದೆ. ತಂದೆ ತಾಯಿ ಅಥವಾ ಕುಟುಂಬದ ಹಿರಿಯರ ಆರೋಗ್ಯದ ಬಗ್ಗೆ ತಪಾಸಣೆ ಅಗತ್ಯವೆನಿಸಲಿದೆ.

ಧನು: ವಿವಾಹದ ವಿಚಾರದಲ್ಲಿ ಕೆಲವೊಂದು ವಿಷಯಗಳ ಬಗ್ಗೆ ನಿಷ್ಠೂರವಾದ ತೀರ್ಮಾನವನ್ನು ತೆಗೆದುಕೊಳ್ಳದಿದ್ದರೆ ಮುಂದೆ ಪಶ್ಚಾತಾಪ ಪಡಬೇಕಾದೀತು. ರುಚಿಸದ ವಿಷಯಗಳ ಬಗ್ಗೆ ತಲೆ ಕೆಡಿಸಿಕೊಳ್ಳಲು ಹೋಗದಿರಿ.

ಮಕರ: ಸಂಗೀತ ಕ್ಷೇತ್ರದಲ್ಲಿ ನೀವಂದುಕೊಂಡ ಸಾಧನೆಯನ್ನು ಮಾಡಲಾಗದೆ ಮನಸ್ಸಿನಲ್ಲಿ ದುಃಖವನ್ನು ಅನುಭವಿಸುವಿರಿ. ಜ್ಞಾನ ಸಂಪಾದನಾ ಮಾರ್ಗದಲ್ಲಿ ಉತ್ತಮವಾದ ಗುರುವಿನ ಕೊರತೆಯಿಂದಾಗಿ ವಿಳಂಬವಾಗುವ ಸಾಧ್ಯತೆ ಇದೆ.

ಕುಂಭ: ಸಂಗಾತಿಯ ಮನಸ್ಸಿನ ಮಾತುಗಳನ್ನು ಅರಿತು ಅದನ್ನು ಈಡೇರಿಸುವ ಸಂಕಲ್ಪವನ್ನು ಮಾಡುವಿರಿ. ವಿದ್ವಾಂಸರ ಎದುರು ಉಚಿತವಾದ ಮಾತುಗಳನ್ನು ಆಡಿ ಎಲ್ಲರ ಪ್ರಶಂಸೆಗೆ ಒಳಗಾಗುವಿರಿ. ವಾತ ಸಂಬಂಧಿ ಕಾಯಿಲೆ ಆಗಬಹುದು.

ಮೀನ: ಹಲವು ವಾದ ವಿವಾದಗಳಿಂದಾಗಿ ಸಂಬಂಧದಲ್ಲಿ ಉಂಟಾದ ಒಡಕುಗಳು ಸಮಾಧಾನದ ಮಾತುಗಳಿಂದಾಗಿ ಪರಿಹಾರವಾಗುತ್ತದೆ. ರುದ್ರಾ-ರಾಧನೆಯಿಂದಾಗಿ ಬಯಸಿದ ದ್ರವ್ಯವು ಶೀಘ್ರದಲ್ಲಿ ಪ್ರಾಪ್ತಿಯಾಗುತ್ತದೆ.

ಪದಬಂಧ 5308

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ

1.ಈತ ಶ್ರೇಷ್ಠನಾದ ಕವಿ (4)
3.ನಡುವೆ ವಾರವಿದ್ದಾಗ ಹೋಗಲಾಡಿಸುವುದು (4)
5.ಸವೆತ ಬಂದರೂ ಇದು ನಿರಂತರ! (3)
8.ಇದು ಪ್ರತಿಕೂಲವಾದುದು (3)
10.ಹಾಲಿನಿಂದ ಮಾಡಿದ ಸಿಹಿ ಭಕ್ಷ್ಯ (3)
12.ಗತಿಸಿದ ಪತಿಯೊಡನೆ ಚಿತೆಯೇರುವಿಕೆ (5)
13.ವೃಕ್ಷದ ಬಳಿಯೇ ಸಾವು ಸಾವುಸಂಭವಿಸಿದೆಯಲ್ಲಾ? (3)
15.ಬೈದಾಟಕ್ಕೊಂದು ಪರ್ಯಾಯ ಪದ (3)
17.ನೂಲು ತೆಗೆಯುವ ಯಂತ್ರ (3)
19.ತತ್ವಗಳನ್ನು ಬಲ್ಲವನು (4)
20.ಶಿರದಲ್ಲಿ ಉಂಟಾದ ಬೇನೆ (4)

ಮೇಲಿಂದ ಕೆಳಕ್ಕೆ

2.ಕ್ರೀಡೆ ಅಥವಾ ವಿಹಾರ (3)
3.ನಿರ್ಣಯ ಮಾಡಲ್ಪಟ್ಟದ್ದು (3)
4.ಜಿಪುಣನು ಉಲ್ಟಾ ನಿಂತು ಬಿಟ್ಟಿದ್ದಾನಲ್ಲಾ? (2)
6.ಈತ ಶಿರವನ್ನು ಕಡಿಯುವವನು (5)
7.ಸಂವತ್ಸರದ ಹೆಸರೂ ಆಗಿರುವ ಬೇನೆ (2)
8.ಬಿಡುವು ಈ ರೀತಿ ದೊರೆತಿದೆ (3)
9.ಮಣ ಭಾರದ ಹೆಣವನ್ನು ಹೂಳಿದ ಜಾಗ (3)
10.ಪಾಕದ ನಂತರ ಸೇವಿಸಿದ ಷರಬತ್ತು (3)
11.ಸಿದ್ಧತೆಯನ್ನು ಹೀಗೆನ್ನಿ (3)
14.ಸಾರಥ್ಯ ವಹಿಸಿದ ಮೇಲೆ ಚಲಿಸಿದ ತೇರು (2)
16.ಹೆಜ್ಜೆ ಹೆಜ್ಜೆಗೂ ಇಷ್ಟೊಂದು ನಾಚಿಕೆಯೇ? (2)
17.ಹೆಬ್ಬೆರಳಿನ ಪಕ್ಕದ ಬೆರಳು (3)
18.ಬರೆಯಲ್ಪಟ್ಟದ್ದು ಇದು (3)



5307ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
1.ಪಿತಾಮಹ 3.ಹಸನ್ಮುಖ
5.ರಿಪೇರಿ 6.ಸಂವತ್ಸರ
7.ರಿಯಾಯಿತಿ 9.ತರದೂದು
11.ಸಡಗರ 13.ಚಾಕರ
14.ಜವಾಹಿರಿ 15.ಸದ್ಭಾವನೆ

ಮೇಲಿಂದ ಕೆಳಕ್ಕೆ:
2.ಹರಿಕಾರ 3.ಹರಿದಾರಿ
4.ಖಗ 6.ಸಂಕೇತ
8.ತಿಮಿರ 10.ದುರಾಚಾರಿ
11.ಸಮರಸ 12.ಹುಂಜ

ಸುಡೊಕು 5694

			5		6			7
	9			4			8	6
7		4	9			5		3
	1				5			
		7		9				5
5	2		6		3			
8		1		5			6	
			1		4	8		9
4		9		6			5	1

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

5693 ಸುಡೊಕು

3	7	6	8	4	2	5	1	9
5	1	8	6	3	9	7	4	2
2	9	4	5	7	1	3	6	8
7	8	9	1	2	6	4	5	3
1	2	3	4	9	5	6	8	7
6	4	5	7	8	3	9	2	1
8	3	7	2	6	4	1	9	5
4	5	2	9	1	7	8	3	6
9	6	1	3	5	8	2	7	4

ಷೇರುಪೇಟೆ ವಹಿವಾಟು 161



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	18,147
ಇಂದಿನ ಅಂತ್ಯ	18,089
▼	58
ದಿನದ ಕನಿಷ್ಠ	18,042

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100 ಮೊಟ್ಟೆಗೆ	₹470
12 ಮೊಟ್ಟೆಗೆ	₹62
ಮೈಸೂರು	
100 ಮೊಟ್ಟೆಗೆ	₹475

ಖಾದ್ಯ ತೈಲ ಮುಂಬೈ

(10 ಕೆಜಿಗೆ)	
ಶೇಂಗಾ (ರಿಫೈನ್ಡ್)	₹1620 (1610)
ಸೋಯಾ (ರಿಫೈನ್ಡ್)	₹955 (960)
ಸೂರ್ಯಕಾಂತಿ (ರಿಫೈನ್ಡ್)	₹1000 (1010)
ಪಾಮೋಲಿನ್	₹930 (835)

ಈರುಳ್ಳಿ ಧಾರಣೆ

(ಕ್ವಿಂಟಲ್‌ಗೆ)	
ದಪ್ಪ	₹800-1100
ಮಧ್ಯಮ	₹600-800
ಸಣ್ಣ	₹300-500

ಎನ್.ಆರ್.ಪುರ ರಬ್ಬರ್

ಆರ್‌ಎಸ್‌ಎಸ್-4	₹150.50
ಆರ್‌ಎಸ್‌ಎಸ್-5	₹145.50
ಗುಡ್ ಲಾಟ್	₹133

(ಪ್ರತಿ ಕೆ.ಜಿಗೆ)

ತಿಪಟೂರು ಕೊಬ್ಬರಿ

(ಕ್ವಿಂಟಲ್‌ಗೆ)	
ಕನಿಷ್ಠ	₹8200
ಗರಿಷ್ಠ	₹10001
ಮಾದರಿ	₹9200
ಒಟ್ಟು ಆವಕ	930

ರಾಮನಗರ ರೇಷ್ಮೆಗೂಡು ಧಾರಣೆ

ಮಿಶ್ರತಳಿ (ಸಿ.ಬಿ)	₹232-468
ದ್ವಿತಳಿ (ಬಿ.ವಿ)	₹261-619

ಚಿನ್ನದ ದರ ₹670 ಹೆಚ್ಚಳ

ನವದೆಹಲಿ (ಪಿಟಿಐ): ಇಲ್ಲಿನ ಚಿನಿವಾರ ಪೇಟೆಯಲ್ಲಿ ಬುಧವಾರ ಚಿನ್ನದ ದರ 10 ಗ್ರಾಂಗೆ ₹ 670ರಷ್ಟು ಹೆಚ್ಚಾಗಿ ₹60,750ರಂತೆ ಮಾರಾಟ ಆಯಿತು.

ಜಾಗತಿಕ ಮಾರುಕಟ್ಟೆಯಲ್ಲಿ ಚಿನ್ನದ ದರ ಏರಿಕೆ ಆಗಿರುವುದೇ ಇದಕ್ಕೆ ಕಾರಣ ಎಂದು ಎಚ್‌ಡಿಎಫ್‌ಸಿ ಸೆಕ್ಯುರಿಟೀಸ್ ತಿಳಿಸಿದೆ.

ಬೆಳ್ಳಿ ಧಾರಣೆ ಕೆ.ಜಿಗೆ ₹ 1,150ರಷ್ಟು ಹೆಚ್ಚಾಗಿ ₹ 76,100ಕ್ಕೆ ಏರಿಕೆ ಕಂಡಿತು.

ಸಿಇಒ ಕೌಶಿಕ್ ಖೋನಾ ಸ್ಪಷ್ಟನೆ ● ಕಂಪನಿ ಪುನಶ್ಚೇತನಕ್ಕೆ ಕ್ರಮ ● ಎನ್‌ಸಿಎಲ್‌ಟಿ ಮೆಟ್ಟಿಲೇರಿರುವ ಗೋ ಫಸ್ಟ್

‘ಗೋ ಫಸ್ಟ್ ಉಳಿಸಲು ಎಲ್ಲ ಪ್ರಯತ್ನ’

ಬೆಂಗಳೂರು/ಮುಂಬೈ (ರಾಯಿಟರ್ಸ್/ಪಿಟಿಐ): ಗೋ ಫಸ್ಟ್ ಸಿಬ್ಬಂದಿಯ ಬಗ್ಗೆ ಕಾಳಜಿ ಇಟ್ಟುಕೊಂಡು, ಕಂಪನಿಯನ್ನು ಹಣಕಾಸಿನ ಬಿಕ್ಕಟ್ಟಿನ ಸ್ಥಿತಿಯಿಂದ ಹೊರತರಲು ಸಾಧ್ಯವಿರುವ ಎಲ್ಲವನ್ನೂ ಮಾಡಲಾಗುತ್ತಿದೆ ಎಂದು ಕಂಪನಿಯ ಸಿಇಒ ಕೌಶಿಕ್ ಖೋನಾ ಹೇಳಿದ್ದಾರೆ.

ಕಂಪನಿಯ ಸಿಬ್ಬಂದಿಗೆ ಸಂದೇಶ ರವಾನಿಸಿರುವ ಖೋನಾ, ‘ಪ್ರಾಟ್ ಆ್ಯಂಡ್ ವಿಟ್ನಿ ಕಂಪನಿಯು ಎಂಜಿನ್ ಪೂರೈಸಲು ವಿಫಲವಾದ ಕಾರಣದಿಂದಾಗಿ ವಿಮಾನಯಾನ ಕಂಪನಿಗೆ ಸಮಸ್ಯೆ ಎದುರಾಗಿದೆ’ ಎಂದು ಹೇಳಿದ್ದಾರೆ.

ಗೋ ಫಸ್ಟ್ ಈಗ ಹಣಕಾಸಿನ ಸಂಕಷ್ಟಕ್ಕೆ ಸಿಲುಕಿದ್ದು, 3 ದಿನಗಳ ಮಟ್ಟಿಗೆ ಸೇವೆ ಸ್ಥಗಿತಗೊಳಿಸಿದೆ.

‘ಗೋ ಫಸ್ಟ್’ನ ಮಾಲೀಕತ್ವ ಹೊಂದಿರುವ ವಾಡಿಯಾ ಸಮೂಹಕ್ಕೆ ಕಂಪನಿಯಿಂದ ಹೊರನಡೆಯುವ ಆಲೋಚನೆ ಇಲ್ಲ ಎಂದು ಖೋನಾ ಸ್ಪಷ್ಟಪಡಿಸಿದ್ದಾರೆ. ‘ವಾಡಿಯಾ ಸಮೂಹ, ಅದರಲ್ಲೂ ಮುಖ್ಯವಾಗಿ ನುಸ್ಲಿ ವಾಡಿಯಾ ಅವರು ಕಂಪನಿಯ ಚಟುವಟಿಕೆಗಳು ಮುನ್ನಡೆಯುತ್ತಿರಬೇಕು ಎಂದು ಯಾವಾಗಲೂ ಬಯಸಿದ್ದಾರೆ’ ಎಂದು ಖೋನಾ ಹೇಳಿದ್ದಾರೆ. ಗೋ ಏರ್‌ಲೈನ್ಸ್ ಕಂಪನಿಯು ಈಚೆಗೆ ‘ಗೋ ಫಸ್ಟ್’ ಎಂದು ಬ್ರ್ಯಾಂಡ್ ಬದಲಾಯಿಸಿಕೊಂಡಿದೆ.

ಭಾರತದ ವಿಮಾನಯಾನ ಮಾರುಕಟ್ಟೆಯಲ್ಲಿ 2019ರಲ್ಲಿ ಜೆಟ್ ಏರ್‌ವೇಸ್ ಕಂಪನಿ ಕಾರ್ಯಾಚರಣೆ ಸ್ಥಗಿತಗೊಳಿಸಿದ ನಂತರದಲ್ಲಿ, ಹಣಕಾಸಿನ ಸಂಕಷ್ಟಕ್ಕೆ ಸಿಲುಕಿರುವ ಮತ್ತೊಂದು ಕಂಪನಿ ಗೋ ಫಸ್ಟ್. ಇದು ಮಾರುಕಟ್ಟೆಯಲ್ಲಿನ ತೀವ್ರ ಪೈಪೋಟಿಯನ್ನು ತೋರಿಸುತ್ತಿದೆ.

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಗೆ (ಎನ್‌ಸಿಎಲ್‌ಟಿ) ಸಲ್ಲಿಸಿರುವ ಅರ್ಜಿಯು ಕಂಪನಿಯ ಪುನಶ್ಚೇತನದ ಉದ್ದೇಶವನ್ನು ಹೊಂದಿದೆಯೇ ವಿನಾ, ಕಂಪನಿಯನ್ನು ಮಾರಾಟ ಮಾಡುವ ಇರಾದೆ ಹೊಂದಿಲ್ಲ ಎಂದು ಖೋನಾ ಹೇಳಿದ್ದಾರೆ.

2021ರ ಚಳಿಗಾಲದಲ್ಲಿ ಗೋ ಫಸ್ಟ್ ಕಂಪನಿಯು ಭಾರತದ ಮಾರುಕಟ್ಟೆಯಲ್ಲಿ ಶೇ 10ರಷ್ಟು ಪಾಲು ಹೊಂದಿತ್ತು. ಇದು 2022ರ ಅಕ್ಟೋಬರ್ ವೇಳೆಗೆ ಶೇ 7ಕ್ಕೆ ಕುಸಿಯಿತು.

ಕಂಪನಿಯಲ್ಲಿ ಷೇರು ಪಾಲು ಹೊಂದಲು ಕೆಲವರು ಆಸಕ್ತಿ ತೋರಿದ್ದಾರೆ ಎಂದು ಖೋನಾ ತಿಳಿಸಿದ್ದಾರೆ. ಅಲ್ಲದೆ, ‘ನಾವು ಸೋಲಬಾರದು ಎಂಬುದು ಕೇಂದ್ರ ಸರ್ಕಾರದ ಬಯಕೆಯೂ ಆಗಿದೆ’ ಎಂದಿದ್ದಾರೆ. ಈ ವಿಮಾನಯಾನ ಕಂಪನಿಯು ಒಟ್ಟು ₹ 6,521 ಕೋಟಿ ಸಾಲ ಹೊಂದಿದೆ. ಏಪ್ರಿಲ್ 30ರವರೆಗೆ ಕಂಪನಿಯು ಯಾವುದೇ ಸಾಲದ ಕಂತನ್ನು ಬಾಕಿ ಇರಿಸಿಕೊಂಡಿಲ್ಲ.

ಕಂಪನಿಯು ವಿಮಾನಯಾನ ಸೇವೆ ಸ್ಥಗಿತಗೊಳಿಸಿರುವುದು ಹೆಚ್ಚಿನ ಅವಧಿಗೆ ಮುಂದುವರಿದಲ್ಲಿ, ಪ್ರತಿಸ್ಪರ್ಧಿ ಕಂಪನಿಗಳು ಹೆಚ್ಚಿನ ಮಾರುಕಟ್ಟೆ ಪಾಲು ಹೊಂದಲು ಮುಂದಾಗಬಹುದು ಎಂದು ಜೆಫರಿಸ್ ಸಂಸ್ಥೆಯ ವಿಶ್ಲೇಷಕ ಪ್ರತೀಕ್ ಕುಮಾರ್ ಹೇಳಿದ್ದಾರೆ.

ಸಾಲ ನೀಡಿರುವ ಬ್ಯಾಂಕ್‌ಗಳು

- ಸೆಂಟ್ರಲ್ ಬ್ಯಾಂಕ್ ಆಫ್ ಇಂಡಿಯಾ
- ಬ್ಯಾಂಕ್ ಆಫ್ ಬರೋಡ,
- ಐಡಿಬಿಐ ಬ್ಯಾಂಕ್
- ಡಾಯಿಚ್ ಬ್ಯಾಂಕ್

27 ವಿಮಾನಯಾನ ಕಂಪನಿಗಳಿಗೆ ಬೀಗ

ನವದೆಹಲಿ/ಮುಂಬೈ (ಪಿಟಿಐ): ದೇಶದಲ್ಲಿ ಖಾಸಗಿ ವಿಮಾನಯಾನ ಕಂಪನಿಗಳು ಸೇವೆ ಆರಂಭಿಸಿ ಸರಿಸುಮಾರು ಮೂರು ದಶಕಗಳು ಕಳೆದಿದ್ದು, ಇದುವರೆಗೆ ಒಟ್ಟು 27 ಕಂಪನಿಗಳು ಬಾಗಿಲು ಮುಚ್ಚಿವೆ ಅಥವಾ ಬೇರೆ ಕಂಪನಿಗಳೊಂದಿಗೆ ವಿಲೀನಗೊಂಡಿವೆ.

ಈಗ ವಾಡಿಯಾ ಸಮೂಹದ ಗೋ ಫಸ್ಟ್ ವಿಮಾನಯಾನ ಕಂಪನಿಯು ‘ನಮ್ಮಿಂದ ಹಣಕಾಸಿನ ಹೊಣೆ ನಿಭಾಯಿಸಲು ಆಗುತ್ತಿಲ್ಲ’ ಎಂದು ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿಯ (ಎನ್‌ಸಿಎಲ್‌ಟಿ) ಬಾಗಿಲು ತಟ್ಟಿದೆ.

ದೇಶದಲ್ಲಿ ಬಾಗಿಲು ಮುಚ್ಚಿದ ಮೊದಲ ಖಾಸಗಿ ವಿಮಾನಯಾನ ಕಂಪನಿ ಈಸ್ಟ್‌ವೆಸ್ಟ್ ಟ್ರಾವೆಲ್ಸ್ ಆ್ಯಂಡ್ ಟ್ರೇಡ್ ಲಿಂಕ್ ಲಿಮಿಟೆಡ್. ಇದು ಕಾರ್ಯಾಚರಣೆ ಆರಂಭಿಸಿದ ಎರಡು ವರ್ಷಗಳಲ್ಲಿ ಸ್ಥಗಿತಗೊಂಡಿತು. ಅದೇ ವರ್ಷದಲ್ಲಿ (1996) ಮೋದಿಲುಫ್ತ್ ಲಿಮಿಟೆಡ್ ಕೂಡ ಬಾಗಿಲುಮುಚ್ಚಿತು. ದೇಶದಲ್ಲಿ ಖಾಸಗಿ ವಿಮಾನಯಾನ ಕಂಪನಿಗಳು ಸೇವೆ ಆರಂಭಿಸಿದ್ದು 1994ರಲ್ಲಿ.

ಕಿಂಗ್‌ಫಿಷರ್ ಏರ್‌ಲೈನ್ಸ್ ಕಂಪನಿಯು 2008ರಲ್ಲಿ ಡೆಕ್ಕನ್ ಏವಿಯೇಷನ್ ಪ್ರೈ.ಲಿ. ಕಂಪನಿಯನ್ನು ಸ್ವಾಧೀನಕ್ಕೆ ತೆಗೆದುಕೊಂಡಿತ್ತು.

ಬಾಗಿಲು ಮುಚ್ಚಿದ ಕೆಲವು ಕಂಪನಿಗಳು

- **2022:** ಹೆರಿಟೇಜ್ ಏವಿಯೇಷನ್ ಪ್ರೈ.ಲಿ.
- **2020:** ಜೆಕ್ಸಸ್ ಏರ್ ಸರ್ವಿಸಸ್ ಪ್ರೈ.ಲಿ., ಡೆಕ್ಕನ್ ಚಾರ್ಟರ್ಡ್ ಪ್ರೈ.ಲಿ., ಏರ್ ಒಡಿಶಾ ಏವಿಯೇಷನ್ ಪ್ರೈ.ಲಿ.
- **2019:** ಜೆಟ್ ಏರ್‌ವೇಸ್, ಜೆಟ್ ಲೈಟ್
- **2017:** ಏರ್ ಕಾರ್ನಿವಲ್ ಪ್ರೈ.ಲಿ., ಏರ್ ಪೆಗಾಸಸ್ ಪ್ರೈ.ಲಿ, ರೆಲಿಗೇರ್ ಏವಿಯೇಷನ್ ಲಿ., ಏರ್ ಕೊಸ್ಟಾ, ಕ್ವಿಕ್‌ಜೆಟ್ ಕಾರ್ಗೊ ಪ್ರೈ.ಲಿ.
- **2012:** ಕಿಂಗ್‌ಫಿಷರ್ ಏರ್‌ಲೈನ್ಸ್ ಲಿ.

ಎಂಎಫ್: ಸಣ್ಣ ಹೂಡಿಕೆದಾರರ ಪಾಲು ಶೇ 3ರಷ್ಟು ಇಳಿಕೆ

ನವದೆಹಲಿ (ಪಿಟಿಐ): ಮ್ಯೂಚುವಲ್ ಫಂಡ್‌ಗಳ ಮೂಲಕ ಸಣ್ಣ ಹೂಡಿಕೆದಾರರು ತೊಡಗಿಸುವ ಸರಾಸರಿ ಮೊತ್ತವು 2022–23ರ ಮಾರ್ಚ್ ಅಂತ್ಯಕ್ಕೆ ಶೇಕಡ 3ರಷ್ಟು ಇಳಿಕೆ ಕಂಡಿದ್ದು ₹ 68,321 ಕೋಟಿಯಷ್ಟು ಆಗಿದೆ.

ಸಣ್ಣಹೂಡಿಕೆದಾರರು 2021–22ರ ಮಾರ್ಚ್ ಅಂತ್ಯದಲ್ಲಿ ಮಾಡಿದ್ದ ಸರಾಸರಿ ಹೂಡಿಕೆಯು ₹ 70,199 ಕೋಟಿಯಷ್ಟು ಇತ್ತು ಎಂದು ಭಾರತೀಯ ಮ್ಯೂಚುವಲ್ ಫಂಡ್‌ಗಳ ಒಕ್ಕೂಟವು (ಎಎಂಎಫ್‌ಐ) ಮಾಹಿತಿ ನೀಡಿದೆ.

ಸಾಂಸ್ಥಿಕ ಹೂಡಿಕೆದಾರರ ಸರಾಸರಿ ಹೂಡಿಕೆ ಮೊತ್ತವು ಪ್ರತಿ ಖಾತೆಗೆ ₹ 10.11 ಕೋಟಿಯಷ್ಟು ಆಗಿದೆ. ಯೋಜನಾವಾರು ಸರಾಸರಿ ಹೂಡಿಕೆ ಮೊತ್ತವು ಲಿಕ್ವಿಡ್ ಮತ್ತು ಡೆಟ್ ಯೋಜನೆಗಳಲ್ಲಿ ಹೆಚ್ಚಿಗೆ ಇದೆ.

ಮ್ಯೂಚುವಲ್ ಫಂಡ್ ಹೂಡಿಕೆದಾರರ ವಿವರ

14.57 ಕೋಟಿ
2023ರ ಮಾರ್ಚ್ ಅಂತ್ಯಕ್ಕೆ ಒಟ್ಟು ಹೂಡಿಕೆದಾರರು

13.28 ಕೋಟಿ
ಸಣ್ಣ ಹೂಡಿಕೆದಾರರು

1.19 ಕೋಟಿ, ಸಿರಿವಂತರು

9.82 ಲಕ್ಷ
ಸಾಂಸ್ಥಿಕ ಹೂಡಿಕೆದಾರರು

ಅಜಯ್ ಬಂಗಾ ವಿಶ್ವ ಬ್ಯಾಂಕ್ ಅಧ್ಯಕ್ಷ

ಅಜಯ್ ಬಂಗಾ

ವಾಷಿಂಗ್ಟನ್ (ಪಿಟಿಐ): ಭಾರತ ಮೂಲದ ಅಜಯ್ ಬಂಗಾ ಅವರು ವಿಶ್ವ ಬ್ಯಾಂಕ್‌ನ ಮುಂದಿನ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ. ಅವರು ಜೂನ್ 2ರಿಂದ ಐದು ವರ್ಷಗಳ ಅವಧಿಗೆ ಈ ಹುದ್ದೆಯಲ್ಲಿ ಇರಲಿದ್ದಾರೆ.

ವಿಶ್ವ ಬ್ಯಾಂಕ್ ಅಧ್ಯಕ್ಷ ಸ್ಥಾನಕ್ಕೆ ಬಂಗಾ ಅವರ ಹೆಸರನ್ನು ಸೂಚಿಸುತ್ತಿರುವುದಾಗಿ ಅಮೆರಿಕದ ಅಧ್ಯಕ್ಷ ಜೋ ಬೈಡನ್ ಅವರು ಫೆಬ್ರುವರಿಯಲ್ಲಿ ಪ್ರಕಟಿಸಿದ್ದರು. ಬಂಗಾ ಅವರಿಗೆ ಕೇಂದ್ರ ಸರ್ಕಾರವು 2016ರಲ್ಲಿ ಪದ್ಮಶ್ರೀ ಪ್ರಶಸ್ತಿ ನೀಡಿದೆ.

ಸೇವಾ ಚಟುವಟಿಕೆ 13 ವರ್ಷಗಳ ಗರಿಷ್ಠ

ಒಂದನೇ ಪುಟದಿಂದ...

ಸಿಬ್ಬಂದಿ ಸಂಖ್ಯೆ ಅಲ್ಪ ಏರಿಕೆ: ಹೊಸ ಬೇಡಿಕೆಯಲ್ಲಿ ಗಣನೀಯ ಏರಿಕೆ ಕಂಡುಬರುತ್ತಿದ್ದರೂ ಕಂಪನಿಗಳಲ್ಲಿ ಸಿಬ್ಬಂದಿ ಸಂಖ್ಯೆಯು ಕಡಿಮೆ ಪ್ರಮಾಣದಲ್ಲಿ ಏರಿಕೆ ಕಂಡಿದೆ. ಸದ್ಯದ ಕೆಲಸದ ಅಗತ್ಯಕ್ಕೆ ಸಾಕಾಗುವಷ್ಟು ಕೆಲಸಗಾರರು ಇರುವುದರಿಂದ ಬಹುಪಾಲು ಕಂಪನಿಗಳು ಸಿಬ್ಬಂದಿ ಸಂಖ್ಯೆಯಲ್ಲಿ ಯಾವುದೇ ಬದಲಾವಣೆ ಮಾಡಿಲ್ಲ.

ಸೇವಾ ವಲಯದಲ್ಲಿ ಇರುವ ಒಟ್ಟು ಕಂಪನಿಗಳಲ್ಲಿ ಶೇ 22ರಷ್ಟು ಕಂಪನಿಗಳು ಮುಂದಿನ 12 ತಿಂಗಳಲ್ಲಿ ವಹಿವಾಟಿನಲ್ಲಿ ಬೆಳವಣಿಗೆ ಕಾಣಲಿದೆ ಎಂದು ಹೇಳಿದ್ದರೆ, ಚಟುವಟಿಕೆಯಲ್ಲಿ ಇಳಿಕೆ ಆಗಬಹುದು ಎಂದು ಶೇ 2ರಷ್ಟು ಕಂಪನಿಗಳು ಅಭಿಪ್ರಾಯ ವ್ಯಕ್ತಪಡಿಸಿವೆ.

ಕಂಪೋಸಿಟ್ ಪಿಎಂಐ: ತಯಾರಿಕೆ ಮತ್ತು ಸೇವಾ ವಲಯದ ಒಟ್ಟು ಚಟುವಟಿಕೆಯನ್ನು ತಿಳಿಸುವ ಕಂಪೋಸಿಟ್ ಪಿಎಂಐ ಔಟ್‌ಪುಟ್ ಇಂಡೆಕ್ಸ್ ಮಾರ್ಚ್‌ನಲ್ಲಿ 58.4ರಷ್ಟು ಇದ್ದಿದ್ದು ಏಪ್ರಿಲ್‌ನಲ್ಲಿ 61.6ಕ್ಕೆ ಏರಿಕೆ ಆಗಿದೆ. ಇದು ಸಹ 2010ರ ನಂತರದ ಗರಿಷ್ಠ ಪ್ರಮಾಣದ ಬೆಳವಣಿಗೆಯಾಗಿದೆ.

ವಹಿವಾಟು ಏರಿಕೆ ಕಂಡಿದ್ದರೂ ಉದ್ಯೋಗ ಸೃಷ್ಟಿಯು ಖಾಸಗಿ ವಲಯದಲ್ಲಿ ದುರ್ಬಲವಾಗಿಯೇ ಇದೆ. ಹಣದುಬ್ಬರವು ನಾಲ್ಕು ತಿಂಗಳ ಗರಿಷ್ಠ ಮಟ್ಟಕ್ಕೆ ಏರಿದೆ ಎಂದು ಸಂಸ್ಥೆಯು ತಿಳಿಸಿದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಪುಣ್ಯಸ್ಮರಣೆ

ಶ್ರೀಮತಿ ಶೇಷಮ್ಮ
(ನಿಧನ: 09-08-2010)

ಶ್ರೀ ಜಿ. ನಾರಾಯಣಸ್ವಾಮಿ ರೆಡ್ಡಿ (GNR)
ವಿ.ಪಿ. ಛೇರ್ಮನ್ ಮತ್ತು ಕಂಟ್ರಾಕ್ಟರ್
(ನಿಧನ: 04-05-1989)

ನೀವು ನಮ್ಮ ಜೀವನದಲ್ಲಿ ಮಾರ್ಗದರ್ಶನ ಹಾಗೂ ಸ್ಫೂರ್ತಿ ನೀಡಿದ್ದೀರಿ, ನಿಮ್ಮ ಸರಳತೆ, ಕ್ರಿಯಾಶೀಲತೆ ಹಾಗೂ ಪ್ರೋತ್ಸಾಹ ನಮಗೆ ಎಂದೆಂದಿಗೂ ಹೊಸ ಚೈತನ್ಯ ನೀಡುತ್ತದೆ. ನಿಮ್ಮ ಆತ್ಮಕ್ಕೆ ಭಗವಂತನಲ್ಲಿ ಚಿರಶಾಂತಿಯನ್ನು ಕೋರುತ್ತಾ ಸದಾ ನಿಮ್ಮ ಸವಿನೆನಪಿನಲ್ಲಿರುವ...

ಮಕ್ಕಳು, ಸೊಸೆಯಂದಿರು, ಮೊಮ್ಮಕ್ಕಳು, ಮರಿಮಕ್ಕಳು ಹಾಗೂ ಅಪಾರ ಬಂಧು-ಮಿತ್ರರು, ಬೆಂಗಳೂರು.

ದೇಶದಾದ್ಯಂತ ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ	
ಸಕಲೇಶಪುರ	
ಕೂಳೆ	300-350
ನಡುಗೋಲು	450-500
ರಾಶಿ	500-550
ರಾಶಿ ಉತ್ತಮ	750-800
ಜರಡಿ	1000 - 1050
ಹೆರಕಿದ್ದು	1200-1300
ಹಸಿರು ಸಾಧಾರಣ	800-900
ಹಸಿರು ಉತ್ತಮ	1000-1100
ಹಸಿರು ಅತಿ ಉತ್ತಮ	1600-1650
ಕಾಳು ಮೆಣಸು	470
ಅಡಿಕೆ	
ಬಂಟ್ವಾಳ	
ಕೋಕ	12500-25000
ಹೊಸತು	27500-40000
ಹಳತು	48000-53000
ಕಾರ್ಕಳ	
ಹೊಸತು	30000-39500
ಹಳತು	40000-53000
ಕುಮಟಾ	
ಚಿಪ್ಪು	27690-31799
ಕೋಕ	20009-30790
ಫ್ಯಾಕ್ಟರಿ	12600-21311
ಹಳೆಚಾಲಿ	35001-38109
ಹೊಸಚಾಲಿ	36000-39000
ಶಿವಮೊಗ್ಗ	
ಬೆಟ್ಟೆ	48509-53010
ಗೊರಬಲು	16669-35069
ರಾಶಿ	33369-48759
ಸರಕು	51109-80916
ಶಿರಸಿ	
ಬೆಟ್ಟೆ	35699-41699
ಬಿಳಿಗೋಟು	24000-32399
ಚಾಲಿ	33291-36709
ಕೆಂಪುಗೋಟು	33989-33989
ರಾಶಿ	40589-45298

ಕಾಫಿ (50 ಕೆ.ಜಿಗೆ ₹ ಗಳಲ್ಲಿ)

ಮೂಡಿಗೆರೆ	ಹಾಸನ			
	ಮುದ್ರೆಮನೆ	ಪ್ಲಾಂಟರ್ಸ್	ಅಲ್ಲಾನಾ	ನ್ಯೂಯಾರ್ಕ್
ಎಪಿ	15250	15400	15375	186.80 ಸೆಂಟ್ಸ್
ಎಸಿ	7980	7600	7700	
ಆರ್‌ಪಿ	10500	10650	10400	ಲಂಡನ್
ಆರ್‌ಸಿ	5830	228 on OT	5650	2424 ಡಾಲರ್ಸ್

ಅದಾನಿ ವಿಲ್ಮರ್ ಲಾಭ ಶೇ 60ರಷ್ಟು ಕುಸಿತ

ನವದೆಹಲಿ (ಪಿಟಿಐ): ಫಾರ್ಚೂನ್ ಬ್ರ್ಯಾಂಡ್ ಅಡಿಯಲ್ಲಿ ಅಡುಗೆ ಎಣ್ಣೆ ಮಾರಾಟ ಮಾಡುವ ಅದಾನಿ ವಿಲ್ಮರ್‌ನ ನಿವ್ವಳ ಲಾಭವು 2023ರ ಮಾರ್ಚ್‌ಗೆ ಕೊನೆಗೊಂಡ ತ್ರೈಮಾಸಿಕದಲ್ಲಿ ಶೇಕಡ 60ರಷ್ಟು ಇಳಿಕೆ ಕಂಡು ₹ 93.61 ಕೋಟಿಗೆ ತಲುಪಿದೆ.

ಅಡುಗೆ ಎಣ್ಣೆ ದರ ಇಳಿಕೆ ಆಗಿರುವುದರಿಂದ ವರಮಾನವು ಕಡಿಮೆ ಆಗಿದ್ದು, ನಿವ್ವಳ ಲಾಭದ ಮೇಲೆ ಪ್ರತಿಕೂಲ ಪರಿಣಾಮ ಉಂಟಾಗಿದೆ ಎಂದು ಕಂಪನಿ ಹೇಳಿದೆ. 2022ರ ಮಾರ್ಚ್ ತ್ರೈಮಾಸಿಕದಲ್ಲಿ ನಿವ್ವಳ ಲಾಭ ₹ 234 ಕೋಟಿಯಷ್ಟು ಇತ್ತು.

ಮುಂಬೈ ಧಾರಣೆ

ಶೇಂಗಾ

3-5-2023

ಜಾವಾ 70/80(ಹೊಸ)	11350-11400
ಜಾವಾ 80/90(ಹೊಸ)	10950-11000
ದಪ್ಪ ಮಧ್ಯಪ್ರದೇಶ(ಹೊಸ)	11100-11200
ದಪ್ಪ ಗುಜರಾತ್(ಹೊಸ)	12000-12100

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1630 (1620)
ಒಂದು ವಾರದ ಡೆಲಿವರಿ	1625 (1615)
ಸೋಯಾ ಕಚ್ಚಾ	870 (860)
ಪಾಮ್ ವಾರದ ಡೆಲಿವರಿ	928 (933)
ಸೂರ್ಯಕಾಂತಿ ಎಣ್ಣೆ ಕಚ್ಚಾ	890 (880)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ 60,850 (60,100)

ಬೆಳ್ಳಿ ಕೆ.ಜಿ. 75,300 (74,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಪುಟಿನ್ ಹತ್ಯೆಗೆ ಉಕ್ರೇನ್ ಸಂಚು: ರಷ್ಯಾ ಆರೋಪ

ಕ್ರೆಮ್ಲಿನ್ ಮೇಲೆ ಉಕ್ರೇನ್ ಡ್ರೋನ್ ದಾಳಿ ವಿಫಲ

ಮಾಸ್ಕೊ (ಎಪಿ): ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರ ಹತ್ಯೆಗೈಯಲು ಉದ್ದೇಶಿಸಿದ್ದ ಉಕ್ರೇನ್, ಎರಡು ಡ್ರೋನ್‌ಗಳನ್ನು ಬಳಸಿ ರಾಜಧಾನಿ ಮಾಸ್ಕೊದ ಕ್ರೆಮ್ಲಿನ್ (ರಷ್ಯಾ ಅಧ್ಯಕ್ಷರ ಅಧಿಕೃತ ನಿವಾಸವಿರುವ ಅರಮನೆಗಳ ಸಮುಚ್ಚಯ) ಮೇಲೆ ದಾಳಿ ನಡೆಸಲು ತಡರಾತ್ರಿ ಪ್ರಯತ್ನಿಸಿದೆ ಎಂದು ರಷ್ಯಾ ಬುಧವಾರ ಆರೋಪಿಸಿದೆ.

ಡ್ರೋನ್‌ಗಳು ದಾಳಿ ಮಾಡುವ ಮೊದಲೇ ಅವುಗಳನ್ನು ರಷ್ಯಾ ಸೇನೆ ನಿಷ್ಕ್ರಿಯಗೊಳಿಸಿದೆ. ದಾಳಿಯಲ್ಲಿ ಯಾವುದೇ ಸಾವುನೋವು ಸಂಭವಿಸಿಲ್ಲ. ಅಧ್ಯಕ್ಷ ಪುಟಿನ್ ಕ್ಷೇಮದಿಂದಿದ್ದಾರೆ. ಈಗಾಗಲೇ ನಿಗದಿಯಾಗಿರುವ ಅವರ ಕೆಲಸಗಳಲ್ಲಿ ಯಾವುದೇ ಬದಲಾವಣೆ ಇಲ್ಲ ಎಂದು ರಷ್ಯಾದ ಸರ್ಕಾರಿ ಸ್ವಾಮ್ಯದ ಸುದ್ದಿಪತ್ರಿಕೆ ವರದಿ ಮಾಡಿದೆ.

ಕ್ರೆಮ್ಲಿನ್‌ನ ಅಧಿಕೃತ ವೆಬ್‌ಸೈಟ್‌ನಲ್ಲೂ ಈ ಕುರಿತು ಮಾಹಿತಿ ನೀಡಲಾಗಿದೆ. ಡ್ರೋನ್‌ನ ಅವಶೇಷಗಳು ಕ್ರೆಮ್ಲಿನ್ ಆವರಣದಲ್ಲಿ ಬಿದ್ದಿವೆ. ಇವುಗಳಿಂದ ಯಾವುದೇ ಹಾನಿ ಸಂಭವಿಸಿಲ್ಲ ಎಂದು ಹೇಳಲಾಗಿದೆ.

ಅಲ್ಲಿಯ ಸ್ಥಳೀಯ ಕಾಲಮಾನದ ಪ್ರಕಾರ ನಸುಕಿನ ಜಾವ ಸುಮಾರು 2.30ರಲ್ಲಿ ಭಾರಿ ಸದ್ದು ಕೇಳಿರುವುದಾಗಿ ಮತ್ತು ಹೊಗೆ ಕಂಡುಬಂದಿದ್ದಾಗಿ ಹತ್ತಿರದ ವಸತಿ ಸಮುಚ್ಚಯದ ನಿವಾಸಿಗಳು ಹೇಳಿರುವುದಾಗಿ ವೆಬ್‌ಸೈಟ್‌ನಲ್ಲಿ ಮಾಹಿತಿ ನೀಡಲಾಗಿದೆ. ಆದರೆ, ಡ್ರೋನ್ ಕೆಳಗೆ ಬೀಳಲು ನಿರ್ದಿಷ್ಟ ಕಾರಣವನ್ನು ನೀಡಲಾಗಿಲ್ಲ.

ಮೇ 9ರಂದು ನಡೆಯಲಿರುವ ವಾರ್ಷಿಕ ‘ವಿಜಯ ದಿನ’ಕ್ಕಾಗಿ ಸಿದ್ಧತೆ ನಡೆಸುವ ವೇಳೆಯೇ ಉಕ್ರೇನ್ ಈ ಪ್ರಯತ್ನ ನಡೆಸಿದೆ. ಈ ದಾಳಿಯನ್ನು ಯೋಜಿತ ಭಯೋತ್ಪಾದಕ ಕೃತ್ಯ ಎಂದೇ ನಾವು ಪರಿಗಣಿಸುತ್ತೇವೆ. ಪುಟಿನ್ ಅವರನ್ನು ಹತ್ಯೆಗೈಯಲೆಂದೇ ಈ ಪ್ರಯತ್ನ ನಡೆಸಲಾಗಿದೆ ಎಂದು ಕ್ರೆಮ್ಲಿನ್ ಹೇಳಿದೆ. ಆದರೆ ಈ ದಾಳಿ ಕುರಿತ ಆರೋಪವನ್ನು ಸಾಬೀತುಪಡಿಸುವಂಥ ಯಾವುದೇ ಆಧಾರವನ್ನೂ ಕ್ರೆಮ್ಲಿನ್ ನೀಡಿಲ್ಲ.

ಆರೋಪ ತಳ್ಳಿಹಾಕಿದ ಉಕ್ರೇನ್: ಈ ಆರೋಪದ ಕುರಿತು ಉಕ್ರೇನ್ ಉಕ್ರೇನ್ ಅಧ್ಯಕ್ಷರ ಸಲಹೆಗಾರ ಮೈಖೈಲೊ ಪೊಡೊಲ್ಯಾಕ್ ಪ್ರತಿಕ್ರಿಯೆ ನೀಡಿದ್ದಾರೆ. ‘ಕ್ರೆಮ್ಲಿನ್ ಮೇಲೆ ದಾಳಿ ನಡೆಸುವ ಪ್ರಯತ್ನವನ್ನು ನಾವು ಮಾಡಿಲ್ಲ. ಏಕೆಂದರೆ, ಈ ರೀತಿಯ ದಾಳಿಗಳಿಂದ ಸೇನಾ ಸಮಸ್ಯೆಗಳಿಗೆ ಪರಿಹಾರ ದೊರಕುವುದಿಲ್ಲ. ಜೊತೆಗೆ, ಉಪೇಕ್ಷೆ ಮಾಡುವ ಮೂಲಕ ಸದ್ಯದ ಪರಿಸ್ಥಿತಿಯನ್ನು ತಿಳಿಗೊಳಿಸುವ ನಿಟ್ಟಿನಲ್ಲಿ ನಾವು ಸಿದ್ಧತೆ ನಡೆಸುತ್ತಿದ್ದೇವೆ. ಈ ರೀತಿಯ ದಾಳಿಯಿಂದ ನಮಗೆ ಅನಾನುಕೂಲವೇ ಹೆಚ್ಚು ಎಂದು ನಮಗೆ ತಿಳಿದಿದೆ’ ಎಂದು ಹೇಳಿದ್ದಾರೆ.

‘ಎಲ್ಲದಕ್ಕಿಂತ ಹೆಚ್ಚಾಗಿ ಈ ರೀತಿಯ ದಾಳಿಗಳು ಉಕ್ರೇನ್ ಮೇಲೆ ನಡೆಸಿರುವ ಭಾರಿ ಪ್ರಮಾಣದ ದಾಳಿಗಳನ್ನು ಸಮರ್ಥಿಸಿಕೊಳ್ಳಲು ರಷ್ಯಾಗೆ ಅವಕಾಶ ನೀಡಲಿವೆ. ಇದಕ್ಕೆ ನಾವೇ ಏಕೆ ಅವಕಾಶ ನೀಡುತ್ತೇವೆ’ ಎಂದು ಪ್ರಶ್ನಿಸಿದ್ದಾರೆ.

ಪುಟಿನ್ ಮೇಲೆ ಆರು ಬಾರಿ ದಾಳಿ

ರಷ್ಯಾ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರನ್ನು ಗುರಿಯಾಗಿಸಿಕೊಂಡು ದಾಳಿ ನಡೆದಿರುವುದು ಇದೇ ಮೊದಲಲ್ಲ. ಇದಕ್ಕೂ ಮೊದಲು ಪುಟಿನ್ ಹತ್ಯೆಗಾಗಿ ಐದು ಬಾರಿ ದಾಳಿ ಪ್ರಯತ್ನಗಳು ನಡೆದಿವೆ ಎಂದು ರಷ್ಯಾ ಹೇಳಿದೆ ಎನ್‌ಡಿಟಿವಿ ವರದಿ ಮಾಡಿದೆ.

ಕಳೆದ ಐದು ದಾಳಿಗಳಲ್ಲಿ ಎರಡು ದಾಳಿಗಳನ್ನು ಉಕ್ರೇನ್ ನಡೆಸಿದೆ. ಬ್ರಿಟನ್ ಭಯೋತ್ಪಾದನೆ ನಿಗ್ರಹ ಪೊಲೀಸರು, ಇರಾಕ್‌ನ ವ್ಯಕ್ತಿ ಮತ್ತು ಅಫ್ಗಾನಿಸ್ತಾನದ ವ್ಯಕ್ತಿಯಿಂದ ಪುಟಿನ್ ಹತ್ಯೆ ಪ್ರಯತ್ನಗಳು ಈ ಹಿಂದೆ ನಡೆದಿವೆ ಎನ್ನಲಾಗಿದೆ.

ಹಿಮಾಲಯ ಮೂಲಿಕೆ ಹುಡುಕಲು ತೆರಳಿದ್ದ ಮೂವರ ಮೃತದೇಹ ಪತ್ತೆ

ಕಠ್ಮಂಡು (ಪಿಟಿಐ): ದೇಹಕ್ಕೆ ಚೈತನ್ಯ ನೀಡುವ ಹಿಮಾಲಯನ್ ಮೂಲಿಕೆ ಹುಡುಕಲು ತೆರಳಿದ್ದ ವೇಳೆ ಹಿಮಪಾತ ಸಂಭವಿಸಿ ನಾಪತ್ತೆಯಾಗಿದ್ದ ಆರು ಮಂದಿಯಲ್ಲಿ ಮೂವರ ದೇಹ ಪತ್ತೆಯಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಇಬ್ಬರು ಮಹಿಳೆಯರು ಹಾಗೂ ಒಬ್ಬ ಪುರುಷನ ದೇಹ ಪತ್ತೆಯಾಗಿದೆ. ಇವರು ಕಾಣೆಯಾಗಿದ್ದ ಸ್ಥಳದಿಂದ ಒಂದೂವರೆ ಕಿ.ಮೀ. ಕೆಳಗೆ ಹಿಮದ ಹೊರಗೆ ದೇಹ ಪತ್ತೆಯಾಗಿದೆ. ಉಳಿದವರಿಗಾಗಿ ಶೋಧ ಮುಂದುವರಿದಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಈಶ್ವರಿದತ್ತ ಭಟ್ ಅವರು ತಿಳಿಸಿರುವುದಾಗಿ ಮೈರಿಪಬ್ಲಿಕಾ ಪತ್ರಿಕೆ ವರದಿ ಮಾಡಿದೆ.

‘ಯಾರ್ಸಗುಂಬಾ’ ಅರ್ಧ ಮೂಲಿಕೆ ಮತ್ತು ಅರ್ಧ ಕೀಟವಾಗಿದ್ದು, ಇದು ಚೈತನ್ಯ ಮತ್ತು ಲೈಂಗಿಕ ಶಕ್ತಿ ಹೆಚ್ಚಿಸುವ ಶಕ್ತಿ ಹೊಂದಿದೆ ಎಂದು ನಂಬಲಾಗಿದೆ. ಕಂಬಳಿಹುಳು ಶಿಲೀಂಧ್ರ ಎಂದೂ ಕರೆಯಲ್ಪಡುವ ಈ ಗಿಡಮೂಲಿಕೆ ಎತ್ತರದ ಹಿಮಾಲಯದಲ್ಲಿ ಕಂಡುಬರುತ್ತದೆ.

ದಾರ್ಚುಲಾ ಜಿಲ್ಲೆಯ ಪರ್ವತ ಪ್ರದೇಶದಲ್ಲಿ ಮಂಗಳವಾರ ಹಿಮಪಾತ ಸಂಭವಿಸಿದ್ದು, ಮೂಲಿಕೆ ಸಂಗ್ರಹಿಸಲು ಟೆಂಟ್ ಹಾಕಿದ್ದ 12 ಮಂದಿ ಹೂತು ಹೋಗಿದ್ದರು. ಇದರಲ್ಲಿ ಏಳು ಮಂದಿಯನ್ನು ಭದ್ರತಾ ಸಿಬ್ಬಂದಿ ಮತ್ತು ಸ್ಥಳೀಯರ ಸಹಾಯದಿಂದ ಜೀವಂತವಾಗಿ ರಕ್ಷಿಸಲಾಗಿದೆ.

ಘಟನಾ ಸ್ಥಳಕ್ಕೆ 25 ಭದ್ರತಾ ಸಿಬ್ಬಂದಿಯ ತಂಡ ತೆರಳಿದೆ ಎಂದು ಉಪ ಪೊಲೀಸ್ ವರಿಷ್ಠಾಧಿಕಾರಿ ಇಸ್ವೊರಿ ದತ್ತಾ ಭಟ್ಟ ಅವರನ್ನು ಉಲ್ಲೇಖಿಸಿ ಹಿಮಾಲಯನ್ ಟೈಮ್ಸ್ ಪತ್ರಿಕೆ ವರದಿ ಮಾಡಿದೆ.

ಮತ್ತೊಂದು ಪ್ರಕರಣದಲ್ಲಿ, ಬಾಜ್‌ಹಂಗ್ ಜಿಲ್ಲೆಯಲ್ಲಿ ಇದೇ ಮೂಲಿಕೆಯ ಶೋಧದಲ್ಲಿ ತೊಡಗಿದ್ದ ಮಹಿಳೆಯೊಬ್ಬರು ಹಿಮಕುಸಿತದ ಕಾರಣ ಕೊಚ್ಚಿಹೋಗಿದ್ದಾರೆ ಎಂದು ಪೊಲೀಸರು ತಿಳಿಸಿದ್ದಾರೆ.

‘ಯಾರ್ಸಗುಂಬಾ’ ನೇಪಾಳದ ಮಾರುಕಟ್ಟೆಯಲ್ಲಿ ಪ್ರತಿ ಕೆ.ಜಿ.ಗೆ ಕನಿಷ್ಠ ₹ 50,000 ಬೆಲೆ ಹೊಂದಿದೆ ಮತ್ತು ಅಂತರರಾಷ್ಟ್ರೀಯ ಮಾರುಕಟ್ಟೆಯಲ್ಲಿ ಹೆಚ್ಚಿನ ಬೇಡಿಕೆ ಹೊಂದಿದೆ.

ಸಂಕ್ಷಿಪ್ತ ಸುದ್ದಿ

ಪಾಕ್‌ನಲ್ಲಿ ಒಂದೇ ದಿನ ಚುನಾವಣೆಗೆ ಒಪ್ಪಿಗೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಆಡಳಿತಾರೂಢ ಸಮ್ಮಿಶ್ರ ಸರ್ಕಾರ ಮತ್ತು ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರ ಪಾಕಿಸ್ತಾನ ತೆಹ್ರೀಕ್ ಎ–ಇನ್ಸಾಫ್ (ಪಿಟಿಐ) ಪಕ್ಷವು ದೇಶದಾದ್ಯಂತ ಒಂದೇ ದಿನ ಸಾರ್ವತ್ರಿಕ ಚುನಾವಣೆಗಳನ್ನು ನಡೆಸಲು ಸಮ್ಮತಿ ಸೂಚಿಸಿವೆ. ಆದರೆ ದಿನಾಂಕದ ಬಗ್ಗೆ ಉಭಯ ತಂಡಗಳು ಒಮ್ಮತಕ್ಕೆ ಬಂದಿಲ್ಲ. ಚುನಾವಣೆ ವಿಚಾರವಾಗಿ ಹಲವು ತಿಂಗಳಿನಿಂದ ನಡೆಯುತ್ತಿದ್ದ ರಾಜಕೀಯ ಬಿಕ್ಕಟ್ಟು ಮಂಗಳವಾರ ತಡರಾತ್ರಿ ನಡೆದ ಮೂರನೇ ಸುತ್ತಿನ ಮಾತುಕತೆಯಲ್ಲಿ ಇತ್ಯರ್ಥವಾಗಿದೆ.

ಇಮ್ರಾನ್ ಖಾನ್‌ಗೆ ಜಾಮೀನು ರದ್ದು ಎಚ್ಚರಿಕೆ

ಇಸ್ಲಾಮಾಬಾದ್ (ಪಿಟಿಐ): ಪಾಕಿಸ್ತಾನದ ಮಾಜಿ ಪ್ರಧಾನಿ ಇಮ್ರಾನ್ ಖಾನ್ ಅವರು ಹಲವು ಪ್ರಕರಣಗಳಲ್ಲಿ ನ್ಯಾಯಾಲಯದ ವಿಚಾರಣೆಗೆ ಸತತವಾಗಿ ಗೈರಾಗುತ್ತಿರುವುದಕ್ಕೆ ಇಲ್ಲಿನ ಹೈಕೋರ್ಟ್ ಅಸಮಾಧಾನದ ವ್ಯಕ್ತಪಡಿಸಿದೆ. ಇದು ಹೀಗೆಯೇ ಮುಂದುವರಿದರೆ ಖಾನ್ ಅವರ ಮಧ್ಯಂತರ ಜಾಮೀನನ್ನು ರದ್ದುಗೊಳಿಸಲಾಗುವುದು ಎಂದು ಬುಧವಾರ ಎಚ್ಚರಿಕೆ ನೀಡಿದೆ ಎಂದು ಮಾಧ್ಯಮವೊಂದು ವರದಿ ಮಾಡಿದೆ.

ಶನಿವಾರ 3ನೇ ಚಾರ್ಲ್ಸ್ ಪಟ್ಟಾಭಿಷೇಕ

ಲಂಡನ್ (ಎಪಿ): ಬ್ರಿಟನ್ ರಾಜ 3ನೇ ಚಾರ್ಲ್ಸ್ ಅವರ ಪಟ್ಟಾಭಿಷೇಕ ಇದೇ ಶನಿವಾರ ನಡೆಯಲಿದೆ. ಭದ್ರತೆಗಾಗಿ ಸ್ಕಾಟ್ಲೆಂಡ್ ಯಾರ್ಡ್ 29,000 ಪೊಲೀಸ್ ಅಧಿಕಾರಿಗಳನ್ನು ನೇಮಕ ಮಾಡಲಿದೆ.

70 ವರ್ಷಗಳಲ್ಲೇ ಅತ್ಯಂತ ಅದ್ದೂರಿಯಾಗಿ ನಡೆಯಲಿರುವ ಸೇನಾ ಮೆರವಣಿಗೆಗೆ ಬ್ರಿಟನ್ ಸೇನೆ ಸಿದ್ಧವಾಗುತ್ತಿದೆ. ರಾಜನ ಮೆರವಣಿಗೆಗೆ ಚಿನ್ನದ ಸಾರೋಟು ಕೂಡಾ ಸಿದ್ಧವಾಗಿದೆ.

ಪ್ರಜಾವಾಣಿ **ಕ್ಲಾಸಿಫೈಡ್ಸ್** ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಉದ್ಯೋಗಾವಕಾಶ

Wanted

ತಕ್ಷಣ ಬೇಕಾಗಿದ್ದಾರೆ. ಬೆಂಗಳೂರಿನಲ್ಲಿ M.R.S.ಕಂಪನಿಗೆ ಆಫೀಸ್ ಕೆಲಸಕ್ಕೆ ಮಹಿಳೆಯರು PUC,BA,BCom,BSc, BBM, MA, M.Com, MSc, G.N.M., A.N.M, BSc/MSc Nursing ಆಗಿರುವಂತಹ ಮಹಿಳೆಯರು ತಕ್ಷಣ ಬೇಕಾಗಿದ್ದಾರೆ. ಅನುಭವ ಇರಬಹುದು ಅಥವಾ ಇಲ್ಲದಿರಬಹುದು, ಉಚಿತ ಊಟ-ವಸತಿ ಸಂಬಳ 15,000 ರಿಂದ 17,000/- ಬೆಂಗಳೂರು-56 ತಕ್ಷಣ ಸಂಪರ್ಕಿಸಿ: 7349463892, 8904463086

General

✓ ಕರ್ನಾಟಕದಾದ್ಯಂತ MNC ಕಂಪನಿಗಳಿಗೆ SSLC ಮೇಲ್ಪಟ್ಟು 1986 ಯುವಕರು, ಯುವತಿಯರು ಬೇಕಾಗಿದ್ದಾರೆ. ವಸತಿಯೂಟವಿರುತ್ತದೆ. ಸಂಬಳ 16,000- 80,000. 7760014526, 7795199673

Part-Time Jobs

✓ ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ,15,000-20,000/ ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ.8884777502, 8884777503.

Hotel

ಪುರುಷ ಸಹಾಯಕರು ಬೇಕಾಗಿದ್ದಾರೆ ರಾಮನಗರ ಬಳಿಯಿರುವ ರೆಸಾರ್ಟ್‌ನಲ್ಲಿ ಕೆಲಸ ಮಾಡಲು, ಊಟ, ವಸತಿಯೊಂದಿಗೆ ಆಕರ್ಷಕ ಸಂಬಳ. ಸಂಪರ್ಕಿಸಿ: 9945935638/ 9738386489

ಭವಿಷ್ಯ

Astrology

ಒಂದೇ ಕರೆಯಲ್ಲಿ ಶಾಶ್ವತಪರಿಹಾರ ಸ್ತ್ರೀಪುರುಷ ವಶೀಕರಣಸ್ಪೆಷಲಿಸ್ಟ್ 100% ಗ್ಯಾರಂಟಿ ಪರಿಹಾರ ಪಂಡಿತ್. ಕೃಷ್ಣಪ್ರಸಾದ್. ಉಚಿತ ಭವಿಷ್ಯ ಖಚಿತ ಪರಿಹಾರ, ದಕ್ಷಿಣಕನ್ನಡ ಮಾಂತ್ರಿಕರು ಶ್ರೀಕ್ಷೇತ್ರಧರ್ಮಸ್ಥಳ: 9900510171

ರಿಯಲ್ ಎಸ್ಟೇಟ್ ಸೆಲ್ಲಿಂಗ್

House

J P Nagar

“NEW DUPLEX House for Sale Near police booth, J P Nagar 2nd stage, Mysore No Brokerage. Direct Contact only: 9036285627,9886835337”

ಪ್ರವಾಸ

Travel

ತತ್ವಮಸಿ ಟೂರ್ಸ್ 22.05.2023 ರಿಂದ 12 ದಿನಗಳ ಚಾರ್‌ಧಾಮ್‌ಯಾತ್ರೆ. 07.07.2023 ರಿಂದ 6 ದಿನಗಳ ಅಮರನಾಥಯಾತ್ರೆ ಸಂಪರ್ಕಿಸಿ: 7795787484 9480158233

"ಶ್ರೇಯಸ್‌ಟೂರ್ಸ್: 15.05.2023 13/06/21ದಿನಗಳು ಈಶಾನ್ಯ ರಾಜ್ಯಗಳ (ಸೆವೆನ್‌ಸಿಸ್ಟರ್ಸ್ ಪ್ರವಾಸ) ಅಸ್ಸಾಂ,ಅರುಣಾಚಲ, ಮೇಘಾಲಯ,ಮಣಿಪುರ ತ್ರಿಪುರ,ನಾಗಲ್ಯಾಂಡ್, ಮಿಝೋರಾಂ.22.05.2023 10ದಿನಗಳು 6ವಿಮಾನಗಳಲ್ಲಿ ಸಂಪೂರ್ಣ ನೇಪಾಳರಾಷ್ಟ್ರ ಪ್ರವಾಸ ಕಠ್ಮಂಡು ಪೋಕ್ರಾ ಮುಕ್ತಿನಾಥ ಮನಕಾಮನ,ಜನಕಪುರಿ, ಚಿತ್ವಾನ್ 10.07.2023 04/10ದಿನಗಳು ಅಮರನಾಥಯಾತ್ರಾ ವಿಶೇಷ ಲೇ ಲಡಾಖ್ ಶ್ರೀನಗರ ಕಾರ್ಗಿಲ್. 8073824856/ 6366322639/ 9206979202"

ವಿಮಾನ/2X2 ACಬಸ್ಸಿನಲ್ಲಿ 6.7.2023ರಿಂದ 14ದಿನಗಳ ಅಮರನಾಥ್ ಯಾತ್ರೆ, ದೆಹಲಿ, ಶ್ರೀನಗರ, ಕಾಂಗ್ಡಾದೇವಿ, ಅಮೃತಸರ್ ಇತ್ಯಾದಿ. 2.9.2023ರಿಂದ 13 ದಿನಗಳ ಕಾಶಿ, ಅಲಹಾಬಾದ್, ಅಯೋಧ್ಯ, ನೇಪಾಳ್ ಮುಕ್ತಿನಾಥ್ ಇತ್ಯಾದಿ. ಜೈರಾಮ್ ಟೂರ್ಸ್, ವಿವಿಪುರಂ, ಬೆಂಗಳೂರು-4, 9342514289, 9686721196

1.6.2023 ದೆಹಲಿ,ವೈಷ್ಣೋದೇವಿ, ಅಮೃತ್‌ಸರ್, ಹರಿದ್ವಾರ, ಅಯೋಧ್ಯಾ,ಕಾಶಿ 11.6.2023 ಯಮುನೋತ್ರಿ,ಗಂಗೋತ್ರಿ, ಕೇದಾರನಾಥ್, ಬದ್ರಿನಾಥ್. 12.6.2023 ಚಿತ್ರಕೂಟ, ನೈಮಿಶರಣ್ಯ, ಅಯೋಧ್ಯಾ,ಕಾಶಿ 29-6-2023 ಅಮರನಾಥ್ ಯಾತ್ರಾ ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

13ದಿನಗಳ ಜೈಪುರ, ಆಗ್ರಾ,ಮಥುರ,ಅಮೃತಸರ,ಕಟ್ರಾ, ಚಾಮುಂಡಾ,ಮನಾಲಿ,ಚಂಡಿಘಡ್ ,ದೆಹಲಿ. 13ದಿನಗಳ ಚಾರ್ ಧಾಮ್ ಯಾತ್ರೆ. ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್, ಬೆಂಗಳೂರು. 9980270467, 9632776916, 080-41467722

Pilgrimage Tours

ಶ್ರೀಮಹಾಲಕ್ಷ್ಮಿ ಟ್ರಾವೆಲ್ಸ್. 08/06 ಚಾರ್ಧಾಮ್, ಕೇದಾರನಾಥ, ಬದ್ರಿನಾಥ್,ಯಮುನೋತ್ರಿ. 22/06 ಅಮರನಾಥ ಯಾತ್ರೆ. 17/05 ಕಾಶಿ, ಅಯೋಧ್ಯ. 9964527782,9591017782



ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಶಿಕ್ಷೆ ಮಾರ್ಪಾಡು ಕೋರಿದ್ದ ಬಲ್ವಂತ್ ಸಿಂಗ್ ಅರ್ಜಿ ವಜಾ

ಪ್ರಜಾವಾಣಿ ವಾರ್ತೆ

ನವದೆಹಲಿ: ಪಂಜಾಬ್‌ನ ಮಾಜಿ ಮುಖ್ಯಮಂತ್ರಿ ಬಿಯಾಂತ್ ಸಿಂಗ್ ಹತ್ಯೆ ಪ್ರಕರಣದಲ್ಲಿ ತನಗೆ ವಿಧಿಸಿರುವ ಮರಣದಂಡನೆಯನ್ನು ಜೀವಾವಧಿ ಶಿಕ್ಷೆಯಾಗಿ ಮಾರ್ಪಡಿಸುವಂತೆ ಕೋರಿ ಬಲ್ವಂತ್ ಸಿಂಗ್ ರಾಜೋನಾ ಸಲ್ಲಿಸಿದ್ದ ಅರ್ಜಿಯನ್ನು ಸುಪ್ರೀಂ ಕೋರ್ಟ್ ಬುಧವಾರ ವಜಾಗೊಳಿಸಿದೆ.

90ರ ದಶಕದಲ್ಲಿ ಪಂಜಾಬ್‌ನಲ್ಲಿ ಖಲೀಸ್ತಾನ ಉಗ್ರರ ಉಪಟಳ ಹೆಚ್ಚಿತ್ತು. ಇದಕ್ಕೆ ಕಡಿವಾಣ ಹಾಕಲು ಬಿಯಾಂತ್ ಸಿಂಗ್ ಸರ್ಕಾರ ದಿಟ್ಟ ಕಾರ್ಯಾಚರಣೆ ಕೈಗೊಂಡಿತ್ತು. ಇದಕ್ಕೆ ಪ್ರತೀಕಾರವಾಗಿ 1995ರ ಆಗಸ್ಟ್ 31ರಂದು ಪಂಜಾಬ್ ಸಚಿವಾಲಯದ ಹೊರಭಾಗದಲ್ಲಿ ನಡೆದ ಬಾಂಬ್ ದಾಳಿಯಲ್ಲಿ ಬಿಯಾಂತ್ ಸೇರಿದಂತೆ 16 ಜನರು ಮೃತಪಟ್ಟಿದ್ದರು.

ಈ ಪ್ರಕರಣದಲ್ಲಿ 2007ರಲ್ಲಿಯೇ ಬಲ್ವಂತ್ ಸಿಂಗ್‌ಗೆ ಮರಣದಂಡನೆ ಶಿಕ್ಷೆ ವಿಧಿಸಲಾಗಿತ್ತು. ಇದನ್ನು ರದ್ದುಪಡಿಸುವಂತೆ ಕೋರಿ ಆತ ಸಲ್ಲಿಸಿದ್ದ ಕ್ಷಮಾದಾನ ಅರ್ಜಿಯು ಹತ್ತು ವರ್ಷಗಳಿಂದ ಇತ್ಯರ್ಥಗೊಂಡಿಲ್ಲ. ಹಾಗಾಗಿ, ಮಾನವೀಯ ನೆಲಗಟ್ಟಿನ ಮೇಲೆ ತನಗೆ ವಿಧಿಸಿರುವ ಶಿಕ್ಷೆಯನ್ನು ಮಾರ್ಪಡಿಸಬೇಕು ಎಂದು ಆತ ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದ.

ನ್ಯಾಯಪೀಠವು ಅರ್ಜಿಯನ್ನು ವಜಾಗೊಳಿಸಿದೆ. ಕೇಂದ್ರ ಗೃಹ ಇಲಾಖೆಯು ಕ್ಷಮಾದಾನ ಅರ್ಜಿಗಳ ಇತ್ಯರ್ಥ ಸಂಬಂಧ ವಿಳಂಬ ಧೋರಣೆ ತಳೆಯುವುದು ಸರಿಯಲ್ಲ. ಇದು ಕಾನೂನು ಮತ್ತು ಸುವ್ಯವಸ್ಥೆ ಮೇಲೆ ಪರಿಣಾಮ ಬೀರಲಿದೆ ಎಂದು ಅಭಿಪ್ರಾಯಪಟ್ಟಿದೆ.

ಸಲಿಂಗ ವಿವಾಹ: ಸಂಪುಟ ಕಾರ್ಯದರ್ಶಿಗೆ ಸಮಿತಿಯ ನೇತೃತ್ವ

ಸಮಿತಿ ರಚನೆಗೆ ಕೇಂದ್ರ ಒಪ್ಪಿಗೆ

ಮುಖ್ಯಾಂಶಗಳು

- ವಿಚಾರಣೆ ಮೇ 9ಕ್ಕೆ ಮುಂದೂಡಿಕೆ
- ಅರ್ಜಿಯ ವಿಚಾರಣೆ ನಡೆಸುತ್ತಿರುವ ಸಾಂವಿಧಾನಿಕ ನ್ಯಾಯಪೀಠ

ನವದೆಹಲಿ (ಪಿಟಿಐ/ರಾಯಿಟರ್ಸ್): ಸಲಿಂಗ ಜೋಡಿಯು ತಮ್ಮ ನಿತ್ಯದ ಬದುಕಿನಲ್ಲಿ ಎದುರಿಸುತ್ತಿರುವ ಕೆಲ ಸಮಸ್ಯೆಗಳನ್ನು ಆಡಳಿತಾತ್ಮಕ ನೆಲೆಯಲ್ಲಿ ಪರಿಹರಿಸುವುದಕ್ಕೆ ಇರುವ ಮಾರ್ಗೋಪಾಯಗಳನ್ನು ಅನ್ವೇಷಿಸಲು ಸಮಿತಿಯೊಂದನ್ನು ರಚಿಸುವುದಾಗಿ ಕೇಂದ್ರ ಸರ್ಕಾರವು ಸುಪ್ರೀಂ ಕೋರ್ಟ್‌ಗೆ ಬುಧವಾರ ತಿಳಿಸಿದೆ.

ಸಲಿಂಗ ಮದುವೆಗೆ ಮಾನ್ಯತೆ ನೀಡುವಂತೆ ಕೋರಿ ಸಲ್ಲಿಕೆಯಾಗಿರುವ ಅರ್ಜಿಗಳನ್ನು ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ನೇತೃತ್ವದ ಐವರು ಸದಸ್ಯರಿರುವ ಸಾಂವಿಧಾನಿಕ ಪೀಠವು ವಿಚಾರಣೆ ನಡೆಸಿತು.

ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ, 'ನಿಜವಾದ ಮಾನವೀಯ ಕಾಳಜಿಯನ್ನು ಒಳಗೊಂಡ ಸಮಸ್ಯೆಗಳನ್ನು ಪರಿಹರಿಸುವುದಕ್ಕೆ ಸರ್ಕಾರ ಸಿದ್ಧವಿದೆ. ಇದಕ್ಕೆ ಒಂದಕ್ಕಿಂತ ಹೆಚ್ಚು ಸಚಿವಾಲಯಗಳ ನಡುವೆ ಸಮನ್ವಯದ ಅಗತ್ಯವಿದೆ. ಹೀಗಾಗಿ ಸಂಪುಟ ಕಾರ್ಯದರ್ಶಿಯ ನೇತೃತ್ವದಲ್ಲಿ ಸಮಿತಿಯೊಂದನ್ನು ರಚಿಸಲಾಗುತ್ತದೆ' ಎಂದು ಹೇಳಿದರು.

'ಅರ್ಜಿದಾರರು ತಾವು ಎದುರಿಸುತ್ತಿರುವ ಸಮಸ್ಯೆಗಳ ಕುರಿತು ನಮಗೆ ಮಾಹಿತಿ ನೀಡಬಹುದು. ಅಗತ್ಯ ಸಲಹೆಗಳನ್ನೂ ಒದಗಿಸಬಹುದು. ಸಮಿತಿಯು ಇವುಗಳ ಕುರಿತು ಪರಿಶೀಲನೆ ನಡೆಸಲಿದೆ. ಸಮಸ್ಯೆಗಳನ್ನು ಬಗೆಹರಿಸಲು ಕಾನೂನಿನ ಅಡಿಯಲ್ಲಿ ಅವಕಾಶ ಇದೆಯೇ ಎಂಬುದರ ಕುರಿತು ಪರಾಮರ್ಶೆ ನಡೆಸಿ, ಸಾಧ್ಯವಿರುವ ಎಲ್ಲಾ ಕ್ರಮಗಳನ್ನೂ ಕೈಗೊಳ್ಳಲಿದೆ' ಎಂದು ನ್ಯಾಯಮೂರ್ತಿಗಳಾದ ಸಂಜಯ್ ಕಿಶನ್ ಕೌಲ್, ಎಸ್. ರವೀಂದ್ರ ಭಟ್, ಹಿಮಾ ಕೊಹ್ಲಿ ಮತ್ತು ಪಿ.ಎಸ್.ನರಸಿಂಹ ಅವರನ್ನೊಳಗೊಂಡ ನ್ಯಾಯಪೀಠಕ್ಕೆ ತಿಳಿಸಿದರು.

'ಅರ್ಜಿದಾರರು ಪೂರ್ವಗ್ರಹಕ್ಕೆ ಒಳಗಾಗದೆಯೇ ತಾವು ಎದುರಿಸುತ್ತಿರುವ ನೈಜ ಸಮಸ್ಯೆಗಳ ಕುರಿತ ಮಾಹಿತಿ ಅಥವಾ ಸಲಹೆಯನ್ನು ಅಟಾರ್ನಿ ಜನರಲ್ ಅಥವಾ ಸಾಲಿಸಿಟರ್ ಜನರಲ್ ಅವರಿಗೆ ಒದಗಿಸಬಹುದು' ಎಂದು ನ್ಯಾಯಪೀಠ ಹೇಳಿತು.

'ಅರ್ಜಿದಾರರು ಹಾಗೂ ಸರ್ಕಾರದ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿರುವ ವಕೀಲರು ಸಭೆಯೊಂದನ್ನು ನಡೆಸಿ ಈ ಸಮಸ್ಯೆಗಳ ಕುರಿತು ಚರ್ಚಿಸಿ ಪರಿಹಾರ ಕಂಡುಕೊಳ್ಳಬಹುದು' ಎಂದು ಸಿಜೆಐ ಚಂದ್ರಚೂಡ್, ಉಭಯ ಬಣದವರಿಗೂ ಸಲಹೆ ನೀಡಿದರು.

ಅರ್ಜಿದಾರರೊಬ್ಬರ ಪರವಾಗಿ ಹಿರಿಯ ವಕೀಲ ಅಭಿಷೇಕ್ ಮನು ಸಿಂಘ್ವಿ ವಾದ ಮಂಡಿಸಿದರು. 'ಸಭೆ ನಡೆಸುವುದು ಹಾಗೂ ಸಲಹೆಗಳನ್ನು ನೀಡುವುದಕ್ಕೆ ಅಭ್ಯಂತರವೇನೂ ಇಲ್ಲ. ಈ ವಿಚಾರದಲ್ಲಿ ಜಟಿಲ ಸಮಸ್ಯೆಗಳಿವೆ. ಹೀಗಾಗಿ ನ್ಯಾಯಾಲಯವೇ ಇದನ್ನು ಇತ್ಯರ್ಥಗೊಳಿಸುವುದು ಉತ್ತಮ' ಎಂದು ಅಭಿಪ್ರಾಯ ವ್ಯಕ್ತಪಡಿಸಿದರು.

ಸಲಿಂಗ ಮದುವೆಗೆ ಕಾನೂನಿನ ಮಾನ್ಯತೆ ನೀಡದಿದ್ದರೆ ವೈದ್ಯಕೀಯ, ಪಿಂಚಣಿ, ದತ್ತು ಪಡೆಯುವುದೂ ಸೇರಿದಂತೆ ಇನ್ನಿತರ ಹಕ್ಕುಗಳಿಂದ ತಾವು ವಂಚಿತರಾಗುತ್ತೇವೆ ಎಂದು ಅರ್ಜಿದಾರರು ವಾದಿಸಿದ್ದಾರೆ.

ಏಪ್ರಿಲ್ 27ರಂದು ಅರ್ಜಿಗಳ ವಿಚಾರಣೆ ನಡೆಸಿದ್ದ ನ್ಯಾಯಪೀಠವು, 'ಸಲಿಂಗ ಮದುವೆಯನ್ನು ಕಾನೂನುಬದ್ಧಗೊಳಿಸದೆಯೇ ಬ್ಯಾಂಕ್‌ನಲ್ಲಿ ಜಂಟಿ ಖಾತೆ ತೆರೆಯುವುದು, ಭವಿಷ್ಯ ನಿಧಿ ಹಾಗೂ ಗ್ರ್ಯಾಚುಟಿಗೆ ಸಂಗಾತಿಯ ಹೆಸರನ್ನು ನಾಮನಿರ್ದೇಶನ ಮಾಡುವುದು ಸೇರಿದಂತೆ ಇತರೆ ಪ್ರಯೋಜನಗಳನ್ನು ಸಲಿಂಗ ಜೋಡಿಗೆ ಒದಗಿಸಲು ಸಾಧ್ಯವೇ' ಎಂದು ಕೇಂದ್ರ ಸರ್ಕಾರವನ್ನು ಪ್ರಶ್ನಿಸಿತ್ತು.

ಆಯ್ದ ಗುಂಪಿನ ಅಭಿಪ್ರಾಯ ಪರಿಗಣಿಸುವುದಿಲ್ಲ: ಸುಪ್ರೀಂ ಕೋರ್ಟ್

'ಸಂವಿಧಾನದ ಆದೇಶದ ಅನುಸಾರವಾಗಿಯೇ ನ್ಯಾಯಾಲಯ ತೀರ್ಮಾನ ಕೈಗೊಳ್ಳಬೇಕಾಗುತ್ತದೆ. ಹೀಗಾಗಿ ನಾವು ಜನಪ್ರಿಯ ನೈತಿಕತೆ ಅಥವಾ ಆಯ್ದ ಗುಂಪಿನ ಅಭಿಪ್ರಾಯವನ್ನು ಪರಿಗಣಿಸುವುದಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಅರ್ಜಿದಾರರೊಬ್ಬರ ಪರವಾಗಿ ನ್ಯಾಯಾಲಯಕ್ಕೆ ಹಾಜರಾಗಿದ್ದ ಹಿರಿಯ ವಕೀಲ ಸೌರಭ್ ಕೃಪಾಲ್, 'ವಿವಿಧ ಉಪನ್ಯಾಸ ಕಾರ್ಯಕ್ರಮಗಳಲ್ಲಿ ನಾವು ಸಲಿಂಗಿಗಳೊಂದಿಗೆ ಸಂವಾದ ನಡೆಸಿದ್ದೇವೆ. ಈ ಪೈಕಿ ಶೇ 99 ಮಂದಿ ಮದುವೆ ಆಗಬೇಕೆಂಬ ಅಭಿಲಾಷೆ ವ್ಯಕ್ತಪಡಿಸಿದ್ದಾರೆ' ಎಂದು ಹೇಳಿದರು.

ಹಿರಿಯ ವಕೀಲೆ ಮೇನಕಾ ಗುರುಸ್ವಾಮಿ ಕೂಡ ಇದೇ ವಾದವನ್ನು ನ್ಯಾಯಪೀಠದ ಮುಂದಿಟ್ಟರು. 'ಗಣ್ಯ ವಕೀಲೆಯಾಗಿ ನಾನು ಈ ಮಾತನ್ನು ಹೇಳುತ್ತಿಲ್ಲ. ಸಾಕಷ್ಟು ಸಲಿಂಗಿ ಯುವ ಜೋಡಿಯನ್ನು ಭೇಟಿಯಾಗಿರುವೆ. ಅವರೆಲ್ಲಾ ಮದುವೆಯಾಗುವ ಬಯಕೆ ವ್ಯಕ್ತಪಡಿಸಿದ್ದಾರೆ. ನಾವು ಏನು ಅನುಭವಿಸಿದ್ದೇವೆಯೋ ಅದನ್ನು ಅವರೂ ಅನುಭವಿಸುವಂತಾಗಬಾರದು. ಅದಕ್ಕೆ ಅವಕಾಶವನ್ನೂ ನೀಡಬಾರದು' ಎಂದರು.

ಆಗ ಮಧ್ಯಪ್ರವೇಶಿಸಿದ ಸಿಜೆಐ ಚಂದ್ರಚೂಡ್, 'ಮೇನಕಾ ಅವರೇ ನಿಮ್ಮ ಈ ವಾದದಲ್ಲಿ ಸಮಸ್ಯೆ ಇದೆ. ಈ ವಾದದ ಹಿಂದಿನ ಭಾವನೆಗಳನ್ನು ನಾವು ಅರ್ಥಮಾಡಿಕೊಳ್ಳಬಲ್ಲೆವು. ಆದರೆ ಸಂವಿಧಾನದ ಮಟ್ಟದಲ್ಲಿ ಗಂಭೀರ ಸಮಸ್ಯೆ ಇದೆ' ಎಂದು ತಿಳಿಸಿದರು.

ಭೂತಾನ್‌ಗಿಂತಲೂ ಭಾರತ ಕೆಳಕ್ಕೆ

ವಿಶ್ವ ಪತ್ರಿಕಾ ಸ್ವಾತಂತ್ರ್ಯದ ಸೂಚ್ಯಂಕ: 161ನೇ ಸ್ಥಾನ

ಪ್ರಜಾವಾಣಿ ವಾರ್ತೆ

ನವದೆಹಲಿ: ವಿಶ್ವ ಪತ್ರಿಕಾ ಸ್ವಾತಂತ್ರ್ಯದ ಸೂಚ್ಯಂಕದಲ್ಲಿ ಭಾರತವು ನೆರೆಯ ರಾಷ್ಟ್ರಗಳಾದ ಭೂತಾನ್, ನೇಪಾಳ, ಶ್ರೀಲಂಕಾ, ಪಾಕಿಸ್ತಾನ ಹಾಗೂ ಅಫ್ಗಾನಿಸ್ತಾನಕ್ಕಿಂತಲೂ ಕೆಳಗಿದೆ.

ಜಗತ್ತಿನ 180 ರಾಷ್ಟ್ರಗಳನ್ನೊಳಗೊಂಡ ಈ ಸೂಚ್ಯಂಕದಲ್ಲಿ ಭಾರತ 161ನೇ ಸ್ಥಾನಕ್ಕೆ ಕುಸಿದಿದೆ. 2021ರಲ್ಲಿ 142ನೇ ಸ್ಥಾನದಲ್ಲಿದ್ದ ದೇಶವು ಕಳೆದ ವರ್ಷ 150ನೇ ಸ್ಥಾನಕ್ಕೆ ಇಳಿದಿತ್ತು.

'ರಿಪೋರ್ಟರ್ಸ್ ವಿದೌಟ್ ಬಾರ್ಡರ್ಸ್' ಹೆಸರಿನ ಸರ್ಕಾರೇತರ ಸಂಸ್ಥೆ ಬುಧವಾರ ಬಿಡುಗಡೆ ಮಾಡಿರುವ ಸೂಚ್ಯಂಕದಲ್ಲಿ ಭೂತಾನ್ 90ನೇ ಸ್ಥಾನ ಹೊಂದಿದೆ. ನೇಪಾಳವು 95ನೇ ಸ್ಥಾನದಲ್ಲಿ ಕಾಣಿಸಿಕೊಂಡಿದೆ. ಶ್ರೀಲಂಕಾ, ಪಾಕಿಸ್ತಾನ ಹಾಗೂ ಅಫ್ಗಾನಿಸ್ತಾನ ಕ್ರಮವಾಗಿ 135, 150 ಹಾಗೂ 152ನೇ ಸ್ಥಾನಗಳಲ್ಲಿವೆ. ಕಳೆದ ವರ್ಷಕ್ಕೆ ಹೋಲಿಸಿದರೆ ಈ ಬಾರಿ ಪಾಕಿಸ್ತಾನ ಒಟ್ಟು ಏಳು ಸ್ಥಾನ ಮೇಲೇರಿದೆ. ಅಫ್ಗಾನಿಸ್ತಾನವು ನಾಲ್ಕು ಸ್ಥಾನಗಳಲ್ಲಿ ಪ್ರಗತಿ ಕಂಡಿದೆ.

ಬಾಂಗ್ಲಾದೇಶ (163), ಮ್ಯಾನ್ಮಾರ್ (173) ಹಾಗೂ ಚೀನಾ (179) ಭಾರತದ ನಂತರದ ಸ್ಥಾನಗಳಲ್ಲಿವೆ.

ರಾಜಕೀಯ ಸಂದರ್ಭ, ಕಾನೂನು ಚೌಕಟ್ಟು, ಆರ್ಥಿಕ ಸಂದರ್ಭ, ಸಾಮಾಜಿಕ-ಸಾಂಸ್ಕೃತಿಕ ಸಂದರ್ಭ ಹಾಗೂ ಪತ್ರಕರ್ತರ ಸುರಕ್ಷತೆ ಎಂಬ ಐದು ವಿಭಾಗಗಳ ಆಧಾರದಲ್ಲಿ ಈ ಸೂಚ್ಯಂಕವನ್ನು ಸಿದ್ಧಪಡಿಸಲಾಗಿದೆ. ರಾಜಕೀಯ ಸೂಚಕದಲ್ಲಿ ಭಾರತ 169ನೇ ಸ್ಥಾನ ಹಾಗೂ ಪತ್ರಕರ್ತರ ರಕ್ಷಣೆಯ ಸೂಚಕದಲ್ಲಿ 172ನೇ ಸ್ಥಾನ ಹೊಂದಿದೆ.

'ದೇಶದಲ್ಲಿ ಪತ್ರಕರ್ತರ ಮೇಲೆ ಹಲ್ಲೆಗಳು ನಡೆದಿವೆ. ಮಾಧ್ಯಮವು ರಾಜಕೀಯವಾಗಿ ಪಕ್ಷಪಾತದ ಧೋರಣೆ ಅನುಸರಿಸುತ್ತಿದೆ. ಮಾಧ್ಯಮ ಸಂಸ್ಥೆಗಳ ಮಾಲೀಕತ್ವವು ಕೇಂದ್ರೀಕೃತಗೊಂಡಿದೆ. ಇವು ವಿಶ್ವದ ಅತಿ ದೊಡ್ಡ ಪ್ರಜಾಪ್ರಭುತ್ವ ರಾಷ್ಟ್ರದ ಮಾಧ್ಯಮ ಸ್ವಾತಂತ್ರ್ಯವನ್ನು ಬಿಕ್ಕಟ್ಟಿಗೆ ತಳ್ಳಿದೆ' ಎಂದು ವರದಿಯಲ್ಲಿ ತಿಳಿಸಲಾಗಿದೆ.

ನಾರ್ವೆಯು ಈ ಪಟ್ಟಿಯಲ್ಲಿ ಸತತ ಏಳನೇ ವರ್ಷ ಅಗ್ರ ಸ್ಥಾನ ಕಾಯ್ದುಕೊಂಡಿದೆ. ಐರ್ಲೆಂಡ್, ಡೆನ್ಮಾರ್ಕ್, ಸ್ವೀಡನ್ ಹಾಗೂ ಫಿನ್ಲೆಂಡ್ ಕ್ರಮವಾಗಿ ಎರಡರಿಂದ ಐದನೇ ಸ್ಥಾನಗಳಲ್ಲಿವೆ. ಬ್ರಿಟನ್ 26ನೇ ಸ್ಥಾನದಲ್ಲಿದ್ದರೆ, ಅಮೆರಿಕ 45ನೇ ಸ್ಥಾನ ಪಡೆದಿದೆ.

ಎಸ್‌ಐಟಿ ತನಿಖೆಯೇ ಏಕಮುಖ: ನ್ಯಾಯಾಲಯ

ಒಂದನೇ ಪುಟದಿಂದ...

'ಈ ಪ್ರಕರಣದ ತನಿಖೆಯನ್ನು ಮೊದಲು ಗುಜರಾತ್ ಪೊಲೀಸರು ನಡೆಸುತ್ತಿದ್ದರು. 2008ರಲ್ಲಿ ಎಸ್‌ಐಟಿಯು ತನಿಖೆ ಪ್ರಾರಂಭಿಸಿತು. ಸಾಕ್ಷಿಗಳು ಪೊಲೀಸರಿಗೆ ನೀಡಿದ ಹೇಳಿಕೆಗೂ ಎಸ್‌ಐಟಿ ನಡೆಸಿದ ತನಿಖೆ ವೇಳೆ ನೀಡಿದ ಹೇಳಿಕೆಗೂ 'ವೈರುಧ್ಯ'ವಿದೆ. ಹಾಗಿದ್ದರೂ, ಈ 'ವೈರುಧ್ಯ'ದ ಕುರಿತು ತನಿಖೆ ನಡೆಸುವ ಬಗ್ಗೆ ಎಸ್‌ಐಟಿ ತಲೆಕೆಡಿಸಿಕೊಳ್ಳಲಿಲ್ಲ' ಎಂದು ನ್ಯಾಯಾಲಯ ಹೇಳಿದೆ.

'ಸಾಕ್ಷ್ಯಗಳ ಪರಿಶೀಲನೆ ಸರಿಯಾಗಿ ನಡೆದಿಲ್ಲ'

'ಅಪರಾಧ ನಡೆದ ಸ್ಥಳದಲ್ಲಿ ನಾವು ಇರಲಿಲ್ಲ ಎಂದು ಮಾಯಾ ಕೊಡ್ನಾನಿ ಹಾಗೂ ಬಾಬು ಬಜರಂಗಿ ಅವರು ನೀಡಿದ ಸಾಕ್ಷ್ಯಗಳ ಕುರಿತು ಎಸ್‌ಐಟಿ ಪರಿಶೀಲನೆ ನಡೆಸಿಲ್ಲ ಅಥವಾ ಈ ಸಂಬಂಧ ಇಬ್ಬರೂ ಸಲ್ಲಿಸಿದ್ದ ಅರ್ಜಿಯ ಕುರಿತು ತನಿಖೆಯನ್ನೂ ನಡೆಸಿಲ್ಲ' ಎಂದು ವಿಶೇಷ ನ್ಯಾಯಾಲಯ ತನ್ನ ತೀರ್ಪಿನಲ್ಲಿ ಹೇಳಿದೆ.

ಮಾಯಾ ಕೊಡ್ನಾನಿ: ಗುಂಪನ್ನು ಉದ್ರಿಕ್ತಗೊಳಿಸಿ ಹತ್ಯೆ ನಡೆಸಲು ಇಂಬು ನೀಡಿದ ಆರೋಪವು ಮಾಯಾ ಕೊಡ್ನಾನಿ ಅವರ ಮೇಲಿದೆ. ಆದರೆ, ಅಪರಾಧ ನಡೆದ ಸ್ಥಳದಲ್ಲಿ ನಾನು ಇರಲಿಲ್ಲ ಎಂದು ಮಾಯಾ ಅವರು ವಾದಿಸಿದ್ದರು. ಈ ಬಗ್ಗೆ ಸಾಕ್ಷ್ಯವನ್ನೂ ಒದಗಿಸಿದ್ದರು.

'ನಾನು ಘಟನೆ ನಡೆದ ಸ್ಥಳದಲ್ಲಿ ಇರದೆ ಗುಜರಾತ್ ವಿಧಾನಸಭೆಯಲ್ಲಿ ಇದ್ದೆ. ನಂತರ ನಾನು ಅಹಮದಾಬಾದ್‌ನ ಸೋಲಾ ಸಿವಿಲ್ ಆಸ್ಪತ್ರೆಗೆ ಹೋಗಿದ್ದೆ. ಈ ಬಗ್ಗೆ ಈಗಿನ ಗೃಹ ಸಚಿವ ಅಮಿತ್ ಶಾ ಅವರಿಗೆ ತಿಳಿದಿದೆ. ಆದ್ದರಿಂದ ಅಮಿತ್ ಶಾ ಅವರನ್ನು ನ್ಯಾಯಾಲಯಕ್ಕೆ ಕರೆಸಿ' ಎಂದೂ ಮಾಯಾ ಅವರು ಮನವಿ ಮಾಡಿದ್ದರು. ಮಾಯಾ ಅವರ ಈ ವಾದನ್ನು ನ್ಯಾಯಾಲಯ ಒಪ್ಪಿತ್ತು. ಆದರೆ, ಎಸ್‌ಐಟಿ ಈ ಬಗ್ಗೆ ತನಿಖೆ ನಡೆಸಲಿಲ್ಲ ಎಂದು ತೀರ್ಪಿನಲ್ಲಿ ಹೇಳಲಾಗಿದೆ.

ಬಾಬು ಬಜರಂಗಿ: ಪತ್ರಕರ್ತೆ ಅಶೀಶಿ ಕೇತನ್ ಅವರು ಬಾಬು ಬಜರಂಗಿ ಕುರಿತು ನಡೆಸಿದ 'ರಹಸ್ಯ ಕಾರ್ಯಾಚರಣೆ'ಯನ್ನು ನಂಬಲು ನ್ಯಾಯಾಲಯ ನಿರಾಕರಿಸಿದೆ. 'ಈ ಕಾರ್ಯಾಚರಣೆಯಲ್ಲಿ ದೊರಕಿದ ಇತರೆ ವಿಡಿಯೊ ಕ್ಲಿಪ್‌ಗಳನ್ನು ಡಿಲೀಟ್ ಮಾಡಿರುವ ಕುರಿತು ಎಸ್‌ಐಟಿ ತನಿಖೆ ನಡೆಸಿಲ್ಲ. ಬೇಕಾದ ಕ್ಲಿಪ್ ಅನ್ನು ಮಾತ್ರ ಇಟ್ಟುಕೊಂಡು, ಉಳಿದಿದ್ದನ್ನು ಡಿಲೀಟ್ ಮಾಡಲಾಗಿದೆ. ಆದ್ದರಿಂದ ಈ ಕಾರ್ಯಾಚರಣೆಯು 'ಪತ್ರಿಕೋದ್ಯಮದ ಉದ್ದೇಶ'ಕ್ಕಾಗಿ ನಡೆದುದಲ್ಲ' ಎಂದೂ ನ್ಯಾಯಾಲಯ ಹೇಳಿದೆ.

ಸುಡಾನ್: 2,930 ಭಾರತೀಯರ ಸ್ಥಳಾಂತರ

ನವದೆಹಲಿ(ಪಿಟಿಐ): ಸುಡಾನ್‌ನಿಂದ ಬುಧವಾರ ಮತ್ತೆ 231 ಭಾರತೀಯರು ಸುರಕ್ಷಿತವಾಗಿ ಮುಂಬೈಗೆ ಆಗಮಿಸಿದ್ದು, 'ಆಪರೇಷನ್ ಕಾವೇರಿ' ಕಾರ್ಯಾಚರಣೆಯಡಿ ಇಲ್ಲಿಯವರೆಗೆ 2,930 ಭಾರತೀಯರು ತಾಯ್ನಾಡಿಗೆ ಮರಳಿದ್ದಾರೆ ಎಂದು ಕೇಂದ್ರ ಸರ್ಕಾರ ತಿಳಿಸಿದೆ.

ಸಂಘರ್ಷ ಪೀಡಿತ ನೆಲದಲ್ಲಿ ಸಿಲುಕಿದ್ದ ಭಾರತೀಯರನ್ನು ಹೊತ್ತ ವಿಮಾನವು ಮುಂಬೈ ವಿಮಾನ ನಿಲ್ದಾಣ ತಲುಪಿದೆ. ಸೌದಿ ಅರೇಬಿಯಾದ ಜಿದ್ದಾ ನಗರದಿಂದ ಸಂತ್ರಸ್ತರನ್ನು ಸುರಕ್ಷಿತವಾಗಿ ಕರೆತರಲಾಗಿದೆ ಎಂದು ವಿದೇಶಾಂಗ ಇಲಾಖೆಯ ವಕ್ತಾರ ಅರಿಂಧಮ್ ಬಾಗ್ಚಿ ಟ್ವೀಟ್ ಮಾಡಿದ್ದಾರೆ.ಸು

ಖಾರ್ಟೂಮ್ ವ್ಯಾಪ್ತಿಯ ಸಂಘರ್ಷ ಪೀಡಿತ ಸ್ಥಳಗಳಲ್ಲಿ ಸಿಲುಕಿದ್ದ ಭಾರತೀಯರನ್ನು ಬಸ್‌ಗಳ ಮೂಲಕ ಸುಡಾನ್ ಬಂದರಿಗೆ ಕರೆತರಲಾಯಿತು. ಅಲ್ಲಿಂದ ಭಾರತೀಯ ನೌಕಾಪಡೆಗೆ ಸೇರಿದ ಹಡಗುಗಳಿಂದ ಜಿದ್ದಾಗೆ ಕರೆತಂದು ಅಲ್ಲಿಂದ ವಿಮಾನದಲ್ಲಿ ಭಾರತಕ್ಕೆ ಕರೆತರಲಾಗಿದೆ.

ಕೇಂದ್ರ ಸರ್ಕಾರಕ್ಕೆ ಸುಪ್ರೀಂ ಕೋರ್ಟ್ ತರಾಟೆ

ಇ.ಡಿ ನಿರ್ದೇಶಕರ ಸೇವಾವಧಿ ವಿಸ್ತರಣೆ

ನವದೆಹಲಿ (ಪಿಟಿಐ): ತನ್ನ ಸೂಚನೆಯ ಹೊರತಾಗಿಯೂ ಜಾರಿ ನಿರ್ದೇಶನಾಲಯದ (ಇ.ಡಿ) ನಿರ್ದೇಶಕ ಸಂಜಯ್ ಕುಮಾರ್ ಮಿಶ್ರಾ ಅವರ ಸೇವಾವಧಿ ವಿಸ್ತರಿಸಿರುವ ಕೇಂದ್ರ ಸರ್ಕಾರವನ್ನು ತರಾಟೆಗೆ ತೆಗೆದುಕೊಂಡಿರುವ ಸುಪ್ರೀಂ ಕೋರ್ಟ್, 'ಸಂಸ್ಥೆಗೆ ಒಬ್ಬ ವ್ಯಕ್ತಿ ಇಷ್ಟೊಂದು ಅನಿವಾರ್ಯವೇ' ಎಂದು ಪ್ರಶ್ನಿಸಿದೆ.

ಮಿಶ್ರಾ ಅವರ ಸೇವಾವಧಿ ವಿಸ್ತರಣೆಗೆ ಅನುವು ಮಾಡಿಕೊಡುವ ಉದ್ದೇಶದಿಂದ ಕಾನೂನಿಗೆ ತಿದ್ದುಪಡಿ ಮಾಡಿರುವ ಕೇಂದ್ರ ಸರ್ಕಾರದ ನಿಲುವನ್ನು ಪ್ರಶ್ನಿಸಿ ಹಲವರು ಸಾರ್ವಜನಿಕ ಹಿತಾಸಕ್ತಿ ಅರ್ಜಿಗಳನ್ನು (ಪಿಐಎಲ್) ದಾಖಲಿಸಿದ್ದರು.

ನ್ಯಾಯಮೂರ್ತಿಗಳಾದ ಬಿ.ಆರ್. ಗವಾಯಿ, ವಿಕ್ರಂ ನಾಥ್ ಹಾಗೂ ಸಂಜಯ್ ಕರೋಲ್ ಅವರನ್ನೊಳಗೊಂಡ ತ್ರಿಸದಸ್ಯ ನ್ಯಾಯಪೀಠ ಬುಧವಾರ ಇವುಗಳ ವಿಚಾರಣೆ ನಡೆಸಿತು.

'ಈ ಹುದ್ದೆಯನ್ನು ನಿಭಾಯಿಸಬಲ್ಲ ಸಮರ್ಥ ಅಧಿಕಾರಿ ಬೇರೆ ಯಾರೂ ಇಲ್ಲವೇ? ಸಂಸ್ಥೆಗೆ ಒಬ್ಬ ವ್ಯಕ್ತಿ ಇಷ್ಟೊಂದು ಅನಿವಾರ್ಯವೇ' ಎಂದು ನ್ಯಾಯಪೀಠವು ಸಾಲಿಸಿಟರ್ ಜನರಲ್ ತುಷಾರ್ ಮೆಹ್ತಾ ಅವರನ್ನು ಪ್ರಶ್ನಿಸಿತು.

'ಈ ಹುದ್ದೆ ನಿಭಾಯಿಸಬಲ್ಲ ಸಮರ್ಥ ಅಧಿಕಾರಿ ಸಂಸ್ಥೆಯಲ್ಲಿ ಇಲ್ಲ ಎಂದು ನೀವು (ಮೆಹ್ತಾ) ಹೇಳುತ್ತಿದ್ದೀರಿ. 2023ರ ಬಳಿಕ ಮಿಶ್ರಾ ನಿವೃತ್ತರಾಗಲಿದ್ದಾರೆ. ಆಗ ಸಂಸ್ಥೆಯ ಗತಿಯೇನು' ಎಂದೂ ಕೇಳಿತು.

'ಆಡಳಿತಾತ್ಮಕ ಕಾರಣಗಳಿಂದಾಗಿ ಮಿಶ್ರಾ ಅವರ ಸೇವಾವಧಿ ವಿಸ್ತರಣೆ ಮಾಡುವುದು ಅನಿವಾರ್ಯವಾಗಿತ್ತು. ಹಣ ಅಕ್ರಮ ವರ್ಗಾವಣೆ ತಡೆಗೆ ಭಾರತವು ಯಾವೆಲ್ಲಾ ಕ್ರಮ ಕೈಗೊಂಡಿದೆ ಎಂಬುದರ ಕುರಿತು ಹಣಕಾಸು ಕಾರ್ಯಪಡೆಯು (ಎಫ್‌ಎಟಿಎಫ್) ಈ ವರ್ಷ ವಿಮರ್ಶೆ ನಡೆಸಲಿದೆ. ಇಂತಹ ಸಮಯದಲ್ಲಿ ಇ.ಡಿ ನಿರ್ದೇಶಕರ ಹುದ್ದೆಯಲ್ಲಿ ಯಾವುದೇ ಬದಲಾವಣೆ ಮಾಡದಿರಲು ತೀರ್ಮಾನಿಸಲಾಗಿದೆ. ಮಿಶ್ರಾ ಅವರು ಎಫ್‌ಎಟಿಎಫ್ ಜೊತೆ ಈಗಾಗಲೇ ಸಮಾಲೋಚನೆ ನಡೆಸಿದ್ದಾರೆ. ಸದ್ಯದ ಪರಿಸ್ಥಿತಿಯಲ್ಲಿ ಕಾರ್ಯಪಡೆ ಜೊತೆ ವ್ಯವಹರಿಸಲು ಅವರೇ ಸೂಕ್ತ' ಎಂದು ಮೆಹ್ತಾ ನ್ಯಾಯಪೀಠಕ್ಕೆ ತಿಳಿಸಿದರು.

'ಸಂಸ್ಥೆಗೆ ಯಾರೊಬ್ಬರೂ ಅನಿವಾರ್ಯವಲ್ಲ. ಆದರೆ ಸದ್ಯದ ಪರಿಸ್ಥಿತಿಯಲ್ಲಿ ಅವರ ಮುಂದುವರಿಕೆ ಅಗತ್ಯ. ರಾಜಕೀಯ ಪಕ್ಷವೊಂದರ ನಾಯಕರು ಪಿಐಎಲ್ ಸಲ್ಲಿಸಿರುವುದಕ್ಕೆ ನಮ್ಮ ಆಕ್ಷೇಪವಿದೆ. ಆ ಪಕ್ಷದ ಹಿರಿಯ ಮುಖಂಡರೊಬ್ಬರ ವಿರುದ್ಧ ಇ.ಡಿ ತನಿಖೆ ನಡೆಸುತ್ತಿದೆ' ಎಂದು ಹೇಳಿದರು.

ಅವರ ವಾದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ನ್ಯಾಯಪೀಠ, 'ವ್ಯಕ್ತಿಯೊಬ್ಬರು ರಾಜಕೀಯ ಪಕ್ಷವೊಂದರ ಸದಸ್ಯ ಎಂಬ ಕಾರಣಕ್ಕೆ ಅರ್ಜಿ ಸಲ್ಲಿಸಲು ಅವಕಾಶ ನಿರಾಕರಿಸಬೇಕೆ? ಅವರು ನ್ಯಾಯಾಲಯದ ಮೊರೆ ಹೋಗುವುದನ್ನು ತಡೆಯಬಹುದೇ' ಎಂದು ಪ್ರಶ್ನಿಸಿತು. ವಿಚಾರಣೆಯನ್ನು ಇದೇ 8ಕ್ಕೆ ಮುಂದೂಡಿತು.

ಭ್ರಷ್ಟಾಚಾರ ತನಿಖೆ: ತಡೆ ತೆರವು

ಪ್ರಜಾವಾಣಿ ವಾರ್ತೆ

ನವದೆಹಲಿ: ಆಂಧ್ರಪ್ರದೇಶದ ರಾಜಧಾನಿಯಾಗಿ ಅಮರಾವತಿಯನ್ನು ಅಭಿವೃದ್ಧಿಪಡಿಸುವ ಸಂಬಂಧ ತೆಲುಗು ದೇಶಂ ಪಕ್ಷದ ಅಧಿಕಾರಾವಧಿಯಲ್ಲಿ ನಡೆದಿರುವ ಭ್ರಷ್ಟಾಚಾರ ಮತ್ತು ಅಧಿಕಾರ ದುರುಪಯೋಗದ ಬಗ್ಗೆ ತನಿಖೆ ಮುಂದುವರಿಸಲು ಸುಪ್ರೀಂ ಕೋರ್ಟ್ ಮುಖ್ಯಮಂತ್ರಿ ಜಗಮೋಹನ್ ರೆಡ್ಡಿ ಸರ್ಕಾರಕ್ಕೆ ಹಸಿರು ನಿಶಾನೆ ನೀಡಿದೆ.

ತನಿಖೆಯು ಇನ್ನೂ ಆರಂಭದ ಹಂತದಲ್ಲಿರುವಾಗಲೇ ಹೈಕೋರ್ಟ್ ತಡೆಯಾಜ್ಞೆ ನೀಡುವ ಅಗತ್ಯವಿಲ್ಲ ಎಂದು ನ್ಯಾಯಮೂರ್ತಿಗಳಾದ ಎಂ.ಆರ್. ಶಾ ಮತ್ತು ಎಂ.ಎಂ. ಸುಂದರೇಶ್ ಅವರನ್ನೊಳಗೊಂಡ ಪೀಠ ಅಭಿಪ್ರಾಯಪಟ್ಟಿದ್ದು, ಮೂರು ತಿಂಗಳೊಳಗೆ ಈ ಅರ್ಜಿಯ ವಿಚಾರಣೆಯನ್ನು ಇತ್ಯರ್ಥಗೊಳಿಸಲು ಆಂಧ್ರಪ್ರದೇಶದ ಹೈಕೋರ್ಟ್‌ಗೆ ನಿರ್ದೇಶನ ನೀಡಿದೆ.

ಭ್ರಷ್ಟಾಚಾರ ವಿರುದ್ಧದ ತನಿಖೆಯು ರಾಜಕೀಯ ಪ್ರೇರಿತವಾಗಿರುವುದು ಮೇಲ್ನೋಟಕ್ಕೆ ಕಂಡುಬಂದಿದೆ ಎಂದಿದ್ದ ಹೈಕೋರ್ಟ್, ತನಿಖೆ ನಡೆಸದಂತೆ ಮಧ್ಯಂತರ ತಡೆ ನೀಡಿತ್ತು. ಆದರೆ, ಸುಪ್ರೀಂ ಕೋರ್ಟ್ ಇದನ್ನು ತೆರವುಗೊಳಿಸಿದೆ.

2019ರ ಜೂನ್ 19ರಂದು ಮತ್ತು 2020ರ ಫೆಬ್ರುವರಿ 21ರಂದು ತಾನು ಭ್ರಷ್ಟಾಚಾರ ಮತ್ತು ಅಧಿಕಾರ ದುರ್ಬಳಕೆ ಸಂಬಂಧ ತನಿಖೆ ನಡೆಸಲು ಹೊರಡಿಸಿದ್ದ ಆದೇಶವನ್ನು ತಪ್ಪಾಗಿ ಅರ್ಥೈಸಿಕೊಂಡು ಹೈಕೋರ್ಟ್ ತಡೆಯಾಜ್ಞೆ ನೀಡಿದೆ. ಇದಕ್ಕೆ ತಡೆ ನೀಡಬೇಕು ಎಂದು ಜಗಮೋಹನ್ ರೆಡ್ಡಿ ಸರ್ಕಾರವು ಸುಪ್ರೀಂ ಕೋರ್ಟ್ ಮೆಟ್ಟಿಲೇರಿತ್ತು.

ಸಂಕ್ಷಿಪ್ತ ಸುದ್ದಿ

ಕೇರಳ: ಮಣಪ್ಪುರಂ ಫೈನಾನ್ಸ್ ಮೇಲೆ ಇ.ಡಿ ದಾಳಿ

ನವದೆಹಲಿ/ಕೊಚ್ಚಿ (ಪಿಟಿಐ): ಹಣ ಅಕ್ರಮ ವರ್ಗಾವಣೆ ಪ್ರಕರಣದ ತನಿಖೆಯ ಭಾಗವಾಗಿ ಜಾರಿ ನಿರ್ದೇಶನಾಲಯ (ಇ.ಡಿ.) ಬುಧವಾರ ಕೇರಳದ ಮಣಪ್ಪುರಂ ಫೈನಾನ್ಸ್‌ಗೆ ಸಂಬಂಧಿಸಿದ ಹಲವು ಸ್ಥಳಗಳಲ್ಲಿ ಶೋಧ ನಡೆಸಿದೆ ಎಂದು ಅಧಿಕೃತ ಮೂಲಗಳು ತಿಳಿಸಿವೆ.

ರಿಸರ್ವ್ ಬ್ಯಾಂಕ್ ಆಫ್ ಇಂಡಿಯಾ (ಆರ್‌ಬಿಐ) ಮಾರ್ಗಸೂಚಿಗೆ ವಿರುದ್ಧವಾಗಿ ಕಂಪನಿಯು ₹ 150 ಕೋಟಿ ಗಿಂತ ಹೆಚ್ಚಿನ ಸಾರ್ವಜನಿಕ ಠೇವಣಿಗಳನ್ನು ಸಂಗ್ರಹಿಸಿದೆ ಎಂಬ ಆರೋಪಕ್ಕೆ ಸಂಬಂಧಿಸಿದ ಪುರಾವೆಗಳನ್ನು ಸಂಗ್ರಹಿಸಲು ಶೋಧ ನಡೆಸಲಾಗಿದೆ ಎಂದು ಹೇಳಿವೆ.

ತ್ರಿಶೂರ್‌ನಲ್ಲಿ ಇರುವ ಕಂಪನಿಯ ಪ್ರಧಾನ ಕಚೇರಿ ಮತ್ತು ಅದರ ಪ್ರವರ್ತಕರ ಕಚೇರಿಗಳು ಸೇರಿದಂತೆ ಒಟ್ಟು ನಾಲ್ಕು ಕಡೆ ಶೋಧ ನಡೆಸಲಾಗಿದೆ ಎಂದು ಅಧಿಕಾರಿಗಳು ತಿಳಿಸಿದ್ದಾರೆ.

ಬ್ರಿಜ್ ಭೂಷಣ್ ಬಂಧನಕ್ಕೆ ಆಗ್ರಹ

ನವದೆಹಲಿ (ಪಿಟಿಐ): ಪ್ರತಿಭಟನನಿರತ ಕುಸ್ತಿಪಟುಗಳಿಗೆ ಬೆಂಬಲ ವ್ಯಕ್ತಪಡಿಸಿರುವ ವಿವಿಧ ವಿದ್ಯಾರ್ಥಿ ಸಂಘಟನೆಗಳು, ಬುಧವಾರ ದೆಹಲಿ ವಿಶ್ವವಿದ್ಯಾಲಯದ ಕಲಾ ವಿಭಾಗದ ಮುಂಭಾಗ ಪ್ರತಿಭಟನೆ ನಡೆಸಿ, ಭಾರತೀಯ ಕುಸ್ತಿ ಫೆಡರೇಷನ್ (ಡಬ್ಲ್ಯುಎಫ್‌ಐ) ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ಅವರನ್ನು ಕೂಡಲೇ ಬಂಧಿಸಬೇಕೆಂದು ಆಗ್ರಹಿಸಿದರು.

ಇದೇ ವೇಳೆ, ಬ್ರಿಜ್ ಭೂಷಣ್ ಅವರು ಡಬ್ಲ್ಯುಎಫ್‌ಐ ಅಧ್ಯಕ್ಷ ಸ್ಥಾನಕ್ಕೆ ರಾಜೀನಾಮೆ ನೀಡಬೇಕೆಂದು ವಿದ್ಯಾರ್ಥಿಗಳು ಒತ್ತಾಯಿಸಿದರು.

ಸ್ವಲ್ಪ ಸಮಯದ ಬಳಿಕ, ಪ್ರತಿಭಟನೆ ನಡೆಸಲು ಅನುಮತಿ ಪಡೆದಿಲ್ಲ ಎಂದು ಹೇಳಿದ ಪೊಲೀಸರು ಕೆಲವು ವಿದ್ಯಾರ್ಥಿಗಳನ್ನು ವಶಕ್ಕೆ ಪಡೆದರು.

'ದಿ ಕೇರಳ ಸ್ಟೋರಿ': ಅರ್ಜಿ ವಿಚಾರಣೆಗೆ 'ಸುಪ್ರೀಂ' ನಕಾರ

ನವದೆಹಲಿ (ಪಿಟಿಐ): 'ದಿ ಕೇರಳ ಸ್ಟೋರಿ' ಸಿನಿಮಾಗೆ ಸಂಬಂಧಿಸಿದಂತೆ ಸಲ್ಲಿಕೆಯಾಗಿರುವ ಅರ್ಜಿಗಳ ವಿಚಾರಣೆಗೆ ನಿರಾಕರಿಸಿರುವ ಸುಪ್ರೀಂ ಕೋರ್ಟ್, ಸಂಬಂಧಪಟ್ಟ ಹೈಕೋರ್ಟ್‌ನ ಮೊರೆ ಹೋಗುವಂತೆ ಅರ್ಜಿದಾರರಿಗೆ ತಿಳಿಸಿದೆ.

ಸಿನಿಮಾ ಬಿಡುಗಡೆಗೆ ತಡೆ ನೀಡುವಂತೆ ಕೋರಿ ಜಮೀಯತ್ ಉಲೇಮಾ ಎ ಹಿಂದ್ ಸಂಘಟನೆ ಸಲ್ಲಿಸಿದ್ದ ಅರ್ಜಿ ಮತ್ತು ಸಿನಿಮಾ ಹೆಸರಿನ ಜೊತೆ 'ಇದೊಂದು ಕಾಲ್ಪನಿಕ ಕಥೆ' ಎಂಬ ಮಾಹಿತಿ ಸೇರಿಸಬೇಕು ಎಂದು ಕೋರಿದ್ದ ಅರ್ಜಿಯೂ ಸೇರಿದಂತೆ ಸಂಬಂಧಿಸಿದ ಎಲ್ಲ ಅರ್ಜಿಗಳನ್ನು ತುರ್ತು ವಿಚಾರಣೆಗೆ ಪಟ್ಟಿ ಮಾಡಿ ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ಪಿ.ಎಸ್.ನರಸಿಂಹ ಅವರನ್ನು ಒಳಗೊಂಡ ಪೀಠಕ್ಕೆ ಸಲ್ಲಿಸಲಾಗಿತ್ತು.

ಭಕ್ತ ಸಾಗರ... ಚಿತಿರಾಯ್ ಹಬ್ಬದ 11ನೇ ದಿನವಾದ ಬುಧವಾರ ಮಧುರೆಯಲ್ಲಿ ನಡೆದ ಶ್ರೀ ಮೀನಾಕ್ಷಿ ಸುಂದರೇಶ್ವರರ್ ದೇವಸ್ಥಾನದ ರಥೋತ್ಸವದಲ್ಲಿ ಭಕ್ತರು ಅಪಾರ ಸಂಖ್ಯೆಯಲ್ಲಿ ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಪವಾರ್ ಉತ್ತರಾಧಿಕಾರಿ ಯಾರು?

ಪ್ರಜಾವಾಣಿ ವಾರ್ತೆ

ಮುಂಬೈ: ಹಿರಿಯ ಮುತ್ಸದ್ದಿ ಶರದ್ ಪವಾರ್ ಅವರು ನ್ಯಾಷನಲಿಸ್ಟ್ ಕಾಂಗ್ರೆಸ್ ಪಕ್ಷದ (ಎನ್‌ಸಿಪಿ) ಅಧ್ಯಕ್ಷ ಗಾದಿ ತೊರೆಯುವುದಾಗಿ ಪ್ರಕಟಿಸಿದ ಬೆನ್ನಲ್ಲೇ ಅವರ ಉತ್ತರಾಧಿಕಾರಿ ಯಾರಾಗುತ್ತಾರೆ ಎಂಬ ಕುತೂಹಲ ಮಹಾರಾಷ್ಟ್ರದಲ್ಲಿ ಗರಿಗೆದರಿದೆ.

ಉತ್ತರಾಧಿಕಾರಿ ಯಾರು ಎಂಬುದು ಪಕ್ಷದ ಮುಖಂಡರು ಮತ್ತು ಕಾರ್ಯಕರ್ತರಲ್ಲಿ ತೀವ್ರ ಚರ್ಚೆಗೆ ಗ್ರಾಸವಾಗಿದೆ. ಇದಕ್ಕೆ ಕೆಲವೇ ದಿನಗಳಲ್ಲಿ ಉತ್ತರ ಸಿಗುವ ನಿರೀಕ್ಷೆಯಿದೆ.

ಶರದ್ ಅವರ ಸೋದರ ಸಂಬಂಧಿ ಅಜಿತ್ ಪವಾರ್ ಮತ್ತು ಶರದ್ ಪುತ್ರಿ ಸುಪ್ರಿಯಾ ಸುಳೆ ರಾಜೀನಾಮೆ ವಾಪಸ್ ಪಡೆಯುವಂತೆ ಒತ್ತಡ ಹೇರುತ್ತಿದ್ದಾರೆ. ಆದರೆ, ಶರದ್ ಅವರು ತಮ್ಮ ನಿಲುವು ಬದಲಾಯಿಸಿಲ್ಲ. ಹೊಸ ಅಧ್ಯಕ್ಷರ ನೇಮಕಕ್ಕೆ ಕಮಿಟಿ ರಚಿಸಬೇಕು. ಆ ಕಮಿಟಿಯೇ ಅಧಿಕೃತವಾಗಿ ಹೊಸ ನಾಯಕನನ್ನು ಆಯ್ಕೆ ಮಾಡಬೇಕೆಂದು ಅವರು ಹೇಳಿರುವುದು ಕುತೂಹಲವನ್ನು ಇಮ್ಮಡಿಗೊಳಿಸಿದೆ.

ಬುಧವಾರವೂ ಶರದ್ ಅವರು, ಬ್ರೀಚ್ ಕ್ಯಾಂಡಿ ಪ್ರದೇಶದಲ್ಲಿರುವ ಸಿಲ್ವರ್ ಓಕ್ ಬಂಗಲೆ ಮತ್ತು ನಾರಿಮನ್ ಪಾಯಿಂಟ್‌ನಲ್ಲಿರುವ ಯಶವಂತರಾವ್ ಚವಾಣ್ ಪ್ರತಿಷ್ಠಾನದಲ್ಲಿ ಜನರನ್ನು ಭೇಟಿ ಮಾಡಿದರು.

ಅಜಿತ್ ಅಥವಾ ಸುಪ್ರಿಯಾ ಅವರಲ್ಲಿ ಒಬ್ಬರು ಎನ್‌ಸಿಪಿ ಅಧ್ಯಕ್ಷರಾಗಬಹುದು. ಹೊರಗಿನವರನ್ನೂ ಗದ್ದುಗೆಗೆ ಕೂರಿಸುವ ಸಾಧ್ಯತೆ ಇದೆ. ಆದರೆ, ಹಿರಿಯ ನಾಯಕನ ಮನಸ್ಸಿನಲ್ಲಿ ಯಾರಿದ್ದಾರೆ ಎಂಬ ಸುಳಿವನ್ನು ಅವರು ಬಿಟ್ಟುಕೊಟ್ಟಿಲ್ಲ. ಅಧ್ಯಕ್ಷ ಮತ್ತು ಕಾರ್ಯಾಧ್ಯಕ್ಷರನ್ನೂ ನೇಮಿಸುವ ಸಾಧ್ಯತೆ ತಳ್ಳಿಹಾಕುವಂತಿಲ್ಲ.

ಬಿಸಿಗಾಳಿಯಿಂದಾಗುವ ಪರಿಣಾಮಗಳ ಮುನ್ನೆಚ್ಚರಿಕೆ ನೀಡಲು ಸಹಾಯಕ

'ಬಿಸಿಗಾಳಿ ಅಪಾಯದ ಸೂಚ್ಯಂಕ' ನೀಡಲಿರುವ ಐಎಂಡಿ

ನವದೆಹಲಿ (ಪಿಟಿಐ): ತಾಪಮಾನದಿಂದ ಜನರ ಮೇಲಾಗುವ ಪರಿಣಾಮಗಳನ್ನು ಅಂದಾಜಿಸಲು ಹಾಗೂ ನಿರ್ದಿಷ್ಟ ಪ್ರದೇಶದ ಮೇಲೆ ಬಿಸಿಗಾಳಿಯು ಉಂಟು ಮಾಡಬಹುದಾದ ಪರಿಣಾಮಗಳ ಮುನ್ನೆಚ್ಚರಿಕೆ ನೀಡುವ 'ಬಿಸಿಗಾಳಿ ಅಪಾಯದ ಸೂಚ್ಯಂಕ'ವನ್ನು ಭಾರತೀಯ ಹವಾಮಾನ ಇಲಾಖೆ (ಐಎಂಡಿ) ಮುಂದಿನ ವರ್ಷದಿಂದ ನೀಡಲಿದೆ.

ದೇಶದ ವಿವಿಧ ಭಾಗಗಳಲ್ಲಿ ಗಾಳಿಯ ತಾಪ, ಅದಕ್ಕೆ ಸಂಬಂಧಿಸಿದಂತೆ ಇರುವ ಆರ್ದ್ರತೆ ಮತ್ತು ಅದು ಯಾವ ಪರಿಣಾಮ ಬೀರಲಿದೆ ಎಂಬ ಕುರಿತಂತೆ ಬಿಸಿಗಾಳಿ ಸೂಚ್ಯಂಕವನ್ನು ನಿರ್ದಿಷ್ಟ ಪ್ರದೇಶಗಳಲ್ಲಿ ಪ್ರಾಯೋಗಿಕ ರೂಪದಲ್ಲಿ ನೀಡುವುದನ್ನು ಕಳೆದ ವಾರ ಆರಂಭಿಸಲಾಗಿದೆ.

'ಬಿಸಿಗಾಳಿ ಮತ್ತು ಅಧಿಕ ತಾಪಮಾನವನ್ನು ಅಂದಾಜಿಸಲು ಬಳಸುತ್ತಿರುವ ಅಧ್ಯಯನ ವಿಧಾನಗಳಲ್ಲಿ, ನೀಡುತ್ತಿರುವ ಸೂಚ್ಯಂಕಗಳಲ್ಲಿ ಹಲವು ನ್ಯೂನ್ಯತೆಗಳಿವೆ' ಎಂದು ಕೇಂಬ್ರಿಜ್ ವಿಶ್ವವಿದ್ಯಾಲಯವು ಎರಡು ವಾರಗಳ ಹಿಂದಷ್ಟೇ ತನ್ನ ವರದಿಯಲ್ಲಿ ಪ್ರಕಟ ಮಾಡಿತ್ತು.

'ಕಳೆದ ವರ್ಷದ ಬೇಸಿಗೆಗಾಲದಲ್ಲಿ ಕಂಡುಬಂದ ಗರಿಷ್ಠ ಉಷ್ಣಾಂಶ, ಕನಿಷ್ಠ ಉಷ್ಣಾಂಶ, ತೇವಾಂಶ, ಗಾಳಿ ಹಾಗೂ ವಾತಾವರಣದಲ್ಲಿ ಎಷ್ಟು ಸಮಯದವರೆಗೆ ಬಿಸಿಗಾಳಿ ಇತ್ತು ಎನ್ನುವುದನ್ನು ಇಟ್ಟುಕೊಂಡು ನಾನು ಮತ್ತು ನನ್ನ ತಂಡ ವಿಶ್ಲೇಷಣೆ ನಡೆಸಿದೆ. ಇದರ ಪರಿಣಾಮವೇ ಹೊಸ ಸೂಚ್ಯಂಕ' ಎಂದು ಹವಾಮಾನ ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ಮಹಾಪಾತ್ರ ತಿಳಿಸಿದರು.

'ಬಿಸಿಗಾಳಿ ಸೂಚ್ಯಂಕವು ಪ್ರಾಯೋಗಿಕವಾದುದು. ಈ ವಿಷಯವನ್ನು ನಾವು ನಮ್ಮ ವೆಬ್‌ಸೈಟ್‌ನಲ್ಲೂ ಹೇಳಿದ್ದೇವೆ. ಆದ್ದರಿಂದ ಬಿಸಿಗಾಳಿಯ ಕುರಿತ ನಿಖರವಾದ ಮಾಹಿತಿ ನೀಡಲು ನಾವೇ ಹೊಸದೊಂದು ವ್ಯವಸ್ಥೆಯನ್ನು ತರಲಿದ್ದೇವೆ. ಅದುವೇ 'ಬಿಸಿಗಾಳಿ ಅಪಾಯದ ಸೂಚ್ಯಂಕ'. ಇದೊಂದು ಬಹು ಮಾನದಂಡಗಳನ್ನು ಕೂಡಿರುವ ಸೂಚ್ಯಂಕವಾಗಿದೆ. ಇದು ಬೇರೆಲ್ಲಾ ಸೂಚ್ಯಂಕಗಳಿಗಿಂತ ಉತ್ತಮವಾಗಿದೆ ಎಂಬ ಭರವಸೆ ಇದೆ' ಎನ್ನುತ್ತಾರೆ ಮೃತ್ಯುಂಜಯ.

'ಬಿಸಿಗಾಳಿ ಸೂಚ್ಯಂಕದಲ್ಲಿ ಗಾಳಿಯಲ್ಲಿನ ಉಷ್ಣತೆ ಹಾಗೂ ಆರ್ದ್ರತೆ ಎನ್ನುವ ಎರಡು ಮಾನದಂಡಗಳನ್ನು ಮಾತ್ರ ಗಣನೆಗೆ ತೆಗೆದುಕೊಳ್ಳಲಾಗುತ್ತಿತ್ತು. ಆದರೆ ಈಗ, ವಾತಾವರಣದಲ್ಲಿ ಎಷ್ಟು ಸಮಯದವರೆಗೆ ಬಿಸಿಗಾಳಿ ಇರಲಿದೆ ಮತ್ತು ಗಾಳಿ ಯಾವ ರೀತಿ ಇರಲಿದೆ ಎಂಬುದನ್ನೂ ಮಾನದಂಡಗಳನ್ನಾಗಿ ಮಾಡಿಕೊಂಡಿದ್ದೇವೆ' ಎಂದು ಹೇಳಿದರು.

'ಇನ್ನೆರಡು ತಿಂಗಳಲ್ಲಿ 'ಬಿಸಿಗಾಳಿ ಅಪಾಯದ ಸೂಚ್ಯಂಕ'ವು ಸಿದ್ಧಗೊಳ್ಳಲಿದೆ. ಮುಂದಿನ ಬೇಸಿಗೆಗಾಲದ ಹೊತ್ತಿಗೆ ಈ ಸೂಚ್ಯಂಕವನ್ನು ನೀಡಲು ಪ್ರಾರಂಭಿಸುತ್ತೇವೆ' ಎಂದು ಹೇಳಿದರು.

'ಆರೋಗ್ಯ ದತ್ತಾಂಶ ಸೇರಿಸಿಲ್ಲ'

'ಬಿಸಿಗಾಳಿ ಅಪಾಯದ ಸೂಚ್ಯಂಕ'ದಲ್ಲಿ ಆರೋಗ್ಯ ದತ್ತಾಂಶವನ್ನು ಮಾನದಂಡವಾಗಿ ಇರಿಸಿಕೊಂಡಿಲ್ಲ. ಏಕೆಂದರೆ, ದೇಶದ ಹಲವು ಪ್ರದೇಶಗಳ ಆರೋಗ್ಯದ ದತ್ತಾಂಶಗಳು ತಕ್ಷಣಕ್ಕೆ ಲಭ್ಯವಿಲ್ಲ. ಆದರೆ, ಮುಂದಿನ ದಿನಗಳಲ್ಲಿ ಇದನ್ನೂ ಸೇರಿಸಿಕೊಳ್ಳುವ ಕೆಲಸ ಮಾಡಲಾಗುವುದು ಎಂದು ಇಲಾಖೆಯ ಮಹಾನಿರ್ದೇಶಕ ಮೃತ್ಯುಂಜಯ ತಿಳಿಸಿದರು.

ಕಾರ್ ಬಾನೆಟ್ ಮೇಲೆ ಮೃತದೇಹ ಹೊತ್ತೊಯ್ದ ಚಾಲಕ

ನವದೆಹಲಿ (ಪಿಟಿಐ): ಕಾರಿನ ಬಾನೆಟ್ ಮೇಲೆ ಮೃತಪಟ್ಟ ಬೈಕ್ ಸವಾರನನ್ನು ಹೊತ್ತೊಯ್ದ ಘಟನೆ ಇಲ್ಲಿನ ಕಸ್ತೂರಬಾ ಗಾಂಧಿ ಮಾರ್ಗದಲ್ಲಿ ನಡೆದಿರುವುದು ಬೆಳಕಿಗೆ ಬಂದಿದೆ.

ದೀಪಾಂಶು ವರ್ಮಾ (30) ಮತ್ತು ಆತನ ಸಂಬಂಧಿ ಮುಕುಲ್ ವರ್ಮಾ (20) ಶನಿವಾರ ರಾತ್ರಿ ಬೈಕ್‌ನಲ್ಲಿ ಈ ಮಾರ್ಗವಾಗಿ ತೆರಳುತ್ತಿದ್ದರು. ಅತಿವೇಗವಾಗಿ ಬಂದ ಕಾರೊಂದು ಬೈಕ್‌ಗೆ ಡಿಕ್ಕಿ ಹೊಡೆದ ರಭಸಕ್ಕೆ ಮುಕುಲ್ ರಸ್ತೆ ಪಕ್ಕಕ್ಕೆ ಬಿದ್ದಿದ್ದಾರೆ. ದೀಪಾಂಶು ಕಾರಿನ ಬಾನೆಟ್ ಮೇಲೆ ಹಾರಿ ಬಿದ್ದಿದ್ದಾರೆ.

ಆಗ ಕಾರಿನ ಚಾಲಕ, ದೀಪಾಂಶು ಅವರನ್ನು ಅರ್ಧ ಕಿ.ಮೀ.ವರೆಗೂ ಹೊತ್ತೊಯ್ದಿದ್ದಾನೆ. ಬಳಿಕ ಅವರನ್ನು ರಸ್ತೆ ಪಕ್ಕಕ್ಕೆ ದೂಡಿ ಅಲ್ಲಿಂದ ಪರಾರಿಯಾಗಿದ್ದ. ಆಸ್ಪತ್ರೆಗೆ ಕರೆದೊಯ್ದಾಗ ದೀಪಾಂಶು ಮೃತಪಟ್ಟಿರುವುದನ್ನು ವೈದ್ಯರು ದೃಢಪಡಿಸಿದರು. ಪೊಲೀಸರು ಚಾಲಕನನ್ನು ಪತ್ತೆಹಚ್ಚಿ ಬಂಧಿಸಿದ್ದು, ಕಾರನ್ನು ವಶಕ್ಕೆ ಪಡೆದಿದ್ದಾರೆ.

ಇಶಾನ್ ಕಿಶನ್, ಸೂರ್ಯಕುಮಾರ್ ಅಬ್ಬರದ ಬ್ಯಾಟಿಂಗ್: ಲಿಯಾಮ್, ಜಿತೇಶ್ ಆಟ ವ್ಯರ್ಥ

ಮುಂಬೈ ಇಂಡಿಯನ್ಸ್ ಜಯಭೇರಿ

ಮೊಹಾಲಿ (ಪಿಟಿಐ): ಇಶಾನ್ ಕಿಶನ್ ಮತ್ತು ಸೂರ್ಯಕುಮಾರ್ ಯಾದವ್ ಅವರ ಸ್ಫೋಟಕ ಬ್ಯಾಟಿಂಗ್ ಮುಂಬೈ ತಂಡಕ್ಕೆ ಗೆಲುವು ತಂದುಕೊಟ್ಟಿತು.

ಪಂಜಾಬ್ ಕ್ರಿಕೆಟ್ ಸಂಸ್ಥೆ (ಪಿಸಿಎ) ಕ್ರೀಡಾಂಗಣದಲ್ಲಿ ಬುಧವಾರ ನಡೆದ ಐಪಿಎಲ್ ಪಂದ್ಯದಲ್ಲಿ ಮುಂಬೈ 6 ವಿಕೆಟ್‌ಗಳಿಂದ ಪಂಜಾಬ್ ಕಿಂಗ್ಸ್ ತಂಡಕ್ಕೆ ಸೋಲುಣಿಸಿತು.

ಮೊದಲು ಬ್ಯಾಟ್ ಮಾಡಿದ ಪಂಜಾಬ್ 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 214 ರನ್ ಗಳಿಸಿತು. ಅದಕ್ಕುತ್ತರವಾಗಿ ಮುಂಬೈ 18.5 ಓವರ್‌ಗಳಲ್ಲಿ 4 ವಿಕೆಟ್ ಕಳೆದುಕೊಂಡು 216 ರನ್ ಗಳಿಸಿತು.

ಬೃಹತ್ ಗುರಿ ಬೆನ್ನತ್ತಿದ ಮುಂಬೈ ತಂಡವು ನಾಯಕ ರೋಹಿತ್ ಶರ್ಮಾ ಅವರನ್ನು ಮೊದಲ ಓವರ್‌ನಲ್ಲಿ ಕಳೆದುಕೊಂಡಿತು. ಅವರನ್ನು ರಿಷಿ ಧವನ್ ಶೂನ್ಯಕ್ಕೆ ಔಟ್ ಮಾಡಿದರು. ಎರಡನೇ ವಿಕೆಟ್‌ಗೆ ಕ್ಯಾಮರಾನ್ ಗ್ರೀನ್ (23) ಹಾಗೂ ಇಶಾನ್ (75) 53 ರನ್ ಸೇರಿಸಿದರು. ಗ್ರೀನ್ ವಿಕೆಟ್ ಪತನದ ಬಳಿಕ ಇಶಾನ್‌ಗೆ ಜೊತೆಯಾದ ಸೂರ್ಯ (66) 3ನೇ ವಿಕೆಟ್‌ಗೆ 55 ಎಸೆತಗಳಲ್ಲಿ 116 ರನ್ ಕಲೆ ಹಾಕಿ ತಂಡವನ್ನು ಗೆಲುವಿನತ್ತ ಕೊಂಡೊಯ್ದರು.

ಇಶಾನ್ ಆಟದಲ್ಲಿ ಏಳು ಬೌಂಡರಿ ನಾಲ್ಕು ಸಿಕ್ಸರ್ ಇದ್ದರೆ, ಸೂರ್ಯ ಎಂಟು ಬೌಂಡರಿ ಎರಡು ಸಿಕ್ಸರ್ ಸಿಡಿಸಿದರು.

ಸೂರ್ಯ ಹಾಗೂ ಇಶಾನ್ ಕ್ರಮವಾಗಿ 16 ಮತ್ತು 17ನೇ ಓವರ್‌ನಲ್ಲಿ ಔಟಾದರೂ ಕೊನೆಯಲ್ಲಿ ಟಿಮ್ ಡೇವಿಡ್ ಮತ್ತು ತಿಲಕ್ ವರ್ಮಾ ತಂಡವನ್ನು ಜಯದ ದಡ ಸೇರಿಸಿದರು.

ಪಂಜಾಬ್ ವೇಗಿ ಅರ್ಷದೀಪ್ ಸಿಂಗ್ 66 ರನ್ ನೀಡಿ ದುಬಾರಿಯಾದರು.

ಶತಕದ ಜೊತೆಯಾಟ: ಲಿಯಾಮ್ ಲಿವಿಂಗ್‌ಸ್ಟೋನ್ ಮತ್ತು ಜಿತೇಶ್ ಶರ್ಮಾ ಅವರ ಶತಕದ ಜೊತೆಯಾಟದಿಂದಾಗಿ ಪಂಜಾಬ್ ತಂಡವು ಬೃಹತ್ ಮೊತ್ತ ಪೇರಿಸಿತ್ತು. ಲಿಯಾಮ್ (ಅಜೇಯ 82; 42ಎ) ಮತ್ತು ಜಿತೇಶ್ (ಅಜೇಯ 49; 27ಎ) ಮುರಿಯದ ನಾಲ್ಕನೇ ವಿಕೆಟ್ ಜೊತೆಯಾಟದಲ್ಲಿ 119 ರನ್ ಸೇರಿಸಿದರು. ಇದಕ್ಕಾಗಿ ಅವರಿಬ್ಬರೂ ಆಡಿದ್ದು 53 ಎಸೆತಗಳನ್ನು ಮಾತ್ರ!

ನಾಯಕ ಶಿಖರ್ ಧವನ್ (30; 20ಎ) ಹಾಗೂ ಮ್ಯಾಥ್ಯೂ ಶಾರ್ಟ್ (27; 26ಎ) ಕೂಡ ಮೊತ್ತ ಹೆಚ್ಚಲು ಕಾರಣರಾದರು.

ಸೂರ್ಯಕುಮಾರ್ ಯಾದವ್ (ಎಡ) ಮತ್ತು ಇಶಾನ್ ಕಿಶನ್– ಎಎಫ್‌ಪಿ ಚಿತ್ರ

ಸ್ಕೋರ್ ಕಾರ್ಡ್

ಪಂಜಾಬ್ ಕಿಂಗ್ಸ್ 3ಕ್ಕೆ214 (20 ಓವರ್‌ಗಳಲ್ಲಿ)
ಪ್ರಭಸಿಮ್ರನ್ ಸಿಂಗ್ ಸಿ ಇಶಾನ್ ಬಿ ಅರ್ಷದ್ 9 (7ಎ, 4X1)
ಶಿಖರ್ ಸ್ಟಂಪ್ಡ್ ಇಶಾನ್ ಬಿ ಚಾವ್ಲಾ 30 (20ಎ, 4X5)
ಮ್ಯಾಥ್ಯೂ ಬಿ ಚಾವ್ಲಾ 27 (26ಎ, 4X2, 6X1)
ಲಿವಿಂಗ್‌ಸ್ಟೋನ್ ಔಟಾಗದೆ 82 (42ಎ, 4X7, 6X4)
ಜಿತೇಶ್ ಔಟಾಗದೆ 49 (27ಎ, 4X5, 6X2)
ಇತರೆ: 17 (ಲೆಗ್‌ಬೈ 5, ವೈಡ್ 10, ನೋಬಾಲ್ 2)
ವಿಕೆಟ್ ಪತನ: 1–13 (ಪ್ರಭಸಿಮ್ರನ್ ಸಿಂಗ್ 1.3), 2–62 (ಶಿಖರ್ ಧವನ್; 7.2), 3–95 (ಮ್ಯಾಥ್ಯೂ ಶಾರ್ಟ್; 11.2)
ಬೌಲಿಂಗ್: ಕ್ಯಾಮರಾನ್ ಗ್ರೀನ್ 2–0–15–0, ಅರ್ಷದ್ ಖಾನ್ 4–0–48–1, ಜೋಫ್ರಾ ಆರ್ಚರ್ 4–0–56–0, ಪೀಯೂಷ್ ಚಾವ್ಲಾ 4–0–29–2, ಕುಮಾರ್ ಕಾರ್ತಿಕೇಯ 3–0–24–0, ಆಕಾಶ್ ಮಧ್ವಾಲ್ 3–0–37–0.
ಮುಂಬೈ ಇಂಡಿಯನ್ಸ್ 4ಕ್ಕೆ 216 (18.5 ಓವರ್‌ಗಳಲ್ಲಿ)
ರೋಹಿತ್ ಸಿ ಮ್ಯಾಥ್ಯು ಬಿ ರಿಷಿ 0 (3ಎ)
ಇಶಾನ್ ಸಿ ರಿಷಿ ಬಿ ಅರ್ಷದೀಪ್ 75 (41ಎ, 4X7, 6X4)
ಗ್ರೀನ್ ಸಿ ಚಾಹರ್ ಬಿ ಎಲ್ಲಿಸ್ 23 (18ಎ, 4X4),
ಸೂರ್ಯಕುಮಾರ್ ಸಿ ಅರ್ಷದೀಪ್ ಬಿ ಎಲ್ಲಿಸ್ 66 (31ಎ, 4X8, 6X2)
ಟಿಮ್ ಔಟಾಗದೆ 19 (10ಎ, 4X3)
ತಿಲಕ್ ಔಟಾಗದೆ 26 (10ಎ, 4X1, 6X3)
ಇತರೆ: 7 (ಬೈ 4, ವೈಡ್ 3)
ವಿಕೆಟ್ ಪತನ: 1-0 (ರೋಹಿತ್ ಶರ್ಮಾ, 0.3), 2-54 (ಕ್ಯಾಮರಾನ್ ಗ್ರೀನ್; 5.6), 3-170 (ಸೂರ್ಯಕುಮಾರ್ ಯಾದವ್; 15.1), 4-178 (ಇಶಾನ್ ಕಿಶನ್; 16.1)
ಬೌಲಿಂಗ್: ರಿಷಿ ಧವನ್ 3–0–20–1, ಅರ್ಷದೀಪ್ ಸಿಂಗ್ 3.5–0–66–1, ಸ್ಯಾಮ್ 3–0–41–0, ನೇಥನ್ ಎಲ್ಲಿಸ್ 4–0–34–2, ರಾಹುಲ್ ಚಾಹರ್ 3–0–30–0, ಹರ್‌ಪ್ರೀತ್ ಬ್ರಾರ್ 2–0–21–0
ಫಲಿತಾಂಶ: ಮುಂಬೈ ಇಂಡಿಯನ್ಸ್‌ಗೆ 6 ವಿಕೆಟ್‌ಗಳ ಜಯ

ಚೆನ್ನೈ–ಲಖನೌ ಪಂದ್ಯಕ್ಕೆ ಮಳೆ ಅಡ್ಡಿ

ಲಖನೌ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ಹಾಗೂ ಚೆನ್ನೈ ಸೂಪರ್ ಕಿಂಗ್ಸ್ ತಂಡಗಳ ನಡುವಣ ಪಂದ್ಯವು ಮಳೆಯಿಂದಾಗಿ ಸ್ಥಗಿತಗೊಂಡಿತು. ಉಭಯ ತಂಡಗಳಿಗೂ ತಲಾ ಒಂದು ಅಂಕ ಹಂಚಿಕೆ ಮಾಡಲಾಯಿತು.

ಆದರೆ ಲಖನೌ ತಂಡದ ಆಯುಷ್ ಬಡೋಣಿಯ ಅರ್ಧಶತಕ ಕ್ರಿಕೆಟ್ ಅಭಿಮಾನಿಗಳಿಗೆ ಮುದ ನೀಡಿತು. ಬುಧವಾರ ಬೆಳಿಗ್ಗೆ ಸುರಿದಿದ್ದ ಮಳೆಯಿಂದಾಗಿ ಮೈದಾನ ಹಸಿಯಾಗಿತ್ತು. ಅದರಿಂದಾಗಿ 15 ನಿಮಿಷ ತಡವಾಗಿ ಪಂದ್ಯ ಆರಂಭವಾಯಿತು.

ಟಾಸ್ ಗೆದ್ದ ಚೆನ್ನೈ ಸೂಪರ್ ಕಿಂಗ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೋಯಿನ್ ಅಲಿ, ಮಹೀಷ ತೀಕ್ಷಣ ಮತ್ತು ಮಥೀಷ ಪಥಿರಾಣಾ ಅವರು ಉತ್ತಮ ಬೌಲಿಂಗ್ ಮಾಡಿದರು. ಇದರಿಂದಾಗಿ ತಂಡವು ಕೇವಲ 44 ರನ್‌ಗಳಿಗೆ ಐದು ವಿಕೆಟ್ ಕಳೆದುಕೊಂಡಿತು. ಆದರೆ ಏಳನೇ ಕ್ರಮಾಂಕದಲ್ಲಿ ಕ್ರೀಸ್‌ಗೆ ಬಂದ ಯುವ ಬ್ಯಾಟರ್ ಆಯುಷ್ ಬಡೋಣಿ (ಔಟಾಗದೆ 59; 33ಎ, 4X2, 6X4) ಲಖನೌ ತಂಡಕ್ಕೆ ಆಸರೆಯಾದರು. ನಿಕೊಲಸ್ ಪೂರನ್ 31 ಎಸೆತಗಳಲ್ಲಿ 20 ರನ್ ಗಳಿಸಿದರು.

ತಂಡವು 19.2 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 125 ರನ್ ಗಳಿಸಿದ ಸಂದರ್ಭದಲ್ಲಿ ಮಳೆ ಆರಂಭವಾಯಿತು. ಆದರೆ ಮಳೆ ನಿಲ್ಲದ ಕಾರಣ ಪಂದ್ಯವನ್ನು ಸ್ಥಗಿತಗೊಳಿಸಲಾಯಿತು.

ಸಂಕ್ಷಿಪ್ತ ಸ್ಕೋರು: ಲಖನೌ ಸೂಪರ್ ಜೈಂಟ್ಸ್: 19.2 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 125 (ಮನನ್ ವೊಹ್ರಾ 10, ಕೈಲ್ ಮೇಯರ್ಸ್ 14, ನಿಕೊಲಸ್ ಪೂರನ್ 20, ಆಯುಷ್ ಬಡೋಣಿ ಅಜೇಯ 59, ಮೋಯಿನ್ ಅಲಿ 13ಕ್ಕೆ2, ಮಹೀಷ ತೀಕ್ಷಣ 37ಕ್ಕೆ2, ಮಥೀಷ ಪಥಿರಾಣ 22ಕ್ಕೆ2) ಮಳೆಯಿಂದಾಗಿ ಪಂದ್ಯ ಸ್ಥಗಿತ.

ಆಯುಷ್ ಬಡೋಣಿ –ಎಎಫ್‌ಪಿ ಚಿತ್ರ

ಸನ್‌ರೈಸರ್ಸ್–ಕೋಲ್ಕತ್ತ ಪೈಪೋಟಿ

ಹೈದರಾಬಾದ್ (ಪಿಟಿಐ): ಆತಿಥೇಯ ಸನ್‌ರೈಸರ್ಸ್ ಹೈದರಾಬಾದ್ ತಂಡವು ಗುರುವಾರ ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಕೋಲ್ಕತ್ತ ನೈಟ್ ರೈಡರ್ಸ್ ವಿರುದ್ಧ ಕಣಕ್ಕಿಳಿಯಲಿದೆ.

ಪ್ಲೇ ಆಫ್ ಪ್ರವೇಶದ ಹಾದಿ ಎರಡೂ ತಂಡಗಳಿಗೂ ಕಠಿಣವಾಗಿದೆ. ಸನ್‌ರೈಸರ್ಸ್ ತಂಡವು ಆಡಿರುವ ಎಂಟು ಪಂದ್ಯಗಳಲ್ಲಿ ಮೂರರಲ್ಲಿ ಗೆದ್ದು, ಐದರಲ್ಲಿ ಸೋತಿದೆ. ಕೋಲ್ಕತ್ತ ಒಂಬತ್ತು ಪಂದ್ಯಗಳನ್ನು ಆಡಿದೆ. ಅದರಲ್ಲಿ ಮೂರರಲ್ಲಿ ಜಯಿಸಿ ಆರು ಪಂದ್ಯಗಳನ್ನು ಸೋತಿದೆ.

ಏಡನ್ ಮರ್ಕರಂ ನಾಯಕತ್ವದ ಹೈದರಾಬಾದ್ ತಂಡವು ತನ್ನ ಕಳೆದ ಪಂದ್ಯದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಜಯಿಸಿತ್ತು. ಆ ಪಂದ್ಯದಲ್ಲಿ ಅಭಿಷೇಕ್ ಶರ್ಮಾ ಅರ್ಧಶತಕ ಗಳಿಸಿ ಉತ್ತಮ ಆರಂಭ ನೀಡಿದ್ದರು. ಕೆಳಕ್ರಮಾಂಕದಲ್ಲಿ ಹೆನ್ರಿಚ್ ಕ್ಲಾಸನ್ ಕೊನೆಯ ಹಂತದ ಓವರ್‌ಗಳಲ್ಲಿ ಅಬ್ಬರಿಸಿ ಅರ್ಧಶತಕ ಗಳಿಸಿದ್ದರು. ಆದರೆ ಮಯಂಕ್ ಅಗರವಾಲ್ ಇನ್ನೂ ಲಯ ಕಂಡುಕೊಳ್ಳುವ ಪ್ರಯತ್ನದಲ್ಲಿದ್ದಾರೆ.

ಸನ್‌ರೈಸರ್ಸ್ ತಂಡದ ಮಧ್ಯಮ ಕ್ರಮಾಂಕದ ಬ್ಯಾಟರ್‌ಗಳು ಹಾಗೂ ಬೌಲಿಂಗ್ ಪಡೆಯು ಕೋಲ್ಕತ್ತ ಎದುರು ಸಫಲವಾಗುವುದು ಮುಖ್ಯ ವಾಗಿದೆ. ಏಕೆಂದರೆ; ಕೋಲ್ಕತ್ತ ತಂಡದ ಬ್ಯಾಟಿಂಗ್ ವಿಭಾಗ ಬಲಿಷ್ಠವಾಗಿದೆ. ನಿತೀಶ್ ರಾಣಾ ನಾಯಕತ್ವದ ತಂಡದಲ್ಲಿ ವೆಂಕಟೇಶ್ ಅಯ್ಯರ್, ಆ್ಯಂಡ್ರೆ ರಸೆಲ್, ರಿಂಕು ಸಿಂಗ್, ಆಲ್‌ರೌಂಡರ್ ಶಾರ್ದೂಲ್ ಠಾಕೂರ್, ಸುನಿಲ್ ನಾರಾಯಣ್ ರನ್ ಗಳಿಸುವಲ್ಲಿ ನಿಷ್ಣಾತರು.

ತಂಡದ ಬೌಲಿಂಗ್ ವಿಭಾಗವು ಸ್ಪಿನ್ನರ್‌ಗಳಾದ ವರುಣ್ ಚಕ್ರವರ್ತಿ, ಸುಯಶ್ ಶರ್ಮಾ ಮತ್ತು ವೇಗಿ ಉಮೇಶ್ ಯಾದವ್ ಮೇಲೆ ಹೆಚ್ಚು ಅವಲಂಬಿತವಾಗಿದೆ.

ಪಂದ್ಯ ಆರಂಭ: ರಾತ್ರಿ 7.30

ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್ ವಾಹಿನಿ, ಜಿಯೊ ಸಿನಿಮಾ ಆ್ಯಪ್

ನಿತೀಶ್ ರಾಣಾ

ಪಾಯಿಂಟ್ಸ್ ಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ರದ್ದು	ಅಂಕ	ರನ್‌ರೇಟ್
ಗುಜರಾತ್	9	6	3	0	12	0.532
ಲಖನೌ	10	5	4	1	11	0.639
ಚೆನ್ನೈ	10	5	4	1	11	0.329
ರಾಜಸ್ಥಾನ	9	5	4	0	10	0.800
ಬೆಂಗಳೂರು	9	5	4	0	10	-0.030
ಮುಂಬೈ	9	5	4	0	10	-0.373
ಪಂಜಾಬ್	10	5	5	0	10	-0.472
ಕೋಲ್ಕತ್ತ	9	3	6	0	6	-0.147
ಹೈದರಾಬಾದ್	8	3	5	0	6	-0.577
ಡೆಲ್ಲಿ	9	3	6	0	6	-0.768

ಬುಧವಾರದ ಪಂದ್ಯಗಳ ಅಂತ್ಯಕ್ಕೆ

ಐಪಿಎಲ್ ಮತ್ತು ಕ್ರೀಡಾ ಸುದ್ದಿಗಳ ವಿಸ್ತೃತ ವರದಿ, ಮಾಹಿತಿಗಾಗಿ ಭೇಟಿ ನೀಡಿ
https://www.prajavani.net/cricket

ಪರ್ಪಲ್ ಕ್ಯಾಪ್ (ಹೆಚ್ಚು ವಿಕೆಟ್)

ಆಟಗಾರ	ತಂಡ	ವಿಕೆಟ್
ಶಮಿ	ಗುಜರಾತ್	17

ಆರೆಂಜ್ ಕ್ಯಾಪ್ (ಹೆಚ್ಚು ರನ್)

ಆಟಗಾರ	ತಂಡ	ರನ್
ಡುಪ್ಲೆಸಿ	ಆರ್‌ಸಿಬಿ	466

ಐಪಿಎಲ್‌ನಿಂದ ರಾಹುಲ್ ಔಟ್?

ನವದೆಹಲಿ (ಪಿಟಿಐ): ಲಖನೌ ಸೂಪರ್ ಜೈಂಟ್ಸ್ ತಂಡದ ನಾಯಕ ಕೆ.ಎಲ್. ರಾಹುಲ್ ಅವರು ಐಪಿಎಲ್ ಟೂರ್ನಿಯ ಮುಂದಿನ ಪಂದ್ಯಗಳಲ್ಲಿ ಆಡುವುದು ಅನುಮಾನ.

ಈಚೆಗೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಎದುರಿನ ಪಂದ್ಯದಲ್ಲಿ ಅವರು ಫೀಲ್ಡಿಂಗ್ ಮಾಡುವಾಗ ಬಲತೊಡೆಯ ಸ್ನಾಯುಸೆಳತದಿಂದ ಬಳಲಿದ್ದರು. ಈ ಗಾಯವು ಗಂಭೀರವಾಗಿದ್ದು, ಮುಂಬೈನಲ್ಲಿ ಚಿಕಿತ್ಸೆ ಪಡೆಯಲಿದ್ದಾರೆ. ತಂಡದ ಅನುಭವಿ ಮಧ್ಯಮವೇಗಿ ಜೈದೇವ್ ಉನದ್ಕತ್ ಅವರೂ ಭುಜದ ಗಾಯದಿಂದಾಗಿ ಐಪಿಎಲ್‌ನಿಂದ ಹೊರಬಿದ್ದಿದ್ದಾರೆ.

'ಸದ್ಯ ರಾಹುಲ್ ಅವರು ತಂಡದೊಂದಿಗೆ ಇದ್ದಾರೆ. ಗುರುವಾರ ಅವರು ಮುಂಬೈಗೆ ತೆರಳುವರು. ರಾಹುಲ್ ಮತ್ತು ಜೈದೇವ್ ಅವರ ಚಿಕಿತ್ಸೆಯ ನಿರ್ವಹಣೆಯನ್ನು ಬಿಸಿಸಿಐ ನೋಡಿಕೊಳ್ಳಲಿದೆ' ಎಂದು ಮೂಲಗಳು ತಿಳಿಸಿವೆ.

ಮುಂದಿನ ತಿಂಗಳು 7ರಿಂದ 11ರವರೆಗೆ ದಿ ಓವಲ್‌ನಲ್ಲಿ ನಡೆಯಲಿರುವ ಡಬ್ಲ್ಯುಟಿಸಿ ಫೈನಲ್‌ಗೆ ತೆರಳುವ ಕುರಿತು ಈಗಲೇ ಏನೂ ಹೇಳಲಾಗದು' ಎಂದೂ ಮೂಲಗಳು ತಿಳಿಸಿದವು.

ರಜತ್ ಪಾಟೀದಾರ್‌ಗೆ ಶಸ್ತ್ರಚಿಕಿತ್ಸೆ

ಬೆಂಗಳೂರು: ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡದ ಆಟಗಾರ ರಜತ್ ಪಾಟೀದಾರ್ ಅವರ ಹಿಮ್ಮಡಿಯ ಗಾಯಕ್ಕೆ ಶಸ್ತ್ರಚಿಕಿತ್ಸೆ ಮಾಡಲಾಗಿದೆ.

ಮಧ್ಯಪ್ರದೇಶದ 29 ವರ್ಷದ ರಜತ್ ಐಪಿಎಲ್ ಟೂರ್ನಿಗೂ ಮುನ್ನ ಆರ್‌ಸಿಬಿ ಶಿಬಿರದಲ್ಲಿದ್ದಾಗಲೇ ಗಾಯಗೊಂಡಿದ್ದರು. ಆದ್ದರಿಂದ ಅವರನ್ನು ಎನ್‌ಸಿಎ (ರಾಷ್ಟ್ರೀಯ ಕ್ರಿಕೆಟ್ ಅಕಾಡೆಮಿ)ಗೆ ಪುನಶ್ಚೇತನಕ್ಕಾಗಿ ಕಳುಹಿಸಲಾಗಿತ್ತು. ಆದ್ದರಿಂದ ಅವರು ಐಪಿಎಲ್‌ನಿಂದ ಹೊರಗುಳಿದರು. ಆದರೆ ಅಲ್ಲಿ ಅವರು ಚೇತರಿಸಿಕೊಳ್ಳದ ಕಾರಣ ಶಸ್ತ್ರಚಿಕಿತ್ಸೆ ಮಾಡಲಾಯಿತು.ಹೋದ ವರ್ಷದ ಐಪಿಎಲ್ ಪ್ಲೇ ಆಫ್‌ನಲ್ಲಿ ಅವರು ಅಜೇಯ ಶತಕ ಗಳಿಸಿದ್ದರು.

ಕೃಷ್ಣಭಟ್ ಬಿಎಫ್‌ಐ ಆಡಳಿತಗಾರ

ನವದೆಹಲಿ (ಪಿಟಿಐ): ಭಾರತ ಬ್ಯಾಸ್ಕೆಟ್‌ಬಾಲ್ ಫೆಡರೇಷನ್ (ಬಿಎಫ್‌ಐ) ಮಂಡಳಿಗೆ ಚುನಾವಣೆ ನಡೆಸುವ ಉದ್ದೇಶದಿಂದ ಕರ್ನಾಟಕ ಹೈಕೋರ್ಟ್‌ನ ನಿವೃತ್ತ ನ್ಯಾಯಮೂರ್ತಿ ಪಿ. ಕೃಷ್ಣಭಟ್ ಅವರನ್ನು ಫೆಡರೇಷನ್‌ನ ಆಡಳಿತಗಾರರನ್ನಾಗಿ ದೆಹಲಿ ಹೈಕೋರ್ಟ್ ಬುಧವಾರ ನೇಮಿಸಿದೆ.

'ಹೊಸ ಆಡಳಿತ ಮಂಡಳಿ ಆಯ್ಕೆಯಾಗುವವರೆಗೆ ಬಿಎಫ್‌ಐನ ವ್ಯವಹಾರಗಳನ್ನು ನೋಡಿಕೊಳ್ಳಲು ಹಾಗೂ ಕ್ರೀಡಾ ನೀತಿಯ ಅನ್ವಯ ಆದಷ್ಟು ಶೀಘ್ರ ಚುನಾವಣಾ ಪ್ರಕ್ರಿಯೆಯನ್ನು ನಡೆಸುಕೊಡುವಂತೆ ಕೃಷ್ಣಭಟ್ ಅವರಿಗೆ ನ್ಯಾಯಮೂರ್ತಿ ಪುರುಷೇಂದ್ರ ಕುಮಾರ್ ಕೌರವ್ ಸೂಚಿಸಿದ್ದಾರೆ. 2023–2027ರ ಅವಧಿಗೆ ಬಿಎಫ್‌ಐ ಕಾರ್ಯಕಾರಿ ಸಮಿತಿ ಸದಸ್ಯರು ಹಾಗೂ ಪದಾಧಿಕಾಗಳ ಚುನಾವಣೆಗೆ ಸಂಬಂಧಿಸಿ ಸಲ್ಲಿಸಿದ್ದ ಅರ್ಜಿಗಳ ವಿಚಾರಣೆ ನಡೆಸಿ ಮಂಗಳವಾರ ಕೋರ್ಟ್ ಈ ಆದೇಶ ನೀಡಿದೆ.

ಜಂತರ್ ಮಂಥರ್‌ನಲ್ಲಿ ಪ್ರತಿಭಟನನಿರತರ ಭೇಟಿಯಾದ ಐಒಎ ಅಧ್ಯಕ್ಷೆ

ಕುಸ್ತಿಪಟುಗಳಿಗೆ ಬೆಂಬಲ: ಉಷಾ

ನವದೆಹಲಿ (ಪಿಟಿಐ): ಭಾರತ ಒಲಿಂಪಿಕ್ ಸಂಸ್ಥೆ ಅಧ್ಯಕ್ಷೆ ಪಿ.ಟಿ.ಉಷಾ ಅವರು ಜಂತರ್ ಮಂಥರ್‌ನಲ್ಲಿ ಪ್ರತಿಭಟನೆಯಲ್ಲಿ ತೊಡಗಿರುವ ಮಹಿಳಾ ಕುಸ್ತಿಪಟುಗಳನ್ನು ಬುಧವಾರ ಭೇಟಿಯಾಗಿ ಬೆಂಬಲದ ಭರವಸೆ ನೀಡಿದ್ದಾರೆ. ತಾವು ಮೊದಲು ಅಥ್ಲೀಟ್, ನಂತರ ಆಡಳಿತಗಾರ್ತಿ ಎಂದು ಹೇಳಿದ್ದಾರೆ.

ಮಹಿಳೆಯಾಗಿ, ಮಹಿಳಾ ಕುಸ್ತಿಪಟುಗಳ ಹೋರಾಟದ ಬಗ್ಗೆ ಸಂವೇದನಾರಹಿತ ಹೇಳಿಕೆ ನೀಡಿದ್ದಾರೆ ಎಂಬ ಟೀಕೆಗಳನ್ನು ಮಾಜಿ ಒಲಿಂಪಿಯನ್ ಉಷಾ ವಿವಿಧ ವಲಯಗಳಿಂದ ಎದುರಿಸುತ್ತಿದ್ದರು.

'ಕುಸ್ತಿಪಟುಗಳು ಸಮಸ್ಯೆಗಳ ಬಗ್ಗೆ ಐಒಎಯನ್ನು ಸಂಪರ್ಕಿಸುವ ಬದಲು ಧರಣಿ ಪುನರಾರಂಭಿಸಿದ್ದು ಸರಿಯಲ್ಲ' ಎಂದು ಉಷಾ ಕಳೆದ ವಾರ ಹೇಳಿದ್ದರು. ಕುಸ್ತಿಪಟುಗಳು ಶಿಸ್ತು ಪ್ರದರ್ಶಿಸಬೇಕಿತ್ತು. ಬೀದಿಗಿಳಿಯುವ ಮೂಲಕ ದೇಶದ ವರ್ಚಸ್ಸಿಗೆ ಕಳಂಕ ಮೆತ್ತಿದ್ದಾರೆ ಎಂದು ಹೇಳಿದ್ದು ಐಒಎ ವಿರುದ್ಧವೂ ಟೀಕೆಗೆ ಕಾರಣವಾಗಿತ್ತು.

ಕುಸ್ತಿಪಟುಗಳನ್ನು ಭೇಟಿಯಾದ ಬಳಿಕ ಉಷಾ ಮಾಧ್ಯಮಗಳ ಜೊತೆ ಮಾತನಾಡಲಿಲ್ಲ. ಆದರೆ ಭಜರಂಗ್ ಪೂನಿಯಾ ಮಾತನಾಡಿ, 'ತಮ್ಮ ಹೋರಾಟಕ್ಕೆ ನೆರವಾಗುವುದಾಗಿ ಅವರು ಭರವಸೆ ನೀಡಿದ್ದಾರೆ' ಎಂದರು.

'ಈ ಮೊದಲು ಉಷಾ ಹೇಳಿಕೆಯಿಂದ ನಮಗೆಲ್ಲಾ ಬೇಸರವಾಗಿತ್ತು. ಆದರೆ ತಮ್ಮ ಮಾತುಗಳನ್ನು ತಪ್ಪಾಗಿ ಅರ್ಥೈಸಲಾಗಿದೆ ಎಂದು ಅವರು (ಉಷಾ) ಹೇಳಿದರು. ತಾವು ಮೊದಲು ಅಥ್ಲೀಟ್, ನಂತರ ಆಡಳಿತಗಾರ್ತಿ ಎಂದೂ ಹೇಳಿದರು' ಎಂದು ಟೋಕಿಯೊ ಒಲಿಂಪಿಕ್ಸ್ ಕಂಚಿನ ಪದಕ ವಿಜೇತ ಭಜರಂಗ್ ಹೇಳಿದರು.

'ನಮಗೆ ನ್ಯಾಯ ಬೇಕು. ನಮ್ಮ ಹೋರಾಟ ಸರ್ಕಾರದ, ವಿರೋಧ ಪಕ್ಷಗಳ ವಿರುದ್ಧ ಅಲ್ಲ. ಕುಸ್ತಿಯ ಒಳಿತಿಗಾಗಿ ನಾವಿಲ್ಲಿ ಕುಳಿತಿದ್ದೇವೆ. ಈ ಸಮಸ್ಯೆ ಬಗೆಹರಿಸಬೇಕು. ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್‌ಭೂಷಣ್ ಸಿಂಗ್ ವಿರುದ್ಧ ಆರೋಪಗಳು ಸಾಬೀತಾದಲ್ಲಿ ಕಾನೂನು ಕ್ರಮ ಕೈಗೊಳ್ಳಬೇಕು ಎಂದಷ್ಟೇ ನಾವು ಕೇಳಿದ್ದೇವೆ' ಎಂದರು.

ಸರ್ಕಾರದ ಕಡೆಯಿಂದ ಉಷಾ ಏನಾದರೂ ಪರಿಹಾರ ಸೂತ್ರ ಮುಂದಿಟ್ಟರೇ ಎಂಬ ಪ್ರಶ್ನೆಗೆ 'ಅಂಥದ್ದೇನೂ ನಡೆದಿಲ್ಲ, ನಮ್ಮ ಜೊತೆ ಇದ್ದೇನೆ ಎಂದಷ್ಟೇ ಅವರು ಹೇಳಿದರು' ಎಂದು ಪ್ರತಿಕ್ರಿಯಿಸಿದರು.

ಉಷಾ ಭೇಟಿಯ ನಂತರ ಸಮಾಧಾನ ಆಗಿದೆಯೇ ಎಂದು ಕೇಳಿದ್ದಕ್ಕೆ, 'ಅವರು ಭರವಸೆ ಕೊಟ್ಟಿಲ್ಲಿ, ಅದನ್ನು ಈಡೇರಿಸಬೇಕೆಂಬುದು ನಮ್ಮ ಅಪೇಕ್ಷೆ. ಸಮಸ್ಯೆಗಳಿಗೆ ಪರಿಹಾರ ಸಿಕ್ಕಿ ನಮಗೆ ನ್ಯಾಯ ದೊರಕುವ ವಿಶ್ವಾಸವಿದೆ. ಅದಾಗದಿದ್ದಲ್ಲಿ ನಮ್ಮ ಪ್ರತಿಭಟನೆ ಮುಂದುವರಿಯುತ್ತದೆ ಎಂದು ನಾವು ಅವರಿಗೆ ಸ್ಪಷ್ಟಪಡಿಸಿದ್ದೇವೆ' ಎಂದರು.

'ಅವರು ಆಡಿದ ಮಾತುಗಳ ಪ್ರಕಾರ ನಡೆದುಕೊಂಡು, ಅದೇ ದಾರಿಯಲ್ಲಿ ಕ್ರಮಗಳನ್ನು ಕೈಗೊಂಡರೆ ಖಂಡಿತ ಈ ವಿಷಯದಲ್ಲಿ ಪರಿಹಾರ ಸಿಗುತ್ತದೆ. ನಮ್ಮ ಎಲ್ಲ ಸಮಸ್ಯೆಗಳನ್ನು ಬಗೆಹರಿಸಲು ಪ್ರಯತ್ನಿಸುತ್ತೇನೆ ಎಂದು ಹೇಳಿದ್ದಾರೆ. ಅವರು ಬಯಸಿದ್ದಲ್ಲಿ ಏನು ಬೇಕಾದರೂ ಮಾಡಲು ಸಾಧ್ಯವಿದೆ' ಎಂದರು.

ಜಂತರ್‌ಮಂಥರ್‌ನಲ್ಲಿ ಕುಸ್ತಿಪಟುಗಳಾದ ಸಾಕ್ಷಿ ಮಲಿಕ್ (ಎಡ) ಹಾಗೂ ಸಂಗೀತಾ ಫೋಗಟ್ ಅವರೊಂದಿಗೆ ಪಿ.ಟಿ. ಉಷಾ (ಮಧ್ಯೆ) – ಪಿಟಿಐ ಚಿತ್ರ

ಕುಸ್ತಿಪಟುಗಳ ದೂರು: ಇಂದು ವಿಚಾರಣೆ ಸಾಧ್ಯತೆ

ನವದೆಹಲಿ (ಪಿಟಿಐ): ಭಾರತ ಕುಸ್ತಿ ಫೆಡರೇಷನ್ ಅಧ್ಯಕ್ಷ ಬ್ರಿಜ್ ಭೂಷಣ್ ಶರಣ್ ಸಿಂಗ್ ವಿರುದ್ಧ ಲೈಂಗಿಕ ಕಿರುಕುಳದ ಆರೋಪ ಮಾಡಿರುವ ಏಳು ಮಂದಿ ಮಹಿಳಾ ಕುಸ್ತಿಪಟುಗಳು ಸುಪ್ರೀಂ ಕೋರ್ಟ್ ಮೆಟ್ಟಿಲೇರಿದ್ದು, ಮುಚ್ಚಿದ ಲಕೋಟೆಯಲ್ಲಿ ಪ್ರಮಾಣಪತ್ರ ಸಲ್ಲಿಸಲು ಅನುಮತಿ ಕೋರಿದ್ದಾರೆ.

ಮಹಿಳಾ ಕುಸ್ತಿಪಟುಗಳ ದೂರಿನ ಮೇಲೆ ಏ. 28ರಂದು ದೆಹಲಿ ಪೊಲೀಸರು ಬ್ರಿಜ್ ಭೂಷಣ್ ವಿರುದ್ಧ ಎರಡು ಎಫ್‌ಐಆರ್‌ಗಳನ್ನು ದಾಖಲಿಸಿದ್ದರು.

ಮುಖ್ಯ ನ್ಯಾಯಮೂರ್ತಿ ಡಿ.ವೈ. ಚಂದ್ರಚೂಡ್ ಮತ್ತು ನ್ಯಾಯಮೂರ್ತಿ ಪಿ.ಎಸ್.ನರಸಿಂಹ ಅವರನ್ನೊಳಗೊಂಡ ಪೀಠದ ಎದುರು ಬುಧವಾರ ಹಾಜರಾದ ಮಹಿಳಾ ಕುಸ್ತಿಪಟುಗಳ ಪರ ವಕೀಲರು, ಮುಚ್ಚಿದ ಲಕೋಟೆಯಲ್ಲಿ ಪ್ರಮಾಣಪತ್ರ ಸಲ್ಲಿಸಲು ಅನುಮತಿ ಕೋರಿದರು. ಮುಚ್ಚಿದ ಲಕೋಟೆಯಲ್ಲಿ ಪ್ರಮಣಪತ್ರವನ್ನು ಗುರುವಾರ ಸಲ್ಲಿಸುವಂತೆ ಕೋರ್ಟ್ ಹೇಳಿತು. ಈ ಸಂಬಂಧ ವಿಚಾರಣೆ ಗುರುವಾರ ನಿಗದಿಯಾಗಿದೆ.

'ಪ್ರಮಾಣಪತ್ರದ ಪ್ರತಿಯನ್ನು ಸಾಲಿಸಿಟರ್ ಜನರಲ್ ಅವರಿಗೆ ನೀಡುವುದಕ್ಕೆ ತಮಗೇನೂ ಸಮಸ್ಯೆಯಿಲ್ಲ ಆದರೆ ಇದು ಸಾರ್ವಜನಿಕವಾಗಿ ಲಭ್ಯವಾಗಬಾರದು' ಎಂದು ವಕೀಲರು ಹೇಳಿದರು. ಪ್ರಮಾಣಪತ್ರದ ಪ್ರತಿಯನ್ನು ಮೆಹ್ತಾ ಅವರಿಗೂ ನೀಡಲು ಹೇಳಿತು.

'ಪ್ರಕರಣದ ವಿಚಾರಣೆ ಪ್ರಗತಿಯಲ್ಲಿದೆ. ಅರ್ಜಿದಾರರು ಪ್ರಕರಣಕ್ಕೆ ಸಂಬಂಧಿಸಿದ ಮಾಹಿತಿಯನ್ನು ತನಿಖಾಧಿಕಾರಿಗೆ ಒದಗಿಸಬಹುದು' ಎಂದು ಮೆಹ್ತಾ ಪೀಠಕ್ಕೆ ತಿಳಿಸಿದರು. ತಮಗೆ ಒದಗಿಸಿರುವ ಮಾಹಿತಿಯನ್ನು ತನಿಖಾಧಿಕಾರಿ ಜೊತೆ ಹಂಚಿಕೊಳ್ಳಬಹುದೇ ಎಂದು ಕೇಳಿದಾಗ ಕೋರ್ಟ್ ಒಪ್ಪಿಗೆ ಸೂಚಿಸಿತು.

ವಿಶ್ವ ಪುರುಷರ ಬಾಕ್ಸಿಂಗ್ ಚಾಂಪಿಯನ್‌ಷಿಪ್

ನಿಶಾಂತ್‌ಗೆ ಭರ್ಜರಿ ಗೆಲುವು

ತಾಷ್ಕೆಂಟ್, ಉಜ್ಬೇಕಿಸ್ತಾನ (ಪಿಟಿಐ): ಬಲಿಷ್ಠ ಪಂಚ್‌ಗಳಿಂದ ಎದುರಾಳಿಯನ್ನು ಕಂಗೆಡಿಸಿದ ಭಾರತದ ಯುವ ಬಾಕ್ಸರ್ ನಿಶಾಂತ್ ಅವರು ವಿಶ್ವ ಪುರುಷರ ಬಾಕ್ಸಿಂಗ್ ಚಾಂಪಿಯನ್‌ಷಿಪ್‌ನ ಪ್ರೀಕ್ವಾರ್ಟರ್‌ಫೈನಲ್‌ಗೆ ಲಗ್ಗೆಯಿಟ್ಟರು.

ಇಲ್ಲಿ ನಡೆಯುತ್ತಿರುವ ಚಾಂಪಿಯನ್‌ಷಿಪ್‌ನ 71 ಕೆಜಿ ವಿಭಾಗದ ಮೊದಲ ಸುತ್ತಿನ ಬೌಟ್‌ನಲ್ಲಿ 22 ವರ್ಷದ ನಿಶಾಂತ್ 5–0ಯಿಂದ ಅಜರ್‌ಬೈಜಾನ್‌ನ ಸರ್‌ಖಾನ್ ಅಲಿಯೆವ್ ಅವರನ್ನು ಪರಾಭವಗೊಳಿಸಿದರು.

ಅಮೋಘ ತಾಂತ್ರಿಕ ಕೌಶಲ ಹಾಗೂ ಬಿರುಸಿನ ಪಂಚ್‌ಗಳ ಮೂಲಕ ನಿಶಾಂತ್ 2021ರ ವಿಶ್ವ ಚಾಂಪಿಯನ್‌ಷಿಪ್ ಕಂಚಿನ ಪದಕ ವಿಜೇತ ಬಾಕ್ಸರ್‌ಗೆ ಸೋಲಿನ ರುಚಿ ತೋರಿಸಿದರು.

ನಿಶಾಂತ್ ಅವರಿಗೆ ಮುಂದಿನ ಸುತ್ತಿನಲ್ಲಿ ದಕ್ಷಿಣ ಕೊರಿಯಾದ ಲೀ ಸಂಗ್ಮಿನ್ ಸವಾಲು ಎದುರಾಗಿದೆ.

ಗುರುವಾರ ನಡೆಯಲಿರುವ ಮೊದಲ ಸುತ್ತಿನ ಬೌಟ್‌ಗಳಲ್ಲಿ ಭಾರತದ ಗೋವಿಂದ್ ಸಾಹ್ನಿ (48 ಕೆಜಿ ವಿಭಾಗ), ದೀಪಕ್ ಕುಮಾರ್ (51 ಕೆಜಿ), ಶಿವ ಥಾಪಾ (63.5 ಕೆಜಿ) ಮತ್ತು ನರೇಂದರ್ ಬೆರ್ವಾಲ್ (+92 ಕೆಜಿ) ಕಣಕ್ಕಿಳಿಯಲಿದ್ದಾರೆ.

ಎದುರಾಳಿಗೆ ಪಂಚ್ ಮಾಡಿದ ಭಾರತದ ನಿಶಾಂತ್ ದೇವ್ (ಎಡ)– ಬಿಎಫ್‌ಐ ಮೀಡಿಯಾ ಚಿತ್ರ

ಸಂಕ್ಷಿಪ್ತ ಸುದ್ದಿ

ಆರ್ಚರಿ: ಕ್ಲೀನ್‌ಸ್ವೀಪ್ ಸಾಧನೆಯತ್ತ ಭಾರತ

ಅಭಿಷೇಕ್

ತಾಷ್ಕೆಂಟ್, ಉಜ್ಬೇಕಿಸ್ತಾನ (ಪಿಟಿಐ): ಏಷ್ಯಾಕಪ್ ಎರಡನೇ ಲೆಗ್ ವಿಶ್ವ ರ‍್ಯಾಂಕಿಂಗ್ ಆರ್ಚರಿಯ ಕಾಂಪೌಂಡ್ ವಿಭಾಗದಲ್ಲಿ ಭಾರತ ಕ್ಲೀನ್‌ಸ್ವೀಪ್ ಸಾಧನೆಯ ಹಂತದಲ್ಲಿದೆ.

ಇಲ್ಲಿ ನಡೆಯುತ್ತಿರುವ ಟೂರ್ನಿಯ ಪುರುಷರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲಿ ಅಭಿಷೇಕ್ ವರ್ಮಾ ಹಾಗೂ ಅಮಿತ್ ಫೈನಲ್ ತಲುಪಿದರು. ಸೆಮಿಫೈನಲ್‌ಗಳಲ್ಲಿ ಅಭಿಷೇಕ್ 148–140 ಪಾಯಿಂಟ್ಸ್‌ನಿಂದ ಕಜಕಸ್ತಾನದ ಸ್ರೆಜೆಯ್ ಕ್ರಿಸ್ಟಿಚ್ ಎದುರು ಗೆದ್ದರೆ, ಅಮಿತ್ 146-144 ಭಾರತದವರೇ ಆದ ಕುಶಾಲ್ ದಲಾಲ್ ಅವರನ್ನು ಮಣಿಸಿದರು.

ಫೈನಲ್‌ನಲ್ಲಿ ಅಭಿಷೇಕ್ ಹಾಗೂ ಅಮಿತ್ ಸೆಣಸಲಿದ್ದಾರೆ. ಕುಶಾಲ್ ಅವರು ಕಂಚಿನ ಪದಕಕ್ಕೆ ಪೈಪೋಟಿ ನಡೆಸುವರು. ಮಹಿಳೆಯರ ಕಾಂಪೌಂಡ್ ವೈಯಕ್ತಿಕ ವಿಭಾಗದಲ್ಲೂ ಭಾರತದ ರಾಗಿಣಿ ಮಾರ್ಕೂ ಹಾಗೂ ಪ್ರಗತಿ ಚಿನ್ನದ ಪದಕದ ಸುತ್ತು ಪ್ರವೇಶಿಸಿದರು. ನಾಲ್ಕರ ಘಟ್ಟದ ಸ್ಪರ್ಧೆಗಳಲ್ಲಿ ರಾಗಿಣಿ 146-141ರಿಂದ ಪರ್ಣೀತ್ ಕೌರ್ ವಿರುದ್ಧ, ಇಷ್ಟೇ ಅಂತರದಿಂದ ಪ್ರಗತಿ ಕಜಕಸ್ತಾನದ ಅದೆಲ್ ಜೆಕ್ಸೆನ್‌ಬಿನೊವಾ ಎದುರು ಗೆಲುವು ಸಾಧಿಸಿದರು. ಪರ್ಣೀತ್ ಕಂಚಿನ ಪದಕಕ್ಕಾಗಿ ಸೆಣಸಲಿದ್ದಾರೆ.

ಪುರುಷರ ರಿಕರ್ವ್ ವಿಭಾಗದಲ್ಲಿ ಮೃಣಾಲ್ , ಮಹಿಳೆಯರ ವಿಭಾಗದಲ್ಲಿ ಸಂಗೀತಾ ಕೂಡ ಫೈನಲ್ ತಲುಪಿದರು.

ದುಬೈನಲ್ಲಿ ಗ್ಲೋಬಲ್ ಚೆಸ್ ಲೀಗ್

ದುಬೈ: ಫಿಡೆ ಮತ್ತು ಟೆಕ್ ಮಹೀಂದ್ರ ಸಹಯೋಗದಲ್ಲಿ ಹಮ್ಮಿಕೊಂಡಿರುವ ಜಾಗತಿಕ ಚೆಸ್ ಲೀಗ್‌ನ (ಜಿಸಿಎಲ್) ಮೊದಲ ಆವೃತಿ ಜೂನ್ 21 ರಿಂದ ಜು. 2ರವರೆಗೆ ದುಬೈನಲ್ಲಿ ನಡೆಯಲಿದೆ. ಲೀಗ್ ನಡೆಯುವ ತಾಣವನ್ನು ಇಂದು ಗಣ್ಯರ ಸಮ್ಮುಖದಲ್ಲಿ ನಿರ್ಧರಿಸಲಾಯಿತು. ತಲಾ ಆರು ಆಟಗಾರರಿರುವ ಆರು ತಂಡಗಳು ಈ ಲೀಗ್‌ನಲ್ಲಿ ಭಾಗವಹಿಸಲಿವೆ. ಪ್ರತಿ ತಂಡದಲ್ಲಿ ಒಬ್ಬ ಐಕನ್ ಆಟಗಾರ, ಕನಿಷ್ಠ ಇಬ್ಬರು ಆಟಗಾರ್ತಿಯರು, ಇರಲಿದ್ದಾರೆ. ಲೀಗ್ ರೌಂಡ್ ರಾಬಿನ್ ಮಾದರಿಯಲ್ಲಿ ನಡೆಯಲಿದೆ.

ಒಲಿಂಪಿಯನ್ ಟೊರಿ ಬೊವಿ ನಿಧನ

ಟೊರಿ ಬೊವಿ

ನ್ಯೂಯಾರ್ಕ್ (ಎಪಿ): ರಿಯೊ ಡಿಜನ್ಐರೊ ಒಲಿಂಪಿಕ್ಸ್ ಪದಕವಿಜೇತ ಅಥ್ಲೀಟ್, ಅಮೆರಿಕದ ಟೊರಿ ಬೊವಿ (32) ನಿಧನರಾದರು.

ಟೋರಿ ಅವರು ನಿಧನರಾಗಿರುವ ಸುದ್ದಿಯನ್ನು ಅವರ ಮ್ಯಾನೇಜ್‌ಮೆಂಟ್ ಕಂಪೆನಿಯು ಬುಧವಾರ ಪ್ರಕಟಿಸಿತ್ತು. ಆದರೆ ಅವರ ಸಾವಿಗೆ ಕಾರಣ ತಿಳಿಸಿಲ್ಲ.

ಸ್ಯಾಂಡ್ ಹಿಲ್‌ನಲ್ಲಿ ಬೊವಿ ಚಿಕ್ಕವರಿದ್ದಾಗಿನಿಂದಲೂ ಅಥ್ಲೆಟಿಕ್ಸ್‌ನಲ್ಲಿ ಉತ್ತಮ ಸಾಧನೆ ಮಾಡಿದರು. 2016ರ ಒಲಿಂಪಿಕ್ಸ್‌ನಲ್ಲಿ ಅವರು ಮಹಿಳೆಯರ 100 ಮೀಟರ್ಸ್ ಓಟದಲ್ಲಿ ಬೆಳ್ಳಿ, 200 ಮೀ ಓಟದಲ್ಲಿ ಕಂಚು ಮತ್ತು 4X100 ರಿಲೆಯಲ್ಲಿ ಚಿನ್ನದ ಪದಕ ಜಯಿಸಿದ್ದರು.

ಟೈಗರ್ ಕಪ್: ಮ್ಯಾಕ್ಸ್ ಮುಲ್ಲರ್ ತಂಡಕ್ಕೆ ಜಯ

ಬೆಂಗಳೂರು: ಮ್ಯಾಕ್ಸ್ ಮುಲ್ಲರ್ ತಂಡವು ಟೈಗರ್ ಕಪ್ 14 ವರ್ಷದೊಳಗಿನವರ ಕ್ರಿಕೆಟ್ ಟೂರ್ನಿಯಲ್ಲಿ ಬುಧವಾರ 1 ವಿಕೆಟ್‌ನಿಂದ ಡಿಪಿಎಸ್ ನಾರ್ತ್ ತಂಡವನ್ನು ಮಣಿಸಿತು.

ಸಂಕ್ಷಿಪ್ತ ಸ್ಕೋರುಗಳು: ಡಿಪಿಎಸ್ ನಾರ್ತ್: 30 ಓವರ್‌ಗಳಲ್ಲಿ 7 ವಿಕೆಟ್‌ಗೆ 140 (ಚೇತನ್ ವಿಷ್ಣು 60, ಸಾದ್ ಖಾನ್ 23; ನೀರಜ್ ಕುಲಕರ್ಣಿ 10ಕ್ಕೆ). ಮ್ಯಾಕ್ಸ್ ಮುಲ್ಲರ್: 29.5 ಓವರ್‌ಗಳಲ್ಲಿ 9ಕ್ಕೆ 143 (ನೀರಜ್ 25, ರಿತೇಶ್ 11ಕ್ಕೆ 2, ಸಾದ್ 14ಕ್ಕೆ 2).

ಯಂಗ್ ಲಯನ್ಸ್: 28 ಓವರ್ ಗಳಲ್ಲಿ 139 (ರೋಹಿತ್ ಎಂ. 72; ಶಾರ್ದೂಲ್ ಜೋಷಿ 16ಕ್ಕೆ 3, ವಿಧಾನ್ ಲೋಯಲ್ಕಾ 21ಕ್ಕೆ 3). ಗೋಪಾಲನ್: 25.2 ಓವರ್‌ಗಳಲ್ಲಿ 5 ವಿಕೆಟ್‌ಗೆ 140 (ಕುಶ್ ಕುಮಾರ್ 51, ಋತ್ವಿಕ್ 30)

ಐ ಮಂತ್ರ ಐ ಡ್ರಾಪ್ಸ್ ಉತ್ಪನ್ನವನ್ನು ಗುಲಾಬಿ, ಬಾಸಿಲ್, ಗೂಸ್‌ಬೆರ‍್ರಿ, ಬೇವು, ಪುದಿನ, ಜೇನು ಮುಂತಾದ 12 ಆಯುರ್ವೇದಿಕ ಮೂಲಿಕೆಗಳ ಸೂತ್ರೀಕರಣದಿಂದ ತಯಾರಿಸಲಾಗಿದೆ. ಇದು ಕಣ್ಣುಗಳಿಗೆ ಒತ್ತಡ ಮತ್ತು ಆಯಾಸ ನಿವಾರಣೆಗೆ ಸಹಕಾರಿಯಾಗಿದೆ, ದಣಿದ ಕಣ್ಣುಗಳಿಗೆ ತಾಜಾತನ ಕೂಡ ಒದಗಿಸುತ್ತದೆ. ಇದರಲ್ಲಿನ ಆಯುರ್ವೇದಿಕ ಅಂಶಗಳಿಂದಾಗಿ, ಇದು ಯಾವುದೇ ಅಡ್ಡಪರಿಣಾಮ ಬೀರುವುದಿಲ್ಲ.